ಹುಬ್ಬಳ್ಳಿ
ಮಂಗಳವಾರ, 23 ಜೂನ್ 2026
ಸಂಪುಟ 16, ಸಂಚಿಕೆ 90, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ನೀಟ್: ಬಿಹಾರದಲ್ಲಿ 30 ಮಂದಿ ಬಂಧನ | 02
ಚರ್ಚೆಗಿಂತ ಮೌನ ಸಮರವೇ ಹೆಚ್ಚು! | 02
ವಾಟ್ಸ್ಆ್ಯಪ್‌ಗೆ ಭಾರತೀಯ ಸಾರಥಿ | 02

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ: ಹಸ್ತ

ದಿನದ ಮಾತು

ಪ್ರಯತ್ನ ಮಾಡುವವರೆಗೆ ಯಾರಿಗೂ ತಮ್ಮ ಸಾಮರ್ಥ್ಯದ ಅರಿವಿರುವುದಿಲ್ಲ.
▲ ನಾಣ್ನುಡಿ

ಮುಸುಕಿನಲ್ಲೇ ಕೆಲಸ ಮಾಡುವ ಅಸಾಮಾನ್ಯ ದೈತ್ಯ ಕಂಪನಿಗಳು

ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ

• ಪುಟ 6

ಕಿರುಸುದ್ದಿ

ಬ್ರಿಟನ್ ಪ್ರಧಾನಿ ಸ್ಥಾನಕ್ಕೆ ಸ್ಟಾರ್ಮರ್ ರಾಜೀನಾಮೆ



• **ಲಂಡನ್:** ಬ್ರಿಟನ್ ಪ್ರಧಾನಿ ಹಾಗೂ ಲೇಬರ್ ಪಕ್ಷದ ನಾಯಕ ಸ್ಥಾನಕ್ಕೆ ಕಿರ್ ಸ್ಟಾರ್ಮರ್ ಸೋಮವಾರ ರಾಜೀನಾಮೆ ಘೋಷಿಸಿದ್ದಾರೆ. ಮುಂಬರುವ ವಾರಗಳಲ್ಲಿ ಹೊಸ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಲು ಅವರು ವೇಳಾಪಟ್ಟಿ ನಿಗದಿಪಡಿಸಿದ್ದು, ಸೆಪ್ಟೆಂಬರ್ ವೇಳೆಗೆ ಹೊಸ ನಾಯಕರ ಆಯ್ಕೆ ಪ್ರಕ್ರಿಯೆ ಪೂರ್ಣಗೊಳ್ಳಲಿದೆ.

• ಪುಟ 2

ಹನುಮ ಜನ್ಮಭೂಮಿ ವಿವಾದ: ಕರ್ನಾಟಕ ಹೈಕೋರ್ಟ್‌ನಲ್ಲೇ ಇತ್ಯರ್ಥವಾಗಲಿ

• ಪುಟ 2

ಬಂಗಾಳ ಬಜೆಟ್‌ನಲ್ಲಿ ಭರಪೂರ ಘೋಷಣೆ

• ಪುಟ 2

ಕತಾರ್‌ನ ಅನಿಲ ಸ್ಥಾವರದಲ್ಲಿ ಭಾರೀ ಸ್ಫೋಟ

• ಪುಟ 2

ಸಂಘದ ನಿತ್ಯ ಶಾಖೆಗೆ ಬಂದರೆ ಉತ್ತರ ಸಿಗುವುದು: ಪದ್ಮಾರ್

• ಪುಟ 3

ಖಾಲಿ ಹುದ್ದೆಗಳ ಭರ್ತಿ, ಬಡ್ತಿ ಪ್ರಕ್ರಿಯೆ ಚುರುಕುಗೊಳಿಸಿ

• ಪುಟ 3

ಪ್ರತಿಭಾವಂತರಿಗೆ ಅವಕಾಶ: ಸಿಎಂ

• ಪುಟ 3



ಪಾಶ್ಚಿಮಾತ್ಯ ಒಕ್ಕೂಟದಲ್ಲಿ ರಾಜತಾಂತ್ರಿಕ ಬಿರುಗಾಳಿ!

• ಪುಟ 2

ಸುದ್ದಿ ಸಮಗ್ರ

ಪಕ್ಷ ಸಂಘಟನೆ ಚುರುಕುಗೊಳಿಸಲು ಡಿಸಿಸಿ ಅಧ್ಯಕ್ಷರಿಗೆ ಆದೇಶ

ಸ್ಥಳೀಯ ಚುನಾವಣೆಗೆ ಸಜ್ಜಾಗಿ: ಸಿಎಂ ಸೂಚನೆ

- ಜಿಪಂ, ತಾಪಂ ಚುನಾವಣೆ ಹಿನ್ನೆಲೆ
- ಕಾಂಗ್ರೆಸ್ ಜಿಲ್ಲಾಧ್ಯಕ್ಷರ ಜತೆ ಸಿಎಂ ಸಭೆ

• **ಬೆಂಗಳೂರು:** ಮುಂದಿನ ದಿನಗಳಲ್ಲಿ ಎದುರಾಗುವ ಜಿಲ್ಲಾ ಪಂಚಾಯತಿ ಹಾಗೂ ತಾಲೂಕು ಪಂಚಾಯಿತಿ ಚುನಾವಣೆಯನ್ನು ಕಾಂಗ್ರೆಸ್ ಪಕ್ಷ ಗಂಭಿರವಾಗಿ ಪರಿಗಣಿಸಿದೆ. ಈ ನಿಟ್ಟಿನಲ್ಲಿ ಎಲ್ಲಾ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರುಗಳು ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚಿಸಿದ್ದಾರೆ.

ಕುಮಾರಕೃಪಾ ಅತಿಥಿಗೃಹದಲ್ಲಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಎಲ್ಲಾ ಜಿಲ್ಲೆಗಳ ಜಿಲ್ಲಾಧ್ಯಕ್ಷರುಗಳ ಜತೆ ಸಭೆ ನಡೆಸಿದ ಅವರು, ಕಳೆದ ಹತ್ತು ವರ್ಷಗಳಲ್ಲಿ ಸ್ಥಳಿಯ ಸಂಸ್ಥೆಗಳ ಚುನಾವಣೆ ನಡೆದಿಲ್ಲ. ಯಾವುದೇ ಕ್ಷಣದಲ್ಲಾದರೂ ಚುನಾವಣೆಗಳು ಎದುರಾಗಬಹುದು ಹೀಗಾಗಿ ಪಕ್ಷವನ್ನು ನಿರೀಕ್ಷಿತ ಮಟ್ಟದಲ್ಲಿ ಸಂಘಟನೆ ಮಾಡಬೇಕು. ಸರ್ಕಾರದ ಯೋಜನೆಗಳು ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಹಾಗೂ ನಮ್ಮ ಐದು ಗ್ಯಾರಂಟಿಗಳು ಸೇರಿದಂತೆ ಎಲ್ಲ ಯೋಜನೆಗಳ ಬಗ್ಗೆ ಜನರಿಗೆ ಮನದಟ್ಟು ಮಾಡಿಕೊಡಬೇಕು ಎಂದರು.

ಮುಂದಿನ ಎರಡು ವರ್ಷಗಳು ರಾಜ್ಯದಲ್ಲಿ ಚುನಾವಣಾ ವರ್ಷವಾಗಿರಲಿದೆ. ಈಗಿನಿಂದಲೇ ಇದಕ್ಕೆ ಬೇಕಾದ ಸಿದ್ಧತೆಗಳನ್ನು ನಡೆಸಬೇಕು. ಯಾರೂ ಮೈಮರೆತು ಕೂರಬಾರದು ಎಂದು ಎಚ್ಚರಿಸಿದರು. ಮುಂದಿನ ದಿನಗಳಲ್ಲಿ ನಡೆಯುವ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ವಿಧಾನಸಭೆ, ಲೋಕಸಭಾ ಚುನಾವಣೆಗಳಿಗೆ ತಯಾರಿ ಮಾಡಿಕೊಳ್ಳುವಂತೆ ಸಲಹೆ ನೀಡಿದರು.



ಯುವಕರನ್ನು ಸಂಘಟಿಸಿ

2013ರಿಂದ 2018ರ ನಡುವೆ ಕಾಂಗ್ರೆಸ್ ಜಿಲ್ಲಾಧ್ಯಕ್ಷರುಗಳಿಗೆ ವಾಹನ ವ್ಯವಸ್ಥೆ ಹಾಗೂ ಮಾಸಿಕ ವೇತನ ನೀಡುತ್ತಿತ್ತು. ಇತ್ತೀಚಿನ ದಿನಗಳಲ್ಲಿ ಗ್ಯಾರಂಟಿ ಸಮಿತಿಗಳನ್ನು ರಚಿಸಿ, ಅದರ ಮೂಲಕ ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರಿಗೆ ವೇತನ ಹಾಗೂ ಇತರ ಭತ್ಯೆಗಳನ್ನು ನೀಡಲಾಗುತ್ತಿದೆ. ಅಲ್ಲದೆ, ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಭಾರತ್ ಜೋಡೋ ಯುವಕ ಸಂಘವನ್ನು ಸ್ಥಾಪಿಸಲು ಸರ್ಕಾರ ನಿರ್ಧಾರ ಕೈಗೊಂಡಿದೆ. ಇದರ ಮೂಲಕ ಯುವಕರನ್ನು ಸಂಘಟನೆಗೊಳಿಸಬೇಕು ಎಂದು ಸಿಎಂ ಸೂಚಿಸಿದರು. ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ , ಪಾಲಿಕೆಗಳಿಗೆ ಚುನಾವಣೆ ನಡೆಸಬೇಕಿದೆ.

➡ಪುಟ 4


> ಜಿಲ್ಲಾ, ತಾಲೂಕು ಮಟ್ಟದಲ್ಲಿ ಗ್ಯಾರಂಟಿ ಸಮಿತಿ ರಚಿಸಲಾಗಿದೆ. ಈ ಸಮಿತಿಯೊಡನೆ ಜಿಲ್ಲಾ ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಸಮನ್ವಯ ಸಾಧಿಸಬೇಕು. ಒಂದು ವೇಳೆ ಉಳ್ಳವರು ಗ್ಯಾರಂಟಿ ಯೋಜನೆ ಬಿಟ್ಟುಕೊಡಲು ಇಚ್ಛಿಸಿದರೆ ಅವರ ಮನವೊಲಿಸಬೇಕು.
> ■ ಡಿ.ಕೆ.ಶಿವಕುಮಾರ್, ಸಿಎಂ

ಎಸ್‌ಐಆರ್: ಜನರಿಗೆ ಅರಿವು ಮೂಡಿಸಿ

ಕೇಂದ್ರ ಚುನಾವಣಾ ಆಯೋಗ ರಾಜ್ಯದಲ್ಲಿ ನಡೆಸಲು ಉದ್ದೇಶಿಸಿರುವ ವಿಶೇಷ ಸಮಗ್ರ ಪರಿಷ್ಕರಣೆಯೂ ನಮ್ಮ ಪಕ್ಷಕ್ಕೆ ಮಾರಕವಾಗಿ ಪರಿಗಣಿಸಲಿದೆ. ಪಶ್ಚಿಮ ಬಂಗಾಳದಲ್ಲಿಯೂ ಎಸ್ ಐಆರ್‌ನಿಂದಾಗಿ ಸುಮಾರು 97 ಲಕ್ಷದಷ್ಟು ಮತದಾರರು ತಮ್ಮ ಹಕ್ಕು ಕಳೆದುಕೊಂಡಿದ್ದರು. ಹೀಗಾಗಿ ನಮ್ಮ ರಾಜ್ಯದಲ್ಲಿ ನಡೆಯುವ ಎಸ್‌ಐಆರ್‌ಗೆ ಪೂರ್ವಭಾವಿಯಾಗಿ ಎಲ್ಲ ಜಿಲ್ಲಾ ಅಧ್ಯಕ್ಷರು ಬ್ಲಾಕ್ ಅಧ್ಯಕ್ಷರ ಜತೆಗೂಡಿ ಜನರಲ್ಲಿ ಅರಿವು ಮೂಡಿಸುವ ಕೆಲಸ ಮಾಡಬೇಕು ಎಂದು ತಿಳಿಸಿದರು. ಅಲ್ಲದೆ, ಮತದಾರರ ಪಟ್ಟಿಯಿಂದ ಹೆಸರು ಕೈಬಿಟ್ಟು ಹೋಗದಂತೆ ಎಚ್ಚರವಹಿಸಬೇಕು. ಮತದಾರರ ಪಟ್ಟಿಯಲ್ಲಿ ಹೆಸರಿದ್ದರಷ್ಟೇ ರಾಜ್ಯ ಸರ್ಕಾರದ ಸೌಲಭ್ಯಗಳು ಸಿಗುತ್ತವೆ ಎಂಬುದನ್ನು ಜನರಿಗೆ ತಿಳಿಸಬೇಕು ಎಂದು ಮುಖ್ಯಮಂತ್ರಿಗಳು ಸೂಚಿಸಿದರು.

3 ರಾಜ್ಯಗಳಲ್ಲಿ ಜಾರಿ | ಕರ್ನಾಟಕ ವಿರೋಧ

ಕಸ್ತೂರಿ ರಂಗನ್ ವರದಿ ಜಾರಿಗೆ ಕೇಂದ್ರದ ಸಿದ್ಧತೆ




- ಪಶ್ಚಿಮಘಟ್ಟ ಸಂರಕ್ಷಣೆಗೆ ಕೇಂದ್ರದ ಅಂತಿಮ ಹೆಜ್ಜೆ
- ಗುಜರಾತ್, ಮಹಾರಾಷ್ಟ್ರ, ಗೋವಾದಲ್ಲಿ ಪರಿಸರ ಸೂಕ್ಷ್ಮ ಪ್ರದೇಶ ಘೋಷಣೆಗೆ ಸಿದ್ಧತೆ
- ಕರ್ನಾಟಕದ 20,668 ಚದರ ಕಿ.ಮೀ. ಪ್ರದೇಶ ಪ್ರಸ್ತಾವದಲ್ಲಿ ಸೇರ್ಪಡೆ

• **ಹೊಸದಿಲ್ಲಿ:** ಹನ್ನೆರಡು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಪಶ್ಚಿಮಘಟ್ಟದ ಪರಿಸರ ಸೂಕ್ಷ್ಮ ಪ್ರದೇಶಗಳ ಘೋಷಣೆ ಪ್ರಕ್ರಿಯೆಗೆ ಅಂತಿಮ ರೂಪ ನೀಡಲು ಕೇಂದ್ರ ಸರಕಾರ ಮುಂದಾಗಿದೆ. ಮೊದಲ ಹಂತದಲ್ಲಿ ಗುಜರಾತ್, ಮಹಾರಾಷ್ಟ್ರ ಮತ್ತು ಗೋವಾದಲ್ಲಿ ಪರಿಸರ ಸೂಕ್ಷ್ಮ ಪ್ರದೇಶಗಳನ್ನು ಅಧಿಕೃತವಾಗಿ ಅಧಿಸೂಚಿಸುವ ಸಿದ್ಧತೆ ನಡೆದಿದೆ.

ಪಶ್ಚಿಮಘಟ್ಟ ವ್ಯಾಪ್ತಿಯ ಕರ್ನಾಟಕ, ಕೇರಳ, ತಮಿಳುನಾಡು, ಗೋವಾ, ಮಹಾರಾಷ್ಟ್ರ ಹಾಗೂ ಗುಜರಾತ್ ರಾಜ್ಯಗಳ ಒಟ್ಟು 56,825.7 ಚದರ ಕಿ.ಮೀ. ಪ್ರದೇಶವನ್ನು ಪರಿಸರಸೂಕ್ಷ್ಮ ಪ್ರದೇಶವೆಂದು ಗುರುತಿಸಲು 2024ರ ಕರಡು ಅಧಿಸೂಚನೆಯಲ್ಲಿ ಪ್ರಸ್ತಾಪಿಸಲಾಗಿತ್ತು. ಆದರೆ, ಪ್ರದೇಶಗಳ ವ್ಯಾಪ್ತಿ ಹಾಗೂ ನಿರ್ಬಂಧಗಳ ಕುರಿತು ರಾಜ್ಯಗಳೊಂದಿಗೆ ಒಮ್ಮತ ಮೂಡದ ಕಾರಣ ಅಂತಿಮ ಅಧಿಸೂಚನೆ ವಿಳಂಬವಾಗಿತ್ತು.

ಗಣಿಗಾರಿಕೆ, ಕೈಗಾರಿಕೆಗೆ ನಿರ್ಬಂಧ



ಗುಜರಾತ್, ಮಹಾರಾಷ್ಟ್ರ ಮತ್ತು ಗೋವಾದಲ್ಲಿನ ವಿವಾದಗಳು ಬಹುತೇಕ ಬಗೆಹರಿದಿರುವುದರಿಂದ, ಎಲ್ಲ ಆರು ರಾಜ್ಯಗಳಿಗೂ ಏಕಕಾಲದಲ್ಲಿ ಅಧಿಸೂಚನೆ ಹೊರಡಿಸುವ ಬದಲು ಒಮ್ಮತ ಮೂಡಿರುವ ರಾಜ್ಯಗಳಲ್ಲಿ ಮೊದಲಿಗೆ ಜಾರಿಗೊಳಿಸಲು ಕೇಂದ್ರ ಚಿಂತನೆ ನಡೆಸಿದೆ ಎಂದು ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಮಾಡಿದೆ.

ಕರ್ನಾಟಕದಲ್ಲೇ ಅತಿ ಹೆಚ್ಚು ಪ್ರದೇಶ: ಪರಿಸರ ಸೂಕ್ಷ್ಮ ಪ್ರದೇಶವೆಂದು ಗುರುತಿಸಲು ಪ್ರಸ್ತಾಪಿಸಿರುವ ಭೂಪ್ರದೇಶದಲ್ಲಿ ಕರ್ನಾಟಕದ ಪಾಲು ಅತಿ ಹೆಚ್ಚಾಗಿದೆ. ರಾಜ್ಯದ ಸುಮಾರು 20,668 ಚದರ ಕಿ.ಮೀ. ಪ್ರದೇಶ, ಅಂದರೆ ಒಟ್ಟು ಪ್ರಸ್ತಾವಿತ ಪ್ರದೇಶದ ಶೇ.36.3ರಷ್ಟು ಭಾಗ ಈ ವ್ಯಾಪ್ತಿಗೆ ಬರುತ್ತದೆ. ಆದರೆ ಕರ್ನಾಟಕ ಸರಕಾರವು 2024ರಲ್ಲಿ ಕಸ್ತೂರಿರಂಗನ್ ಸಮಿತಿ ವರದಿ ತಿರಸ್ಕರಿಸಲು ಸಚಿವ ಸಂಪುಟದಲ್ಲಿ ನಿರ್ಧಾರ ಕೈಗೊಂಡಿತ್ತು. ಹೀಗಿದ್ದರೂ ರಾಜ್ಯ ಮತ್ತು ಕೇಂದ್ರ ಸರ್ಕಾರದ ನಡುವೆ ಮಾತುಕತೆ ಮುಂದುವರಿದಿದೆ. ಪಶ್ಚಿಮಘಟ್ಟದ ಸಂರಕ್ಷಣೆಗೆ ಪರ್ಯಾಯ ಕಾರ್ಯಯೋಜನೆ ಸಲ್ಲಿಸುವಂತೆ ಕೇಂದ್ರವು ಕರ್ನಾಟಕಕ್ಕೆ ಸೂಚಿಸಿದೆ ಎನ್ನಲಾಗಿದೆ.

➡ಪುಟ 4

3 ರಾಜ್ಯಗಳಲ್ಲಿ ಒಮ್ಮತ

ಗುಜರಾತ್‌ನಲ್ಲಿ ಸುಮಾರು 449ರಿಂದ 470 ಚದರ ಕಿ.ಮೀ. ವ್ಯಾಪ್ತಿಯ 64 ಗ್ರಾಮಗಳನ್ನು ಸೂಕ್ಷ್ಮ ಪ್ರದೇಶವೆಂದು ಗುರುತಿಸಲು ರಾಜ್ಯ ಸರಕಾರ ಒಪ್ಪಿಗೆ ನೀಡಿದೆ. ಮಹಾರಾಷ್ಟ್ರದಲ್ಲಿ ಸುಮಾರು 17,340 ಚದರ ಕಿ.ಮೀ. ಪ್ರದೇಶವನ್ನು ಸೇರಿಸಲು ಪ್ರಸ್ತಾಪಿಸಲಾಗಿದ್ದು, 2,515 ಗ್ರಾಮಗಳ ಪೈಕಿ 378 ಗ್ರಾಮಗಳನ್ನು ಕೈಬಿಡುವಂತೆ ರಾಜ್ಯ ಮನವಿ ಮಾಡಿದೆ. ಗೋವಾದಲ್ಲಿ ಗುರುತಿಸಿರುವ 108 ಗ್ರಾಮಗಳ ಪೈಕಿ ಸತ್ತಾರಿ ತಾಲೂಕಿನ 21 ಗ್ರಾಮಗಳನ್ನು ಪಟ್ಟಿಯಿಂದ ಹೊರಗಿಡಬೇಕೆಂದು ಅಲ್ಲಿನ ಸರಕಾರ ಕೋರಿದೆ.

ಲಖನೌ ಕೋಚಿಂಗ್ ಸೆಂಟರ್ ಕಟ್ಟಡದಲ್ಲಿ ಭಾರೀ ದುರಂತ

ಅಗ್ನಿ ಅನಾಹುತಕ್ಕೆ 15 ಜನ ಬಲಿ

• **ಲಖನೌ:** ಉತ್ತರ ಪ್ರದೇಶದ ರಾಜಧಾನಿ ಲಖನೌನ ಅಲಿಗಂಜ್ ಪ್ರದೇಶದಲ್ಲಿರುವ 3 ಮಹಡಿ ವಾಣಿಜ್ಯ ಕಟ್ಟಡದಲ್ಲಿ ಸೋಮವಾರ ಮಧ್ಯಾಹ್ನ ಸಂಭವಿಸಿದ ಭೀಕರ ಅಗ್ನಿ ಅವಘಡದಲ್ಲಿ ಕನಿಷ್ಠ 15 ಮಂದಿ ಮೃತಪಟ್ಟಿದ್ದು, 7 ಮಂದಿ ಗಾಯಗೊಂಡಿದ್ದಾರೆ. ಮೃತಪಟ್ಟವರಲ್ಲಿ ಅನಿಮೇಷನ್ ತರಬೇತಿ ಕೇಂದ್ರಕ್ಕೆ ಬಂದಿದ್ದ ಹಲವು ವಿದ್ಯಾರ್ಥಿಗಳು ಸೇರಿದ್ದಾರೆ. ಕಟ್ಟಡದ 2ನೇ ಮಹಡಿಯಲ್ಲಿ ಅನಿಮೇಷನ್ ತರಗತಿಗಳು ನಡೆಯುತ್ತಿದ್ದ ವೇಳೆ ಬೆಂಕಿ ಕಾಣಿಸಿಕೊಂಡಿದೆ. ಬೆಂಕಿ, ದಟ್ಟ ಹೊಗೆ ಕ್ಷಣಾರ್ಧದಲ್ಲಿ ಕಟ್ಟಡ ಆವರಿಸಿದ್ದರಿಂದ ಅನೇಕರು ಒಳಗೇ ಸಿಲುಕಿಕೊಂಡರು. ಕೆಲವರು ಜೀವ ಉಳಿಸಿಕೊಳ್ಳಲು ಮೇಲ್ಮಹಡಿಯಿಂದ ಜಿಗಿದ ಪರಿಣಾಮ ಗಾಯಗೊಂಡಿದ್ದಾರೆ.

ಮಧ್ಯಾಹ್ನ ಸುಮಾರು 3 ಗಂಟೆಗೆ ಬೆಂಕಿ ಕಾಣಿಸಿಕೊಂಡ ಮಾಹಿತಿ ದೊರಕುತ್ತಿದ್ದಂತೆ 14 ಅಗ್ನಿಶಾಮಕ ವಾಹನಗಳು, ಹೈಡ್ರಾಲಿಕ್ ಪ್ಲಾಟ್ ಫಾರ್ಮ್ ವಾಹನ, ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಹಾಗೂ ನಾಗರಿಕ ರಕ್ಷಣಾ ಪಡೆ ಸಿಬ್ಬಂದಿ ಸ್ಥಳಕ್ಕೆ ಧಾವಿಸಿದರು.

➡ಪುಟ 4



ಸಾಕು ಪ್ರಾಣಿಗಳ ಸಾವು

ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪೆಟ್ ಕ್ಲಿನಿಕ್ ನಲ್ಲಿದ್ದ ಪ್ರಾಣಿಗಳೂ ಅಗ್ನಿ ದುರಂತಕ್ಕೆ ಬಲಿಯಾಗಿವೆ. ರಕ್ಷಣಾ ಕಾರ್ಯಾಚರಣೆ ವೇಳೆ ಕನಿಷ್ಠ 3 ಪ್ರಾಣಿಗಳ ಮೃತ ದೇಹಗಳನ್ನು ಹೊರತೆಗೆದಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಸಂಕಲ್ಪ ಸಮಾವೇಶದಿಂದ ಪ್ರಮಾದಕ್ಕೆ ಹರಿಪ್ರಸಾದ್ ವಿಷಾದ

ನೀಟ್ ವಂಚಿತರಾದವರಿಗೆ ನೆರವು

• **ಬೆಂಗಳೂರು:** ಸಂಕಲ್ಪ ಸಮಾವೇಶ ಕಾರ್ಯಕ್ರಮದ ಟ್ರಾಫಿಕ್ ಸಮಸ್ಯೆಯಿಂದ ಎರಡು, ಮೂರು ವಿದ್ಯಾರ್ಥಿಗಳು ನೀಟ್ ಪರೀಕ್ಷೆಗೆ ಹಾಜರಾಗಿಲ್ಲ ಎಂಬ ಸುದ್ದಿ ನೋಡಿದೆ. ಈ ಕಾರ್ಯಕ್ರಮದಿಂದ ಇಂತಹ ಪ್ರಮಾದವಾಗಿದ್ದರೆ ನಾವು ವಿಷಾದ ವ್ಯಕ್ತಪಡಿಸುತ್ತೇನೆ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ತಿಳಿಸಿದರು.



ಕೆಪಿಸಿಸಿ ಕಚೇರಿಯಲ್ಲಿ ಸೋಮವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಎಲ್ಲೂ ಸಮಸ್ಯೆಯಾಗಬಾರದು ಎಂದು ಅರಮನೆ ಮೈದಾನದಲ್ಲಿ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿತ್ತು. ಆದರೂ ಎರಡು ಮೂರು ಮಕ್ಕಳಿಗೆ ತೊಂದರೆ ಆಗಿರುವ ಬಗ್ಗೆ ಮಾಧ್ಯಮಗಳಲ್ಲಿ ಪ್ರಸಾರವಾಗಿವೆ. ಅವರಿಗೆ ಮುಂದಿನ ಪರೀಕ್ಷೆ ಕೈಗೊಳ್ಳಲು ಬೇಕಾಗಿರುವ ಎಲ್ಲಾ ಸಹಾಯ ಮಾಡಲು ನಾವು ಸಿದ್ಧರಿದ್ದೇವೆ ಎಂದರು.

➡ಪುಟ 4

ವಿದ್ಯಾರ್ಥಿಗಳ ಭವಿಷ್ಯಕ್ಕಿಂತ ರಾಜಕೀಯಕ್ಕೆ ಹೆಚ್ಚು ಆದ್ಯತೆ

• **ಹೊಸದಿಲ್ಲಿ:** ಕಾಂಗ್ರೆಸ್‌ಗೆ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯಕ್ಕಿಂತ ರಾಜಕೀಯವೇ ಮೊದಲ ಆದ್ಯತೆ ಆಗಿದೆ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಮತ್ತು ರಾಜ್ಯಸಭಾ ಸಂಸದ ಸುಧಾಂಶು ತ್ರಿವೇದಿ ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ನಗರದ ಸಂಚಾರಕ್ಕೆ ಅಡ್ಡಿಪಡಿಸಿದ ಕಾಂಗ್ರೆಸ್ ಸಮಾವೇಶದಿಂದ ಬೆಂಗಳೂರಿನಲ್ಲಿ ಅನೇಕ ವಿದ್ಯಾರ್ಥಿಗಳು ನೀಟ್ ಯುಜಿ ಮರುಪರೀಕ್ಷೆಗೆ ನಿಗದಿತ ಸಮಯಕ್ಕೆ ತಲುಪಲು ಸಾಧ್ಯವಾಗದೆ ಪರೀಕ್ಷೆ ಬರೆಯುವುದರಿಂದ ವಂಚಿತಾಗಿದ್ದಾರೆ.

➡ಪುಟ 4

ಶಿಂಧೆ ಗುಂಪಿಗೆ ಸೇರ್ಪಡೆಯಾದ ಉದ್ಧವ್ ಬಣದ 6 ಸಂಸದರು

ಮಹಾರಾಷ್ಟ್ರ ಡಿಸಿಎಂ ಏಕನಾಥ್ ಶಿಂಧೆ ಘೋಷಣೆ

• **ಮುಂಬೈ:** ಶಿವಸೇನೆ(ಯುಬಿಟಿ) ಬಣದ 6 ಬಂಡಾಯ ಲೋಕಸಭಾ ಸದಸ್ಯರು ಸೋಮವಾರ ಅಧಿಕೃತವಾಗಿ ಆಡಳಿತಾರೂಢ ಶಿವಸೇನೆಗೆ ಸೇರ್ಪಡೆಯಾಗಿದ್ದಾರೆ ಎಂದು ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಏಕನಾಥ್ ಶಿಂಧೆ ಘೋಷಿಸಿದ್ದಾರೆ. ಈ ಪಕ್ಷಾಂತರ, ಉದ್ಧವ್ ಠಾಕ್ರೆ ನೇತೃತ್ವದ ಬಣವನ್ನು ಮತ್ತೊಂದು ಸೀಳಾಗಿಸಿದೆ.

ಈ ಸಂಸದರು ಶಿಂಧೆ ಮತ್ತು ಇತರ ಹಿರಿಯ ಪಕ್ಷದ ನಾಯಕರ ಸಮ್ಮುಖದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಿವಸೇನೆಗೆ ಸೇರಿದ್ದಾರೆ. ಹೊಸದಿಲ್ಲಿಯಲ್ಲಿ ನಡೆದ ಶಿವಸೇನೆ(ಯುಬಿಟಿ) ಸಂಸದೀಯ ಪಕ್ಷದ ಸಭೆಗೆ ಈ ಸದಸ್ಯರು ಗೈರಾದ 5 ದಿನಗಳ ನಂತರ ಈ ಬೆಳವಣಿಗೆ ನಡೆದಿದೆ.

➡ಪುಟ 4

ವ್ಯವಸ್ಥಿತ ಅನುಷ್ಠಾನಕ್ಕೆ ಶಿಕ್ಷಣ ಇಲಾಖೆ ನಿರ್ಧಾರ

ಮರು ಸಿಂಚನ ಮತ್ತೆ ಚುರುಕು

▸ ನಂದಿನಿ ಎನ್.

ದಿಗಂತ ವಿಶೇಷ

• **ಬೆಂಗಳೂರು:** ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾಗಿಯೂ ನಿರೀಕ್ಷಿತ ಕಲಿಕಾ ಸಾಮರ್ಥ್ಯ ತಲುಪದ ವಿದ್ಯಾರ್ಥಿಗಳನ್ನು ಗುರುತಿಸುವುದು. ಅಂತಹವರಿಗೆ ಹೆಚ್ಚುವರಿ ಶೈಕ್ಷಣಿಕ ನೆರವು ಒದಗಿಸುವ ಮಹತ್ವಾಕಾಂಕ್ಷೆಯ ಮರು ಸಿಂಚನ ಕಾರ್ಯಕ್ರಮವನ್ನು ರಾಜ್ಯ ಸರ್ಕಾರ ಮತ್ತೆ ಚುರುಕುಗೊಳಿಸಿದೆ.

ರಾಜ್ಯದಲ್ಲಿ ಕಳೆದೆರಡು ವರ್ಷಗಳಲ್ಲಿ ಅನುಷ್ಠಾನಗೊಂಡಿದ್ದ ಈ ಯೋಜನೆ ನಿರೀಕ್ಷಿತ ಮಟ್ಟದಲ್ಲಿ ಯಶಸ್ವಿಯಾಗದ ಹಿನ್ನೆಲೆಯಲ್ಲಿ ಈ ಬಾರಿ ಹೆಚ್ಚು ವ್ಯವಸ್ಥಿತವಾಗಿ ಹಾಗೂ ಗುರಿ ಆಧಾರಿತವಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಶಿಕ್ಷಣ ಇಲಾಖೆ ಸಜ್ಜಾಗಿದೆ. ಈಗಾಗಲೇ ಶಾಲೆಗಳಲ್ಲಿ ಸೇತುಬಂಧ ಕಾರ್ಯಕ್ರಮದ ಮೂಲಕ ಪೂರಕ ಕಲಿಕೆಯನ್ನು ಒದಗಿಸುತ್ತಿರುವ ಶಿಕ್ಷಣ ಇಲಾಖೆ, ಇದೀಗ ಮರು ಸಿಂಚನ ಯೋಜನೆಯ ಮೂಲಕ ತಳಮಟ್ಟದಲ್ಲಿರುವ ವಿದ್ಯಾರ್ಥಿಗಳನ್ನು ನಿರ್ದಿಷ್ಟ ಕಲಿಕಾ ಫಲಿತಾಂಶ ತಲುಪಿಸುವ ಗುರಿ ಹೊಂದಿದೆ. ಅದಕ್ಕೆ ಪೂರಕವಾಗಿ ಈ ಯೋಜನೆ 6 ರಿಂದ 10ನೇ ತರಗತಿಯ ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟ ಸುಧಾರಿಸುವತ್ತ ವಿಶೇಷ ಗಮನಹರಿಸಿದೆ.

ಕಲಿಕಾ ಗುಣಮಟ್ಟ ಸುಧಾರಣೆಗೆ ಕ್ರಮ

➡ಪುಟ 4



3.83 ಲಕ್ಷ ವಿದ್ಯಾರ್ಥಿಗಳಿಗೆ ಲಾಭ

ಕನ್ನಡ, ಇಂಗ್ಲಿಷ್, ಗಣಿತ, ವಿಜ್ಞಾನ ಹಾಗೂ ಸಮಾಜ ವಿಜ್ಞಾನ ವಿಷಯಗಳನ್ನು ಯೋಜನೆಯ ವ್ಯಾಪ್ತಿಗೆ ಒಳಪಡಿಸಲಾಗಿದೆ. ಈ ವಿಷಯಗಳಿಗೆ ಸಂಬಂಧಿಸಿದಂತೆ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆ (ಎಸ್‌ಸಿಇಆರ್‌ಟಿ) ವಿಶೇಷ ಕಲಿಕಾ ವಿಷಯಗಳನ್ನು ಸಿದ್ಧಪಡಿಸಿದೆ.

➡ಪುಟ 4

ಮಮತಾಗೆ ಕೊಕ್

• **ಕೋಲ್ಕತ್ತಾ:** ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಹಾಗೂ ತೃಣಮೂಲ ಕಾಂಗ್ರೆಸ್ ಸಂಸ್ಥಾಪಕಿ ಮಮತಾ ಬ್ಯಾನರ್ಜಿ ಅವರನ್ನು ಪಕ್ಷದ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಿರುವುದಾಗಿ ರಿತಬ್ರತ ಬಾನರ್ಜಿ ನೇತೃತ್ವದ ಬಂಡಾಯ ಬಣ ಸೋಮವಾರ ಘೋಷಿಸಿದೆ. ಇವರ ಜಾಗಕ್ಕೆ ಅರೂಪ್ ರಾಯ್ ಅವರನ್ನು ನೇಮಿಸಲಾಗಿದೆ ಎಂದು ಹೇಳಲಾಗಿದೆ. ಕೋಲ್ಕತ್ತಾದ ಖಾಸಗಿ ಹೋಟೆಲ್‌ನಲ್ಲಿ ಬಂಡಾಯ ಶಾಸಕರು ಮತ್ತು ವಿವಿಧ ನಗರ ಸ್ಥಳೀಯ ಸಂಸ್ಥೆಗಳ ಸದಸ್ಯರೊಂದಿಗೆ ನಡೆದ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ. ಸಭೆಯ ಬಳಿಕ 10 ಸದಸ್ಯರ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯನ್ನೂ ರಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.



ಟಿಎಂಸಿ ಪಕ್ಷಾಧ್ಯಕ್ಷ ಸ್ಥಾನದಿಂದ ವಜಾ

➡ಪುಟ 4

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,50,000(2,50,000) ಅಪರಂಜಿ ಚಿನ್ನ: 1,46,510(1,45,860) ಆಭರಣ ಚಿನ್ನ: 1,34,300(1,33,700) ಚಿನ್ನ10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 77,094 (291↑) ಎನ್‌ಎಸ್‌ಇ 24,102 (89↑)

$1 = ₹94.33

ಕಿರುಸುದ್ದಿ

ಸ್ವಾತಿಗೆ ಪಿಎಚ್‌ಡಿ ಪ್ರದಾನ



ಧಾರವಾಡ: ಗಣಿತಶಾಸ್ತ್ರ ಸಂಶೋಧನಾ ವಿದ್ಯಾರ್ಥಿನಿ ಸ್ವಾತಿ ಜೋಶಿ ಮಂಡಿಸಿದ 'ವೇವ್ಲೆಟ್ ಥಿಯರಿ ಆ್ಯಂಡ್ ಇಟ್ಸ್ ಅಪ್ಲಿಕೇಶನ್ಸ್ ಟು ಸಾಲ್ವ್ ಸಮ್ ಬೌಂಡರಿ ಲೇಯರ್ ಫ್ಲ್ಯೂಯಿಡ್ ಫ್ಲೋ ಇಕ್ವೇಶನ್ಸ್' ಪ್ರೌಢ ಪ್ರಬಂಧಕ್ಕೆ ಕರ್ನಾಟಕ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ಪ್ರದಾನಿಸಿದೆ. ಇವರಿಗೆ ವಿಭಾಗದ ಪ್ರಾಧ್ಯಾಪಕ ಡಾ.ಎಸ್.ಸಿ.ಶಿರಾಳಶೆಟ್ಟಿ ಮಾರ್ಗದರ್ಶಕರಾಗಿದ್ದರು.

ಯೋಗ ದಿನಾಚರಣೆ



ಕಲಘಟಗಿ: ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು. ಹಿರೇಹೊನ್ನಳ್ಳಿ ಗ್ರಾಮದ ಯೋಗ ಪಟು ಮಯೂರಗೌಡ ಪಾಟೀಲ ವಿವಿಧ ಯೋಗಾಸನ ಹಾಗೂ ಅವುಗಳ ಉಪಯುಕ್ತತೆ ತಿಳಿಸಿದರು. ಈ ಸಂದರ್ಭದಲ್ಲಿ ನ್ಯಾಯಾಲಯ ಸಿಬ್ಬಂದಿಗಳು ಹಾಗೂ ಎಲ್ಲ ನ್ಯಾಯವಾದಿಗಳು ಪಾಲ್ಗೊಂಡಿದ್ದರು.

ಅಂತಾರಾಷ್ಟ್ರೀಯ ಯೋಗ ದಿನಾಚರಣೆ



ಹುಬ್ಬಳ್ಳಿ: ಇಲ್ಲಿಯ ವಿದ್ಯಾನಗರ ಕೆ.ಎಲ್.ಇ. ಸಂಸ್ಥೆಯ ಪ್ರೇರಣಾ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು.

ದಂಡ ಪಾವತಿಗೆ ಶೇ.50ರಷ್ಟು ರಿಯಾಯಿತಿ

ಧಾರವಾಡ: ರಾಷ್ಟ್ರೀಯ ಮತ್ತು ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ನಿರ್ದೇಶನದ ಮೇರೆ ಜು.11ರಂದು ರಾಷ್ಟ್ರೀಯ ಲೋಕ ಅದಾಲತ್ ಏರ್ಪಡಿಸಿ, ಸಾರಿಗೆ ಸಂಚಾರಿ ಇಲಾಖೆ ಮತ್ತು ಪೊಲೀಸ್ ಇಲಾಖೆಗಳ ಬಾಕಿ ಪ್ರಕರಣಗಳ ಇತ್ಯರ್ಥಕ್ಕೆ ಕ್ರಮ ಕೈಗೊಂಡಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಎನ್.ವಿ.ವಿಜಯ ಅವರು, 1991ರಿಂದ 2022ರ ಅವಧಿ ಒಳಗೆ ದಾಖಲಾದ ದಂಡದ ಪಾವತಿಯಲ್ಲಿ ಶೇ.50ರಷ್ಟು ರಿಯಾಯಿತಿ ನೀಡಿದೆ ಎಂದು ಹೇಳಿದರು.

ಮೊದಲ ಅದಾಲತ್‌ನಲ್ಲಿ 68 ಸಾವಿರಕ್ಕೂ ಅಧಿಕ ಪ್ರಕರಣ, ಎರಡನೇ ಅದಾಲತ್‌ನಲ್ಲಿ 18 ಸಾವಿರಕ್ಕೂ ಅಧಿಕ ಪ್ರಕರಣ ಇತ್ಯರ್ಥಪಡಿಸಿ, 46 ಲಕ್ಷ ದಂಡ ಸಂಗ್ರಹ ಮಾಡಿದೆ. ಇದೀಗ ಬಾಕಿ ಪ್ರಕರಣಗಳ ಇತ್ಯರ್ಥಕ್ಕೆ 3ನೇ ಅದಾಲತ್ ಏರ್ಪಡಿಸಿದೆ ಎಂದು ತಿಳಿಸಿದರು.

1991ರಿಂದ 2022ರ ಅವಧಿಯಲ್ಲಿ ಸಂಚಾರಿ ನಿಯಮ ಉಲ್ಲಂಘಿಸಿದ 6.40 ಲಕ್ಷ ಪ್ರಕರಣಗಳು ಇ-ಚಲನ್‌ನಲ್ಲಿ ದಾಖಲಾಗಿವೆ. ಈ ಪ್ರಣಗಳ ಒಟ್ಟು ಮೊತ್ತ ರೂ.30.75 ಅಧಿಕ. ಈ ದಂಡ ಪಾವತಿಗೆ 20 ದಿನ ಕಾಲಾವಕಾಶವಿದೆ ಎಂದು ಮಾಹಿತಿ ನೀಡಿದರು.

ಇನ್ನು ಸಾರಿಗೆ ಇಲಾಖೆಯಲ್ಲಿ ಹುಬ್ಬಳ್ಳಿ-2,900 ಪ್ರಕರಣ ಹಾಗೂ ಧಾರವಾಡದಲ್ಲಿ 4503 ಪ್ರಕರಣ ದಾಖಲಿದ್ದು, ಜೂ.21ರಿಂದ ಜು.10ರೊಳಗೆ ಸಾರ್ವಜನಿಕರು ಅದಾಲತ್ ಸದ್ಬಳಕೆಯಿಂದ ತಮ್ಮ ವಾಹನಗಳ ಮೇಲಿರುವ ವ್ಯಾಜ್ಯ ಇತ್ಯರ್ಥಕ್ಕೆ ಸಲಹೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಅಲ್ಲಪ್ಪ ಬಡಿಗೇರ, ಪ್ರಾದೇಶಿಕ ಸಾರಿಗೆ ಇಲಾಖೆಯ ಆಯುಕ್ತ ಶ್ರೀಧರ ಮಲ್ಲಾಡ, ಸಂಚಾರಿ ಇಲಾಖೆ ಎಸಿಪಿ ವೀರೇಶ ಇದ್ದರು.

ವ್ಯಕ್ತಿ ನೇಣಿಗೆ ಶರಣು

ಧಾರವಾಡ: ವ್ಯಕ್ತಿಯೊಬ್ಬ ನೇಣಿಗೆ ಶರಣಾದ ಘಟನೆ ತಾಲೂಕಿನ ಅಮ್ಮಿನಬಾವಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಗಂಗಪ್ಪ ಫಕ್ಕೀರಪ್ಪ ಭೋಸಲೆ(55) ಆತ್ಮಹತ್ಯೆಗೆ ಶರಣಾದ ವ್ಯಕ್ತಿ. ಕೌಟುಂಬಿಕ ಸಮಸ್ಯೆಗಳಿಂದ ಬಳಲುತ್ತಿದ್ದ ಗಂಗಪ್ಪ ಜಮೀನಿಗೆ ತೆರಳಿ, ಮರಳಿ ಮನೆಗೆ ಬಂದಿರಲಿಲ್ಲ. ಕುಟುಂಬಸ್ಥರ ಶೋಧ ನಡೆಸಿದಾಗ ಹೊಲದಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಗಂಗಪ್ಪನ ಶವ ಪತ್ತೆಯಾಗಿದೆ. ಈ ಕುರಿತು ಧಾರವಾಡ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಫಕೀರಪ್ಪ ಇಟಗಿಕಳ್ಳಿ



ಧಾರವಾಡ: ತಾಲೂಕಿನ ಅಮ್ಮಿನಬಾವಿ ನಿವಾಸಿ ಫಕೀರಪ್ಪ ಧೂಳಪ್ಪ ಇಟಗಿಕಳ್ಳಿ (92) ನಿಧನರಾದರು. ಮೃತರಿಗೆ ಪತ್ನಿ, ಇಬ್ಬರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಳಗವಿದೆ.



ಧಾರವಾಡ: ನಗರದ ಜನತಾ ಶಿಕ್ಷಣ ಸಮಿತಿಯ ಮಂಜುನಾಥೇಶ್ವರ ಸೆಂಟ್ರಲ್ ಶಾಲೆಯ 4 ಮತ್ತು 5ನೇ ತರಗತಿ ಮಕ್ಕಳು ತಮ್ಮ ಪಾಲಕರಿಗೆ ವಿಶ್ವ ತಂದೆಯರ ದಿನಾಚರಣೆಯನ್ನು ಸಂಸ್ಥೆಯ ಆಡಳಿತಾಧಿಕಾರಿ ಅರಿಹಂತ ಪ್ರಸಾದ ಉದ್ಘಾಟಿಸಿದರು. ಪಾಲಕರಿಗೆ ಬ್ಲೈಂಡ್ ಪೋಲ್ಡ್, ಹಗ್ಗ ಜಗ್ಗಾಟ, ಮಕ್ಕಳ ಮೇಕಪ್ ಸ್ಪರ್ಧೆ, ಪ್ರಾಂತವಾರು ವೇಷಭೂಷಣ ಧರಿಸಿ ಮಕ್ಕಳೊಂದಿಗೆ ರ್‍ಯಾಂಪ್ ವಾಕ್ ಸ್ಪರ್ಧೆ ಜರುಗಿದವು. ಶಾಲೆಯ ಪ್ರಾಚಾರ್ಯೆ ರಜನಿ ಪಾಟೀಲ, ವಗಾಣಿಶ್ರೀ, ವಸುಧಾ ನೂರಾರು ಮಕ್ಕಳು ಪಾಲ್ಗೊಂಡಿದ್ದರು.

ಮೂರುಸಾವಿರ ಮಠಕ್ಕೆ ಲಿಂಗರಾಜ ಭೇಟಿ: ಪೂಜೆ

ಹುಬ್ಬಳ್ಳಿ: ರಾಜ್ಯ ಸಭೆಗೆ ಎಂ.ನಾಗರಾಜ್ ಹಾಗೂ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾದ ಲಿಂಗರಾಜ ಪಾಟೀಲ ಅವರು ಸೋಮವಾರ ಮೂರು ಸಾವಿರ ಮಠ ಹಾಗೂ ಸಿದ್ಧಾರೂಢ ಸ್ವಾಮಿ ಮಠಕ್ಕೆ ಭೇಟಿ ನೀಡಿ ಶ್ರೀಗಳ ಆಶೀರ್ವಾದ ಪಡೆದರು. ಮೂರುಸಾವಿರ ಮಠಕ್ಕೆ ಭೇಟಿ ನೀಡಿ ಶ್ರೀ ಗುರುಸಿದ್ದೇಶ್ವರರ ಕತೃ ಗದ್ದುಗೆಗೆ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಜಗದ್ಗುರು ಮೂರುಸಾವಿರ ಮಠದ ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ ಇಬ್ಬರು ಜನಪ್ರತಿನಿಧಿಗಳಿಗೆ ಫಲ-ಪುಷ್ಪ ನೀಡಿ ಸನ್ಮಾನಿಸಿ, ಅವರ ಮುಂದಿನ ಸಾರ್ವಜನಿಕ ಜೀವನ ಹಾಗೂ ಜನಸೇವೆಯ ಕಾರ್ಯಗಳಿಗೆ ಶುಭ ಹಾರೈಸಿದರು.

ಹು-ಧಾ ಪೂರ್ವ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಮಂಜುನಾಥ ಕಾಟಕರ, ನಿಕಟ ಪೂರ್ವ ಅಧ್ಯಕ್ಷ ಪ್ರಭು ನವಲಗುಂದಮಠ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವು ಮೆಣಸಿನಕಾಯಿ, ಹು-ಧಾ ಪೂರ್ವ ವಿಧಾನಸಭಾ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ರಂಗಾ ಕಠಾರೆ, ಬಸವರಾಜ ಇಟ್ಟಂಗಿ, ಹು-ಧಾ ಪೂರ್ವ ವಿಧಾನಸಭಾ ಕ್ಷೇತ್ರದ ಮಾಧ್ಯಮ ವಕ್ತಾರ ಲಕ್ಷ್ಮೀಕಾಂತ ಘೋಡಕೆ ಇದ್ದರು.

ಸಿದ್ಧಾರೂಢ ಮಠಕ್ಕೆ ಭೇಟಿ: ಇಲ್ಲಿಯ ಸಿದ್ಧಾರೂಢ ಸ್ವಾಮಿ ಮಠಕ್ಕೆ ಭೇಟಿ ನೀಡಿದ ರಾಜ್ಯ ಸಭೆ ಸದಸ್ಯ ಎಂ. ನಾಗರಾಜ ಹಾಗೂ ವಿಧಾನ ಪರಿಷತ್ ಸದಸ್ಯ ಲಿಂಗರಾಜ ಪಾಟೀಲ ಅವರು ಭೇಟಿ ನೀಡಿ ಉಭಯ ಶ್ರೀಗಳ ದರ್ಶನ ಪಡೆದರು. ಈ ವೇಳೆ ಶ್ರೀ ಮಠದಿಂದ ಅವರಿಗೆ ಸನ್ಮಾನಿಸಲಾಯಿತು.



ಹುಬ್ಬಳ್ಳಿ: ರಾಜ್ಯ ಸಭೆಗೆ ಎಂ.ನಾಗರಾಜ್ ಹಾಗೂ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾದ ಲಿಂಗರಾಜ ಪಾಟೀಲ ಅವರು ಸೋಮವಾರ ಮೂರು ಸಾವಿರ ಮಠ ಹಾಗೂ ಸಿದ್ಧಾರೂಢ ಸ್ವಾಮಿ ಮಠಕ್ಕೆ ಭೇಟಿ ನೀಡಿ ಶ್ರೀಗಳ ಆಶೀರ್ವಾದ ಪಡೆದರು. ಮೂರುಸಾವಿರ ಮಠಕ್ಕೆ ಭೇಟಿ ನೀಡಿ ಶ್ರೀ ಗುರುಸಿದ್ದೇಶ್ವರರ ಕತೃ ಗದ್ದುಗೆಗೆ ಪೂಜೆ ಸಲ್ಲಿಸಿದರು.

ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ಸಭೆ | ಎ.ಡಿಸಿ ಗೀತಾ ಸಿ.ಡಿ ಸೂಚನೆ

ಪೋಲಿಯೋ ಅಭಿಯಾನ ಯಶಸ್ವಿಗೊಳಿಸಿ

ಧಾರವಾಡ: ಜಿಲ್ಲೆಯಲ್ಲಿ ಪಲ್ಸ್ ಪೋಲಿಯೋ ಕಾರ್ಯ ಜೂ.28ರಿಂದ ಜರುಗಲಿದ್ದು, 5 ವರ್ಷದೊಳಗಿನ ಮಕ್ಕಳಿಗೆ ಲಸಿಕೆ ನೀಡಲಿದೆ. ಯಾವುದೇ ಮಗು ಕೂಡ ಲಸಿಕೆಯಿಂದ ವಂಚಿತವಾಗದಂತೆ ಕ್ರಮ ವಹಿಸಲು ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ ಸೂಚಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ರಾಷ್ಟ್ರೀಯ ಪಲ್ಸ್ ಪೋಲಿಯೋ 2026 ಕಾರ್ಯಕ್ರಮದ ಜಿಲ್ಲಾ ಮಟ್ಟದ ಟಾಸ್ಕ್‌ಫೋರ್ಸ್ ಸಮಿತಿಯ ಸೋಮವಾರ ಸಭೆ ನಡೆಸಿದ ಅವರು, ಆರೋಗ್ಯ ಕಾರ್ಯಕರ್ತರು ಮನೆ ಮನೆ ಭೇಟಿ ನೀಡುವುದಾಗಿ ತಿಳಿಸಿದರು.

ಪಲ್ಸ್ ಪೋಲಿಯೋ ಕಾರ್ಯಕ್ರಮದಡಿ ಜಿಲ್ಲೆಯ ಅರ್ಹ ಮಕ್ಕಳಿಗೆ ಕಡ್ಡಾಯವಾಗಿ ಎರಡು ಹನಿ ಪೋಲಿಯೋ ಲಸಿಕೆ ನೀಡಬೇಕು. ಗ್ರಾಮೀಣದಲ್ಲಿ ಜೂ.29ರಿಂದ ಜೂನ್ 30ರವರೆಗೆ ನಗರಗಳಲ್ಲಿ ಜೂ.2ರಿಂದ ಜು.1ವರೆಗೆ ಲಸಿಕೆ ಹಾಕಲಿದೆ ಎಂದರು.

ಜಿಲ್ಲೆಯಲ್ಲಿ 5 ವರ್ಷದೊಳಗಿನ 2,08,779 ಮಕ್ಕಳಿಗೆ ಲಸಿಕೆ ನೀಡುವ ಗುರಿ ಹೊಂದಿದೆ. 889 ಲಸಿಕಾ ಕೇಂದ್ರಗಳಿವೆ. 96 ಟ್ರಾನ್ಸಿಸ್ಟ್ ತಂಡಗಳು, 57 ಮೊಬೈಲ್ ತಂಡಗಳನ್ನು ನಿಯೋಜಿಸಲಾಗಿದೆ ಎಂದು ಎಡಿಸಿ ಗೀತಾ ಮಾಹಿತಿ ನೀಡಿದರು.

ಕಾರ್ಯಕ್ರಮಕ್ಕಾಗಿ 3,862 ವ್ಯಾಕ್ಸಿನೇಟರ್‌ಗಳು ಮತ್ತು 218 ಮೇಲ್ವಿಚಾರಕರು ಕಾರ್ಯ ನಿರ್ವಹಿಸಲಿದ್ದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ವ್ಯಾಪಕ ಪ್ರಚಾರ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಅಂಗನವಾಡಿ ಕೇಂದ್ರಗಳಲ್ಲಿ ಕರಪತ್ರ, ಬ್ಯಾನರ್‌ಗಳನ್ನು ಪ್ರದರ್ಶಿಸಿ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು. ಗ್ರಾಮಗಳಲ್ಲಿ ಪಲ್ಸ್ ಕಾರ್ಯಕ್ರಮದ ಕುರಿತು ಅರಿವು ಮೂಡಿಸುವ ಜಾಥಾ ಕಾರ್ಯಕ್ರಮ ಹಮ್ಮಿಕೊಳ್ಳಬೇಕು ಎಂದು ಸಭೆಯಲ್ಲಿ ಸೂಚಿಸಿದರು.



> ಲಸಿಕೆ ಸುರಕ್ಷಿತ ಇಡಲು, ಶೀತಲ ಪ್ಯಾಕ್ ತಯಾರಿಸಲು ನಿರಂತರ ವಿದ್ಯುಚ್ಛಕ್ತಿಯ ಅವಶ್ಯವಿದೆ. ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಮುದಾಯ ಆರೋಗ್ಯ ಕೇಂದ್ರದ ಪ್ರದೇಶಗಳಲ್ಲಿ ಪಲ್ಸ್ ಪೋಲಿಯೋ ದಿನಾಂಕದ ಹಿಂದಿನ ಒಂದು ವಾರದಿಂದ ಮುಂದಿನ ಮೂರು ದಿನಗಳವರೆಗೆ ವಿದ್ಯುಚ್ಛಕ್ತಿ ನಿರಂತರವಾಗಿ ಸರಬರಾಜು ಮಾಡುವಂತೆ ಅಧಿಕಾರಿಗಳು ಕ್ರಮ ವಹಿಸಬೇಕು. ಆರೋಗ್ಯ ಮತ್ತು ವಿವಿಧ ಇಲಾಖೆಗಳ ಸಿಬ್ಬಂದಿಗಳು ಅಭಿಯಾನದ ಯಶಸ್ಸಿಗೆ ಕೈಜೋಡಿಸಬೇಕು.
> ■ ಗೀತಾ ಸಿ.ಡಿ., ಹೆಚ್ಚುವರಿ ಜಿಲ್ಲಾಧಿಕಾರಿ

ಕಾರ್ಯಕ್ರಮದ ಯಶಸ್ವಿಗೆ ಜಿಲ್ಲೆಗೆ ಒಟ್ಟು 189 ವಾಹನಗಳ ಅಗತ್ಯವಿದ್ದು, ವಿವಿಧ ತಾಲೂಕುಗಳಿಗೆ ಅವಶ್ಯಕತೆ ಅನುಸಾರ ವಾಹನ ನಿಯೋಜಿಸಲಾಗುವುದು. ಬಸ್ ನಿಲ್ದಾಣಗಳಲ್ಲಿ ಆರೋಗ್ಯ ಇಲಾಖೆಯ ತಂಡಗಳಿಂದ ಮಕ್ಕಳಿಗೆ ಲಸಿಕೆ ಹಾಕಲು ಹೇಳಿದರು.

ಬಿಆರ್‌ಟಿಎಸ್ ನಿಲ್ದಾಣಗಳಲ್ಲಿ, ರೈಲ್ವೆ ನಿಲ್ದಾಣಗಳಲ್ಲಿ ಪೋಲಿಯೋ ಬೂತ್‌ಗಳನ್ನು ತೆರೆಯುವುದು ಮತ್ತು ನಿಲ್ದಾಣಗಳಲ್ಲಿನ ವಿದ್ಯುತ್ ಮಾಹಿತಿ ಫಲಕದಲ್ಲಿ ಎಲ್ಲ 0-5 ವರ್ಷದೊಳಗಿನ ಮಕ್ಕಳಿಗೆ ಲಸಿಕೆ ಹಾಕಿಸಲು ಪ್ರಕಟಣೆ ಹೊರಡಿಸಲು ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ ಸೂಚನೆ ನೀಡಿದರು.

ಈ ಸಭೆಯಲ್ಲಿ ಪಲ್ಸ್ ಪೋಲಿಯೋ ಅಭಿಯಾನದ ಬಿತ್ತಿಪತ್ರವನ್ನು ಅಧಿಕಾರಿಗಳು ಸೇರಿ ಬಿಡುಗಡೆ ಮಾಡಿದರು.

ಡಿಎಚ್‌ಒ ಡಾ.ಪರಶುರಾಮ ಎಫ್.ಕೆ., ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಡಾ.ಬಿ.ಆರ್.ಪಾತ್ರೋಟ, ಡಿಎಸ್ ಡಾ.ಸಂಗಪ್ಪ ಗಾಬಿ ಅನೇಕರು ಇದ್ದರು.

ಜಿಲ್ಲೆಯ ವಿವಿಧೆಡೆ ಯೋಗ ದಿನಾಚರಣೆ

ಧಾರವಾಡ: ಸಾಂಸ್ಕೃತಿ ನಗರಿ ಧಾರವಾಡ ಜಿಲ್ಲೆಯ ವಿವಿಧ ಶಾಲಾ-ಕಾಲೇಜು ಮತ್ತು ಸಂಘ-ಸಂಸ್ಥೆಗಳಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅತ್ಯಂತ ಸಂಭ್ರಮದಿಂದ ಆಚರಿಸಲಾಯಿತು.

ರಾಷ್ಟ್ರೋತ್ಥಾನ ಸಂಸ್ಥೆ: ನಗರದ ಹೊರವಲಯದ ಗರಗ ರಸ್ತೆಯ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಲ್ಲಿ 12ನೇ ರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಯಿತು. ಹರಭಟ್ ಕಾಲೇಜಿನ ವಿಶ್ರಾಂತ ಪ್ರಾಚಾರ್ಯ ಬಿ.ಎಂ. ಮುಂದಿನಮನಿ ಮಾತನಾಡಿದರು.

ಪ್ರಾಚಾರ್ಯ ಡಾ.ಅನಿತಾ ರೈ, ಶಿಕ್ಷಕ ಆತ್ಮಾನಂದ, ನರಸಿಂಹ ಬೆಳಗಾಂವಕರ್ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ದಿಗಂತ ಗದಗ ಸ್ವಾಗತಿಸಿದರು. ಬಿ.ಸಮರ್ಥ ನಿರೂಪಿಸಿದರು. ಪೃಥ್ವಿಕ ವಂದಿಸಿದರು.

ಸರ್ಕಾರಿ ಪ್ರೌಢ ಶಾಲೆ: ತಾಲೂಕಿನ ಮನಗುಂಡಿ ಸರ್ಕಾರಿ ಪ್ರೌಢಶಾಲೆಯಲ್ಲಿ ವಿಶ್ವ ಯೋಗ ದಿನಾಚರಣೆ ಆಚರಿಸಲಾಯಿತು. ಶಿಕ್ಷಕ ರಂಗನಾಥ ವಾಲ್ಮೀಕಿ ಯೋಗ ಪ್ರತಿಜ್ಞಾ ವಿಧಿ ಬೋಧಿಸಿದರು. ಜ್ಯೋತಿ ಬಾಳೇರಿ, ಉಷಾ ಶಿವಣ್ಣವರ, ಸಿ.ಸಿ.ಹಿರೇಮಠ, ಎನ್.ಜಿ.ಭಾಗವಾನ್, ಲಕ್ಷ್ಮೀ ತಿರ್ಲಾಪುರ ಇದ್ದರು.

ಕರ್ನಾಟಕ ಪ್ರೌಢಶಾಲೆ: ನಗರದ ಕರ್ನಾಟಕ ಪ್ರೌಢ ಶಾಲೆ ಮೈದಾನದಲ್ಲಿ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು. ಶಿಕ್ಷಕರಾದ ಎ.ಆರ್.ಹದ್ಲಿ, ರಮೇಶ ಮೂಲಿಮನಿ, ವಿ.ಬಿ.ಶಿಂಗೆ, ಕೆ.ಸಿ.ಪ್ರಕಾಶ, ಶೋಭಾದೇವಿ, ಮಂಜುಳಾ ಕೋಳಿವಾಡ, ಶಿವಲೀಲಾ ಹಾತರಕಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.



ಕಾನೂನು ವಿಶ್ವವಿದ್ಯಾಲಯ

ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದಲ್ಲಿ 12ನೇ ವಿಶ್ವ ಯೋಗ ದಿನಾಚರಣೆ ಆಚರಿಸಲಾಯಿತು. ಸಂಯೋಜಕ ಡಾ.ಖಾಲಿದ್ ಖಾನ್, ಡಾ.ರಾಜೇಂದ್ರಕುಮಾರ ಹಿಟ್ಟಣಗಿ, ಸಂಜೀವಕುಮಾರ ಹಡಗಲಿ, ಡಾ.ಮಂಜಣ್ಣ ಜನಗವಾಡ, ಡಾ.ಮುತ್ತಣ ಬಡಗಂಡಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

ಬಾಳೆಕುಂದ್ರಿ ಆಂಗ್ಲ ಶಾಲೆ: ನಗರದ ಕಮಲಾ ಬಾಳೆಕುಂದ್ರಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರನೆ ಆಚರಿಸಲಾಯಿತು. ದೈಹಿಕ ಶಿಕ್ಷಣ ಅಧ್ಯಾಪಕಿ ಯೋಗಾಸನ ಹೇಳಿಕೊಟ್ಟರು. ಚೆನ್ನಮ್ಮ ಬೈಲೂರಗೆ ಸನ್ಮಾನಿಸಲಾಯಿತು. ಶಾಲಾ ಆಡಳಿತಾಧಿಕಾರಿ ಎಂ.ಜಿ.ಹಿರೇಮಠ, ಮುಖ್ಯಾಧ್ಯಾಪಕಿ ಅಶ್ವಿನಿ ಆರ್, ಸಹ ಶಿಕ್ಷಕರಾದ ಸಂಗೀತ ದೀಕ್ಷಿತ, ವಿದ್ಯಾ ಮುತ್ತೂರ, ಸಂಗೀತ ಉಪ್ಪಾರಟ್ಟಿ, ಪ್ರತಿಭಾ ಹಂಚಿನಾಳ, ಜಯಾ ಬಡಿಗೇರ, ಶ್ವೇತಾ ಕಲ್ಮಠ ಅನೇಕರು ಇದ್ದರು.

ವಿಶ್ವಕ್ಕೆ ಯೋಗ ಪರಿಚಯಿಸಿದ್ದು ಭಾರತ: ತೋಟಗಂಟಿ



ಕಲಘಟಗಿ: ವಿಶ್ವಕ್ಕೆ ಯೋಗವನ್ನು ಪರಿಚಯಿಸಿಯ ಗರಿಮೆ ನಮ್ಮ ಹೆಮ್ಮೆಯ ಭಾರತಕ್ಕೆ ಸಲ್ಲುತ್ತದೆ ಎಂದು ಜಾನಪದ ವಿದ್ವಾಂಸ ಮಲ್ಲಯ್ಯಸ್ವಾಮಿ ತೋಟಗಂಟಿ ಅಭಿಪ್ರಾಯ ವ್ಯಕ್ತಪಡಿಸಿದರು.

ಅವರು ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ವಿವೇಕಾನಂದ ಸೇವಾ ಸಮಿತಿ ಕಲಘಟಗಿ ವತಿಯಿಂದ ಯೋಗ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿ, ಗೌರವಾನ್ವಿತ ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿಜಿ ಅವರ ದೂರದೃಷ್ಟಿ ನಾಯಕತ್ವದಲ್ಲಿ ಯೋಗಕ್ಕೆ ಜಾಗತಿಕ ಮನ್ನಣೆ ದೊರೆತಿದೆ. ದೇಶ ವಿದೇಶಗಳಲ್ಲಿ ಜನರು ಯೋಗಾಭ್ಯಾಸ ಮಾಡುತ್ತಿದ್ದಾರೆ. ಯೋಗದಿಂದ ರೋಗವನ್ನು ದೂರ ಮಾಡಿ ಸದೃಢ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಾಧ್ಯ. ಮನಸ್ಸು ಮತ್ತು ದೇಹವನ್ನು ಏಕಾಗ್ರತೆಯಿಂದ ಇಡುವ ಶಕ್ತಿ ಯೋಗಕ್ಕಿದೆ. ಹೀಗಾಗಿ ನಾವೆಲ್ಲರೂ ಪ್ರತಿದಿನ ಯೋಗಾಭ್ಯಾಸ ಮಾಡಿ, ಆರೋಗ್ಯವಂತರಾಗಬೇಕು ಎಂದರು.

ನಿವೃತ್ತ ದೈಹಿಕ ಶಿಕ್ಷಕಿಯ ವಿಜಯಲಕ್ಷ್ಮಿ ಐಹೊಳೆ ಯೋಗ ಅಭ್ಯಾಸ ಮಾಡಿಸಿದರು. ವಿವೇಕಾನಂದ ಸೇವಾ ಸಮಿತಿಯ ಸಂಗಮೇಶ ತೋಟಗಂಟಿ, ಎಚ್.ಎನ್. ಸುನಗದ, ಯಲ್ಲಾರಿ ಶಿಂಧೆ, ಸದಾನಂದ ಚಿಂತಾಮಣಿ, ಪ್ರದೀಪ ಚಿತ್ತೂರು, ಗಂಗಾಧರ ಘಾಳಿ, ರಾಘವೇಂದ್ರ ಅಳ್ವಾವರ, ಶ್ರೀಕಾಂತ ಪಾಟೀಲ, ಸುರೇಶ ಶೀಲವಂತರ, ಫಕೀರೇಶ ನಿಗದಿ, ನಿಂಗರಾಜ ಹುಲಿಹೊಂಡ, ಪರುಶುರಾಮ ಹುಲಿಹೊಂಡ, ಸಂತೋಷ ಮೊಟೆನವರ, ರಾಜೇಶ್ವರಿ ಶೆಟ್ಟಿ, ರಾಧಿಕಾ ಶೆಟ್ಟಿ, ವಿದ್ಯಾರ್ಥಿಗಳು ಭಾಗವಹಿಸಿದ್ದರು. ನ್ಯಾಯವಾದಿ ರವೀಂದ್ರಯ್ಯ ತೋಟಗಂಟಿ ನಿರೂಪಿಸಿದರು.

ಅರ್ಜಿ ಆಹ್ವಾನ

ಕಲಘಟಗಿ: ಪಟ್ಟಣ ಪಂಚಾಯಿತಿಯ 2026-27ನೇ ಸಾಲಿನಲ್ಲಿ ಶೇ.24.10ರ ಯೋಜನೆಯಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಶೇ.7.25ರ ಇತರೆ ಬಡಜನರ ಕಲ್ಯಾಣ ಕಾರ್ಯಕ್ರಮದಡಿ ಆರ್ಥಿಕ ನೆರವು ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಕೆಗೆ ಜೂ.30 ಕೊನೆಯ ದಿನ. ಪಟ್ಟಣದ ರಹವಾಸಿಗಳು ಮಾತ್ರ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ವಿಷಯ ನಿರ್ವಾಹಕರನ್ನು ಸಂಪರ್ಕಿಸಬಹುದು ಎಂದು ಪಟ್ಟಣ ಪಂಚಾಯತಿ ಪ್ರಕಟಣೆ ತಿಳಿಸಿದೆ.

ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಹುಬ್ಬಳ್ಳಿ: ಇಲ್ಲಿಯ ವಿದ್ಯಾನಗರ ಬಿ.ವಿ.ಬಿ ಕಾಲೇಜ್ ಆವರಣದ ಡಾ.ಪ್ರಭಾಕರ ಕೋರೆ ಕ್ರೀಡಾಂಗಣದಲ್ಲಿ ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯ ವತಿಯಿಂದ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಯಿತು.

ಸಮಗ್ರ ಆರೋಗ್ಯ ಮತ್ತು ಯೋಗಕ್ಷೇಮ ಎಂಬ ಧ್ಯೇಯದೊಂದಿಗೆ ಆಯೋಜಿಸಲಾದ ಈ ಕಾರ್ಯಕ್ರಮದಲ್ಲಿ ಬೋಧಕ ವರ್ಗ, ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಎನ್‌ಸಿಸಿ ಕೆಡೆಟ್‌ಗಳು ಆರೋಗ್ಯಕರ ಮತ್ತು ಜಾಗೃತ ಜೀವನಶೈಲಿಯತ್ತ ತಮ್ಮ ಬದ್ಧತೆಯನ್ನು ಪ್ರದರ್ಶಿಸಿದರು.

ಆರ್ಟ್ ಆಫ್ ಲಿವಿಂಗ್ ಫೌಂಡೇಶನ್‌ನ ಪ್ರಮಾಣಿತ ಯೋಗ ತರಬೇತುದಾರ ನಿವೇದಿತಾ ಶ್ರೀನಾಥ ಅವರು ತಮ್ಮ ಪರಿಣಿತ ತಂಡದೊಂದಿಗೆ ನಡೆಸಿಕೊಟ್ಟರು. ಪರಿಸರ ಜಾಗೃತಿಯನ್ನು ಪ್ರತಿಬಿಂಬಿಸುವ ರೀತಿಯಲ್ಲಿ ಗಣ್ಯರು ಗಿಡಕ್ಕೆ ನೀರೆರೆಯುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಯೋಗ ತರಬೇತುದಾರ ನಿವೇದಿತಾ ಶ್ರೀನಾಥ ಮಾತನಾಡಿ, ನಿಯಮಿತ ಯೋಗಾಭ್ಯಾಸವು ಮಾನಸಿಕ ಆರೋಗ್ಯವನ್ನು ವೃದ್ಧಿಸುವುದರ ಜೊತೆಗೆ ಒತ್ತಡವನ್ನು ಕಡಿಮೆ ಮಾಡಿ, ಸಮಸ್ಯೆಗಳನ್ನು ಪರಿಹರಿಸುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ ಎಂದರು.

ವಯೋಸಹಜ ಆರೋಗ್ಯ ಸಮಸ್ಯೆಗಳನ್ನು ನಿವಾರಿಸುವಲ್ಲಿ ಯೋಗದ ಮಹತ್ವದ ಪಾತ್ರವನ್ನು ವಿವರಿಸಿದ ಅವರು, ಎಲ್ಲ ವಯೋಮಾನದವರೂ ಯೋಗವನ್ನು ತಮ್ಮ ದೈನಂದಿನ ಜೀವನದ ಅವಿಭಾಜ್ಯ ಅಂಗವನ್ನಾಗಿಸಿಕೊಳ್ಳಬೇಕು ಎಂದರು.



ವಿದ್ಯಾರ್ಥಿ ಕಲ್ಯಾಣ ವಿಭಾಗದ ಡೀನ್ ಪ್ರೊ.ಸಂಜಯ ಕೋಟಬಾಗಿ, ಕ್ರೀಡಾ ಚಟುವಟಿಕೆಗಳ ಸಂಯೋಜಕ ಪ್ರೊ.ವಿಜಯಕುಮಾರ ನಿಂಬಗಾಳ, ಕ್ರೀಡಾ ನಿರ್ದೇಶಕ ಜಯದೇವ ದಾನದಮನಿ, ಸಿಇಆರ್ ನಿರ್ದೇಶಕ ಡಾ.ಕೌಶಿಕ್ ಎಂ. ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು. ಬೋಧಕ ವರ್ಗ, ಆಡಳಿತ ಸಿಬ್ಬಂದಿ ಹಾಗೂ ವಿಶ್ವವಿದ್ಯಾಲಯದ ಎನ್‌ಸಿಸಿ ಕೆಡೆಟ್‌ಗಳು ಉತ್ಸಾಹದಿಂದ ಪಾಲ್ಗೊಂಡು ಕೆಎಲ್‌ಇ ಟೆಕ್‌ನ ಆರೋಗ್ಯಪ್ರಜ್ಞೆಯ ಮತ್ತು ಚೈತನ್ಯಮಯ ಸಂಸ್ಕೃತಿಯನ್ನು ಪ್ರತಿಬಿಂಬಿಸಿದರು.

ದೈಹಿಕ, ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಯೋಗ ಅತ್ಯಗತ್ಯ: ಲಮಾಣಿ

ನವಲಗುಂದ: ನಗರದ ಎನ್‌ಟಿಎಸ್ ಸಮಿತಿಯ ಶಂಕರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಅತ್ಯಂತ ಉತ್ಸಾಹ ಮತ್ತು ಸಡಗರದಿಂದ ಆಚರಿಸಲಾಯಿತು. ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಹಾಗೂ ರಾಷ್ಟ್ರೀಯ ಕೆಡೆಟ್ ಕೋರ್ಪ್ಸ್ ಘಟಕಗಳ ಜಂಟಿ ಆಶ್ರಯದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಕಾಲೇಜಿನ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಜಯರಾಮ ಲಮಾಣಿ ಉದ್ಘಾಟಿಸಿ ಮಾತನಾಡಿ, ದೈನಂದಿನ ಜೀವನದಲ್ಲಿ ಯೋಗವು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಅತ್ಯಗತ್ಯವಾಗಿದೆ. ವಿದ್ಯಾರ್ಥಿಗಳು ಮೊಬೈಲ್ ವ್ಯಾಮೋಹದಿಂದ ಹೊರಬಂದು ನಿತ್ಯ ಯೋಗಾಭ್ಯಾಸ ರೂಢಿಸಿಕೊಳ್ಳಬೇಕು ಎಂದು ಹೇಳಿದರು.

ಬೆಳಗ್ಗೆ ಜರುಗಿದ ಯೋಗ ಪ್ರದರ್ಶನದಲ್ಲಿ ಎನ್‌ಎಸ್‌ಎಸ್ ಸ್ವಯಂ ಸೇವಕರು ಹಾಗೂ ಎನ್‌ಸಿಸಿ ಕೆಡೆಟ್‌ಗಳು ಅತ್ಯಂತ ಶಿಸ್ತಿನಿಂದ ಪಾಲ್ಗೊಂಡಿದ್ದರು.

ಪ್ರಮುಖ ಯೋಗ ತರಬೇತುದಾರರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಸೂರ್ಯನಮಸ್ಕಾರ, ಪ್ರಾಣಾಯಾಮ, ತಾಡಾಸನ, ವೃಕ್ಷಾಸನ ಸೇರಿದಂತೆ ವಿವಿಧ ಆಸನಗಳನ್ನು ಪ್ರದರ್ಶಿಸಿದರು. ದೈಹಿಕ ಸಾಮರ್ಥ್ಯ ಹೆಚ್ಚಿಸುವ ಹಾಗೂ ಮಾನಸಿಕ ಏಕಾಗ್ರತೆ ಬೆಳೆಸುವ ಯೋಗದ ಪ್ರಮುಖ ಸೂತ್ರಗಳನ್ನು ಪ್ರಾಯೋಗಿಕವಾಗಿ ಮನವರಿಕೆ ಮಾಡಿಕೊಡಲಾಯಿತು.



ಕಾಲೇಜಿನ ಎನ್‌ಎಸ್‌ಎಸ್ ಯೋಜನಾಧಿಕಾರಿಗಳು, ಎನ್‌ಸಿಸಿ ಅಧಿಕಾರಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ನೂರಾರು ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಂಡು ಯೋಗ ದಿನವನ್ನು ಯಶಸ್ವಿಗೊಳಿಸಿದರು. ವಿದ್ಯಾರ್ಥಿಗಳಲ್ಲಿ ಆರೋಗ್ಯದ ಜಾಗೃತಿ ಮೂಡಿಸುವಲ್ಲಿ ಈ ಕಾರ್ಯಕ್ರಮ ಯಶಸ್ವಿಯಾಯಿತು. ಈ ವೇಳೆ ವಿದ್ಯಾರ್ಥಿ ನಾಯಕರಾದ ಸಿದ್ದಮ್ಮ, ಪ್ರವೀಣ, ಫಕ್ರುಸಾಭ, ಚೈತ್ರಾ ಮುಂದಾಳತ್ವ ವಹಿಸಿದ್ದರು.

ಯೋಗಾಭ್ಯಾಸದಿಂದ ಉತ್ತಮ ಆರೋಗ್ಯ: ಶ್ರೀಗಳು



ಕುಂದಗೋಳ: ಪಟ್ಟಣದ ಜೆಎಸ್‌ಎಸ್ ವಿದ್ಯಾಪೀಠದ ಮಹಾವಿದ್ಯಾಲಯದ ಶಿವಾಭವನದಲ್ಲಿ 12ನೇ ಅಂತರರಾಷ್ಟ್ರೀಯ ಯೋಗ ದಿನವನ್ನು ಇತ್ತೀಚೆಗೆ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮದ ಸಾನ್ನಿಧ್ಯವನ್ನು ಶಿವಾನಂದ ಮಠದ ಶಿವಾನಂದ ಶ್ರೀ ಗಳು ವಹಿಸಿದ್ದರು. ಡಾ.ಮುನವಳ್ಳಿ ವಿಶ್ವನಾಥ ದೇವರು ಆಶೀರ್ವಚನ ನೀಡಿ, ಯೋಗಾಸಕ್ತರಿಗೆ ಯೋಗದೀಕ್ಷೆ ನೀಡುವ ಮೂಲಕ ಯೋಗದ ಮಹತ್ವ ಹಾಗೂ ಅದರ ಆರೋಗ್ಯಪರ ಪ್ರಯೋಜನಗಳ ಕುರಿತು ವಿವರಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಮಹಾದೇವಿ ಮಾಡಲಗೇರಿ ಮಾತನಾಡಿ, ನಿಯಮಿತ ಯೋಗಾಭ್ಯಾಸದಿಂದ ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ. ದೈಹಿಕ ಮತ್ತು ಮಾನಸಿಕ ನೆಮ್ಮದಿಗೆ ಯೋಗ ಅತ್ಯುತ್ತಮ ಸಾಧನವಾಗಿದೆ ಎಂದರು.

ಜಿ.ಎಸ್.ಪಾಟೀಲ ಪದವಿ ಮಹಾವಿದ್ಯಾಲಯದ ಪ್ರಾಂಶುಪಾಲ ಎಂ.ಎಂ. ಬುಡಶೆಟ್ಟಿ ಮಾತನಾಡಿ, ಯೋಗಾಭ್ಯಾಸವು ದೇಹದ ಜೊತೆಗೆ ಮನಸ್ಸನ್ನೂ ಸದೃಢಗೊಳಿಸುತ್ತದೆ. ಇಂದಿನ ಒತ್ತಡದ ಬದುಕಿನಲ್ಲಿ ಯೋಗದ ಅಗತ್ಯತೆ ಹೆಚ್ಚಾಗಿದೆ ಎಂದರು.

ಈ ವೇಳೆ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ವೈ.ಎಸ್. ಮೇಗುಂಡಿ, ಎಸ್.ಸಿ. ಶಾನವಾಡ, ದೈಹಿಕ ಶಿಕ್ಷಣ ಪರಿವೀಕ್ಷಕ ನಾಗರಾಜ ಗೌಳಿ, ಬಿಜೆಪಿ ತಾಲೂಕು ಘಟಕದ ಅಧ್ಯಕ್ಷ ನಾಗನಗೌಡ ಸಾತ್ಮರ, ಪಕಜ್ಜ ಕೋರಿ, ಸಿದ್ದಪ್ಪ ಇಂಗಳಳ್ಳಿ, ಎಲ್.ಡಿ.ದೊಡ್ಡಮನಿ, ಬಿ.ಜಿ.ಬಡಿಗೇರ, ಆರ್.ಡಿ.ಮೆಣಸಿನಕಾಯಿ ಸೇರಿದಂತೆ ಸಿಬ್ಬಂದಿ, ವಿದ್ಯಾರ್ಥಿಗಳು, ಯೋಗಾಭ್ಯಾಸಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಸುಧಾ ಮೂರ್ತಿ ಭೇಟಿಯಾದ ವೆಂಕಟೇಶ ಕಾಟವೆ

ಹುಬ್ಬಳ್ಳಿ: ದೇಶಪಾಂಡೆ ನಗರದಲ್ಲಿರುವ ಗ್ಯಾನ ಭಾರತಿ ಶಾಲೆಯಲ್ಲಿ ಇನ್ಫೋಸಿಸ್ ಫೌಂಡೇಶನ್ ಅಧ್ಯಕ್ಷೆ, ರಾಜ್ಯಸಭಾ ಸದಸ್ಯೆ ಹಾಗೂ ಸಮಾಜ ಸೇವೆಯ ಮೂಲಕ ಲಕ್ಷಾಂತರ ಜನರಿಗೆ ಸ್ಫೂರ್ತಿಯಾಗಿರುವ ಸುಧಾ ಮೂರ್ತಿ ಅಮ್ಮನವರನ್ನು ವಿ.ಎ.ಕೆ.ಫೌಂಡೇಶನ್ ಅಧ್ಯಕ್ಷ ವೆಂಕಟೇಶ ಕಾಟವೆ ಭೇಟಿ ಮಾಡಿ ತಾಯಿ ಸರಸ್ವತಿಯ ವಿಗ್ರಹವನ್ನು ನೀಡಿ ಗೌರವಿಸಿದರು.

ಈ ಸಂದರ್ಭದಲ್ಲಿ ವಿಎಕೆ ಫೌಂಡೇಶನ್ ವತಿಯಿಂದ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಹಾಗೂ ವಿವಿಧ ಜನಪರ ಕ್ಷೇತ್ರಗಳಲ್ಲಿ ನಿರಂತರವಾಗಿ ನಡೆಯುತ್ತಿರುವ ಸೇವಾ ಕಾರ್ಯಗಳ ಕುರಿತು ವೆಂಕಟೇಶ್ ಕಾಟವೆ ಅವರು ಮಾಹಿತಿ ಹಂಚಿಕೊಂಡರು.

ಫೌಂಡೇಶನ್ ವತಿಯಿಂದ ಹಮ್ಮಿಕೊಂಡಿರುವ ಸೇವಾ ಕಾರ್ಯಗಳನ್ನು ಮೆಚ್ಚಿ, ಸಮಾಜದ ಅಭಿವೃದ್ಧಿಗೆ ಇಂತಹ ಕೊಡುಗೆ ಅತ್ಯಂತ ಮಹತ್ವದ್ದೆಂದು ಅವರು ಸಂತಸ ವ್ಯಕ್ತಪಡಿಸಿ ಪ್ರೋತ್ಸಾಹದ ಮಾತುಗಳನ್ನಾಡಿದರು.

ಸಮಾಜದ ಒಳಿತಿಗಾಗಿ ಮಾಡುವ ಪ್ರತಿಯೊಂದು ಸಣ್ಣ ಪ್ರಯತ್ನವೂ ದೊಡ್ಡ ಬದಲಾವಣೆಗೆ ಕಾರಣವಾಗುತ್ತದೆ ಎಂಬ ಸಂದೇಶವನ್ನು ಅವರ ವ್ಯಕ್ತಿತ್ವ ಮತ್ತೊಮ್ಮೆ ಮನದಟ್ಟು ಮಾಡಿತು.

ಈ ಸಂದರ್ಭದಲ್ಲಿ ಗ್ಯಾನ ಭಾರತಿ ಶಾಲೆಯ ಉಪಾಧ್ಯಕ್ಷರು ಗುರುರಾಜ ಕರಜಗಿ, ಸೆಕ್ರೆಟರಿ ವಸಂತ ನಾಡಜೋಶಿ, ಜಾಯಿಂಟ್ ಸೆಕ್ರೆಟರಿ ಎ ಡಿ ಕುಲಕರ್ಣಿ, ರವೀಂದ್ರ ದೇಸಾಯಿ, ಸಚಿನ್ ಕಾಟವೆ, ಶಾಲೆಯ ಶಿಕ್ಷಕರು ಗಿರಿಜಾ ನಾಯಕ, ವಿಶಾಕಾ ಕುಲಕರ್ಣಿ, ರಾಜೇಶ್ವರಿ ರವಿಶಂಕರ ಸೇರಿದಂತೆ ಶಾಲೆಯ ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.



ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯಾಗಾರ

ಅಳ್ನಾವರ: ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ-2026 ಕಾರ್ಯವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಇಲ್ಲಿನ ತಾಲೂಕ ಆಡಳಿತ ವತಿಯಿಂದ ಸೋಮವಾರ ಪಟ್ಟಣ ಪಂಚಾಯಿತಿ ಸಭಾ ಭವನದಲ್ಲಿ ಬೂತ್ ಲೆವೆಲ್ ಏಜೆಂಟ್-1 ಹಾಗೂ ಬೂತ್ ಲೆವೆಲ್ ಏಜೆಂಟ್-2 ಮತ್ತು ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಒಂದು ದಿನದ ತರಬೇತಿ ಕಾರ್ಯಕ್ರಮ ಹಮ್ಮಿಕೊಂಡಿದ್ದರು.

ಕಲಘಟಗಿ ಮತ ಕ್ಷೇತ್ರದ ಮತದಾರ ನೊಂದಣಾಧಿಕಾರಿ ಮಹಮ್ಮದ್ ಕೀಜರ್ ಮಾತನಾಡಿ, ಮತದಾರರ ಪಟ್ಟಿಯ ಪರಿಷ್ಕರಣೆ ಪ್ರಕ್ರಿಯೆ, ಮನೆ ಮನೆ ಸಮೀಕ್ಷೆ, ಅರ್ಹ ಮತದಾರರ ಹೆಸರು ಸೇರ್ಪಡೆ, ತಿದ್ದುಪಡಿ ಹಾಗೂ ಮತದಾರರ ಪಟ್ಟಿಯ ಶುದ್ಧೀಕರಣ ಕುರಿತು ವಿವರವಾದ ಮಾಹಿತಿ ನೀಡಿ, ಪರಿಷ್ಕರಣೆ ಕಾರ್ಯದಲ್ಲಿ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಹಕಾರದ ಮಹತ್ವವನ್ನು ತಿಳಿಸಿದರು.

ತಹಶೀಲ್ದಾರ್ ಸಚ್ಚಿದಾನಂದ ಕುಚನೂರು ಮಾತನಾಡಿ, ಮತದಾರರ ಪಟ್ಟಿಯಲ್ಲಿನ ತಪ್ಪುಗಳನ್ನು ಸರಿಪಡಿಸುವುದು. ಅರ್ಹ ಪ್ರತಿಯೊಬ್ಬ ನಾಗರಿಕರ ಹೆಸರನ್ನು ಮತದಾರರ ಪಟ್ಟಿಗೆ ಸೇರಿಸುವುದು ಈ ವಿಶೇಷ ಪರಿಷ್ಕರಣೆ ಅಭಿಯಾನದ ಮುಖ್ಯ ಉದ್ದೇಶ ಎಂದರು. ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು, ಬೂತ್ ಲೆವೆಲ್ ಏಜೆಂಟ್‌ರುಗಳು, ಚುನಾವಣಾ ಸಿಬ್ಬಂದಿ ಹಾಗೂ ಸಂಬಂಧಿತ ಅಧಿಕಾರಿಗಳು ಭಾಗವಹಿಸಿ ಮತದಾರರ ಪಟ್ಟಿ ಪರಿಷ್ಕರಣೆ ಕುರಿತ ಅಗತ್ಯ ಮಾಹಿತಿಯನ್ನು ತರಬೇತುದಾರರಾದ ಸಿ.ಸಿ. ಅಳಗವಾಡಿ, ಚನ್ನವೀರಗೌಡ, ಡಿ.ಎಸ್. ಗೌಡ ಅವರಿಂದ ಪಡೆದುಕೊಂಡರು. ಉಪ ತಹಶೀಲ್ದಾರ್ ಎಂ.ಎಸ್.ಬಿರಾದಾರ, ಶಿರಸ್ಥೆದಾರ ಎ.ಎಂ.ಮಂಗಳಗಟ್ಟಿ, ಗುರುರಾಜ ಗಾಳಿ, ಸಂಪತಕುಮಾರ ಗುರುಒಡೆಯರ ಇದ್ದರು.



ಸಂಘದ ನಿತ್ಯಶಾಖೆಗೆ ಬಂದರೆ ಉತ್ತರ ಸಿಗುವುದು


• **ಶಿವಮೊಗ್ಗ:** ರಾಷ್ಟ್ರೀಯ ಸ್ವಯಂಸೇವಕ ಸಂಘ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸುತ್ತದೆ. ಸಂಘದಲ್ಲಿ ಪ್ರಶ್ನೋತ್ತರ ಎಂಬುದು ಅವಿಭಾಜ್ಯ ಅಂಗ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತ ಪ್ರಚಾರ ಪ್ರಮುಖ್ ರಾಜೇಶ್ ಪದ್ಮಾರ್ ಹೇಳಿದರು.



ಕರ್ನಾಟಕ ದಕ್ಷಿಣ ಪ್ರಾಂತ ಪ್ರಚಾರ ಪ್ರಮುಖ್ ರಾಜೇಶ್ ಪದ್ಮಾರ್ ಹೇಳಿಕೆ

ನಗರದ ಖಾಸಗಿ ಹೋಟೆಲ್‌ನಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಶತಾಬ್ದಿ ವರ್ಷ ನಿಮಿತ್ತ ಆಯೋಜಿಸಿದ್ದ ಪ್ರಮುಖ ನಾಗರಿಕರ ಗೋಷ್ಠಿಯ ಸಂವಾದದಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಸಂಘದ ನಿತ್ಯಶಾಖೆಗೆ ಬಂದರೆ ಉತ್ತರ ಖಂಡಿತ ದೊರಕುತ್ತದೆ. ಮಾಧ್ಯಮದ ಬಳಿ ಉತ್ತರ ಸಿಗುವುದಿಲ್ಲ ಎಂದರು.

ಸಂಘ ಸಂವಿಧಾನದತ್ತ, ಪಾರದರ್ಶಕ: ಬ್ರಿಟೀಷರ ಕಾಲದಲ್ಲಿ ಸಂಘದ ನೋಂದಣಿ ಚರ್ಚೆ ಇರಲಿಲ್ಲ. 1947ರಲ್ಲಿ ಸ್ವಾತಂತ್ರ್ಯ ಬಂದು 1950ರಲ್ಲಿ ಗಣರಾಜ್ಯ ರೂಪುಗೊಂಡು ನಮ್ಮದೇ ಸಂವಿಧಾನ ಅಸ್ತಿತ್ವಕ್ಕೆ ಬಂದಿತು. ಸಂವಿಧಾನದ ವಿಧಿ 19 ಸ್ವಾತಂತ್ರ್ಯದ ಬಗ್ಗೆ ತಿಳಿಸುತ್ತದೆ. ಅದರ ಪರಿಚ್ಛೇದ 19(1)(ಎ) ಅಭಿವ್ಯಕ್ತಿ ಸ್ವಾತಂತ್ರ್ಯ, (ಬಿ) ಒಟ್ಟುಸೇರುವುದು, (ಸಿ) ಒಕ್ಕೂಟ ರಚನೆಯ ಬಗ್ಗೆ ತಿಳಿಸುತ್ತದೆ. 19(1) (ಸಿ) ಒಕ್ಕೂಟ ರಚಿಸಬಹುದು ಎಂದು ತಿಳಿಸಿದೆ. ಅದಕ್ಕೆ ನೋಂದಣಿ ಕಡ್ಡಾಯವೆಂದಿಲ್ಲ. ಅದರ ಆಧಾರದಲ್ಲಿ ಸಂಘ ನಡೆದುಕೊಂಡು ಬಂದಿದೆ ಎಂದು ಪದ್ಮಾರ್ ಸ್ಪಷ್ಟ ಮಾಹಿತಿ ನೀಡಿದರು.



ಕರ್ನಾಟಕ ಕೈಗಾರಿಕಾ ಮೂಲಸೌಕರ್ಯ ಅಭಿವೃದ್ಧಿ ನಿಗಮದ 2024-25ನೇ ಸಾಲಿನ ನಿವ್ವಳ ಲಾಭದಲ್ಲಿ 143.12 ಕೋಟಿ ರೂ.ಗಳ ಲಾಭಾಂಶ ಹಾಗೂ ಸಂಸ್ಥೆಯ ವತಿಯಿಂದ 3 ಕೋಟಿ ರೂ.ಗಳ ಚೆಕ್ ಅನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿಗಾಗಿ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಅವರು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಸೋಮವಾರ ಹಸ್ತಾಂತರಿಸಿದರು. ಈ ವೇಳೆ ನಿಗಮದ ಎಂಡಿ ಖುಷ್ಬೂ ಗೋಯಲ್ ಇದ್ದರು.

ಧರ್ಮಸ್ಥಳದಲ್ಲಿ ಶಾಸಕರ ಆಣೆ ಪ್ರಮಾಣ ಸಮಂಜಸವಲ್ಲ: ನಳಿನ್

• **ಮಂಗಳೂರು:** ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಆಗಿರುವುದು ಸರಿಯಲ್ಲ. ಈ ಬಗ್ಗೆ ತನಿಖೆ ನಡೆದು ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು. ಅಡ್ಡ ಮತದಾನದ ಪತ್ತೆಗೆ ಧರ್ಮಸ್ಥಳದಲ್ಲಿ ಶಾಸಕರ ಆಣೆ ಪ್ರಮಾಣ ವಿಚಾರಕ್ಕೆ ಸಂಬಂಧಿಸಿ ರಾಜಕಾರಣದಲ್ಲಿ ದೇವರ ಹೆಸರು ತರುವುದು, ಪ್ರಮಾಣ ಮಾಡುವುದು ಸಮಂಜಸವಲ್ಲ ಎಂದು ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ, ಮಾಜಿ ಸಂಸದ ನಳಿನ್‌ಕುಮಾರ್ ಕಟೀಲು ಹೇಳಿದರು.



ನಗರದಲ್ಲಿ ಸೋಮವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಟಿಕೆಟ್ ನೀಡಿ ಗೆಲ್ಲಿಸಿರುವ ಬಿಜೆಪಿಗೆ ನಿಷ್ಠೆಯನ್ನು ತೋರಬೇಕಾದ ಶಾಸಕರು ಅಡ್ಡಮತದಾನ ಮಾಡಿರುವುದು ಸರಿಯಲ್ಲ. ಈ ಬಗ್ಗೆ ನೋವಿನಿಂದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು 'ಧರ್ಮಸ್ಥಳದಲ್ಲಿ ಶಾಸಕಾಂಗ ಸಭೆ ಕರೆಯುತ್ತೇನೆ, ಅಲ್ಲಿ ಬಿಜೆಪಿಯ ಎಲ್ಲಾ ಎಲ್ಲಾ ಶಾಸಕರು ಆಣೆ-ಪ್ರಮಾಣ ಮಾಡಬೇಕು' ಎಂದು ಹೇಳಿರುವುದನ್ನು ನಾನು ಗಮನಿಸಿದ್ದೇನೆ. ಪಕ್ಷ ನಡೆಯುತ್ತಿರುವುದು ವಿಶ್ವಾಸ ಹಾಗೂ ನಂಬಿಕೆಯ ಮೇಲೆ. ಅವರ ನೋವು ಸಹಜವಾದದ್ದು, ಆದ್ದರಿಂದ ಈ ಬಗ್ಗೆ ಆಂತರಿಕವಾಗಿ ತನಿಖೆ ನಡೆಸುವಂತೆ ನಾನು ವಿನಂತಿ ಮಾಡುತ್ತೇನೆ ಎಂದರು.

ಬಿಜೆಪಿ ಶಾಸಕರಿಂದ ನಡೆದ ಅಡ್ಡಮತದಾನ ವಿಚಾರ ಬಹಿರಂಗಗೊಳ್ಳಬೇಕಾದ ವಿಷಯವಲ್ಲ. ಖಂಡಿತವಾಗಿ ತಪ್ಪಿತಸ್ಥರಿಗೆ ಶಿಕ್ಷೆಯಾಗಲೇಬೇಕು. ಅಂತವರನ್ನು ಹುಡುಕುವ ಶಕ್ತಿ ಬಿಜೆಪಿಗಿದೆ. ಪಕ್ಷಕ್ಕೆ ದ್ರೋಹ ಎಸಗಿದವರಿಗೆ ಕಠಿಣವಾದ ಶಿಕ್ಷೆಗೆ ಗುರಿಪಡಿಸುವಲ್ಲಿ ವಿಜಯೇಂದ್ರ ಅವರೊಂದಿಗೆ ನಾನು ಇರುತ್ತೇನೆ. ಈಗಾಗಲೇ ಆಂತರಿಕ ತನಿಖೆಗಾಗಿ ಸಮಿತಿಯೊಂದನ್ನು ರಚನೆ ಮಾಡಲಾಗಿದೆ. ಆ ತನಿಖೆ ಪೂರ್ಣವಾಗಲಿ. ಆ ಬಳಿಕ ಇಂತಹ ಯೋಚನೆಗಳನ್ನು ಮಾಡಲಿ ಎಂದರು.

ಕಿರುಸುದ್ದಿ

ಪೊಲೀಸ್ ನೇಮಕಾತಿಗೆ ಅರ್ಜಿ

• **ಬೆಂಗಳೂರು :** ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ 1,600 ಪೊಲೀಸ್ ಕಾನ್‌ಸ್ಟೇಬಲ್ (ಸಿಎಆರ್/ ಡಿಎಆರ್) ಹುದ್ದೆಗಳ ನೇಮಕಾತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ಜೂ.22 ಕೊನೆ ದಿನ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ. ಉಳಿದ ವೃಂದದ 1,421 ಹಾಗೂ ಸ್ಥಳೀಯ ವೃಂದದ 179 ಹುದ್ದೆಗಳಿಗೆ ಪ್ರತ್ಯೇಕವಾದ ಅರ್ಜಿ ಆಹ್ವಾನಿಸಲಾಗಿದೆ. ಸೆ.6ರಂದು ಪ್ರತ್ಯೇಕವಾಗಿಯೇ ಲಿಖಿತ ಪರೀಕ್ಷೆ ನಡೆಸಲಾಗುವುದು ಎಂದು ತಿಳಿಸಿದ್ದಾರೆ. ದ್ವಿತೀಯ ಪಿಯುಸಿ ಅಥವಾ ತತ್ಸಮಾನ ವಿದ್ಯಾರ್ಹತೆ ನಿಗದಿಪಡಿಸಲಾಗಿದೆ. ಋಣಾತ್ಮಕ ಮೌಲ್ಯಮಾಪನ ಇರುತ್ತದೆ. ಉತ್ತರಿಸದೇ ಇರುವ ಪ್ರಶ್ನೆಗಳಿಗೆ ಐದನೇ ವೃತ್ತವನ್ನು ಶೇಡ್ ಮಾಡುವುದು ಕಡ್ಡಾಯ. ಇದಕ್ಕೆ ಹೆಚ್ಚುವರಿಯಾಗಿ ಐದು ನಿಮಿಷ ಸಮಯ ನೀಡಲಾಗುತ್ತದೆ. ಒಂದು ವೇಳೆ ಐದನೇ ವೃತ್ತವನ್ನು ಶೇಡ್ ಮಾಡದೇ ಇದ್ದಲ್ಲಿ ಪ್ರತಿ ಪ್ರಶ್ನೆಗೆ 0.25 ಅಂಕ ಕಡಿತಗೊಳಿಸಲಾಗುತ್ತದೆ ಎಂದು ವಿವರಿಸಿದರು.

ಯೋಧರ ಕಲ್ಯಾಣ ನಿಧಿಗೆ ಕರಿಬಸಮ್ಮ ₹10 ಲಕ್ಷ ದೇಣಿಗೆ

• **ದಾವಣಗೆರೆ:** ದೇಶ ಕಾಯುವ ಯೋಧರ ಕಲ್ಯಾಣ ನಿಧಿಗೆ ನಿವೃತ್ತ ಶಿಕ್ಷಕಿ, ದಯಾಮರಣ ಹೋರಾಟಗಾರ್ತಿ ಎಚ್.ಬಿ.ಕರಿಬಸಮ್ಮ 10 ಲಕ್ಷ ರೂ. ದೇಣಿಗೆ ನೀಡಿದ್ದಾರೆ. ಜಿಲ್ಲಾಧಿಕಾರಿ ಕಚೇರಿಯಲ್ಲಿ ಸೋಮವಾರ ಧನಸಹಾಯದ ಚೆಕ್ ಅನ್ನು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಅವರಿಗೆ ಹಸ್ತಾಂತರಿಸಿದರು. ಈ ವೇಳೆ ಮಾತನಾಡಿದ ಕರಿಬಸಮ್ಮ,, ಸುಮಾರು 50 ವರ್ಷಗಳ ಹಿಂದೆ ಕೇವಲ ರೇಡಿಯೋಗಳಷ್ಟೇ ಇದ್ದ ಕಾಲದಲ್ಲಿಯೇ ಕಠಿಣ ಪರಿಸ್ಥಿತಿಯಲ್ಲಿ ದೇಶ ಕಾಯುವ ಸೈನಿಕರ ಕಷ್ಟಗಳ ಬಗ್ಗೆ ಕೇಳಿದ್ದೆ. ಅಂದಿನಿಂದಲೇ ದೇಶಕ್ಕಾಗಿ ನಾನೇನಾದರೂ ಸೇವೆ ಮಾಡಬೇಕೆಂಬ ಭಾವನೆ ನನ್ನಲ್ಲಿ ಮೂಡಿತ್ತು. ನಂತರದ ದಿನಗಳಲ್ಲಿ ದಯಾಮರಣದ ಹೋರಾಟಕ್ಕೆ ಧುಮುಕಿದಾಗ ಹಣದ ಅವಶ್ಯಕತೆ ಎದುರಾಯಿತು. ದಾವಣಗೆರೆಯ ಅನೇಕ ಗಣ್ಯರು ಸಹಾಯ ಮಾಡಲು ಮುಂದೆ ಬಂದರೂ, ಯಾರಿಂದಲೂ ನಯಾಪೈಸೆ ಸ್ವೀಕರಿಸದೆ ಮನೆ ಮಾರಿದಾಗ ಬಂದ ಹಣದಲ್ಲಿ 6 ಲಕ್ಷ ರೂ.ಗಳನ್ನು ಬಿಎಸ್‌ಎಫ್ ನಿಧಿಗಾಗಿ ಮೀಸಲಿಟ್ಟಿದ್ದೆ. ಆ ಹಣವನ್ನು ಹಾಗೆಯೇ ಉಳಿಸಿಕೊಂಡು ಮತ್ತು ನನ್ನ ಪಿಂಚಣಿ ಹಣ ಹಾಗೂ ಬಡ್ಡಿಯೂ ಸೇರಿ ಒಟ್ಟು 10 ಲಕ್ಷ ರೂ.ಗಳನ್ನು ಸಂಪೂರ್ಣವಾಗಿ ದೇಶದ ಸೈನಿಕರ ನಿಧಿಗೆ ನೀಡಲು ನಿರ್ಧರಿಸಿದೆ ಎಂದು ತಿಳಿಸಿದರು.

6 ಜನರ ಹತ್ಯೆ ಪ್ರಕರಣ: ಆರೋಪಿ ಬಂಧನ

• **ವಿಜಯಪುರ:** ಕೊಲೆ ಆರೋಪಿ ಕಾಲಿಗೆ ಪೊಲೀಸರು ಗುಂಡು ಹಾರಿಸಿ, ಬಂಧಿಸಿರುವ ಘಟನೆ ನಗರ ಹೊರ ವಲಯ ಇಟ್ಟಂಗಿಹಾಳ ಬಳಿ ನಡೆದಿದೆ. ಚಡಚಣ ತಾಲೂಕಿನ ಗೋವಿಂದಪುರದಲ್ಲಿ 6 ಜನರ ಹತ್ಯಾಕಾಂಡ ಪ್ರಕರಣದ ಮತ್ತೊಬ್ಬ ಮುಖ್ಯ ಆರೋಪಿ ಮಹೇಶ್ ತಳವಾರ್ ಈತನನ್ನು ಬಂಧಿಸಲು ಹೋದಾಗ, ಆರೋಪಿ ಮಹೇಶ ಪೊಲೀಸರ ಮೇಲೆ ಹಲ್ಲೆ ಮಾಡಿದ್ದಾನೆ. ಆಗ ಪೊಲೀಸರು ಎರಡು ಬಾರಿ ಗಾಳಿಯಲ್ಲಿ ಗುಂಡು ಹಾರಿಸಿ ಎಚ್ಚರಿಕೆ ನೀಡಿದ್ದಾರೆ.ಆದರೂ ಆರೋಪಿ ಓಡಿ ಹೋಗಲು ಯತ್ನಿಸಿದಾಗ ಕಾಲಿಗೆ ಗುಂಡು ಹಾರಿಸಿ ಮಹೇಶನ ಬಂಧನ ಮಾಡಿದ್ದಾರೆ.

ವಿದ್ಯಾರ್ಥಿಗಳಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ

ಪ್ರತಿಭಾವಂತರಿಗೆ ಅವಕಾಶ

• **ಬೆಂಗಳೂರು:** ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸುವ ಸ್ಕೌಟ್ ಕಾರ್ಯಕ್ರಮವನ್ನು 3 ವರ್ಷಗಳಿಗೆ ಸೀಮಿತಗೊಳಿಸದೇ, ಇದನ್ನು ಹೆಚ್ಚಿನ ಅವಧಿಗೆ ವಿಸ್ತರಿಸಿ ಎಂದು ಸಿಎಂ ಡಿ.ಕೆ. ಶಿವಕುಮಾರ್ ಅವರು ಸಲಹೆ ನೀಡಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಮತ್ತು ಬ್ರಿಟಿಷ್ ಕೌನ್ಸಿಲ್ ಸಹಯೋಗದೊಂದಿಗೆ ಅತ್ಯುತ್ತಮ ಪ್ರತಿಭಾವಂತ ಪದವಿಪೂರ್ವ ವಿದ್ಯಾರ್ಥಿಗಳಿಗೆ ಹಮ್ಮಿಕೊಳ್ಳಲಾದ SCOUT-2.0 ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸೋಮವಾರ ಚಾಲನೆ ನೀಡಿ ಮಾತನಾಡಿದರು.

ರಾಜ್ಯದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಭೇಟಿ ಮಾಡಿರುವುದಕ್ಕೆ ಸಂತೋಷವಾಗಿದೆ. ಕರ್ನಾಟಕ ಎಂದರೆ ಬೆಂಗಳೂರು ಮಾತ್ರವಲ್ಲ. ಚಾಮರಾಜನಗರದಿಂದ ಬೀದರ್‌ವರೆಗೆ ಎಲ್ಲಾ ಗ್ರಾಮೀಣ ಪ್ರದೇಶದವರೆಗೆ ಎಲ್ಲಾ ಭಾಗದ ವಿದ್ಯಾರ್ಥಿಗಳು ಇದ್ದಾರೆ. ಎಲ್ಲಾ ವಿವಿಗಳು ಈ ಜವಾಬ್ದಾರಿ ವಹಿಸಿಕೊಂಡಿರುವುದು ಸಂತೋಷದ ವಿಚಾರ. ಬ್ರಿಟೀಷರು ಇಲ್ಲಿ ಆಳ್ವಿಕೆ ಮಾಡಿದ್ದರೂ ಅವರೊಂದಿಗೆ ಈ ಸಹಯೋಗ ಹಳೆಯದಾಗಿದೆ ಎಂದರು. ಜ್ಞಾನಗಳು, ಆಲೋಚನೆಗಳ ವಿನಿಮಯ ಮುಂದುವರಿಸುತ್ತಿದ್ದೇವೆ. ಈ ಕಾರ್ಯಕ್ರಮದ ಮೂಲಕ ಕರ್ನಾಟಕ ಸರ್ಕಾರದ ಜೊತೆಗೆ ಕೈಜೋಡಿಸಿರುವ ಬ್ರಿಟೀಷ್ ಕೌನ್ಸಿಲ್‌ಗೆ ಧನ್ಯವಾದ ತಿಳಿಸುತ್ತೇನೆ. ನಾನು ಆಯ್ಕೆಯಲ್ಲಿ ಶಿಕ್ಷಣತಜ್ಞ. ಶಿಕ್ಷಣ ಎಲ್ಲರಿಗೂ ಅತಿಮುಖ್ಯವಾದುದು. ಈ ವಿದ್ಯಾರ್ಥಿಗಳು ನಮ್ಮ ರಾಯಭಾರಿಗಳು. ನಾಯಕರುಗಳನ್ನು ತಯಾರು ಮಾಡುವವನೇ ನಿಜವಾದ ನಾಯಕ. ಇಲ್ಲಿರುವ ವಿದ್ಯಾರ್ಥಿಗಳು ನಾಯಕರುಗಳೇ. ನೀವೆಲ್ಲರೂ ಸರಿಯಾದ ಹಾದಿಯಲ್ಲಿದ್ದೀರಿ. ನೀವು ಕರ್ನಾಟಕದ ಪ್ರತಿನಿಧಿಯಾಗಿದ್ದು, ನಿಮ್ಮ ಭವಿಷ್ಯ ಬದಲಿಸಿಕೊಳ್ಳಲು ಇದು ಉತ್ತಮ ಅವಕಾಶವಾಗಿದೆ ಎಂದರು.

ಕರ್ನಾಟಕ ಹಾಗೂ ಬೆಂಗಳೂರು ಪ್ರತಿಭಾನ್ವಿತರ ಕೇಂದ್ರ: ಕರ್ನಾಟಕ ಹಾಗೂ ಬೆಂಗಳೂರು ಪ್ರತಿಭಾನ್ವಿತರ ಕೇಂದ್ರ. ಇಡೀ ವಿಶ್ವ ನಮ್ಮ ಕಡೆ ನೋಡುತ್ತಿದೆ. ಕರ್ನಾಟಕದ ಮೂಲಕ ಭಾರತವನ್ನು ನೋಡಲಾಗುತ್ತಿದೆ. ನೀವು ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಎಂದು ಆತ್ಮವಿಶ್ವಾಸ ಕಳೆದುಕೊಳ್ಳಬಾರದು. ನಮ್ಮ ಕಾಲದಲ್ಲಿ ನಾವು ಕಷ್ಟಪಟ್ಟು ಓದಬೇಕಿತ್ತು. ಈಗ ಎಲ್ಲಾ ಮಾಹಿತಿ ನಿಮ್ಮ ಬೆರಳತುದಿಯಲ್ಲಿವೆ. ಈಗ ಶಿಕ್ಷಕರು ವಿದ್ಯಾರ್ಥಿಗಳಿಂದಲೇ ಪಾಠ ಮಾಡಿಸುವ ಮಟ್ಟಿಗೆ ಕಾಲ ಬದಲಾವಣೆಯಾಗಿದೆ. ಪ್ರತಿಯೊಬ್ಬರು ಸಮರ್ಥರು, ನೀವೆಲ್ಲರೂ ಜಾಗತಿಕ ಮಟ್ಟದಲ್ಲಿ ಸ್ಪರ್ಧೆ ಮಾಡುತ್ತಿದ್ದೀರಿ. ಈ ಸ್ಕೌಟ್ ಕಾರ್ಯಕ್ರಮದಲ್ಲಿ ನಿಮ್ಮ ಆಲೋಚನೆ ದೂರದೃಷ್ಟಿಯಾಗಿರಬೇಕು. ನಿಮ್ಮ ಮೇಲೆ ಸಾಕಷ್ಟು ನಿರೀಕ್ಷೆಗಳಿವೆ ಎಂದು ತಿಳಿಸಿದರು. ವಿವಿಗಳ ಉಪಕುಲಪತಿಗಳು ಇನ್ನಷ್ಟು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಬೇಕು. ವಿದ್ಯಾರ್ಥಿಗಳ ಪ್ರತಿಭೆಗೆ ಅನುಗುಣವಾಗಿ ಅವರನ್ನು ಗುರುತಿಸಿ, ಅವರಿಗೆ ಅವಕಾಶ ಕಲ್ಪಿಸಬೇಕು. ಕಳೆದ ವರ್ಷ ಗ್ರಾಮೀಣ ಭಾಗದ ಮಕ್ಕಳು ಉತ್ತಮ ಸಾಧನೆ ಮಾಡಿದ್ದನ್ನು ನೋಡಿದ್ದೇವೆ ಎಂದು ಹೇಳಿದರು.



ಉದ್ಯೋಗಿಗಳಾಗಬೇಡಿ, ಉದ್ಯೋಗದಾತರಾಗಿ: ಸಿಎಂ ಕಿವಿಮಾತು

ಇದು ಕೇವಲ ಪದವಿ ಪಡೆಯುವ ಕಾರ್ಯಕ್ರಮವಲ್ಲ. ನೀವು ಕನಸು ಕಾಣಬೇಕು, ಆ ಕನಸು ನನಸಾಗಿಸಿಕೊಳ್ಳಲು ಹಂಬಲಿಸಬೇಕು. ಅದಕ್ಕಾಗಿ ಬದ್ಧರಾಗಿರಬೇಕು, ಶಿಸ್ತಿನ ಪರಿಶ್ರಮ ಹಾಕಬೇಕು. ನೀವು ನಿಮ್ಮ ಜೀವನದಲ್ಲಿ ಯಾವುದೇ ಹಂತಕ್ಕೆ ಹೋದರೂ ನಿಮ್ಮ ಮೂಲವನ್ನು ಮಾತ್ರ ಮರೆಯಬಾರದು. ನೀವು ನಿಮ್ಮ ಮೂಲವನ್ನು ಮರೆತರೆ ಯಶಸ್ಸು ಸಾಧಿಸಲು ಸಾಧ್ಯವಿಲ್ಲ. ಉದ್ಯೋಗಿಗಳಾಗುವುದಕ್ಕಿಂತ ಉದ್ಯೋಗದಾತರಾಗುವುದು ನಿಮ್ಮ ಗುರಿಯಾಗಲಿ ಎಂದು ಸಲಹೆ ನೀಡಿದರು.

> **ನಮ್ಮ ಸರ್ಕಾರ ಹಾಗೂ ವಿವಿಗಳು ಈ ಕಾರ್ಯಕ್ರಮ ವಿಸ್ತರಣೆ ಮಾಡಲು ಸಿದ್ಧವಿದೆ. ನಮ್ಮ ವಿದ್ಯಾರ್ಥಿಗಳಿಗೆ ಅವಕಾಶ ಸಿಗಬೇಕು. ಇಲ್ಲಿಂದ ಬ್ರಿಟನ್‌ಗೆ ಹೋಗಿ ಅಲ್ಲೇ ನೆಲೆಸಬೇಡಿ, ಅಲ್ಲಿ ವ್ಯಾಸಂಗ ಮಾಡಿ ಭಾರತಕ್ಕೆ ಮರಳಿ, ಇಲ್ಲಿ ಕೆಲಸ ಮಾಡಿ. ಇಲ್ಲಿಗೆ ಬಂದು ನೀವು ನಿಮ್ಮ ಕ್ಷೇತ್ರದಲ್ಲಿ ಬೆಳೆಯಿರಿ.**
> ■ **ಡಿ.ಕೆ.ಶಿವಕುಮಾರ್, ಸಿಎಂ**

ಸಮಸ್ಯೆಗಳಿಗೆ ತ್ವರಿತ ಸ್ಪಂದಿಸಬೇಕು: ಡಿಸಿಎಂ

ಖಾಲಿ ಹುದ್ದೆ ಭರ್ತಿ, ಬಡ್ತಿ ಪ್ರಕ್ರಿಯೆ ಚುರುಕುಗೊಳಿಸಿ

ಜೇಷ್ಠತಾ ಪಟ್ಟಿ ಶೀಘ್ರ ಪ್ರಕಟಿಸಿ

ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ವೇಗಗೊಳಿಸಬೇಕು. ಅಧಿಕಾರಿ ಮತ್ತು ಸಿಬ್ಬಂದಿಗೆ ಬಡ್ತಿ ನೀಡುವ ಪ್ರಕ್ರಿಯೆಯಲ್ಲಿ ಯಾವುದೇ ರೀತಿಯ ವಿಳಂಬ ಉಂಟಾಗದಂತೆ, ಜೇಷ್ಠತಾ ಪಟ್ಟಿಯನ್ನು ಶೀಘ್ರ ಪ್ರಕಟಿಸಿ, ನಿಯಮಾನುಸಾರ ಪಾರದರ್ಶಕವಾಗಿ ಬಡ್ತಿ ಪ್ರಕ್ರಿಯೆಯನ್ನು ಪೂರ್ಣ ಗೊಳಿಸಬೇಕು ಎಂದು ಸೂಚಿಸಿದರು.



• **ಬೆಂಗಳೂರು :** ಕಂದಾಯ ಇಲಾಖೆಯ ಕಾರ್ಯಕ್ಷಮತೆ ಹೆಚ್ಚಿಸಲು ಸಹಾಯಕ ಆಯುಕ್ತರಿಗೆ (ಎಸಿ) ಹೆಚ್ಚಿನ ಜವಾಬ್ದಾರಿ ನೀಡಬೇಕು ಎಂದು ಉಪ ಮುಖ್ಯಮಂತ್ರಿ ಡಾ. ಜಿ.ಪರಮೇಶ್ವರ ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ಸೋಮವಾರ ಕಂದಾಯ ಇಲಾಖೆಯ ವಿವಿಧ ಯೋಜನೆಗಳು, ಆಡಳಿತಾತ್ಮಕ ಪ್ರಗತಿ ಹಾಗೂ ಸಾರ್ವಜನಿಕ ಸೇವೆಗಳ ಅನುಷ್ಠಾನದ ಕುರಿತು ಅಧಿಕಾರಿಗಳೊಂದಿಗೆ ಸಭೆ ನಡೆಸಿ ಸಮಗ್ರ ಪರಿಶೀಲನೆ ನಡೆಸಿದ ಅವರು, ಬಾಕಿ ಉಳಿದಿರುವ ಕಡತಗಳನ್ನು ಶೀಘ್ರ ವಿಲೇವಾರಿ ಮಾಡುವಂತೆ ನಿರ್ದೇಶಿಸಿದರು. ಪರವಾನಗಿ ಭೂಮಾಪಕರ ಸಮಸ್ಯೆಗಳ ಕುರಿತು ಗಮನ ಹರಿಸಬೇಕು. ಭೂಮಾಪಕರ ಸಭೆಯನ್ನು ಕರೆದು ಅವರ ಅಹವಾಲುಗಳು ಹಾಗೂ ಬೇಡಿಕೆಗಳನ್ನು ಆಲಿಸಬೇಕು. ಭೂಮಾಪಕರ ಸೇವಾ ಹಾಗೂ ವೃತ್ತಿಪರ ಸಮಸ್ಯೆಗಳ ಪರಿಹಾರಕ್ಕೆ ಅಗತ್ಯ ಕ್ರಮ ಕೈಗೊಂಡು, ತ್ವರಿತವಾಗಿ ಇತ್ಯರ್ಥಪಡಿಸಬೇಕು ಎಂದು ಸಚಿವರು ಸೂಚಿಸಿದರು.

ಜನರಿಗೆ ಸೇವೆ ನೀಡುವಲ್ಲಿ ವಿಳಂಬ ಬೇಡ: ಇ-ಪೌತಿ ಖಾತೆ ಸೇರಿದಂತೆ ಇಲಾಖೆಯ ಎಲ್ಲ ಆನ್ಲೈನ್ ಮತ್ತು ಸಾರ್ವಜನಿಕ ಸೇವೆಗಳನ್ನು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು. ನಾಗರಿಕರು ಕಚೇರಿಗಳಿಗೆ ಅನಗತ್ಯವಾಗಿ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗದಂತೆ ಸೇವೆಗಳ ವಿತರಣೆಯಲ್ಲಿ ದಕ್ಷತೆ ಮತ್ತು ಪಾರದರ್ಶಕತೆ ಕಾಪಾಡಬೇಕು. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಜನಸಾಮಾನ್ಯರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಬೇಕು. ಭೂ ದಾಖಲೆ, ಖಾತೆ ಬದಲಾವಣೆ, ಸರ್ವೆ ಕಾರ್ಯ, ಮ್ಯೂಟೇಷನ್ ಹಾಗೂ ಇತರೆ ಕಂದಾಯ ಸೇವೆಗಳ ವಿಲೇವಾರಿಯಲ್ಲಿ ವಿಳಂಬ ಕಡಿಮೆ ಮಾಡುವ ನಿಟ್ಟಿನಲ್ಲಿ ನಿರಂತರ ಮೇಲ್ವಿಚಾರಣೆ ನಡೆಸಬೇಕು.

ಇಲಾಖೆಯ ಎಲ್ಲಾ ಕಾರ್ಯಗಳ ಪ್ರಗತಿಯನ್ನು ನಿಯಮಿತವಾಗಿ ಪರಿಶೀಲಿಸಿ, ಗುರಿ ಸಾಧನೆಯತ್ತ ಗಮನ ಹರಿಸಬೇಕು. ಸಾರ್ವಜನಿಕರಿಗೆ ಉತ್ತಮ ಸೇವೆ ಒದಗಿಸುವ ಉದ್ದೇಶದಿಂದ ಆಡಳಿತಾತ್ಮಕ ಕಾರ್ಯಗಳಿಗೆ ಮತ್ತಷ್ಟು ವೇಗ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನೌಕರರಿಗೆ ವೈದ್ಯಕೀಯ ತಪಾಸಣೆ

• **ಬೆಂಗಳೂರು :** ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಆರೋಗ್ಯದ ಹಿತದೃಷ್ಟಿಯಿಂದ 40 ವರ್ಷ ಮೀರಿದ ಎಲ್ಲಾ ಸರ್ಕಾರಿ ನೌಕರರಿಗೆ ಕರ್ನಾಟಕ ಆರೋಗ್ಯ ಸಂಜೀವಿನಿ (ಕೆಎಎಸ್‌ಎಸ್) ಯೋಜನೆಯ ಅಡಿಯಲ್ಲಿ ವಾರ್ಷಿಕ ವೈದ್ಯಕೀಯ ತಪಾಸಣೆ ಸೌಲಭ್ಯವನ್ನು ರಾಜ್ಯ ಸರ್ಕಾರ ಜಾರಿಗೆ ತಂದಿದೆ.

ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯಲ್ಲಿ ನೋಂದಾಯಿತರಾಗಿರುವ ನೌಕರರು ಮಾತ್ರ ವರ್ಷಕ್ಕೊಮ್ಮೆ ಈ ಉಚಿತ ತಪಾಸಣೆಗೆ ಅರ್ಹರಾಗಿದ್ದಾರೆ. ಯೋಜನೆಯಿಂದ ಹೊರಗುಳಿದವರಿಗೆ ಈ ಸೌಲಭ್ಯ ಅನ್ವಯಿಸುವುದಿಲ್ಲ. ಹಾಗೆಯೇ ಸರ್ಕಾರಿ ನೌಕರರಿಗೆ ಮಾತ್ರ ಉಚಿತ ವೈದ್ಯಕೀಯ ತಪಾಸಣೆ ಇರಲಿದ್ದು, ನೌಕರರ ಕುಟುಂಬದ ಅವಲಂಬಿತ ಸದಸ್ಯರಿಗೆ ಈ ಸೌಲಭ್ಯ ಇರುವುದಿಲ್ಲ.ಸರ್ಕಾರಿ ಆಸ್ಪತ್ರೆಗಳು ಮತ್ತು ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯ ಅಡಿಯಲ್ಲಿ ನೋಂದಾಯಿತವಾಗಿರುವ ಖಾಸಗಿ ಆಸ್ಪತ್ರೆಗಳಲ್ಲಿ ನಗದು ರಹಿತವಾಗಿ ಈ ತಪಾಸಣೆಗಳನ್ನು ಮಾಡಿಸಿಕೊಳ್ಳಬಹುದು. ಸರ್ಕಾರವು ವೈದ್ಯಕೀಯ ತಪಾಸಣೆಗೆ ಪುರುಷ ನೌಕರರಿಗೆ 2 ಸಾವಿರ ರೂ. ಮತ್ತು ಮಹಿಳಾ ನೌಕರರಿಗೆ 2,200 ರೂ. ಸಂಚಿತ ದರಗಳನ್ನು ನಿಗದಿಪಡಿಸಿದೆ. ಈ ತಪಾಸಣೆಯು ಸಾಮಾನ್ಯ ದೈಹಿಕ ಪರೀಕ್ಷೆಗಳು, ರಕ್ತ ಪರೀಕ್ಷೆ, ಮೂತ್ರ ಪರೀಕ್ಷೆ, ಇಸಿಜಿ, ಎಕ್ಸ್ ರೇ, ಲಿಪಿಡ್ ಪ್ರೊಫೈಲ್ ಮತ್ತು ಲಿವರ್ ಮತ್ತು ಕಿಡ್ನಿ ಕಾರ್ಯನಿರ್ವಹಣೆ ಪರೀಕ್ಷೆ ಸೇರಿದಂತೆ ಅತ್ಯಗತ್ಯ ವೈದ್ಯಕೀಯ ಪರೀಕ್ಷೆಗಳನ್ನು ಒಳಗೊಂಡಿದೆ.

ಆಧುನಿಕ ಜೀವನಶೈಲಿಯ ಒತ್ತಡದಿಂದಾಗಿ ಮಧುಮೇಹ ಮತ್ತು ರಕ್ತದೊತ್ತಡದಂತಹ ಕಾಯಿಲೆಗಳು ಹೆಚ್ಚಾಗುತ್ತಿವೆ. ಇದರಿಂದ ಹೃದಯಾಘಾತ ಮತ್ತು ಪಾರ್ಶ್ವವಾಯುವಿನ ರೀತಿಯ ಗಂಭೀರ ಸಮಸ್ಯೆಗಳು ಉಂಟಾಗುತ್ತಿರುವುದನ್ನು ಗಮನಿಸಿ ಕಾಯಿಲೆಗಳನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚಿ ಚಿಕಿತ್ಸೆ ನೀಡುವ ಉದ್ದೇಶದಿಂದ ಕೇಂದ್ರ ಸರ್ಕಾರದ ಮುನ್ನೆಚ್ಚರಿಕಾ ಆರೋಗ್ಯ ತಪಾಸಣೆ ಮಾದರಿಯಲ್ಲಿ ಈ ಸೌಲಭ್ಯವನ್ನು ಜಾರಿಗೆ ತಂದಿದೆ. ರಾಜ್ಯದಲ್ಲಿ ಕೆಎಎಸ್‌ಎಸ್ ಯೋಜನೆಗೆ 3,76,955 ನೌಕರರು ಒಳಪಟ್ಟಿದ್ದು, 23,081 ನೌಕರರು ಹೊರಗುಳಿದಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷರ ನಿರ್ಧಾರ ಬದಲಿಸಲಿ

• **ಶಿವಮೊಗ್ಗ :** ವಿಧಾನ ಪರಿಷತ್ ಚುನಾವಣೆಯಲ್ಲಿ ನಡೆದ ಅಡ್ಡ ಮತದಾನಕ್ಕೆ ಸಂಬಂಧಿಸಿದಂತೆ ಧರ್ಮಸ್ಥಳ ಮಂಜುನಾಥನ ಭಕ್ತಿಯನ್ನು ಒರೆಗೆ ಹಚ್ಚುವ ಕೆಲಸ ಬೇಡ. ಈ ಸಂಬಂಧ ಬಿಜೆಪಿ ರಾಜ್ಯಾಧ್ಯಕ್ಷರು ತಮ್ಮ ನಿರ್ಧಾರ ಬದಲಾಯಿಸುವಂತೆ ಮಾಜಿ ಡಿಸಿಎಂ ಹಾಗೂ ರಾಷ್ಟ್ರ ಭಕ್ತರ ಬಳಗದ ಸಂಚಾಲಕ ಕೆ.ಎಸ್. ಈಶ್ವರಪ್ಪ ಹೇಳಿದರು.



ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸತ್ಯಾಸತ್ಯತೆಯನ್ನು ಪರಿಶೀಲಿಸಲು ಇರುವ ಸ್ಥಳ ದೇವಸ್ಥಾನ. ಅದರಲ್ಲೂ ಧರ್ಮಸ್ಥಳ ಜನರ ನಂಬಿಕೆಯ ಸ್ಥಳವೂ ಆಗಿದೆ. ಹಾಗೆಂದು ಚುನಾವಣೆಯಲ್ಲಿ ನಡೆದ ಭ್ರಷ್ಟಾಚಾರವನ್ನು ಅಂತಹ ಸ್ಥಳಕ್ಕೆ ತೆಗೆದುಕೊಂಡು ಹೋಗುವುದು ಒಳ್ಳೆಯದಲ್ಲವೆಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರಗೆ ಕಿವಿ ಮಾತು ಹೇಳಿದರು.

ಕಮಿಷನ್ ರಾಜಕಾರಣ ರಾಜ್ಯದಲ್ಲಿ ಹೆಚ್ಚಳ: ಅಶೋಕ


• **ಬೆಂಗಳೂರು:** ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ರಾಜ್ಯದಲ್ಲಿ ಅಭಿವೃದ್ಧಿಗಿಂತ ಕಮಿಷನ್ ರಾಜಕಾರಣವೇ ಹೆಚ್ಚಾಗಿದೆ. ಇದೀಗ ಅದಾನಿ ಯೋಜನೆಗಳ ವಿಷಯದಲ್ಲಿಯೂ ಅನೇಕ ಅನುಮಾನಗಳು ಮೂಡಿವೆ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ ಆರೋಪಿಸಿದರು.



ಪದ್ಮನಾಭನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಡವರ ಹೆಸರಿನಲ್ಲಿ ಕೋಟ್ಯಂತರ ರೂಪಾಯಿ ವೆಚ್ಚದ ಯೋಜನೆಗಳನ್ನು ಘೋಷಿಸುವ ಕಾಂಗ್ರೆಸ್ ಸರ್ಕಾರ, ವಾಸ್ತವದಲ್ಲಿ ಕಮಿಷನ್ ವಸೂಲಿಗಾಗಿಯೇ ಆಡಳಿತ ನಡೆಸುತ್ತಿದೆ ಎಂಬ ಅನುಮಾನ ಜನರಲ್ಲಿ ಮೂಡಿದೆ. ಅದಾನಿ ಸಂಸ್ಥೆಯ ಯೋಜನೆಗಳಿಗೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕರು ಚುನಾವಣೆಗೂ ಮುನ್ನ ಒಂದು ಮಾತು ಹೇಳಿ, ಅಧಿಕಾರಕ್ಕೆ ಬಂದ ಬಳಿಕ ಮತ್ತೊಂದು ರೀತಿಯಲ್ಲಿ ವರ್ತಿಸುತ್ತಿದ್ದಾರೆ ಎಂದರು. ಭಾನುವಾರ ಅರಮನೆ ಮೈದಾನದಲ್ಲಿ ಕಾಂಗ್ರೆಸ್ ಪಕ್ಷ ಆಯೋಜಿಸಿದ್ದ ಕಾರ್ಯಕ್ರಮದಿಂದಾಗಿ ನಗರದಲ್ಲಿ ಭಾರೀ ಸಂಚಾರ ದಟ್ಟಣೆ ಉಂಟಾಗಿ ನೀಟ್ ಪರೀಕ್ಷೆಗೆ ತೆರಳುತ್ತಿದ್ದ ಸಾವಿರಾರು ವಿದ್ಯಾರ್ಥಿಗಳು ಹಾಗೂ ಪೋಷಕರು ಸಂಕಷ್ಟ ಅನುಭವಿಸಿದ್ದಾರೆ ಎಂದರು.

ನೆಕ್ಕಂಟಿ ನಾಗರಾಜ್‌ಗೆ ಹೈ ಎಚ್ಚರಿಕೆ

• **ಬೆಂಗಳೂರು :** ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿನ ಬಹುಕೋಟಿ ರೂಪಾಯಿ ದುರ್ಬಳಕೆ ಪ್ರಕರಣದ ಆರೋಪಿ ಮಾಜಿ ಸಚಿವ ನಾಗೇಂದ್ರ ಅವರ ಆಪ್ತ ನೆಕ್ಕಂಟಿ ನಾಗರಾಜ್ ಸಿಬಿಐ ತನಿಖೆಗೆ ಸರಿಯಾಗಿ ಸಹಕರಿಸದಿದ್ದರೆ ನಿರೀಕ್ಷಣಾ ಜಾಮೀನು ಕೋರಿದ ಅರ್ಜಿಯಲ್ಲಿ ನೀಡಲಾಗಿರುವ ಮಧ್ಯಂತರ ರಕ್ಷಣೆಯನ್ನು ರದ್ದುಪಡಿಸುವುದಾಗಿ ಹೈಕೋರ್ಟ್ ಎಚ್ಚರಿಸಿದೆ.



ನಿರೀಕ್ಷಣಾ ಜಾಮೀನು ಕೋರಿ ನೆಕ್ಕಂಟಿ ನಾಗರಾಜ್ ಸಲ್ಲಿಸಿರುವ ಕ್ರಿಮಿನಲ್ ಅರ್ಜಿ ಮತ್ತು ಮಾಜಿ ಸಚಿವ ಎಂ ನಾಗೇಂದ್ರ ಅವರಿಗೆ ಜನಪ್ರತಿನಿಧಿಗಳ ಸತ್ರ ನ್ಯಾಯಾಲಯ ಜ.14ರಂದು ನೀಡಿರುವ ಜಾಮೀನು ರದ್ದುಗೊಳಿಸಬೇಕು ಎಂದು ಕೋರಿ ಸಿಬಿಐ ಸಲ್ಲಿಸಿರುವ ಪ್ರತ್ಯೇಕ ಕ್ರಿಮಿನಲ್ ಅರ್ಜಿಗಳನ್ನು ನ್ಯಾಯಮೂರ್ತಿ ಎಂ ನಾಗಪ್ರಸನ್ನ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ಸಿಬಿಐ ಪರ ವಕೀಲ ಪಿ ಪ್ರಸನ್ನ ಕುಮಾರ್ ಅವರು ನೆಕ್ಕಂಟಿ ನಾಗರಾಜ್ ತನಿಖೆಗೆ ಸರಿಯಾಗಿ ಸಹಕರಿಸುತ್ತಿಲ್ಲ. ಆದ್ದರಿಂದ, ಅವರನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಬೇಕಿದೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಪೀಠವು ನೆಕ್ಕಂಟಿ ನಾಗರಾಜ್ ಜೂ.23ರಂದು ಸಿಬಿಐ ಮುಂದೆ ಹಾಜರಾಗಬೇಕು ಮತ್ತು ಸಿಬಿಐ ಪ್ರಶ್ನೆಗಳಿಗೆ ಉತ್ತರಿಸಬೇಕು. ತನಿಖೆಗೆ ಸರಿಯಾಗಿ ಸಹಕರಿಸದಿದ್ದರೆ ಮಧ್ಯಂತರ ರಕ್ಷಣೆ ರದ್ದುಪಡಿಸಲಾಗುವುದು ಎಂದು ಎಚ್ಚರಿಸಿತು.

ನಾಗೇಂದ್ರ ಅವರ ಅರ್ಜಿಯಲ್ಲಿ ವಾದ ಮಂಡಿಸಿದ ಪ್ರಸನ್ನ ಕುಮಾರ್ ಅವರು ನಿಗಮದ ಬ್ಯಾಂಕ್ ಖಾತೆಯಿಂದ ಮುಂಬೈನ ಇಬ್ಬರು ಮಹಿಳೆಯರಿಗೆ 2.50 ಕೋಟಿ ರೂ. ವರ್ಗಾವಣೆಯಾಗಿದೆ. ಮಹಿಳೆಯರಲ್ಲಿ ಒಬ್ಬರು ತನ್ನನ್ನು ಬಿ.ನಾಗೇಂದ್ರ ಅವರ ಪತ್ನಿ ಎಂದು ಹೇಳಿಕೊಂಡಿದ್ದಾರೆ. ಇದು ಲಭ್ಯವಾಗಿರುವ ದಾಖಲೆಗಳಲ್ಲೂ ಕಂಡುಬಂದಿದೆ. ಆರೋಪಿಗಳ ಮೊಬೈಲ್‌ನಲ್ಲಿ ಕೆಲವು ವಿಡಿಯೊಗಳು ಪತ್ತೆಯಾಗಿವೆ. ಇದರಲ್ಲಿ ಹಣದ ಕಂತೆ ಎಣಿಸುತ್ತಿರುವ ದೃಶ್ಯಗಳಿವೆ. ಅಲ್ಲಿ ನೆಕ್ಕಂಟಿ ನಾಗರಾಜ್ ಮತ್ತಿತರರು ಕಂಡು ಬರುತ್ತಾರೆ. ಈ ಬಗ್ಗೆ ಕೇಳಿದರೆ ಆರೋಪಿಗಳು ವಿಚಾರಣೆಯಲ್ಲಿ ಬಾಯಿ ಬಿಡುತ್ತಿಲ್ಲ ಎಂದು ಆಕ್ಷೇಪಿಸಿದರು.

ಈ ಹಿನ್ನೆಲೆಯಲ್ಲಿ ಆರೋಪಿಯನ್ನು ಕಸ್ಟಡಿಗೆ ಪಡೆದು ವಿಚಾರಣೆಗೆ ಒಳಪಡಿಸಬೇಕಾಗಿದೆ. ಆದ್ದರಿಂದ, ಅವರಿಗೆ ನೀಡಿರುವ ಜಾಮೀನು ರದ್ದುಗೊಳಿಸಬೇಕು ಎಂದು ಪೀಠಕ್ಕೆ ಮನವಿ ಮಾಡಿದರು.

ರೈತರ ಆದಾಯ ವೃದ್ಧಿಗೆ ಸಿಎಸ್‌ಐಆರ್ ಕ್ರಮ | ವಾರಗಳ ಕಾಲ ಉಚಿತ ಆಹಾರ ಸಂಸ್ಕರಣೆ ತರಬೇತಿ

ರೈತರ ಹೊಲದಲ್ಲಿಯೇ ಆಹಾರ ಸಂಸ್ಕರಣೆ ತರಬೇತಿ

▸ **ಅನುಷಾ ನಾಯಕ್**



• **ಬೆಂಗಳೂರು:** ರೈತರು ಬೆಳೆದ ಹಣ್ಣು ಅಥವಾ ತರಕಾರಿಗಳನ್ನು ಸಂಸ್ಕರಿಸಿದ ಪದಾರ್ಥಗಳಾಗಿ ಮಾರಾಟ ಮಾಡಿದರೆ ಹೆಚ್ಚಿನ ಲಾಭವನ್ನು ರೈತರು ಪಡೆಯಬಹುದು. ಆದರೆ, ರೈತರಿಗೆ ತಾವು ಬೆಳೆದ ಆಹಾರ ಪದಾರ್ಥವನ್ನು ಯಾವ ರೀತಿ ಸಂಸ್ಕರಿಸಬಹುದು ಎನ್ನುವ ಮಾಹಿತಿಯ ಕೊರತೆ ಇರುತ್ತದೆ. ಇದಕ್ಕೆ ಸಿಎಸ್ ಐಆರ್-ಸಿಎಫ್‌ಟಿಆರ್‌ಐನ ಎಂಜಿನಿಯರ್‌ಗಳು ಉತ್ತಮ ಪರಿಹಾರವನ್ನು ಕಂಡುಕೊಂಡಿದ್ದಾರೆ.

ರೈತರು ಸ್ಥಳೀಯವಾಗಿ ಬೆಳೆಯುವ ಹಣ್ಣುಗಳು ಮತ್ತು ತರಕಾರಿಗಳನ್ನು ಕಚ್ಚಾ ರೂಪದಲ್ಲಿ ಮಾರಾಟ ಮಾಡುವುದರೊಂದಿಗೆ, ಅದರಿಂದ ತಿರುಳು, ರಸಗಳು, ಪಾನೀಯಗಳು, ಪೂರ್ವಸಿದ್ಧ ಉತ್ಪನ್ನಗಳು, ನಿರ್ಜಲೀಕರಣಗೊಂಡ ಉತ್ಪನ್ನಗಳು, ಉಪ್ಪಿನಕಾಯಿ, ಜಾಮ್ ಮುಂತಾದ ಮೌಲ್ಯವರ್ಧಿತ ಉತ್ಪನ್ನಗಳನ್ನು ಉತ್ಪಾದಿಸಬಹುದು. ಆ ಮೂಲಕ ರೈತರು ಆದಾಯವನ್ನು ವೃದ್ಧಿಸಿಕೊಳ್ಳಬಹುದಾಗಿದೆ. ಈ ನಿಟ್ಟಿನಲ್ಲಿ ಸಿಎಸ್ ಐಆರ್ -ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಯ ಮೈಸೂರಿನ ಎಂಜಿನಿಯರ್‌ಗಳು ಅಭಿವೃದ್ಧಿಪಡಿಸಿದ ಮೊಬೈಲ್ ಆಹಾರ ಸಂಸ್ಕರಣೆ ಮತ್ತು ಪ್ರದರ್ಶನ ಘಟಕ ಹೊಂದಿದ ಬಸ್‌ನಲ್ಲಿ ರೈತರ ಊರಿಗೆ ಬಂದು ವಿವಿಧ ಆಹಾರ ಪದಾರ್ಥಗಳ ಬಗ್ಗೆ ಉಚಿತವಾಗಿ ತರಬೇತಿ ನೀಡುತ್ತಾರೆ. ಆ ಮೂಲಕ ರೈತರಿಗೆ ಸಂಸ್ಕರಿಸಿದ ಆಹಾರ ತಯಾರಿಸುವ ವಿಧಾನ ಬಗ್ಗೆ ತರಬೇತಿ ನೀಡುವ ಕಾರ್ಯವನ್ನು ಮಾಡುತ್ತಿದ್ದಾರೆ.

ಬಸ್‌ನಲ್ಲಿರುವ ಯಂತ್ರಗಳು: ಟೊಮೆಟೊ ಸಂಸ್ಕರಣೆಗಾಗಿ ಜಾಕೆಟೆಡ್ ಕೆಟಲ್, ಪೇಸ್ಟ್‌ಫಿಲ್ಲರ್, ಪ್ಯಾಕಿಂಗ್ ಮೆಷಿನ್, ಸೆಂಟ್ರಿಫ್ಯೂಗಲ್ ಮೆಷಿನ್ ಹಾಗೂ ರಾಗಿ ಸಂಸ್ಕರಣೆಗೆ ಡೆಸ್ಟೋನರ್ ಹಾಗೂ ಹಲ್ಲರ್ ಇಷ್ಟು ಯಂತ್ರಗಳನ್ನು ಒಂದೇ ಬಸ್‌ನಲ್ಲಿ ನೋಡಬಹುದಾಗಿದೆ. ಇದೇ ರೀತಿ ರೈತರು ಬೆಳೆದ ಇತರೆ ಬೆಳೆಗೆ ಬೇಕಾಗುವ ಯಂತ್ರವನ್ನು ಬದಲಾಯಿಸುತ್ತಾರೆ.

ಹೇಗೆ ಸಂಪರ್ಕಿಸಬೇಕು?: ಸಿಎಸ್‌ಐಆರ್-ಸಿಎಫ್‌ಟಿಆರ್‌ಐ ಮೈಸೂರು- ಆಹಾರ ತಂತ್ರಜ್ಞಾನ ಸಂಶೋಧನಾ ವೆಬ್‌ಸೈಟ್ www.cftri.res.in, ಸಂಸ್ಥೆಗೆ ದೂರವಾಣಿ ಸಂಖ್ಯೆ 0821-2514534 ಅಥವಾ ಜಿ ಮೈಲ್ ಐಡಿ: ttbdatcftridotres-dotin ಸಂದೇಶವನ್ನು ಕಳಿಸಿದರೆ ಸಿಎಸ್‌ಐಆರ್-ಸಿಎಫ್‌ಟಿಆರ್‌ಐ ಮೈಸೂರಿನ ಎಂಜಿನಿಯರ್‌ಗಳು ರೈತರು ತಿಳಿಸಿದ ಊರಿಗೆ ಬಂದು ಆಹಾರ ಪದಾರ್ಥ ಬಗ್ಗೆ ಉಚಿತವಾಗಿ ತರಬೇತಿಯನ್ನು ನೀಡುತ್ತಾರೆ.

ರೈತರ ಆದಾಯ ವೃದ್ಧಿಗೆ ಕ್ರಮ: ರೈತರ ಆದಾಯ ವೃದ್ಧಿಗಾಗಿ, ರೈತರು ಟೊಮೇಟೊ ಅಥವಾ ಇನ್ನಿತರ ಆಹಾರ ಪದಾರ್ಥಕ್ಕೆ ಮಾರುಕಟ್ಟೆಯಲ್ಲಿ ಅಧಿಕ ಬೆಲೆ ಇದ್ದಾಗ ಕಚ್ಚಾ ರೂಪದಲ್ಲಿ ಮಾರಾಟ ಮಾಡಬಹುದು. ಬೆಲೆ ಕಡಿಮೆ ಇದ್ದರೆ ಅದನ್ನು ಸಂಸ್ಕರಿಸಿ ಮಾರಾಟ ಮಾಡಬಹುದು ಎಂದು ಸಿಎಫ್‌ಟಿಆರ್‌ಐ ಎಂಜಿನಿಯರ್ ಪುನೀತ್ ಕುಮಾರ್ ಹೊಸದಿಗಂತಕ್ಕೆ ಹೇಳಿದರು.

> **ಒಂದು ಊರಿನಲ್ಲಿ ಸಾಮಾನ್ಯವಾಗಿ ಒಂದೇ ಬೆಳೆಯನ್ನು ಹಲವರು ಬೆಳೆಯುತ್ತಿರುತ್ತಾರೆ. ಹಾಗಾಗಿ ನಾವು ಒಬ್ಬರು ರೈತರು ತಮ್ಮ ಊರು, ಯಾವ ಪದಾರ್ಥವನ್ನು ಹೆಚ್ಚು ಬೆಳೆಯುತ್ತಾರೆ ಎಂದು ಈಮೈಲ್ ಮೂಲಕ ತಿಳಿಸಬೇಕು. ಆನಂತರ ನಾವು ಒಂದು ವಾರಗಳ ಕಾಲ ತರಬೇತಿ ನೀಡುತ್ತೇವೆ. ರೈತರು ಹಣ್ಣು ಅಥವಾ ತರಕಾರಿಗಳಿಗೆ ಮೌಲ್ಯವರ್ಧನೆ ಮಾಡಲು ಆರಂಭಿಸಿದರೆ ಮಾತ್ರ ರೈತರ ಆದಾಯ ಹೆಚ್ಚಾಗಲು ಸಾಧ್ಯವಾಗುತ್ತದೆ.**
> ■ **ಪುನೀತ್ ಕುಮಾರ್, ಸಿಎಫ್‌ಟಿಆರ್‌ಐ ಎಂಜಿನಿಯರ್**

ಯುವಕರನ್ನು ಸಂಘಟಿಸಿ

ಪುಟ ೧ ➡ ಅವುಗಳಲ್ಲಿ ಪಕ್ಷದ ಕೆಳ ಹಂತದ ಕಾರ್ಯಕರ್ತರಿಗೆ ಅವಕಾಶ ನೀಡಿ ಹೆಚ್ಚಿನ ಸಂಖ್ಯೆಯಲ್ಲಿ ಗೆಲ್ಲಿಸಿಕೊಂಡು ಬರಬೇಕಿದೆ. ಈ ನಿಟ್ಟಿನಲ್ಲಿ ಮುಖ್ಯಮಂತ್ರಿಯವರು ತಮ್ಮ ಪಕ್ಷದ ಜಿಲ್ಲಾಧ್ಯಕ್ಷರ ಜತೆ ಸಮಾಲೋಚನೆ ನಡೆಸಿದರು. ರಾಜ್ಯ ಸರ್ಕಾರ ಘೋಷಣೆ ಮಾಡಿರುವ ಐದು ಗ್ಯಾರಂಟಿಗಳು ರಾಜ್ಯ ಅರ್ಹ ಫಲಾನುಭವಿಗಳಿಗೆ ತಲುಪಬೇಕು ಎಂಬುದು ನಮ್ಮ ಸರ್ಕಾರದ ಉದ್ದೇಶ. ಆದರೆ, ಕೆಲವು ಕಡೆಗಳಲ್ಲಿ ಗ್ಯಾರಂಟಿ ಯೋಜನೆಗಳು ಅನರ್ಹರಿಗೂ ಸಿಗುತ್ತಿವೆ, ಅದರಲ್ಲೂ ಗೃಹಲಕ್ಷ್ಮಿ ಯೋಜನೆಯಲ್ಲಿ ಸತ್ತವರ ಖಾತೆಗಳಿಗೂ ಹಣ ಹೋಗುತ್ತಿರುವ ಬಗ್ಗೆ ಗೊತ್ತಾಗಿದೆ. ಇಂತಹ ಪ್ರಕರಣಗಳ ಮೇಲೆ ಜಿಲ್ಲಾ ಅಧ್ಯಕ್ಷರುಗಳು ನಿಗಾ ಇರಿಸಬೇಕು ಎಂದು ಡಿ.ಕೆ.ಶಿವಕುಮಾರ್ ಸೂಚಿಸಿದರು. ಅಲ್ಲದೇ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳ ಮೂಲಕ ಗ್ಯಾರಂಟಿ ಯೋಜನೆಗಳ ಪರಿಶೀಲನೆ ನಡೆಸಬೇಕು ಎಂದು ಸೂಚಿಸಿದರು.



ಸಾರ್ವಜನಿಕ ಸ್ಥಳದಲ್ಲಿ ಚರ್ಚೆಯಾಗಲಿ: ಎಚ್.ಡಿ. ಕುಮಾರಸ್ವಾಮಿ

ಎಚ್‌ಡಿಕೆಗೆ ಸಿಎಂ ಡಿಕೆಶಿ ಆಹ್ವಾನ

• **ಬೆಂಗಳೂರು:** ಬಿಡದಿ ಟೌನ್‌ಶಿಪ್ ನಿರ್ಮಾಣದ ಕುರಿತ ಚರ್ಚೆಗೆ ನಾನು ಸಿದ್ಧನಿದ್ದೇನೆ ಎಂದಿರುವ ಸಿಎಂ ಡಿ.ಕೆ. ಶಿವಕುಮಾರ್ ಅವರು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಆಹ್ವಾನ ನೀಡಿದ್ದು, ಜೂ.26 ರಂದು ವಿಧಾನಸೌಧದ ತಮ್ಮ ಕಚೇರಿಗೆ ಆಗಮಿಸುವಂತೆ ಪತ್ರ ಬರೆದಿದ್ದಾರೆ.

ಸೋಮವಾರಸುದ್ದಿಗೋಷ್ಠಿನಡೆಸಿ,ಬೈರಮಂಗಲದಪ್ರತಿಭಟನಾ ಸ್ಥಳಕ್ಕೆ ಬನ್ನಿ, ಅಲ್ಲಿ ಕುಳಿತಿರುವವರು ಅಸಲಿ ರೈತರೋ ಅಥವಾ ನಕಲಿ ರೈತರೋ ಎಂಬುದು ನಿಮಗೆ ಗೊತ್ತಾಗುತ್ತದೆ. ನಾನು ಸಿದ್ಧನಿದ್ದೇನೆ, ಬೈರಮಂಗಲಕ್ಕೆ ಬರುವುದಕ್ಕೆ ನೀವು ಸಿದ್ಧರಿದ್ದೀರಾ ಎಂದು ಎಚ್.ಡಿ. ಕುಮಾರಸ್ವಾಮಿ ಸವಾಲು ಹಾಕಿದ್ದರು.

ಈ ಸವಾಲು ಸ್ವೀಕರಿಸಿರುವ ಸಿಎಂ ಡಿ.ಕೆ. ಶಿವಕುಮಾರ್ ಅವರು, ತಾವು ಪ್ರಾರಂಭಿಸಿದ ಬಿಡದಿ ಟೌನ್‌ಶಿಪ್ ಯೋಜನೆಗೆ ಸಂಬಂಧಿಸಿದಂತೆ, ತಮ್ಮ ಜೊತೆ ನಿಮ್ಮ ಚರ್ಚಿಸಲು ಉತ್ಸುಕನಾಗಿದ್ದು, ಜೂ.26 ಬೆಳಗ್ಗೆ 11 ಗಂಟೆಗೆ ವಿಧಾನಸೌಧಕ್ಕೆ ತಾವು ಮತ್ತು ತಮ್ಮ ತಂಡದ ಐದು ಪ್ರತಿನಿಧಿಗಳೊಂದಿಗೆ ನನ್ನ ಕಚೇರಿಗೆ ಆಗಮಿಸುವಂತೆ ತಮ್ಮನ್ನು ಕೋರುತ್ತೇನೆ ಎಂದು ಪತ್ರ ಬರೆದಿದ್ದಾರೆ.ಬಿಡದಿ ಟೌನ್‌ಶಿಪ್ ವಿಚಾರವಾಗಿ ಸುಮಾರು ದಿನಗಳಿಂದ ಸಿಎಂ ಡಿ.ಕೆ ಶಿವಕುಮಾರ್ ಮತ್ತು ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ನಡುವಿನ ಜಟಾಪಟಿ ಜೋರಾಗಿದ್ದು, ಬಿಡದಿ ಟೌನ್ ಶಿಪ್ ವಿಚಾರವಾಗಿ ಎಚ್.ಡಿ ಕುಮಾರಸ್ವಾಮಿ ಪರವಾಗಿ ಜೆಡಿಎಸ್‌ನವರು ಅಧಿವೇಶನದಲ್ಲಿ ಚರ್ಚೆ ಮಾಡಲಿ, ಉತ್ತರ ಕೊಡೋಣ ಎಂದಿರುವ ಸಿಎಂ ಡಿ.ಕೆ ಶಿವಕುಮಾರ್ ಅವರು, ನಾನು ಈಗ ವಿನಾಕಾರಣ ಮಾತನಾಡುವುದಿಲ್ಲ. ಹಿಂದೆಯೇ ಚರ್ಚೆಗೆ ಕರೆದಿದ್ದೆ, ಆದರೆ ಬರಲಿಲ್ಲ. ಮುಂದಿನ ಅಧಿವೇಶನದಲ್ಲಿ ಅವರ ಪಕ್ಷದ, ಇತರ ಅನುಭವಿ ರಾಜಕಾರಣಿಗಳ ಮೂಲಕ ಚರ್ಚೆ ಮಾಡಿಸಲಿ ಎಂದಿದ್ದಾರೆ.ಸಿಎಂ ಡಿ.ಕೆ. ಶಿವಕುಮಾರ್ ಆಹ್ವಾನಕ್ಕೆ ಪ್ರತಿಯಾಗಿ ಪತ್ರ ಬರೆದಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು, ವಿಧಾನಸೌಧದಲ್ಲಿ ನಡೆಸಲು ಉದ್ದೇಶಿಸಿರುವ ಸಭೆಯಲ್ಲಿ ಬಾಧಿತ ರೈತ ವರ್ಗ, ಗ್ರಾಮಸ್ಥರು ಮತ್ತು ಪಾಲುದಾರರನ್ನು ಆಹ್ವಾನಿಸದೆ ಅವರನ್ನು ಹೊರಗೆ ಇಟ್ಟು ಸಭೆ ನಡೆಸುವುದರಿಂದ ಸಭೆ ಫಲಪ್ರದವಾಗುವುದಿಲ್ಲ. ತಾವು ನಿಗದಿಪಡಿಸಿದ ಜೂ.26 ಶುಕ್ರವಾರ ರಂದು ನನಗೆ ಪೂರ್ವ ನಿಯೋಜಿತ ಕಾರ್ಯಕ್ರಮಗಳು ಇರುವುದರಿಂದ, ಈ ಉದ್ದೇಶಿತ ಸಭೆಯನ್ನು ಜೂ.27ರ ಶನಿವಾರ ಬಿಡದಿ ಅಥವ ಬೈರಮಂಗಲದ ಸೂಕ್ತ ಸಾರ್ವಜನಿಕ ಸ್ಥಳದಲ್ಲಿ ಯೋಜನೆ ಬಾಧಿತ ವರ್ಗದ ಜನರನ್ನು ಆಹ್ವಾನಿಸಿ ಸಭೆ ನಡೆಸಬೇಕೆಂದು ಕೋರಿದ್ದಾರೆ.

ವಿಶ್ವವಾಣಿ ಪತ್ರಿಕೆಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಇಂಗಿತ

ಭೈರಪ್ಪನವರ ಸಾಹಿತ್ಯ ಮೌಲ್ಯಯುತ

• **ಮೈಸೂರು:** ಕಾದಂಬರಿಕಾರ ಡಾ. ಎಸ್.ಎಲ್.ಭೈರಪ್ಪ ಅವರು ಕೊನೆ ಕ್ಷಣದವರೆಗೆ ತಾನು ನಂಬಿದ ವಿಚಾರ ಬಿಟ್ಟು ಅವರು ಏನು ಮಾಡಲಿಲ್ಲ, ಅವರ ನೆನಪಿನಶಕ್ತಿ ಅಪಾರ. ಅದು ಕೊನೆಯದಿನಗಳಲ್ಲಿ ನ್ಯಾಯಾಲಯದಲ್ಲಿ ಸಾಬೀತು ಮಾಡಿದರು ಎಂದು ವಿಶ್ವವಾಣಿ ಪತ್ರಿಕೆಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಹೇಳಿದರು.

ನಗರದ ಕೃಷ್ಣಮೂರ್ತಿಪುರಂನಲ್ಲಿರುವ ಬಿಇಎಸ್ ವಿದ್ಯೋದಯ ಶಾಲೆಯಲ್ಲಿ ಶ್ರೀರಂಗಪಟ್ಟಣದ ಪ್ರಿಯದರ್ಶಿನ ಸಾಂಸ್ಕೃತಿಕ ವೇದಿಕೆ ವತಿಯಿಂದ ಆಯೋಜಿಸಲಾಗಿದ್ದ ದಿವಂಗತ ಡಾ.ಎಸ್.ಎಲ್.ಭೈರಪ್ಪ ಸಂಸ್ಮರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಭೈರಪ್ಪನವರ ಸಾಹಿತ್ಯವನ್ನು ವಿಶ್ವ ಸಾಹಿತ್ಯ ದೃಷ್ಟಿಯಿಂದ ನೋಡಬೇಕಿದೆ. ಕನ್ನಡ ಪತ್ರಿಕಾ ರಂಗದಲ್ಲಿ ಒಂದು ಗ್ಯಾಂಗ್ ಇತ್ತು, ಅವರಿಗೆ ಲಂಕೇಶ್ ಅವರ ಬಗ್ಗೆ ಚರ್ಚೆ, ವಿಮರ್ಶೆ ನಡೆಯುತ್ತಿತ್ತು. ಆದರೆ ಭೈರಪ್ಪನವರ ಬಗ್ಗೆ ಚಕಾರವೇ ಇಲ್ಲವಾಗಿತ್ತು. ಈ ಬಗ್ಗೆ ಭೈರಪ್ಪನವರು ಬೇಸರ ಮಾಡಿಕೊಳ್ಳಲಿಲ್ಲ ಎಂದು ಹೇಳಿದರು. ಡಾ. ಎಸ್.ಎಲ್.ಭೈರಪ್ಪನವರ ಸಾಹಿತ್ಯ ಮೌಲ್ಯಯುತವಾದದ್ದು. ಅವರ ಪ್ರತೀ ಪುಸ್ತಕದಿಂದ ಒಂದು ರೂ. ಕೋಟಿಗೂ ಹೆಚ್ಚಿನ ಸಂಭಾವನೆ ಬಂದಿದೆ. ಕನ್ನಡದ ಯಾವ ಲೇಖಕರಿಗೂ ಆ ರೀತಿ ಬಂದಿಲ್ಲ. ಭೈರಪ್ಪನವರ ನಿಧನದ ನಂತರ ಅವರ ಕೃತಿಗಳ ಮಾರಾಟದಿಂದ ನಾಲ್ಕು ಕೋಟಿ ರೂಪಾಯಿ ಬಂದಿದೆ.



ಫ್ರಾಂಕ್ ಫರ್ಟ್ ಪುಸ್ತಕ ಮೇಳದಲ್ಲಿ ಭೈರಪ್ಪನವರ ಪುಸ್ತಕ ಸತತ ಏಳು ವರ್ಷಗಳ ಕಾಲ ಮೊದಲ ಸಾಲಿನಲ್ಲಿದೆ. ಅವರ ಸಾಹಿತ್ಯದ ಮೌಲ್ಯ, ದ್ರವ್ಯ ಮಹತ್ತರವಾದದು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸಂಸ್ಕೃತ ವಿದ್ವಾಂಸ ಡಾ.ಎಚ್.ವಿ. ನಾಗರಾಜರಾವ್, ವಿದ್ಯೋದಯ ಸಂಸ್ಥೆಯ ಗೌರವ ಕಾರ್ಯದರ್ಶಿ ಆರ್. ವಾಸುದೇವ ಭಟ್, ಚಿಂತಕ ಪ್ರೊ.ಅಜಕ್ಕಳ ಗಿರೀಶ್ ಭಟ್, ವಿದ್ವಾನ್ ಗ.ನಾ. ಭಟ್ ಉಪಸ್ಥಿತರಿದ್ದರು. ಭೈರಪ್ಪನವರು ಅಗಲಿ 9 ತಿಂಗಳು ಆಗಿದೆ. ಆದರೆ, ನಮ್ಮ ಚಿತ್ತಭಿತ್ತಿಯಲ್ಲಿ ಶಾಶ್ವತವಾಗಿ ನೆಲೆಯಿರುವರು ಎಂದು ಹೇಳಿದರು. ಭೈರಪ್ಪನವರು, ಪತ್ರಿಕೆ ಮುದ್ರಣಕ್ಕೆ ಹೋಗುವ ಮುನ್ನ ಕನಿಷ್ಠ ಹತ್ತು ಜನ ಅದನ್ನು ಓದಬೇಕು. ಫ್ಯಾಕ್ಟ್ ಚೆಕ್ ಆಗಬೇಕು ಎಂದು ಸಲಹೆ ನೀಡಿದ್ದರು. ಒಳದಾರಿ, ಶಾರ್ಟ್ ಕಟ್ ಅವರಿಗೆ ಆಗುತ್ತಿರಲಿಲ್ಲ ಎಂದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ವಿಷವನ್ನು ತಾನು ಕುಡಿದು ಜಗತ್ತಿಗೆ ಅಮೃತವನ್ನು ನೀಡಿದ ದೇವರು ಈಶ್ವರ
– ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ

–ಅದು ಈಶ್ವರನಿಗೆ ಮಾತ್ರ ಸಾಧ್ಯವಾದೀತು, ನಾವು ನಶ್ವರರು.ಇನ್ನೊಬ್ಬರಿಗೆ ವಿಷವನ್ನು ಕೊಟ್ಟು ಸಂತೋಷಪಟ್ಟು ಸಂಭ್ರಮಿಸುವ ಆಧುನಿಕರು ನಾವು!

ದಿನ ಭವಿಷ್ಯ

ಮೇಷ
ನೀವು ಎಸಗಿದ ತಪ್ಪುಗಳನ್ನು ಸರಿಪಡಿಸಲು ಗಮನ ಕೊಡಿ. ತಪ್ಪು ಒಪ್ಪಿಕೊಳ್ಳುವುದರಲ್ಲಿ ನಾಚಿಕೆ ಇಲ್ಲ. ಆರೋಗ್ಯ ಸಮಸ್ಯೆ ಕಾಡಬಹುದು.

ವೃಷಭ
ವೃತ್ತಿಯಲ್ಲಿ ಮಂದಗತಿ ಕಾಯ್ದುಕೊಳ್ಳಿ. ಮುಂಚೂಣಿಗೆ ಬರಬೇಡಿ. ಹಣ ಹೂಡಿಕೆಗೆ ದೀರ್ಘಾವಧಿ ಯೋಜನೆ ಒಳ್ಳೆಯದು.

ಮಿಥುನ
ಆತ್ಮೀಯರ ಒತ್ತಡ ಕಡಿಮೆ ಮಾಡಲು ನಿಮ್ಮ ಪ್ರಯತ್ನವಿರಲಿ. ಹಣ ಹೂಡಿಕೆ ಇಂದು ಒಳಿತಲ್ಲ. ವೃತ್ತಿಯಲ್ಲಿ ತುಸು ಹಿನ್ನಡೆ ಕಾಣುವಿರಿ. ಧನವ್ಯಯ.

ಕಟಕ
ವೃತ್ತಿಯಲ್ಲಿ ಹೊಸ ಅವಕಾಶ ಕಾಣಲಿದೆ. ಸದುಪಯೋಗ ಮಾಡಿ. ಮನಕೊಪ್ಪುವ ಸಂಗಾತಿ ಸಿಕ್ಕಿಯಾರು. ಸಂಬಂಧ ದೃಢವಾದೀತು.

ಸಿಂಹ
ವೃತ್ತಿ ಬದಲಿಸಲು ಯೋಜಿಸಿದ್ದರೆ ಕಾಲ ಪಕ್ವವಾಗಿದೆ. ಹಣದ ವಿಚಾರದಲ್ಲಿ ಯಾರನ್ನೂ ಕುರುಡಾಗಿ ನಂಬದಿರಿ. ಆರೋಗ್ಯ ಸಮಸ್ಯೆ.

ಕನ್ಯಾ
ಮನೆಯವರು ನಿಮ್ಮಿಂದ ಹೆಚ್ಚು ಗಮನ ಅಪೇಕ್ಷಿಸುವರು. ವೃತ್ತಿ ಒತ್ತಡದಲ್ಲೇ ಮುಳುಗದಿರಿ. ಆಹಾರದ ಅತಿಸೇವನೆ ಹೊಟ್ಟೆ ಕೆಡಿಸಬಹುದು.

ತುಲಾ
ದಿನವಿಡೀ ಗೊಂದಲದ ಮನಸ್ಥಿತಿ. ವೃತ್ತಿಯಲ್ಲಿ ಹೊಸ ಸವಾಲು. ಭಾವನೆ ಬದಿಗಿಟ್ಟು ವೃತ್ತಿಪರತೆಯಿಂದ ನಿಭಾಯಿಸಿ.

ವೃಶ್ಚಿಕ
ಯಾವುದೇ ಕೆಲಸಕ್ಕೆ ಇಂದು ಹೆಚ್ಚುವರಿ ಶ್ರಮ ಅಗತ್ಯ. ಅಡೆತಡೆ ಉಂಟಾಗಲಿದೆ. ಆಸಕ್ತಿಕರ ವ್ಯಕ್ತಿಯ ಭೇಟಿ. ಸಂಬಂಧ ಬಲಗೊಳ್ಳಲಿದೆ.

ಧನು
ಸಣ್ಣ ಆರೋಗ್ಯ ಸಮಸ್ಯೆ ಕಾಡಿದರೂ ನಿರ್ಲಕ್ಷ್ಯ ಬೇಡ. ಸೂಕ್ತ ಚಿಕಿತ್ಸೆ ಕೂಡಲೇ ನಡೆಸಿ. ವೃತ್ತಿಯ ಒತ್ತಡ ಇಂದು ಕಡಿಮೆಯಾಗಲಿದೆ.

ಮಕರ
ಆಪ್ತರ ಜತೆ ಭಿನ್ನಾಭಿಪ್ರಾಯ ಸಂಭವ. ಕೂಡಲೇ ಬಗೆಹರಿಸಿ. ಹೊಸ ವ್ಯವಹಾರದಲ್ಲಿ ಹಣ ಹೂಡಿಕೆ ನಿರೀಕ್ಷಿತ ಫಲಿತಾಂಶ ನೀಡದು.

ಕುಂಭ
ಹಣದ ಬಿಕ್ಕಟ್ಟು ಕಾಡಬಹುದು. ಸೂಕ್ತ ಸಲಹೆ ಕೇಳಿಪಡೆಯಿರಿ. ಆರೋಗ್ಯ ಕಾಪಾಡಲು ಸೂಕ್ತ ಮುನ್ನೆಚ್ಚರಿಕೆ ವಹಿಸಿ. ಧನವ್ಯಯ ಅಧಿಕ.

ಮೀನ
ಹಣದ ವ್ಯವಹಾರ ಸರಿದಾರಿಗೆ ತನ್ನಿ. ಖರ್ಚು ಕಡಿಮೆ ಮಾಡಿ. ಸಣ್ಣ ವಿಷಯಗಳು ಹೆಚ್ಚು ಕಿರಿಕಿರಿ ಸೃಷ್ಟಿಸುವವು. ಸಮಚಿತ್ತ ಅವಶ್ಯ.

ರಾಹುಕಾಲ: 3.00- 4.30
ಗುಳಿಕಕಾಲ: 12.00-1.30

ಅದೃಷ್ಟ ಸಂಖ್ಯೆ: 8,3,9,4

ಆರೆಸ್ಸೆಸ್ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ್ ಮಂಗೇಶ್ ಭೇಂಡೆ

ಸಮಾಜ ಜಾಗೃತಿಗೆ ಆರೆಸ್ಸೆಸ್

• **ಉಡುಪಿ:** ಸಂಘವನ್ನು ಡಾ. ಹೆಡಗೇವಾರ್ ಅವರು ಯಾರನ್ನೂ ವಿರೋಧಿಸುವುದಕ್ಕಾಗಿ ಆರೆಸ್ಸೆಸ್ಸನ್ನು ಹುಟ್ಟು ಹಾಕಿದ್ದಲ್ಲ.ಬದಲಿಗೆ ತಮ್ಮನ್ನು ತಾವೇ ಮರೆತು ಹೋಗಿದ್ದ, ಸ್ವಾಭಿಮಾನ ಹೀನರಾಗಿದ್ದ ಹಿಂದು ಸಮಾಜವನ್ನು ಜಾಗೃತಿ ಮಾಡುವುದಕ್ಕಾಗಿ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ್ ಮಂಗೇಶ್ ಭೇಂಡೆ ಅವರು ಹೇಳಿದರು.

ಉಡುಪಿಯ ಕಿನ್ನಿಮೂಲ್ಕಿ ಶ್ರೀದೇವಿ ಸಭಾ ಭವನದಲ್ಲಿ ನಡೆದ ಪ್ರಮುಖ ನಾಗರಿಕರ ಗೋಷ್ಠಿಯಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿಅವರುಮಾತನಾಡಿದರು. ಹಿಂದು ಸಮಾಜ ಜಾಗೃತಿಗಾಗಿ ಸ್ಥಾಪಿತವಾದ ಸಂಘ ಇಂದು ತಾನು ಜಾತ್ಯತೀತವಾದದತ್ತ ಹೊರಳುತ್ತಿದೆಯಾ? ಹಿಂದು ರಾಷ್ಟ್ರ ಎಂದು ಸಂವಿಧಾನದಲ್ಲೇ ಉಲ್ಲೇಖಿಸಬೇಕು ಎಂಬ ವ್ಯಕ್ತಿಯೊಬ್ಬರ ವಾದಕ್ಕೆ ಉತ್ತರಿಸಿದ ಅವರು, ಭಾರತ ಮೂಲದಲ್ಲೇ ಜಾತ್ಯತೀತವಾಗಿದೆ. ನಾವೆಲ್ಲರೂ ವಿವಿಧತೆಯಲ್ಲಿ ಏಕತೆ ಎಂಬ ತತ್ವದಲ್ಲಿ ಬದುಕುತ್ತಿದ್ದೇವೆ. ಹಿಂದು ರಾಷ್ಟ್ರ ಎಂದು ಸಂವಿಧಾನದಲ್ಲಿ ಉಲ್ಲೇಖಿಸಬೇಕಾದ ಅವಶ್ಯಕತೆಯಿಲ್ಲ, ಬದಲಾಗಿ ಅದು ನಮ್ಮ ನಂಬಿಕೆಯಲ್ಲೇ ಬೇರೂರಿದೆ. 800 ವರ್ಷ ಮೊಗಲರ ಹಾಗೂ 200 ವರ್ಷ ಬ್ರಿಟಿಷರ ದಾಳಿಯ ಹೊರತಾಗಿಯೂ ಭಾರತ ಹಿಂದು ರಾಷ್ಟ್ರವಾಗಿಯೇ ಉಳಿದಿದೆ. ಇದಕ್ಕೆ ಯಾವ ಸರ್ಟಿಫಿಕೇಟ್ ಕೂಡ ಅಗತ್ಯವಿಲ್ಲ ಎಂದರು.

ದೇವಸ್ಥಾನಗಳ ದುಡ್ಡು ದುರ್ಬಳಕೆ ತಡೆಗೆ ಸಂಸ್ಕಾರ ಅಗತ್ಯ: ದೇವಸ್ಥಾನಗಳ ಆಡಳಿತ ಸರ್ಕಾರದ ಬಳಿ ಇರಬೇಕಾ ಅಥವಾ ಆಡಳಿತ ಮಂಡಳಿ ಬಳಿ ಇರಬೇಕಾ ಎಂಬ ಕುರಿತಾದ ಪ್ರಶ್ನೆಗೆ ಉತ್ತರಿಸಿದ ಅವರು, ಇದು ಗೊಜಲಿನ ವಿಷಯ. ಇಲ್ಲಿ ಯಾರ ಬಳಿ ಆಡಳಿತ ಇದೆ ಎಂಬುದಕ್ಕಿಂತ ಮುಖ್ಯವಾಗಿ ಅದನ್ನು ದುರ್ಬಳಕೆ ಮಾಡಬಾರದು ಎಂಬ ಸಂಸ್ಕಾರ ಅದನ್ನು ನಿರ್ವಹಿಸುವವರಿಗೆ ಬರಬೇಕಾಗುತ್ತದೆ. ಇದಕ್ಕಾಗಿ ಜಾಗೃತಿ,ಸಂಸ್ಕಾರಮೂಡಿಸಬೇಕಿದೆ ಎಂದರು. ಮಂಗಳೂರು ವಿಭಾಗ ಸಂಘಚಾಲಕ್ ನಾರಾಯಣ ಶೆಣೈಫಿ ಉಪಸ್ಥಿತರಿದ್ದರು. ಅಭಯ್ ವೈಯಕ್ತಿಕ ಗೀತೆ ಹಾಡಿದರು. ಶ್ರೀದೇವಿ ವಂದೇಮಾತರಂ ಹಾಡಿದರು. ಜಿಲ್ಲಾ ಸಂಪರ್ಕ ಪ್ರಮುಖ್ ಕೃಷ್ಣ ಪ್ರಸಾದ್ ಸ್ವಾಗತಿಸಿ , ನವೀನ್ ವಂದಿಸಿದರು.



ಜನಸಂಖ್ಯೆ ಕುರಿತು ಹಿಂದುಗಳಲ್ಲಿ ಜಾಗೃತಿ ಅಗತ್ಯ


ಸ್ವಾತಂತ್ರ್ಯದ ವೇಳೆ ಭಾರತದ ಹಿಂದುಗಳ ಶೇಕಡಾವರು ಜನಸಂಖ್ಯೆಗಿಂತ ಈಗಿನ ಹಿಂದುಗಳ ಜನಸಂಖ್ಯೆ ಕುಸಿದಿದೆ. ಇದರಿಂದ ನಾವೇನು ಜಾಗೃತಿ ಪಡೆದುಕೊಳ್ಳಬಹುದು ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಇಂದು ಹಿಂದು ಸಮುದಾಯಗಳ ಮಕ್ಕಳಹೆರುವಿಕೆ ಫಲವತ್ತತೆ 1.9 ಕ್ಕೆ ಕುಸಿದಿದೆ. ಇದು 2.1 ರಷ್ಟಿದ್ದರೆ ಮಾತ್ರ ಸಮಾಜ ಉಳಿಯುತ್ತದೆ. ಇದರ ಕುರಿತು ಎಲ್ಲ ಕಡೆ ಜಾಗೃತಿ ಮೂಡಿಸುವ ಕೆಲಸ ಆಗಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ವರ್ಷ ಜನಿಸಿದ 46 ಸಾವಿರ ಮಕ್ಕಳ ಪೈಕಿ 23 ಸಾವಿರ ಮಕ್ಕಳು ಮಾತ್ರ ಹಿಂದು ಸಮುದಾಯದ್ದು, ಉಳಿದ ಅರ್ಧ ಮಕ್ಕಳ ಜನನ ಬೇರೆ ಸಮುದಾಯದ್ದು ಅಂದರೆ ಇದು ಹಿಂದುಗಳು ಯೋಚಿಸುವ ವಿಚಾರವಾಗಿದೆ ಎಂದು ಎಚ್ಚರಿಸಿದರು.

ಖರ್ಗೆ ವಿರುದ್ಧ ಬಿ.ವೈ. ವಿಜಯೇಂದ್ರ ವಾಗ್ದಾಳಿ

ಪ್ರಧಾನಿ ಮೋದಿ ವಿರುದ್ಧ ಹಗುರ ಮಾತು ಬೇಡ

• **ಬೆಂಗಳೂರು:** ಸ್ವಾತಂತ್ರ್ಯ ಚಳವಳಿಯ ಉದ್ದೇಶಕ್ಕಾಗಿ ಹುಟ್ಟಿಕೊಂಡ ಕಾಂಗ್ರೆಸ್ ಹೆಸರಿನ ಸಂಘಟನೆಯನ್ನು ಹೈಜಾಕ್ ಮಾಡಿ ಅದರ ಪಾವಿತ್ರ್ಯತೆಯನ್ನು ಕುಲಗೆಡಿಸಿದವರು ನೀವು, ಯಾವ ನೈತಿಕತೆಯಿಟ್ಟುಕೊಂಡು ರಾಷ್ಟ್ರ ಭಕ್ತ ಸಂಘಟನೆ ಆರ್‌ಎಸ್‌ಎಸ್ ಹಾಗೂ ಪ್ರಧಾನಿ ಮೋದಿ ಅವರ ವಿರುದ್ಧ ಹಗುರವಾಗಿ ಮಾತನಾಡಿದ್ದೀರಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಮಲ್ಲಿಕಾರ್ಜುನ ಖರ್ಗೆ ಅವರನ್ನು ಪ್ರಶ್ನಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಅವರು ಸುದೀರ್ಘ ಪೋಸ್ಟ್ ಮಾಡಿದ್ದಾರೆ. ಲಕ್ಷಾಂತರ ಜನರ ತ್ಯಾಗ-ಬಲಿದಾನಗಳಿಂದ ಸ್ವತಂತ್ರ ಪಡೆದುಕೊಂಡ ಹೆಮ್ಮೆಯ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ವಾಧಿಕಾರ ಮೆರೆದು ದೇಶವನ್ನು ದಾರಿದ್ರ್ಯ ವ್ಯವಸ್ಥೆಗೆ ತಂದಿಕ್ಕಿ, ವಿಶ್ವಮಟ್ಟದಲ್ಲಿ ಭಾರತ ಭಿಕ್ಷುಕರ ದೇಶ ಎಂಬ ಕುಖ್ಯಾತಿಯ ಪಟ್ಟ ಕಟ್ಟಿದ್ದು ನಿಮ್ಮ ಕಾಂಗ್ರೆಸ್ ಪಕ್ಷ ಎಂದು ಟೀಕಿಸಿದ್ದಾರೆ.



ನಿಮ್ಮ ಮಾತುಗಳೆಲ್ಲವೂ ಹತಾಶೆ ಹಾಗೂ ಕೊಳಕು ಮನಸ್ಸನ್ನು ಪ್ರತಿಬಿಂಬಿಸುತ್ತದೆ. ಕಾಂಗ್ರೆಸ್‌ನ ಕೆಟ್ಟ ಸಂಸ್ಕೃತಿ ನೋಡಿಯೇ ಈ ದೇಶದ ಜನ ರಾಜಕೀಯ ಭೂಪಟದಲ್ಲಿ ಬಹುತೇಕ ಅಳಿಸಿ ಹಾಕಿದ್ದಾರೆ. ಅಲ್ಲೊಂದು ಇಲ್ಲೊಂದು ರಾಜ್ಯದಲ್ಲಿ ಪೊಳ್ಳು ಭರವಸೆ, ಅಪಪ್ರಚಾರ ಹಾಗೂ ಸಮಯಸಾಧಕತನದ ರಾಜಕಾರಣ ಮಾಡಿ ಅಧಿಕಾರದಲ್ಲಿ ಕುಳಿತಿದ್ದೀರಿ. ಸದ್ಯಕ್ಕೆ ಉಳಿದೆರೆಡು ರಾಜ್ಯಗಳಿಗಿಂತ ಕರ್ನಾಟಕ ರಾಜ್ಯವೇ ನಿಮ್ಮ ಪಾಲಿಗೆ ಭ್ರಷ್ಟತೆಯ ಫಲ ನೀಡುವ ಕಳ್ಳ ಖಜಾನೆಯಾಗಿದೆ. ಸರ್ಕಾರದ ಖಜಾನೆಗೇ ಕನ್ನ ಹಾಕಿದ ಕುಖ್ಯಾತಿ ಇಲ್ಲಿದೆ. ಸಾವಿರಾರು ನಿವೇಶನಗಳನ್ನು ಲೂಟಿ ಮಾಡಿದ ದಾಖಲೆಯೂ ಕಾಂಗ್ರೆಸ್ ಸರ್ಕಾರದ ಹೆಸರಿನಲ್ಲಿದೆ. ಪರಿಶಿಷ್ಟರ ಕಲ್ಯಾಣಕ್ಕಾಗಿ ಮೀಸಲಿಟ್ಟ ಹಣವನ್ನೆಲ್ಲಾ ದುರ್ಬಳಕೆ ಮಾಡಿಕೊಂಡ ಪರಿಶಿಷ್ಟ ದ್ರೋಹಿ ಸರ್ಕಾರ ಎಂಬ ಹೆಸರೂ ನಿಮ್ಮ ಪಕ್ಷದ ದಾಖಲೆಗೆ ಸೇರಿದೆ ಎಂದಿದ್ದಾರೆ. ರಾಜ್ಯದಲ್ಲಿ ಕನಿಷ್ಠ ಉದ್ಯೋಗ ಸೃಷ್ಟಿಸಲಿಲ್ಲ, ಹೋಗಲಿ ಎಂದರೆ ಇರುವ 2.85 ಲಕ್ಷ ಹುದ್ದೆಗಳನ್ನು ಖಾಲಿ ಉಳಿಸಿ, ನಿರುದ್ಯೋಗಿಗಳನ್ನು ವಂಚಿಸಿ, ಮುಗಿಲು ಮುಟ್ಟಿದ ಅವರ ಆಕ್ರೋಶದ ಹೋರಾಟ ಪ್ರಾಯಶಃ ನೀವು ಮರೆತಂತಿದೆ. ನರೇಂದ್ರ ಮೋದಿ ಅವರು ಉದ್ಯೋಗ ಸೃಷ್ಟಿಸಲಿಲ್ಲ ಎಂದು ಯಾವ ಅಂಕಿ ಅಂಶಗಳ ಆಧಾರದ ಮೇಲೆ ನೀವು ಹೇಳುತ್ತಿದ್ದೀರಿ? ಕಳೆದ 12 ವರ್ಷಗಳ ಮೋದಿ ಅವರ ಆಡಳಿತದಲ್ಲಿ ತಲೆಯೆತ್ತಿದ ಕೈಗಾರಿಕೆಗಳು, ಸೃಷ್ಟಿಯಾದ ಉದ್ಯೋಗಗಳು, ಸ್ವಾವಲಂಬಿ ಭಾರತವನ್ನಾಗಿಸುವ ನಿಟ್ಟಿನ ವಿಕಸಿತ ಭಾರತದ ಸಂಕಲ್ಪ ಸಾಕಾರಗೊಳ್ಳುತ್ತಿದೆ. ವಿಶ್ವ ಮುಂಚೂಣಿಯಲ್ಲಿ ಭಾರತ ಇಂದು ಉದ್ಯಮಶೀಲ ಹಾಗೂ ಆರ್ಥಿಕ ಮುಂಚೂಣಿಯ ನಾಲ್ಕನೇ ಸ್ಥಾನ ಪಡೆದು ಅಗ್ರ ಪಟ್ಟಿಯಲ್ಲಿದೆ. ವಿಶ್ವ ನಾಯಕತ್ವ ವಹಿಸುವ ಸಾಮರ್ಥ್ಯ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಭಾರತಕ್ಕಿದೆ ಎಂದು ಜಗತ್ತಿನ ಅನೇಕ ರಾಷ್ಟ್ರಗಳು ಮೋದಿ ಅವರಿಗೆ ರತ್ನಗಂಬಳಿ ಹಾಸಿ ಪ್ರಶಂಸಿಸುತ್ತಿವೆ ಎಂದು ಹೇಳಿದ್ದಾರೆ.

ಭಾರತ ಹತ್ತು-ಹಲವು ಸವಾಲುಗಳನ್ನು ಮೆಟ್ಟಿ ಜಾಗತಿಕ ಮುಂಚೂಣಿಯತ್ತ ದಾಪುಗಾಲನ್ನಿಡುತ್ತಿರುವುದನ್ನು ಸಹಿಸಲಾರದ ವಿಕೃತ ಮನೋಭಾವ ನಿಮ್ಮ ಕಾಂಗ್ರೆಸ್ ಪಕ್ಷದ್ದು, ಅದರ ಸಾರಥ್ಯ ವಹಿಸಿರುವ ನಿಮಗೆ ಅದನ್ನು ಪ್ರತಿನಿಧಿಸಿ ಮಾತನಾಡುವ ಅನಿವಾರ್ಯತೆ ಇದೆ. ಆದರೆ ನಿಮ್ಮ ಹಿರಿತನ, ಘನತೆ, ಅನುಭವಗಳನ್ನು ಬಾಲಿಶ ಹಾಗೂ ಅಸೂಯೆ ಹೇಳಿಕೆಗಳು ಕುಗ್ಗಿಸದಿರಲಿ. ಭಾರತದಲ್ಲಿ 2300 ರೂ.ಗೆ ಲಭ್ಯವಾಗುವ ಔಷಧ ಅಮೆರಿಕದಲ್ಲಿ 95,000 ರೂ. ಭರಿಸಬೇಕಾಗುತ್ತದೆ ಎಂಬ ವಾಸ್ತವ ಇತ್ತೀಚೆಗೆ ವರದಿಯಾಗಿದೆ. ಈ ಕಾರಣಕ್ಕಾಗಿ ವಿದೇಶಗಳಿಂದಲೂ ಬಂದು ಭಾರತದಲ್ಲಿ ಚಿಕಿತ್ಸೆ ಪಡೆಯುತ್ತಿರುವವರ ಉದಾಹರಣೆಗಳು ಸಾಕಷ್ಟಿವೆ ಎಂದು ವಿಜಯೇಂದ್ರ ವಿವರಿಸಿದ್ದಾರೆ.

ಭಾರತದ ಪ್ರತಿ ಪ್ರಜೆಯೂ ಆತ್ಮಗೌರವದಿಂದ ಹಾಗೂ ಸ್ವಾಭಿಮಾನದಿಂದ ಆರೋಗ್ಯ, ಶಿಕ್ಷಣ, ಉದ್ಯೋಗದ ಹಕ್ಕನ್ನು ಪಡೆಯುವ ವ್ಯವಸ್ಥೆ ಇಂದು ದೇಶದ ಮೂಲೆ ಮೂಲೆಗೂ ವಿಸ್ತರಿಸಿದೆ ಎಂದರು.

ವೈದ್ಯೆ ವಿರುದ್ಧ ಎಫ್‌ಐಆರ್‌ಗೆ ತಡೆಗೆ ಹೈ ನಕಾರ

• **ಬೆಂಗಳೂರು:** ಕೆಎಂಎಫ್‌ನ ನಂದಿನಿ ಹಾಲು ಹಾಗೂ ಅದರ ಉತ್ಪನ್ನಗಳಸೇವನೆಗೆಯೋಗ್ಯವಲ್ಲಎಂದುವಿಡಿಯೊಮಾಡಿಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡಿದ್ದ ಆರೋಪ ಎದುರಿಸುತ್ತಿರುವ ನಗರದ ವೈದ್ಯೆ ಡಾ.ಶರಣ್ಯಾ ಪದ್ಮ ವಿರುದ್ಧ ದಾಖಲಾಗಿರುವ ಎಫ್ ಐಆರ್‌ಗೆ ತಡೆ ನೀಡಲು ಕರ್ನಾಟಕ ಹೈಕೋರ್ಟ್ ನಿರಾಕರಿಸಿದೆ.

ಮಲ್ಲೇಶ್ವರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ಹಾಗೂ 32ನೇ ಎಸಿಜೆಎಂ ನ್ಯಾಯಾಲಯದಲ್ಲಿ ನಡೆಯುತ್ತಿರುವ ವಿಚಾರಣಾ ಪ್ರಕ್ರಿಯೆ ರದ್ದು ಕೋರಿ ಮೂಲತಃ ಕೋಲಾರ ಜಿಲ್ಲೆಯ ಮಾಲೂರಿನ ಡಾ.ಶರಣ್ಯಾ ಪದ್ಮ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು.ಅರ್ಜಿದಾರರ ವಿರುದ್ಧ ಎಫ್‌ಐಆರ್‌ಗೆ ತಡೆ ನೀಡಲು ನಿರಾಕರಿಸಿತು.

ಶಿಂಧೆ ಗುಂಪಿಗೆ ಸೇರ್ಪಡೆಯಾದ ಉದ್ಧವ್ ಬಣದ 6 ಸಂಸದರು

ಪುಟ ೧ ➡ ಆ ಸಭೆಗೆ ಕೇವಲ 3 ಸಂಸದರು ಮಾತ್ರ ಹಾಜರಾಗಿದ್ದರು. ಪಕ್ಷಾಂತರಗೊಂಡ ಸಂಸದರನ್ನು ಶಿಂಧೆ ಧುರಂಧರ್ ಎಂದು ಕರೆದಿದ್ದಾರೆ.

ಪಕ್ಷ ಬದಲಿಸಿದ ಸಂಸದರು: ಪಕ್ಷಾಂತರಗೊಂಡ ಲೋಕಸಭಾ ಸದಸ್ಯರೆಂದರೆ ಯವತ್ಮಾಲ್‌ನ ಸಂಜಯ್ ದೇಶ್‌ಮುಖ್, ಪರ್ಭಾನಿಯ ಸಂಜಯ್ ಜಾಧವ್, ಮುಂಬೈ ಈಶಾನ್ಯದ ಸಂಜಯ್ ದಿನಾ ಪಾಟೀಲ್, ಹಿಂಗೋಲಿಯ ನಾಗೇಶ್ ಪಾಟೀಲ್-ಅಷ್ಟಿಕರ್, ಧಾರಾಶಿವ್‌ನ ಓಂಪ್ರಕಾಶ್ ರಾಜೇನಿಂಬಾಳ್ಕರ್ ಮತ್ತು ಶಿರಡಿಯ ಭೌಸಾಹೇಬ್ ವಾಕಚೌರೆ.

ರಾಜಕೀಯ ಪರಿಣಾಮ: ಈ ಪಕ್ಷಾಂತರದಿಂದಾಗಿ ಶಿವಸೇನೆ ಸಂಸದರ ಸಂಖ್ಯೆಯ ಆಧಾರದ ಮೇಲೆ ಮಹಾರಾಷ್ಟ್ರದಲ್ಲಿ 2ನೇ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಈ 6 ಸಂಸದರು 2024ರ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿ ಮತ್ತು ಶಿವಸೇನೆ ಅಭ್ಯರ್ಥಿಗಳ ವಿರುದ್ಧ ಜಯಗಳಿಸಿದ್ದರು. ಆ ಚುನಾವಣೆಯಲ್ಲಿ ಶಿವಸೇನೆ (ಯುಬಿಟಿ) 9 ಸ್ಥಾನಗಳನ್ನು ಗೆದ್ದಿತ್ತು.

ದಿವಂಗತ ಬಾಳಾ ಸಾಹೇಬ್ ಠಾಕ್ರೆ ಬೋಧನೆಗಳನ್ನು ಅನುಸರಿಸುವ ಮೂಲ ಶಿವಸೇನೆಗೆ ಈ ಸದಸ್ಯರು ಸೇರಿದ್ದಾರೆ ಎಂದು ಶಿಂಧೆ ತಿಳಿಸಿದ್ದಾರೆ. ಜೂನ್ 2022ರಲ್ಲಿ ಮಹಾ ವಿಕಾಸ್ ಅಘಾಡಿ ಸರ್ಕಾರ ಪತನಗೊಳಿಸಿದ ತಮ್ಮ ಆರಂಭಿಕ ಬಂಡಾಯದ ನಂತರ, ಈ ಬೆಳವಣಿಗೆಯನ್ನು ಆಪರೇಷನ್ ಟೈಗರ್ ಮತ್ತು ಶಿವಸೇನೆ ವಿಸ್ತರಣೆಯ 2ನೇ ಹಂತ ಎಂದು ಅವರು ಬಣ್ಣಿಸಿದ್ದಾರೆ.

ನೀಟ್ ವಂಚಿತರಾದವರಿಗೆ ಕೈ ನೆರವು

ಪುಟ ೧ ➡ ಕಾಂಗ್ರೆಸ್ ಪಕ್ಷದ ಸಂಕಲ್ಪ ಸಮಾವೇಶ ಕಾರ್ಯಕ್ರಮದಲ್ಲಿ ಟ್ರಾಫಿಕ್ ಜಾಮ್ ಆಗಿದ್ದು ನಿಜ. ಸಾರ್ವಜನಿಕರಿಗೆ ತೊಂದರೆ ಆಗಬಾರದು ಎಂದು ನಾವುಭಾನುವಾರಕಾರ್ಯಕ್ರಮಹಮ್ಮಿಕೊಂಡಿದ್ದೆವು. ಸಣ್ಣ ಪುಟ್ಟ ತೊಂದರೆಗಳು ಆಗಿವೆ. ಅವುಗಳನ್ನು ನಾವು ಅಲ್ಲಗಳೆಯುವುದಿಲ್ಲ. ಕಾರ್ಯಕ್ರಮದಿಂದ ತೊಂದರೆ ಅನುಭವಿಸಿರುವ ವಿದ್ಯಾರ್ಥಿಗಳ ಬಗ್ಗೆ ಕೇಳಿದಾಗ, ನಮ್ಮ ತಂಡ ಅವರನ್ನು ಭೇಟಿ ಮಾಡುವ ಪ್ರಯತ್ನ ಮಾಡಲಿದೆ. ಅವರಿಗೆ ಆಗಿರುವ ನಷ್ಟ ಭರಿಸಲು ಸಿದ್ಧರಿದ್ದೇವೆ ಎಂದು ತಿಳಿಸಿದರು.

ಮೈಸೂರಿನಲ್ಲಿ 1400 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಅಲ್ಲಿ ಯಾವ ಕಾರ್ಯಕ್ರಮವಿತ್ತು. ಯಾದಗಿರಿಯಲ್ಲಿ 286, ದಕ್ಷಿಣ ಕನ್ನಡ ಸೇರಿದಂತೆ ಅನೇಕ ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳು ಗೈರಾಗಿದ್ದಾರೆ. ಇಲ್ಲೆಲ್ಲಾ ಯಾವ ಕಾರ್ಯಕ್ರಮ ನಡೆದಿತ್ತು? ಕೆಲವು ವಿದ್ಯಾರ್ಥಿಗಳು ಮಾಧ್ಯಮಗಳಿಗೆ ನೀಡಿರುವ ಸಂದರ್ಶನದಲ್ಲಿ ಪರೀಕ್ಷೆ ಬರೆದಿರುವುದಾಗಿಯೂ ಹೇಳಿದ್ದಾರೆ ಎಂದು ಹೇಳಿದರು.

ವಿದ್ಯಾರ್ಥಿಗಳ ಭವಿಷ್ಯಕ್ಕಿಂತ ರಾಜಕೀಯಕ್ಕೆ ಹೆಚ್ಚು ಆದ್ಯತೆ

ಪುಟ ೧ ➡ ಇದು ಕಾಂಗ್ರೆಸ್‌ಗೆ ವಿದ್ಯಾರ್ಥಿಗಳ ಹಿತಾಸಕ್ತಿಗಳಿಗಿಂತ ತನ್ನ ರಾಜಕಾರಣವೇ ಹೆಚ್ಚು ಎಂಬುದನ್ನು ಸ್ಪಷ್ಟಪಡಿಸುತ್ತದೆ ಎಂದರು. ಅವರಿಗೆ ಯುವಕರ ಬಗ್ಗೆ ನಿಜವಾದ ಕಾಳಜಿಯಿಲ್ಲ, ಶೈಕ್ಷಣಿಕ ಸಮಸ್ಯೆಗಳನ್ನು ರಾಜಕೀಯ ಪ್ರದರ್ಶನವನ್ನಾಗಿ ಮಾಡುವುದು ಅವರ ಏಕೈಕ ಆಸಕ್ತಿಯಾಗಿದೆ ಎಂದು ಕಿಡಿಕಾರಿದರು.

ಮೂವರ ಆತ್ಮಹತ್ಯೆ: ದೂರು

• **ಮೈಸೂರು:** ದಾಂಪತ್ಯ ಜೀವನಕ್ಕೆ ಕಾಲಿಡಬೇಕಿದ್ದ ಯುವತಿ ಮತ್ತು ಹೆತ್ತವರು ಆತ್ಮಹತ್ಯೆಗೆ ಶರಣಾಗಿರುವ ಘೋರ ಘಟನೆ ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲೂಕಿನ ಕೆಂಪಯ್ಯನಹುಂಡಿ ಗ್ರಾಮದಲ್ಲಿ ಸೋಮವಾರ ನಡೆದಿದೆ.

ಡೆತ್‌ನೋಟ್ ಬರೆದಿಟ್ಟು ಸಾವಿಗೆ ಶರಣಾಗಿರುವ ಯುವತಿಯನ್ನು ರಕ್ಷಿತಾ(21) ಹಾಗೂ ಆಕೆಯ ತಂದೆ ಶಿವಣ್ಣ(54), ತಾಯಿ ನಾಗರತ್ನ(44) ಎಂದು ಗುರುತಿಸಲಾಗಿದೆ. ಈ ಮೂವರ ಸಾವಿಗೂ ಉಲ್ಲಾಸ್ ಗೌಡ ಕಾರಣನೆಂದು ಡೆತ್ ನೋಟ್‌ನಲ್ಲಿ ಬರೆದಿಟ್ಟಿದ್ದಾರೆ. ಕೆಂಪಯ್ಯನಹುಂಡಿ ಗ್ರಾಮದ ಯುವಕ ಉಲ್ಲಾಸ್ ಗೌಡ ಎಂಬಾತ ಮಾನಸಿಕವಾಗಿ ಈ ಕುಟುಂಬಕ್ಕೆ ಕಿರುಕುಳ ನೀಡುತ್ತಿದ್ದ ಆರೋಪಿ. ಎರಡು ದಿನಗಳಲ್ಲಿ ಯುವತಿಯ ಮದುವೆಗೆ ಸಕಲ ಸಿದ್ಧತೆ ನಡೆದಿತ್ತು. ಈ ನಡುವೆ ವಧು ರಕ್ಷಿತಾಳನ್ನು ಗ್ರಾಮದ ಉಲ್ಲಾಸ್ ಗೌಡ ಪ್ರೀತಿಸಿದ್ದು, ಮದುವೆ ಆಗುತ್ತೇನೆ ಎಂದು ಕುಟುಂಬದವರಿಗೆ ಹೇಳಿದ್ದ. ಆದರೆ ಆತನ ಪ್ರಸ್ತಾಪವನ್ನು ರಕ್ಷಿತಾ, ಮತ್ತು ಆಕೆಯ ಅಪ್ಪ -ಅಮ್ಮ ವಿರೋಧಿಸಿದ್ದರು. ಅಲ್ಲದೆ, ರಕ್ಷಿತಾಳಿಗೆ ಬೇರೆ ಯುವಕನೊಂದಿಗೆ ಮದುವೆ ಮಾಡಲು ನಿಶ್ಚಿತಾರ್ಥ ಸಹ ಮಾಡಿದ್ದರು. ಜೂನ್ 24ರಂದು ಮದುವೆ ನಡೆಸಲು ನಿಶ್ಚಯಿಸಿ, ಸಕಲ ತಯಾರಿ ಮಾಡಿಕೊಂಡಿದ್ದರು.

ವರನಿಗೆ ಮೆಸ್ಸೇಜ್ ಮಾಡಿದ್ದ ಆರೋಪಿ: ಈ ಮಧ್ಯೆ ಉಲ್ಲಾಸ್‌ಗೌಡ ಮದುವೆ ನಿಶ್ಚಯವಾಗಿದ್ದ ಯುವತಿ ರಕ್ಷಿತಾಳಿಗೆ ಯುವಕ ಕಿರುಕುಳ ನೀಡುತ್ತಿದ್ದ. ರಕ್ಷಿತಾ ಜತೆ ನಿಶ್ಚಿತಾರ್ಥ ಮಾಡಿಕೊಂಡಿದ್ದ ಯುವಕನಿಗೆ ಮೆಸೇಜ್ ಮಾಡಿದ್ದ, ಅಲ್ಲದೆ ಈ ಮದುವೆ ನಿಲ್ಲಿಸುವುದಾಗಿ ಬೆದರಿಕೆ ಹಾಕಿದ್ದ ಎನ್ನಲಾಗಿದೆ.

ಮರು ಸಿಂಚನ ಮತ್ತೆ ಚುರುಕು

ಪುಟ ೧ ➡ ಮರು ಸಿಂಚನ ಕಾರ್ಯಕ್ರಮವನ್ನು ಮೊದಲ ಬಾರಿಗೆ 2023-24ನೇ ಶೈಕ್ಷಣಿಕ ವರ್ಷದಲ್ಲಿ ಪರಿಚಯಿಸಲಾಗಿತ್ತು. ನಂತರ 2025-26ನೇ ಸಾಲಿನಲ್ಲೂ ಯೋಜನೆ ವಿಸ್ತರಿಸಿ ಅನುಷ್ಠಾನಗೊಳಿಸಲಾಗಿತ್ತು. ಆದರೆ ಜಾತಿಗಣತಿ ಕಾರ್ಯ, ಶೈಕ್ಷಣಿಕ ಕ್ಯಾಲೆಂಡರ್‌ನಲ್ಲಿ ವ್ಯತ್ಯಯ, ದಸರಾ ರಜೆ ವಿಸ್ತರಣೆ ಸೇರಿದಂತೆ ವಿವಿಧ ಕಾರಣಗಳಿಂದ ಯೋಜನೆಯ ಅನುಷ್ಠಾನ ನಿರೀಕ್ಷಿತ ಮಟ್ಟದಲ್ಲಿ ಯಶಸ್ವಿಯಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಕಾರ್ಯಕ್ರಮವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಇಲಾಖೆ ತೀರ್ಮಾನಿಸಿದ್ದು, ಪೂರ್ವ ಸಿದ್ಧತೆಗಳನ್ನು ಪೂರ್ಣಗೊಳಿಸಿದೆ.

27 ಶೈಕ್ಷಣಿಕ ಜಿಲ್ಲೆಗಳಲ್ಲಿ ಅನುಷ್ಠಾನ: ಎಸ್‌ಎಸ್ ಎಲ್‌ಸಿ ಪರೀಕ್ಷೆಯಲ್ಲಿ ನಿರಂತರವಾಗಿ ಉತ್ತಮ ಫಲಿತಾಂಶ ದಾಖಲಿಸುತ್ತಿರುವ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಶಿರಸಿ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಹಾಗೂ ಕೊಡಗು ಶೈಕ್ಷಣಿಕ ಜಿಲ್ಲೆಗಳನ್ನು ಹೊರತುಪಡಿಸಿ, ಉಳಿದ 27 ಶೈಕ್ಷಣಿಕ ಜಿಲ್ಲೆಗಳಲ್ಲಿ ಮರು ಸಿಂಚನ ಕಾರ್ಯಕ್ರಮವನ್ನು ಜಾರಿಗೊಳಿಸಲಾಗುತ್ತಿದೆ. ನಿಗದಿತ ಕಲಿಕಾ ಫಲಿತಾಂಶ ಸಾಧಿಸಲು ವಿಫಲವಾದ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳ ವಿದ್ಯಾರ್ಥಿಗಳನ್ನು ಗುರುತಿಸಿ, ಅವರಿಗೆ ವಿಷಯವಾರು ಹೆಚ್ಚುವರಿ ಬೋಧನೆ ನೀಡುವ ಮೂಲಕ ಕಲಿಕಾ ಅಂತರವನ್ನು ಕಡಿಮೆ ಮಾಡಲು ಇಲಾಖೆ ಯೋಜಿಸಿದೆ.

3.83 ಲಕ್ಷ ವಿದ್ಯಾರ್ಥಿಗೆ ಲಾಭ

ಪುಟ ೧ ➡ **ಪ್ರತಿ ವಿಷಯಕ್ಕೆ ಕನಿಷ್ಠ 50 ಗಂಟೆಗಳ ಹೆಚ್ಚುವರಿ ಬೋಧನೆ ನಡೆಸಲಾಗುವುದು. ಮರು ಸಿಂಚನ ಯೋಜನೆ ಅಡಿಯಲ್ಲಿ ಒಟ್ಟು 3,83,119 ವಿದ್ಯಾರ್ಥಿಗಳು ಪ್ರಯೋಜನ ಪಡೆಯಲಿದ್ದು, ಇವರಲ್ಲಿ 6ನೇ ತರಗತಿಯ 95,513 ವಿದ್ಯಾರ್ಥಿಗಳು, 7ನೇ ತರಗತಿಯ 95,894 ವಿದ್ಯಾರ್ಥಿಗಳು, 8ನೇ ತರಗತಿಯ 76,300 ವಿದ್ಯಾರ್ಥಿಗಳು, 9ನೇ ತರಗತಿಯ 61,229 ವಿದ್ಯಾರ್ಥಿಗಳು ಹಾಗೂ 10ನೇ ತರಗತಿಯ 54,183 ವಿದ್ಯಾರ್ಥಿಗಳು ಹೀಗೆ ಐದು ತರಗತಿಗಳ ವಿದ್ಯಾರ್ಥಿಗಳಿಗೆ ವಿಷಯವಾರು ಕಲಿಕಾ ಬಲವರ್ಧನೆ ನೀಡಲಾಗುತ್ತದೆ.**

20,614 ಶಾಲೆಗಳಲ್ಲಿ ಮರು ಸಿಂಚನ: ರಾಜ್ಯದ 155 ಶೈಕ್ಷಣಿಕ ಬ್ಲಾಕ್‌ಗಳ ವ್ಯಾಪ್ತಿಯ 16,536 ಸರ್ಕಾರಿ ಪ್ರಾಥಮಿಕ ಶಾಲೆಗಳು ಮತ್ತು 4,078 ಸರ್ಕಾರಿ ಪ್ರೌಢಶಾಲೆಗಳು ಸೇರಿದಂತೆ ಒಟ್ಟು 20,614 ಶಾಲೆಗಳಲ್ಲಿ ಮರು ಸಿಂಚನ ಕಾರ್ಯಕ್ರಮ ಅನುಷ್ಠಾನಗೊಳ್ಳಲಿದೆ. ಅಭ್ಯಾಸ ಪುಸ್ತಕಗಳ ಮುದ್ರಣ ಮತ್ತು ವಿತರಣೆಗೆ 6.21 ಕೋಟಿ ರೂ.ಗೂ ಅಧಿಕ ಅನುದಾನವನ್ನು ರಾಜ್ಯ ಸರ್ಕಾರ ಮೀಸಲಿಟ್ಟಿದೆ.

ಕಸ್ತೂರಿ ರಂಗನ್ ವರದಿ ಜಾರಿಗೆ ಕೇಂದ್ರದ ಸಿದ್ಧತೆ

ಪುಟ ೧ ➡ **ಹೆಚ್ಚಲಿದೆ ನಿರ್ಬಂಧ:** ಪರಿಸರ ಸೂಕ್ಷ್ಮ ಪ್ರದೇಶವೆಂದು ಘೋಷಿಸಿದ ಬಳಿಕ ಹೊಸ ಗಣಿಗಾರಿಕೆ, ಕಲ್ಲು ಗಣಿಗಾರಿಕೆ ಮತ್ತು ಮರಳು ಗಣಿಗಾರಿಕೆ ಯೋಜನೆಗಳಿಗೆ ಅವಕಾಶ ಇರುವುದಿಲ್ಲ. ಹೊಸ ಉಷ್ಣ ವಿದ್ಯುತ್ ಸ್ಥಾವರಗಳು, ಅತ್ಯಧಿಕ ಮಾಲಿನ್ಯ ಉಂಟುಮಾಡುವ ಕೈಗಾರಿಕೆಗಳು ಹಾಗೂ ಬೃಹತ್ ಕಟ್ಟಡ ಮತ್ತು ಪಟ್ಟಣ ನಿರ್ಮಾಣ ಯೋಜನೆಗಳಿಗೂ ನಿಷೇಧ ಅಥವಾ ಕಠಿಣ ನಿರ್ಬಂಧ ಎದುರಾಗಲಿದೆ. 20 ಸಾವಿರ ಚದರ ಮೀಟರ್ ಅಥವಾ ಅದಕ್ಕಿಂತ ಹೆಚ್ಚಿನ ನಿರ್ಮಿತ ಪ್ರದೇಶ ಹೊಂದಿರುವ ಹೊಸ ಕಟ್ಟಡ ಯೋಜನೆಗಳು ಮತ್ತು ವಿಸ್ತರಣಾ ಕಾಮಗಾರಿಗಳ ಮೇಲೂ ನಿಯಂತ್ರಣ ವಿಧಿಸುವ ಪ್ರಸ್ತಾಪವಿದೆ. ಅಂತಿಮ ಅಧಿಸೂಚನೆಯು ಪರಿಸರ ಸಂರಕ್ಷಣಾ ಕಾಯ್ದೆಯಲ್ಲಿ ಪಶ್ಚಿಮಘಟ್ಟದ ರಕ್ಷಣೆಗೆ ಹೆಚ್ಚಿನ ಕಾನೂನು ಬಲ ಒದಗಿಸಲಿದೆ.

ಮಮತಾಗೆ ಕೊಕ್


ಪುಟ ೧ ➡ ಸೋಮವಾರ ಸಂಜೆ 4 ಗಂಟೆ ಸುಮಾರಿಗೆ ಅಖಿಲ ಭಾರತ ತೃಣಮೂಲ ಕಾಂಗ್ರೆಸ್‌ನ ವಿಶೇಷ ಅಧಿವೇಶನ ಹೆಸರಿನಲ್ಲಿ ಸಭೆ ನಡೆಯಿತು. ಕೋಲ್ಕತ್ತಾ ಮಹಾನಗರ ಪಾಲಿಕೆ ಸೇರಿದಂತೆ ಬಹರಾಂಪುರ, ಉತ್ತರಪಾರಾ, ಶ್ರೀರಾಮಪುರ ಮತ್ತು ಡಮ್ಡಮ್ ನಗರ ಸ್ಥಳೀಯ ಸಂಸ್ಥೆಗಳ ಸುಮಾರು 40 ಸದಸ್ಯರು ಸಭೆಯಲ್ಲಿ ಭಾಗವಹಿಸಿದ್ದರು.

ಇದು ಅಖಿಲ ಭಾರತ ತೃಣಮೂಲ ಕಾಂಗ್ರೆಸ್‌ನ ವಿಶೇಷ ಅಧಿವೇಶನ. ಸಭೆಯಲ್ಲಿ ಹತ್ತು ಸದಸ್ಯರ ಸಮಿತಿ ರಚಿಸಲಾಗಿದೆ ಎಂದು ಮಾಜಿ ತೃಣಮೂಲ ಶಾಸಕ ದೇಬಾಶಿಶ್ ಕುಮಾರ್ ಸುದ್ದಿಗಾರರಿಗೆ ತಿಳಿಸಿದರು.

ರಿತಬ್ರತ ಬ್ಯಾನರ್ಜಿ ಅವರೊಂದಿಗೆ ಸಂದೀಪನ್ ಸಾಹಾ ಹಾಗೂ ಮಮತಾ ಬ್ಯಾನರ್ಜಿ ಅವರ ಆಪ್ತರಾಗಿದ್ದ ಕೋಲ್ಕತಾದ ಮಾಜಿ ಮೇಯರ್ ಫಿರ್ಹಾದ್ ಹಕೀಂ ಸೇರಿದಂತೆ ಹಲವು ಮುಖಂಡರು ಸಭೆಯಲ್ಲಿ ಉಪಸ್ಥಿತರಿದ್ದರು ಎನ್ನಲಾಗಿದೆ. ಅರೂಪ್ ರಾಯ್ ಅವರನ್ನು ಪಕ್ಷದ ಅಧ್ಯಕ್ಷರನ್ನಾಗಿ ನೇಮಿಸಲಾಗಿದ್ದು, ಹತ್ತು ಸದಸ್ಯರ ಸಮಿತಿಯ ಇತರರಿಗೆ ವಿವಿಧ ಜವಾಬ್ದಾರಿಗಳನ್ನು ನೀಡಲಾಗಿದೆ ಎಂದು ಸಭೆಯಲ್ಲಿ ಪಾಲ್ಗೊಂಡಿದ್ದ ಹಿರಿಯ ಶಾಸಕರೊಬ್ಬರು ತಿಳಿಸಿದ್ದಾರೆ. ಹಳೆಯ ತೃಣಮೂಲ ಅಥವಾ ಹೊಸ ತೃಣಮೂಲ ಎಂಬುದಿಲ್ಲ, ನಾವೇ ತೃಣಮೂಲ ಕಾಂಗ್ರೆಸ್ ಎಂದು ಅವರು ಪ್ರತಿಪಾದಿಸಿದ್ದಾರೆ. ಸಭೆಯಲ್ಲಿ ಮಮತಾ ಬಾನರ್ಜಿ ಅವರನ್ನು ಅಧ್ಯಕ್ಷ ಸ್ಥಾನದಿಂದ ತೆರವುಗೊಳಿಸುವ ನಿರ್ಣಯವನ್ನು ಅಂಗೀಕರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಅಗ್ನಿ ಅನಾಹುತಕ್ಕೆ 15 ಜನ ಬಲಿ

ಪುಟ ೧ ➡ ಪಕ್ಕದ ಕಟ್ಟಡದ ಮೂಲಕ ಗೋಡೆ ಒಡೆದು ಒಳ ಪ್ರವೇಶಿಸಿ ಸಿಲುಕಿದ್ದವರನ್ನು ರಕ್ಷಿಸಲು ಕಾರ್ಯಾಚರಣೆ ನಡೆಸಲಾಯಿತು. ಅವಘಡದ ಬಳಿಕ ಒಟ್ಟು 22 ಮಂದಿಯನ್ನು ಲಖನೌನ ಕಿಂಗ್ ಜಾರ್ಜ್ ವೈದ್ಯಕೀಯ ವಿಶ್ವವಿದ್ಯಾಲಯದ ಟ್ರಾಮಾ ಕೇಂದ್ರಕ್ಕೆ ದಾಖಲಿಸಲಾಯಿತು. ಅವರಲ್ಲಿ 15 ಮಂದಿಯನ್ನು ವೈದ್ಯರು ಮೃತರೆಂದು ಘೋಷಿಸಿದ್ದು, ಐವರು ಚಿಕಿತ್ಸೆ ಪಡೆಯುತ್ತಿದ್ದಾರೆ. ಕಟ್ಟಡದಿಂದ ಜಿಗಿದ ಪರಿಣಾಮ ಇಬ್ಬರು ಮಕ್ಕಳಿಗೆ ಗಾಯಗಳಾಗಿದ್ದು, ಚಿಕಿತ್ಸೆ ಮುಂದುವರಿದಿದೆ.



ತನಿಖೆಗೆ ಆದೇಶ: ಉಪ ಮುಖ್ಯಮಂತ್ರಿ ಬ್ರಜೇಶ್ ಪಾಠಕ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಘಟನೆಯ ಕುರಿತು ಉನ್ನತ ಮಟ್ಟದ ತನಿಖೆಗೆ ಆದೇಶಿಸಲಾಗಿದೆ ಎಂದು ತಿಳಿಸಿದ್ದಾರೆ. ಬೆಂಕಿ ಕಾಣಿಸಿಕೊಳ್ಳಲು ನಿಖರ ಕಾರಣ ಇನ್ನೂ ತಿಳಿದುಬಂದಿಲ್ಲ. ಅಗ್ನಿ ಸುರಕ್ಷತಾ ನಿಯಮಗಳ ಉಲ್ಲಂಘನೆ ನಡೆದಿದೆಯೇ ಎಂಬುದನ್ನೂ ತನಿಖೆ ಮಾಡಲಾಗುತ್ತಿದೆ.

ಸಂತಾಪ, ಪರಿಹಾರ ಘೋಷಣೆ

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅಲಿಗಢ್ ಕಾರ್ಯಕ್ರಮ ಮೊಟಕುಗೊಳಿಸಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಪ್ರಧಾನಿ , ರಾಷ್ಟ್ರಪತಿ , ಉಪರಾಷ್ಟ್ರಪತಿ ಸೇರಿದಂತೆ ಹಲವು ನಾಯಕರು ಸಂತಾಪ ಸೂಚಿಸಿದ್ದಾರೆ. ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ ಮೃತರ ಕುಟುಂಬಗಳಿಗೆ ತಲಾ 2 ಲಕ್ಷ ರೂ. ಹಾಗೂ ಗಾಯಾಳುಗಳಿಗೆ 50 ಸಾವಿರ ರೂ. ಪರಿಹಾರ ಘೋಷಿಸಲಾಗಿದೆ.

ಸರ್ಕಾರದ ಅಭಿಪ್ರಾಯ ಬಂದ ಬಳಿಕ ನಿರ್ಧಾರ: ಅಭಯ ಪಾಟೀಲ

ಬೆಳಗಾವಿ ಪಾಲಿಕೆಯಲ್ಲಿ ಕರ್ನಾಟಕ ಪರ ಗೊತ್ತುವಳಿ



ಬೆಳಗಾವಿ: ಇಲ್ಲಿನ ಮಹಾನಗರ ಪಾಲಿಕೆಯಲ್ಲಿ ಕರ್ನಾಟಕಪರವಾದಗೊತ್ತುವಳಿಯನ್ನುಅಂಗೀಕರಿಸುವ ಸಂಬಂಧ ರಾಜ್ಯ ಸರ್ಕಾರದ ಅಭಿಪ್ರಾಯ ಕೋರಿ ಪತ್ರ ಬರೆಯಲಾಗಿದೆ. ಸರ್ಕಾರದಿಂದ ಉತ್ತರ ಬಂದ ಕೂಡಲೇ ಮಹಾಪೌರರು ಹಾಗೂ ಉಪಮಹಾಪೌರರ ರೊಂದಿಗೆ ಚರ್ಚಿಸಿ ಗೊತ್ತುವಳಿಯ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದು ಬೆಳಗಾವಿ ದಕ್ಷಿಣ ಕ್ಷೇತ್ರದ ಶಾಸಕ ಅಭಯ ಪಾಟೀಲ ಅವರು ಸೋಮವಾರ ಕನ್ನಡ ಸಂಘಟನೆಗಳ ಮುಖಂಡರಿಗೆ ಭರವಸೆ ನೀಡಿದರು.

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ತಮ್ಮನ್ನು ಭೇಟಿಯಾದ ಕನ್ನಡ ಸಂಘಟನೆಗಳ ನಿಯೋಗದೊಂದಿಗೆ ಮಾತನಾಡಿದ ಅವರು, ತಮಗೂ ಕನ್ನಡ ನಾಡು-ನುಡಿಯ ಬಗ್ಗೆ ಅಪಾರ ಅಭಿಮಾನವಿದ್ದು, ಗೊತ್ತುವಳಿ ಅಂಗೀಕಾರದ ಸಂಬಂಧ ಇದೇ ಮೊದಲ ಬಾರಿಗೆ ಕನ್ನಡ ಮುಖಂಡರು ತಮ್ಮನ್ನು ಭೇಟಿಯಾಗುತ್ತಿರುವುದಾಗಿ ತಿಳಿಸಿದರು. ಗೊತ್ತುವಳಿ ಅಂಗೀಕಾರದ ವಿಷಯವಾಗಿ ತಾವು ಸಹ ಕೆಲವು ಕಾನೂನು ಪರಿಣತರೊಂದಿಗೆ ಚರ್ಚೆ ನಡೆಸಿರುವುದಾಗಿ ಅಭಯ ಪಾಟೀಲ ಅವರು ನಿಯೋಗಕ್ಕೆ ಮಾಹಿತಿ ನೀಡಿದರು.

ಈ ವೇಳೆ ನಿಯೋಗದ ಸದಸ್ಯರು, ಮಹಾಪೌರರು ಹಾಗೂ ಉಪಮಹಾಪೌರರು ಕಳೆದ ಮೂರು ತಿಂಗಳಿಂದ ಗೊತ್ತುವಳಿಯನ್ನು ಪಾಲಿಕೆಯಲ್ಲಿ ಅಂಗೀಕರಿಸುವುದಾಗಿ ಭರವಸೆ ನೀಡುತ್ತಲೇ ಬಂದಿದ್ದರೂ ಇದುವರೆಗೆ ಯಾವುದೇ ನಿರ್ಧಾರ ಕೈಗೊಂಡಿಲ್ಲ. ಆದ್ದರಿಂದ ಈ ವಿಷಯದಲ್ಲಿ ಮಧ್ಯಪ್ರವೇಶಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಿ ಶಾಸಕರನ್ನು ಒತ್ತಾಯಿಸಿದರು.

ನಿಯೋಗದಲ್ಲಿ ಗಡಿನಾಡು ಕನ್ನಡಿಗರ ಸೇನೆಯ ರಾಜ್ಯಾಧ್ಯಕ್ಷ ಬಲರಾಮ ಮಾನೆಚಿಟ್ಟಿ, ಕರ್ನಾಟಕ ಸೇನೆಯ ಯುವ ಘಟಕದ ರಾಜ್ಯಾಧ್ಯಕ್ಷ ಮಹೇಶ ಸಿಗಿಹಳ್ಳಿ, ಕನ್ನಡ ಮುಖಂಡರಾದ ಬಾಳಪ್ಪ ಗುಡಗೇನಟ್ಟಿ, ಮಲ್ಲಪ್ಪ ಗುಡಗೇನಟ್ಟಿ, ಸಿದ್ಧಲಿಂಗಪ್ಪ ಸುಣಕುಪ್ಪಿ, ರಾಜು ಕೋಲಾ, ಸಾಗರ ಬೋರಗಲ್ಲ, ಸಂತೋಷ ತಳ್ವಾರ, ಶಿವಾಜಿ ಗುರವ, ಆನಂದ ಬಿಲಾವರ, ರಾಹುಲ್ ಭೋಸ್ಲೆ, ಗಜಾನನ ಪಿಸೆ, ಸಣ್ಣತಮ್ಮ ಮೂಕನವರ ಹಾಗೂ ಇರ್ಫಾನ್ ಅತ್ತಾರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ವಿಷನ್ ಕರ್ನಾಟಕ-2026 ಪ್ರದರ್ಶನಕ್ಕೆ ಇಂದು ಚಾಲನೆ



ಬೆಳಗಾವಿ: ಕೇಂದ್ರ, ಸರ್ಕಾರದ ವಿವಿಧ ಯೋಜನೆಗಳು, ತಾಂತ್ರಿಕ ನಾವೀನ್ಯತೆಗಳು ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತು ಸಾರ್ವಜನಿಕರಿಗೆ ಸಮಗ್ರ ಮಾಹಿತಿ ನೀಡುವ ಉದ್ದೇಶದಿಂದ 'ವಿಷನ್ ಕರ್ನಾಟಕ-2026' ಪ್ರದರ್ಶನ ಆಯೋಜಿಸಲಾಗಿದೆ ಎಂದು ಸಂಸದ ಜಗದೀಶ ಶೆಟ್ಟರ ಹೇಳಿದರು.

ಸೋಮವಾರ ನಗರದ ಖಾಸಗಿ ಹೋಟೆಲ್‌ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವರ್ಷ ನಗರದಲ್ಲಿ ಪ್ರಯಾಸ ಎಕ್ಸಿಬಿಷನ್ ಅ್ಯಂಡ್ ಪ್ರೋಮೋಷನ್ ಸಂಸ್ಥೆಯ ಆಶ್ರಯದಲ್ಲಿ ನಡೆದ ಪ್ರದರ್ಶನಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾದ ಹಿನ್ನೆಲೆಯಲ್ಲಿ ಈ ವರ್ಷವೂ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಹೇಳಿದರು.

ಜೂನ್ 23ರಂದು ಬೆಳಗ್ಗೆ 10.30ಕ್ಕೆ ಪ್ರದರ್ಶನಕ್ಕೆ ಚಾಲನೆ ನೀಡಲಾಗುವುದು. ಕೇಂದ್ರ ಸರ್ಕಾರದ ವಿವಿಧ ಸಚಿವಾಲಯಗಳು, ಸಾರ್ವಜನಿಕ ವಲಯದ ಸಂಸ್ಥೆಗಳು, ರಾಜ್ಯ ಸರ್ಕಾರದ ಇಲಾಖೆಗಳು, ಸಂಶೋಧನಾ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು ಹಾಗೂ ಹಣಕಾಸು ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಸಾರ್ವಜನಿಕರು ನೇರವಾಗಿ ಸಂವಾದ ನಡೆಸಲು ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಪ್ರದರ್ಶನದಲ್ಲಿ ಕೇಂದ್ರ, ಸರ್ಕಾರದ ವಿವಿಧ ಯೋಜನೆಗಳು ಹಾಗೂ ಅವುಗಳ ಅನುಷ್ಠಾನದ ಕುರಿತು ಮಾಹಿತಿ ನೀಡಲಾಗುವುದು. ಅಲ್ಲದೆ, ಯೋಜನೆಗಳ ಪ್ರಯೋಜನ ಪಡೆಯಲು ಲಭ್ಯವಿರುವ ಹಣಕಾಸು ಆಯ್ಕೆಗಳ ಕುರಿತೂ ಮಾರ್ಗದರ್ಶನ ದೊರೆಯಲಿದೆ. ಸಾರ್ವಜನಿಕರಿಗೆ ಉಚಿತವಾಗಿದ್ದು, ಜೂನ್ 23, 24 ಮತ್ತು 25ರಂದು ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ಪ್ರದರ್ಶನ ತೆರೆದಿರುತ್ತದೆ ಎಂದು ಹೇಳಿದರು.

ರಕ್ಷಣೆ, ಕೃಷಿ, ಹಣಕಾಸು, ಆರೋಗ್ಯ, ವಿಜ್ಞಾನ ಮತ್ತು ತಂತ್ರಜ್ಞಾನ, ಬಾಹ್ಯಾಕಾಶ, ಗ್ರಾಮೀಣಾಭಿವೃದ್ಧಿ, ಮೂಲಸೌಕರ್ಯ, ಪರಿಸರ, ಶಿಕ್ಷಣ ಹಾಗೂ ಕೌಶಲ ಅಭಿವೃದ್ಧಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿನ ತಾಂತ್ರಿಕ ನಾವೀನ್ಯತೆಗಳ ಬಗ್ಗೆ ಸಾರ್ವಜನಿಕ ಜಾಗೃತಿ ಮೂಡಿಸುವುದು ಪ್ರದರ್ಶನದ ಮುಖ್ಯ ಉದ್ದೇಶವಾಗಿದೆ. ಮಾಹಿತಿಯುಕ್ತ ಮತ್ತು ಸಂವಾದಾತ್ಮಕ ಪ್ರದರ್ಶನಗಳ ಮೂಲಕ ಸರ್ಕಾರದ ಉಪಕ್ರಮಗಳನ್ನು ಅರ್ಥ ಮಾಡಿಕೊಳ್ಳಲು ಸಂದರ್ಶಕರಿಗೆ ಅವಕಾಶ ಸಿಗಲಿದೆ ಎಂದು ತಿಳಿಸಿದರು.

ಈ ವೇಳೆ ಪ್ರೀತಿ ಕಾಮಕರ್, ಹನಮಂತ ಕೊಂಗಾಲಿ, ಸಂಜಯ ಪಾಟೀಲ, ವನಿತಾ ಗುಪ್ತಾ ಹಲವು ಬಿಜೆಪಿ ಮುಖಂಡರು ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಫ್ಯೂಚರ್ ಆಫ್ ಬೆಳಗಾವಿ-2047 ಸಂವಾದ

ಈ ಬಾರಿಯ ವಿಷನ್ ಕರ್ನಾಟಕ-2026 ಪ್ರದರ್ಶನದ ಅಂಗವಾಗಿ 'ಫ್ಯೂಚರ್ ಆಫ್ ಬೆಳಗಾವಿ-2047' ವಿಷಯದ ಕುರಿತು ವಿಶೇಷ ಸಂವಾದ ಆಯೋಜಿಸಲಾಗಿದೆ. ಜೂನ್ 24ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1 ಗಂಟೆಯವರೆಗೆ ನಡೆಯುವ ಈ ಚರ್ಚೆಯಲ್ಲಿ ಮೊಹಮ್ಮದ್ ರೋಷನ್ ಹಾಗೂ ಇತರ ವಿಶೇಷ ಆಹ್ವಾನಿತರು ಭಾಗವಹಿಸಿ ತಮ್ಮ ಅಭಿಪ್ರಾಯ ಹಂಚಿಕೊಳ್ಳಲಿದ್ದಾರೆ. ಈ ಕಾರ್ಯಕ್ರಮ ಅಭಿವೃದ್ಧಿ ಹೊಂದಿದ ಕರ್ನಾಟಕ ಹಾಗೂ ಅಭಿವೃದ್ಧಿ ಹೊಂದಿದ ಭಾರತ-2047ರ ರಾಷ್ಟ್ರೀಯ ದೃಷ್ಟಿಕೋನಕ್ಕೆ ಪೂರಕವಾಗಿರಲಿದೆ ಎಂದು ಶೆಟ್ಟರ್ ಹೇಳಿದರು.

ಕಿರುಸುದ್ದಿ

9.38 ಲಕ್ಷ ರೂ. ಮೌಲ್ಯದ ಗಾಂಜಾ ಪತ್ತೆ

ಹುಬ್ಬಳ್ಳಿ: ಶಾಲಿಮಾರ ಹೌರಾ ವಾಸ್ಕೋ ಅಮರಾವತಿ ಎಕ್ಸಪ್ರೆಸ್ ರೈಲಿನಲ್ಲಿ 9.38 ಲಕ್ಷ ರೂ. ಮೌಲ್ಯದ 18.766 ಕೆ.ಜಿ. ಗಾಂಜಾ ಸಾಗಾಟ ಮಾಡುತ್ತಿದ್ದನ್ನು ರೈಲ್ವೆ ರೈಲ್ವೆ ಪೊಲೀಸರು ಪತ್ತೆ ಹಚ್ಚಿದ್ದಾರೆ.

ಖಚಿತ ಮಾಹಿತಿ ಆಧರಿಸಿ, ರೈಲ್ವೆ ಮೇಲೆ ದಾಳಿ ನಡೆಸಿ ಪರಿಶೀಲನೆ ನಡೆಸಿದ್ದಾರೆ. ರೈಲಿನ ಮುಂದಿನ ಜನರಲ್ ಬೋಗಿಯ ಶೌಚಾಲಯದ ಹತ್ತಿರ ಟ್ರೋಲಿ ಬ್ಯಾಗಿನಲ್ಲಿ ಗಾಂಜಾ ಪತ್ತೆಯಾಗಿದೆ. ಒಟ್ಟು 14 ಗಾಂಜಾ ಬಂಡಲ್ ಗಳನ್ನು ಜಪ್ತ ಮಾಡಲಾಗಿದೆ. ಹೂ, ಬೀಹ, ಎಲೆಗಳನ್ನು ಒಳಗೊಂಡ ಗಾಂಜಾ ಪತ್ತೆಯಾಗಿದೆ. ಈ ಕುರಿತು ಹುಬ್ಬಳ್ಳಿ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗಾಂಜಾ ಸೇವಿಸಿದ್ದ ವ್ಯಕ್ತಿ ಬಂಧನ

ಭಟ್ಕಳ: ಮುರ್ಡೇಶ್ವರದ ಬಸ್ತಿ ರಸ್ತೆಯ ರಾಮನಾಥ ಲಾಡ್ಜ್ ಬಳಿ ಗಾಂಜಾ ಸೇವನೆ ಮಾಡಿ ತೂರಾಡುತ್ತಿದ್ದ ವ್ಯಕ್ತಿಯನ್ನು ಮುರುಡೇಶ್ವರ ಪೊಲೀಸರು ಬಂಧಿಸಿದ್ದಾರೆ. ಹುಬ್ಬಳ್ಳಿಯ ಗವಿಸಿದ್ದೇಶ್ವರ ಕಾಲೋನಿ ನಿವಾಸಿ ದರ್ಶನ ಸುಧಾಕರ ಪೂಜಾರಿ ಬಂಧಿತ ವ್ಯಕ್ತಿ. ಈತನನ್ನು ವೈದ್ಯಕೀಯ ತಪಾಸಣೆ ಬಳಿಕ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಮುರುಡೇಶ್ವರ ಪೊಲೀಸ್ ಠಾಣೆಯಲ್ಲಿ ಈ ಕುರಿತು ಪ್ರಕರಣ ದಾಖಲಾಗಿದೆ.

ರೈತ ಆತ್ಮಹತ್ಯೆ


ಹಾವೇರಿ: ಸಾಲಬಾಧೆ ಹಾಗೂ ಬೆಳೆ ನಷ್ಟದಿಂದ ಮನನೊಂದು ವಿಷ ಸೇವಿಸಿದ್ದ ರಟ್ಟಿಹಳ್ಳಿ ತಾಲೂಕು ನಾಗವಂದ ಗ್ರಾಮದ ರೈತರೊಬ್ಬರು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

ಮಂಜುನಾಥ ಬಸಪ್ಪ ಹೊಸಕಟ್ಟಿ (45) ಮೃತಪಟ್ಟ ರೈತ. ಸಮೀಪದ ಗುಡ್ಡದಮಾದಾಪುರ ಗ್ರಾಮದ ಪರಿಚಯದವರ 8 ಎಕರೆ ಜಮೀನನ್ನು ಲಾವಣಿ ಮಾಡುತ್ತಿದ್ದ ಇವರು, ಕೃಷಿಗಾಗಿ ಕೈಗಡವಾಗಿ 2 ಲಕ್ಷ ರೂ. ಸಾಲ ಮಾಡಿದ್ದರು. ಆದರೆ, ಬೆಳೆ ಸರಿಯಾಗಿ ಬಾರದ್ದರಿಂದ ಮಾನಸಿಕವಾಗಿ ಬೇಸತ್ತು ಜೂ.13ರಂದು ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು. ತಕ್ಷಣ ಆಸ್ಪತ್ರೆಗೆ ಸೇರಿಸಿ ಉಪಚಾರ ನೀಡಿದರೂ ಚಿಕಿತ್ಸೆ ಫಲಕಾರಿಯಾಗದೇ ಜು.21ರಂದು ಮೃತಪಟ್ಟಿದ್ದಾರೆ. ಈ ಕುರಿತು ರಟ್ಟಿಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಕಡಲೆಕಾಳು	4710	5889
ಉದ್ದಿನಕಾಳು	2036	7610
ಒಣ ಮೆಣಸಿನಕಾಯಿ	50000	56500
ಹೆಸರುಕಾಳು	3100	6375
ನೆಲಗಡಲೆ (ಶೇಂಗಾ)	4243	7640
ಹುರುಳಿ ಕಾಳು	4704	4704
ಜೋಳ	1826	4656
ಮಡಿಕೆ (ಮಟಕಿ)	6510	14811
ಈರುಳ್ಳಿ	500	2200
ಆಲೂಗಡ್ಡೆ	1200	1900
ಕುಸುಬೆ	4789	5206
ಸೋಯಾಬಿನ್	6570	6996
ಸೂರ್ಯ ಕಾಂತಿ	6400	6400
ಗೋಧಿ	2017	2525

ಇಸ್ಕಾನ್‌ನಲ್ಲಿ ಸಂಭ್ರಮದ ಪ್ರಾಣ ಪ್ರತಿಷ್ಠಾ ಮಹೋತ್ಸವ



ಹುಬ್ಬಳ್ಳಿ: ಉತ್ತರ ಕರ್ನಾಟಕದ ಆಧ್ಯಾತ್ಮಿಕ ಇತಿಹಾಸದಲ್ಲಿ ಒಂದು ಮಹತ್ವದ ಕ್ಷಣ ಇಂದು ಸಾಕಾರಗೊಂಡಿದ್ದು, ನೂತನವಾಗಿ ನಿರ್ಮಿಸಲಾದ ಧಾರವಾಡದ ರಾಯಾಪುರದಲ್ಲಿರುವ ಇಸ್ಕಾನ್ ಶ್ರೀ ರಾಧಾ ಗೋವಿಂದ ದೇವಜಿ ಮಂದಿರದಲ್ಲಿ ನಡೆದ ಪವಿತ್ರ ಪ್ರಾಣ ಪ್ರತಿಷ್ಠಾ ಮಹೋತ್ಸವ ಸಮಾರಂಭ ಶ್ರದ್ಧಾ-ಭಕ್ತಿಯಿಂದ ನಡೆಯಿತು.

ಸೋಮವಾರ ಸಂಜೆ 4 ಗಂಟೆಗೆ ಶ್ರೀ ರಾಧಾ ಗೋವಿಂದ ದೇವಜೀಯವರು ಭಕ್ತರಿಗೆ ತಮ್ಮ ಪ್ರಥಮ ಸಾರ್ವಜನಿಕ ದರ್ಶನವನ್ನು ಅನುಗ್ರಹಿಸಿದರು. ವೈದಿಕ ಮಂತ್ರೋಚ್ಚಾರಣೆ, ಭಕ್ತಿಪೂರ್ಣ ಕೀರ್ತನೆಗಳು ಹಾಗೂ ಪೂಜ್ಯ ಆಧ್ಯಾತ್ಮಿಕ ನಾಯಕರು, ಗಣ್ಯರು, ಭಕ್ತರು ಮತ್ತು ವಿವಿಧ ಭಾಗಗಳಿಂದ ಆಗಮಿಸಿದ ಶುಭ ಚಿಂತಕರ ಸಮ್ಮುಖದಲ್ಲಿ ದೇವರ ಪ್ರತಿಷ್ಠಾಪನಾ ವಿಧಿವಿಧಾನಗಳ ಮೂಲಕ ಅತ್ಯಂತ ವೈಭವದಿಂದ ನೆರವೇರಿದವು.

ಶ್ರೀ ರಾಧಾ ಗೋವಿಂದ ದೇವಜೀಯವರ ಪ್ರಥಮ ದರ್ಶನವು ಅನೇಕ ವರ್ಷಗಳ ನಿಸ್ವಾರ್ಥ ಸೇವೆ, ತ್ಯಾಗ ಹಾಗೂ ಅಚಲ ಭಕ್ತಿಯ ಪರಿಪಾಕವಾಗಿ ಮೂಡಿ ಬಂದ ಒಂದು ಐತಿಹಾಸಿಕ ಕ್ಷಣವಾಗಿತ್ತು. ಉದ್ಯಮಿಗಳಾದ ಆನಂದ ಕಲಾಲ್, ಡಾ. ಟಿ.ವಿ.ಎಸ್.ವಿ.ಪ್ರಸಾದ್, ಮೋಹನದಾಸ್ ಪೈ ಹಾಗೂ ಸಮಾಜ ಸೇವೆಯ ಉದ್ದೇಶದಿಂದ ಈ ಭವ್ಯ ಆಧ್ಯಾತ್ಮಿಕ ಕೇಂದ್ರ ನಿರ್ಮಾಣಕ್ಕೆ ಮಹತ್ವದ ಕೊಡುಗೆ ನೀಡಿದ ಇತರ ಅನೇಕ ದಾನಿಗಳಿಗೆ ವಿಶೇಷ ಅಭಿನಂದನೆಗಳ ಸಲ್ಲಿಸಲಾಯಿತು.

ಈ ಮಂದಿರವು ಆಧ್ಯಾತ್ಮಿಕ ಶಿಕ್ಷಣ, ಸಾಂಸ್ಕೃತಿಕ ಸಂರಕ್ಷಣೆ, ಸಮುದಾಯ ಕಲ್ಯಾಣ ಹಾಗೂ ಭಗವದ್ಗೀತೆಯ ಶಾಶ್ವತ ಸಂದೇಶಗಳ ಪ್ರಸಾರದ ಕೇಂದ್ರವಾಗಿ ಕಾರ್ಯನಿರ್ವಹಿಸಲಿದೆ. ಮುಂದಿನ ಪೀಳಿಗೆಗಳಿಗೂ ಇದು ಭಕ್ತಿ, ಸಂಸ್ಕೃತಿ ಮತ್ತು ಆಧ್ಯಾತ್ಮಿಕ ಪ್ರೇರಣೆಯ ದೀಪಸ್ತಂಭವಾಗಲಿದೆ ಎಂಬ ನಿರೀಕ್ಷೆಯಿದೆ.

ಪ್ರಾಣ ಪ್ರತಿಷ್ಠಾ ಮಹೋತ್ಸವವನ್ನು ಯಶಸ್ವಿಯಾಗಿ ನಡೆಸಲು ಅವಿರತವಾಗಿ ಶ್ರಮಿಸಿದ ಸರ್ಕಾರಿ ಅಧಿಕಾರಿಗಳು, ಸಮುದಾಯದ ಮುಖಂಡರು, ಸಭಾಸದರು ಹಾಗೂ ನೂರಾರು ಸ್ವಯಂಸೇವಕರಿಗೆ ಇಸ್ಕಾನ್ ಹುಬ್ಬಳ್ಳಿ-ಧಾರವಾಡ ತನ್ನ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತದೆ.

ಶ್ರೀ ರಾಧಾ ಗೋವಿಂದ ದೇವಜೀಯವರ ಪ್ರಥಮ ದರ್ಶನಕ್ಕಾಗಿ ಸಾವಿರಾರು ಭಕ್ತರು ಒಂದೆಡೆ ಸೇರಿದ್ದಾಗ, ಭಕ್ತಿ, ಕೃತಜ್ಞತೆ ಮತ್ತು ಸಂಭ್ರಮದ ವಾತಾವರಣ ಎಲ್ಲೆಡೆ ಆವರಿಸಿತ್ತು. ಈ ಪವಿತ್ರ ಕ್ಷಣವು ಉತ್ತರ ಕರ್ನಾಟಕದ ಆಧ್ಯಾತ್ಮಿಕ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯಕ್ಕೆ ನಾಂದಿ ಹಾಡಿತು.

ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಸೇರ್ಪಡೆ



ಮಹಾಲಿಂಗಪುರ: ಸ್ಥಳೀಯ ಪ್ರತಿಭೆ ರವೀಂದ್ರ, ಢವಳಾಪುರ ತನ್ನ ಅಸಾಧಾರಣ ನೆನಪಿನ ಶಕ್ತಿ ಮತ್ತು ಕಲಿಕಾ ಸಾಮರ್ಥ್ಯದ ಮೂಲಕ ದೇಶದ ಗಮನ ಸೆಳೆಯುವಂತಹ ಸಾಧನೆ ಮಾಡಿದ್ದಾನೆ.

ಕೇವಲ 2 ವರ್ಷ 6 ತಿಂಗಳ ವಯಸ್ಸಿನಲ್ಲೇ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ತನ್ನ ಹೆಸರನ್ನು ದಾಖಲಿಸಿಕೊಳ್ಳುವ ಮೂಲಕ ಬಾಲ ಪ್ರತಿಭೆಯಾಗಿ ಹೊರಹೊಮ್ಮಿದ್ದಾನೆ. ಢವಳಾಪುರ ವಿದ್ಯಾ ವಿಹಾರ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ವಿವೇಕ ಢವಳಾಪುರ ಹಾಗೂ ಕವಿತಾ ಢವಳಾಪುರ ಅವರ ಪುತ್ರನಾಗಿ ಜುಲೈ24, 2023ರಂದು ಜನಿಸಿದ ರವೀಂದ್ರ ಢವಳಾಪುರ, ತನ್ನ ಚಿಕ್ಕ ವಯಸ್ಸಿನಲ್ಲೇ ಅನೇಕ ವಿಷಯಗಳನ್ನು ನೆನಪಿಟ್ಟುಕೊಂಡು ಗುರುತಿಸುವ ಅಪರೂಪದ ಸಾಮರ್ಥ್ಯವನ್ನು ಪ್ರದರ್ಶಿಸಿದ್ದಾನೆ.

41 ಪ್ರಸಿದ್ಧ ವ್ಯಕ್ತಿಗಳು, 30 ಸ್ವಾತಂತ್ರ್ಯ ಹೋರಾಟಗಾರರು, 11 ರಾಷ್ಟ್ರೀಯ ಚಿಹ್ನೆಗಳು, 16 ಐತಿಹಾಸಿಕ ಸ್ಮಾರಕಗಳು, 27 ವಿವಿಧ ಜೀವಿಗಳು, 14 ವಿಜ್ಞಾನಿಗಳು, ಭಾರತದ 28 ರಾಜ್ಯಗಳು ಹಾಗೂ 14 ಪ್ರಧಾನ ಮಂತ್ರಿಗಳು ಮತ್ತು ರಾಷ್ಟ್ರಪತಿಗಳನ್ನು ಚಿತ್ರಗಳ ಮೂಲಕ ಗುರುತಿಸಿ ಅವರ ಹೆಸರನ್ನು ಹೇಳುವ ರವೀಂದ್ರನ ವಿಶಿಷ್ಟ ಪ್ರತಿಭೆಯನ್ನು ಪರಿಗಣಿಸಿ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಸಂಸ್ಥೆಯು 2026ರ ಜನವರಿ 28ರಂದು ಅಧಿಕೃತವಾಗಿ ಮಾನ್ಯತೆ ನೀಡಿದೆ. ಈ ಮೂಲಕ ಬಾಲಕನು ತನ್ನ ಹೆಸರನ್ನು ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲಿಸಿಕೊಂಡು ಜಿಲ್ಲೆಯ ಹೆಮ್ಮೆಯಾಗಿ ಹೊರಹೊಮ್ಮಿದ್ದಾನೆ.

ರವೀಂದ್ರನು ಶಾಲೆಗೆ ಪಾದಾರ್ಪಣೆ ಮಾಡಿದ ಸಂದರ್ಭದಲ್ಲಿ ಪೋಷಕರು ಈ ವಿಷಯವನ್ನು ಮಾಧ್ಯಮಕ್ಕೆ ಹಂಚಿಕೊಂಡಿದ್ದಾರೆ. ವೀಣಾ ಢವಳಾಪುರ, ಶೋಭಾ ಕಾಶಿನಾಥ್ ಕಂಕಾಳೆ ಸೇರಿದಂತೆ ಕುಟುಂಬದ ಸದಸ್ಯರು, ಹಿತೈಷಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

ಅಕ್ರಮ ಪಡಿತರ ಅಕ್ಕಿ ಜಪ್ತಿ ಇಬ್ಬರ ವಿರುದ್ಧ ಪ್ರಕರಣ ದಾಖಲು

ಬೆಳಗಾವಿ: ಜಿಲ್ಲೆಯ ನಿಪ್ಪಾಣಿ ನಗರದಲ್ಲಿ ಅಕ್ರಮವಾಗಿ ಸಂಗ್ರಹಿಸಿಡಲಾಗಿದ್ದ ಪಡಿತರ ಅಕ್ಕಿಯನ್ನು ಆಹಾರ ಇಲಾಖೆಯ ಅಧಿಕಾರಿಗಳು ದಾಳಿ ನಡೆಸಿ ಜಪ್ತಿ ಮಾಡಿದ್ದಾರೆ.

ನಿಪ್ಪಾಣಿಯ ಸಂದೀಪ್ ಬಾಳಾಸಾಹೇಬ ಘಂಗಾಳಿ ಎಂಬಾತನಿಂದ 1,76,800 ರೂ. ಮೌಲ್ಯದ 5,200 ಕೆಜಿ ತೂಕದ ಅಕ್ಕಿಯನ್ನು ವಶಪಡಿಸಿಕೊಳ್ಳಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಮೂಲತಃ ಮಹಾರಾಷ್ಟ್ರದ ಕೊಲ್ಹಾಪುರ ನಿವಾಸಿಯಾಗಿದ್ದು, ಸದ್ಯ ನಿಪ್ಪಾಣಿಯ ಗಾಂಧಿ ಚೌಕ್‌ನಲ್ಲಿ ವಾಸವಿರುವ ಸೋಹೆಲ್ ಆಲಮ್ ಥಾಲಾಯಿತ ಎಂಬಾತ ಹಿದಾಯತ್ ನಗರದ ಶೆಡ್ ಒಂದರಲ್ಲಿ ಸಂಗ್ರಹಿಸಿಟ್ಟಿದ್ದ 85,000 ರೂ. ಮೌಲ್ಯದ 2,500 ಕೆಜಿ ಅಕ್ಕಿಯನ್ನು ಜಪ್ತಿ ಮಾಡಲಾಗಿದ್ದು, ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಮಾನ್ಯ ಜಿಲ್ಲಾಧಿಕಾರಿಗಳ ಕಟ್ಟುನಿಟ್ಟಿನ ನಿರ್ದೇಶನದ ಮೇರೆಗೆ ಜಿಲ್ಲಾದ್ಯಂತ ತಾಲೂಕು ಮಟ್ಟದ ವಿಶೇಷ ತಂಡಗಳನ್ನು ರಚಿಸಲಾಗಿದ್ದು, ಅಕ್ರಮ ದಂಧೆಯ ಮೇಲ್ವಿಚಾರಣೆ ನಡೆಸಲಾಗುತ್ತಿದೆ.

ಬಡವರಿಗಾಗಿ ವಿತರಿಸಲಾಗುವ ಪಡಿತರ ಚೀಟಿದಾರರ ಫಲಾನುಭವಿಗಳಿಗೆ ಹಣದ ಆಮಿಷ ಒಡ್ಡಿ, ಅವರಿಂದ ಕಡಿಮೆ ಬೆಲೆಗೆ ಆಹಾರ ಧಾನ್ಯಗಳನ್ನು ಖರೀದಿ ಮಾಡುವ ದಲ್ಲಾಳಿಗಳು ಮತ್ತು ಕಳ್ಳಸಂತೆಕೋರರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು. ಪಡಿತರ ಚೀಟಿದಾರರು ನ್ಯಾಯಬೆಲೆ ಅಂಗಡಿಗಳಿಂದ ತಮಗೆ ಸಿಗುವ ಆಹಾರಧಾನ್ಯಗಳನ್ನು ಸ್ವಂತ ಬಳಕೆಗೆ ಉಪಯೋಗಿಸಬೇಕೇ ಹೊರತು ಯಾವುದೇ ಕಾರಣಕ್ಕೂ ಹೊರಗಡೆ ಇತರರಿಗೆ ಮಾರಾಟ ಮಾಡಬಾರದು. ಸರ್ಕಾರದ ಸೌಲಭ್ಯವನ್ನು ದುರುಪಯೋಗಪಡಿಸಿಕೊಂಡು ಮಾರಾಟ ಜಾಲದಲ್ಲಿ ತೊಡಗಿಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗಿದೆ ಎಂದು ತಿಳಿಸಿದೆ.

ಹೋರಾಟ ಹಿಂಪಡೆಯಲು ಕರವೇ ನಿರ್ಧಾರ

ಹುಬ್ಬಳ್ಳಿ: ರೈಲ್ವೆ ಇಲಾಖೆ ಪರೀಕ್ಷೆಯಲ್ಲಿ ಕನ್ನಡ ಕಡೆಗಣಿಸಿದ್ದರಿಂದ ಜೂ.25ರಂದು ರಾಜ್ಯಾದ್ಯಂತ ಹೋರಾಟ ಮಾಡಲು ಮುಂದಾಗಿದ್ದ ಕರ್ನಾಟಕ ರಕ್ಷಣಾ ವೇದಿಕೆ ಅಭ್ಯರ್ಥಿಗಳ ಭವಿಷ್ಯದ ದೃಷ್ಟಿಯಿಂದ ಹಿಂಪಡೆಯಲು ನಿರ್ಧರಿಸಿದೆ. ಈ ಕುರಿತು ಪ್ರಕಟಣೆಗೆ ತಿಳಿಸಿದ ಕರ್ನಾಟಕ ರಕ್ಷಣಾ ವೇದಿಕೆ, ರೈಲ್ವೆ ಪರೀಕ್ಷೆ ಬರೆಯಲು ಹಿಂದಿ ಹಾಗೂ ಇಂಗ್ಲಿಷ್ ಪರೀಕ್ಷೆಗೆ ರೈಲ್ವೆ ಇಲಾಖೆ ಆದ್ಯತೆ ನೀಡಿತ್ತು. ಇದನ್ನು ವಿರೋಧಿಸಿ ಜೂನ್ 25ರಂದು ಹುಬ್ಬಳ್ಳಿ, ಮೈಸೂರು, ಬೆಂಗಳೂರಿನ ಪರೀಕ್ಷಾ ಕೇಂದ್ರಗಳ ಮುಂದೆ ಕರ್ನಾಟಕ ರಕ್ಷಣಾ ವೇದಿಕೆ ಭಾರೀ ಸ್ವರೂಪದ ಹೋರಾಟವನ್ನು ಹಮ್ಮಿಕೊಂಡಿತ್ತು. ಅಲ್ಲದೆ, ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ರೈಲು ತಡೆಯೂ ಸೇರಿದಂತೆ ವ್ಯಾಪಕ ಚಳವಳಿಯನ್ನು ನಡೆಸಲು ಉದ್ದೇಶಿಸಿತ್ತು. ಆದರೆ, ಈ ಘೋಷಣೆಯ ನಂತರ ನೂರಾರು ರೈಲ್ವೆ ನೌಕರರು, ಪರೀಕ್ಷಾರ್ಥಿಗಳು ಮತ್ತು ಅವರ ಕುಟುಂಬದ ಸದಸ್ಯರು ದೂರವಾಣಿ ಮೂಲಕ ಸಂಪರ್ಕಿಸಿ ತಮ್ಮ ಸಂಕಷ್ಟ ತಿಳಿಸಿದ ಹಿನ್ನೆಲೆ ಹೋರಾಟ ಹಿಂಪಡೆಯುವುದಾಗಿ ನಿರ್ಧರಿಸಿದೆ. ಆದರೆ, ಕನ್ನಡ ಕಡೆಗಣಿಸಿರುವುದಕ್ಕೆ ನಮ್ಮ ಹೋರಾಟ ಮುಂದುವರಿಯಲಿದೆ ಎಂದು ತಿಳಿಸಿದೆ.

ಅಂತರ್‌ರಾಜ್ಯ ಕಳ್ಳರ ಬಂಧನ

ಬೆಳಗಾವಿ: ಜಿಲ್ಲೆಯ ಕಾಗವಾಡ ಪಟ್ಟಣ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಚಿನ್ನಾಭರಣ ಕಳ್ಳತನ ಪ್ರಕರಣ ಭೇದಿಸಿರುವ ಪೊಲೀಸರು, ಉತ್ತರ ಪ್ರದೇಶ ಮೂಲದ ಆರು ಅಂತರ್ ರಾಜ್ಯ ಕಳ್ಳರನ್ನು ಬಂಧಿಸಿ, ರೂ.7.95 ಲಕ್ಷ ಮೌಲ್ಯದ 53 ಗ್ರಾಂ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿದ್ದಾರೆ.

ಈ ಕುರಿತು ಕಾಗವಾಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣದ ತನಿಖೆಯನ್ನು ಗಂಭೀರವಾಗಿ ಕೈಗೊಂಡ ತನಿಖೆಯ ವೇಳೆ ಉತ್ತರ ಪ್ರದೇಶದ ಬುಲಂದ್ಶಹರ್ ಜಿಲ್ಲೆಯ ವಿವಿಧ ಗ್ರಾಮಗಳ ನಿವಾಸಿಗಳಾದ ಆರು ಆರೋಪಿಗಳನ್ನು ಬಂಧಿಸಲಾಯಿತು. ಬಂಧಿತರಿಂದ ಕಳುವಾಗಿದ್ದ ಚಿನ್ನಾಭರಣ ಗಳನ್ನು ಸೇರಿದಂತೆ ಒಟ್ಟು ರೂ.7.95 ಲಕ್ಷ ಮೌಲ್ಯದ 53 ಗ್ರಾಂ ಚಿನ್ನಾಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ. ಬಳಿಕ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಮೊಹ್ಮದ್ ಇಸ್ಲಾಂ (42), ಇಸ್ಲಾಮಾಬಾದ್, ಬುಲಂದ್ಶಹರ್, ಉತ್ತರ ಪ್ರದೇಶ, ಜಫರಯಾಬ್ (45), ಹಾಜೀಪುರ ಬಟೋಲ, ಬುಲಂದ್ಶಹರ್, ಉತ್ತರ ಪ್ರದೇಶ, ಮೊಹ್ಮದ್ ಅಕೀಲ್ (50), ಕುಚೇಜಾ, ಬುಲಂದ್ಶಹರ್, ಉತ್ತರ ಪ್ರದೇಶ, ರಾಜಪಾಲ್ (64), ನಿಜಾಮಪುರ, ಕುರ್ಜಾ, ಬುಲಂದ್ಶಹರ್, ಉತ್ತರ ಪ್ರದೇಶ, ದೌಜಿ (53), ಅದೋಲಿ, ಬುಲಂದ್ಶಹರ್, ಉತ್ತರ ಪ್ರದೇಶ, ಕೈರಾತಿ (47), ಹಾಜೀಪುರ ಬಟೋಲಾ, ಬುಲಂದ್ಶಹರ್, ಉತ್ತರ ಪ್ರದೇಶ ಬಂಧಿತರು.ಪತ್ತೆ ಕಾರ್ಯದಲ್ಲಿ ಸಿಪಿಐ ಆರ್.ಪಿ.ಕಾಟೀಕರಿ, ಎಸ್.ಪಿ.ಮುಗ್ಗಣ್ಣವರ, ಸಿಪಿಸಿ ಎಂ.ಎಂ. ಜಂಬಗಿ, ಎಸ್.ಎಸ್. ನಂದಿವಾಲೆ, ಎಸ್.ಡಿ. ದೇವರುಷಿ, ಎ.ಜಿ. ಜಾಯಗೋಣಿ, ಎಂ.ಎಸ್. ಕಕಮರಿ ಹಾಗೂ ತಾಂತ್ರಿಕ ವಿಭಾಗದ ವಿನೋದ ಠಕ್ಕಣ್ಣವರ ಭಾಗವಹಿಸಿದ್ದರು.

ವಿದ್ಯಾರ್ಥಿ ಸಾವು ಪ್ರಕರಣ: ಇಬ್ಬರ ಅಮಾನತು

ಸಿದ್ದಾಪುರ: ತಾಲೂಕಿನ ಕಾನಸೂರಿನ ವಸತಿ ಶಾಲೆಯ ವಿದ್ಯಾರ್ಥಿ ಗೋಕುಲ ಗೌಡ ಈತನ ಸಾವಿಗೆ ಸಂಬಂಧಿಸಿದಂತೆ ಸಮಾಜ ಕಲ್ಯಾಣ ಇಲಾಖೆಯು ಇಬ್ಬರು ಸಿಬ್ಬಂದಿಗಳನ್ನು ಅಮಾನತು ಮಾಡಿ ಆದೇಶ ಹೊರಡಿಸಿದ್ದಾಗಿ ತಿಳಿದುಬಂದಿದೆ. ಶಾಲೆಯ ಪ್ರಭಾರಿ ಪ್ರಾಚಾರ್ಯ ಜಾವೇದ್ ಎಚ್.ಎಸ್. ಹಾಗೂ ಹಿಂದಿ ಶಿಕ್ಷಕ, ಪ್ರಭಾರಿ ನಿಲಯಪಾಲಕ ಅಬ್ಬುತಲಹ ಅಮಾನತ್ತಾದವರೆಂದು ಹೇಳಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿ ಸಿದ್ದಾಪುರ ಠಾಣೆಯ ಅಧಿಕಾರಿಗಳಿಂದ ಡಿಎಸ್‌ಪಿ ಗೀತಾ ಪಾಟೀಲ ಅವರ ಮಾರ್ಗದರ್ಶನದಲ್ಲಿ ತನಿಖೆ ಮುಂದುವರಿದಿದೆ.

1.33 ಲಕ್ಷ ರೂ.ವಂಚನೆ

ಹುಬ್ಬಳ್ಳಿ: ಅಪರಿಚಿತರು ನಗರದ ವ್ಯಕ್ತಿಯ ಖಾತೆಯಿಂದ 1.33 ಲಕ್ಷ ರೂ. ವರ್ಗಾಯಿಸಿಕೊಂಡು ಮೋಸ ಮಾಡಿದ್ದಾರೆ. ಈ ಕುರಿತು ಗೋಕುಲ ರೋಡ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನಗರದ ಗೋವಿಂದರಡ್ಡಿ ಎಂಬುವರಿಗೆ ವಂಚಿಸಲಾಗಿದೆ. ಯಾರಿಗೂ ತಿಳಿಯದಂತೆ ಹಣ ವರ್ಗಾವಣೆ ಮಾಡಿಕೊಂಡಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಕೊಲೆಗೈದು ರುಂಡ ಹೊತ್ತೊಯ್ದ ಇಬ್ಬರ ಬಂಧನ





ರಾಯಚೂರು: ಕೊಲೆಗೈದು ರುಂಡ ಹೊತ್ತೊಯ್ದಿದ್ದವರನ್ನು 24 ಗಂಟೆಗಳಲ್ಲಿ ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶು ಗಿರಿ ತಿಳಿಸಿದರು.

ಸೋಮವಾರ ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಗರದ ಕುಲಸುಂಬಿ ಕಾಲೋನಿ ನಿವಾಸಿ ತಿರುಪತಿಯನ್ನು ಇತ್ತೀಚೆಗೆ ಕೊಲೆ ಮಾಡಿ ಆತನ ರುಂಡವನ್ನು ತಗೆದುಕೊಂಡು ಹೋಗಿದ್ದ ತಿರುಪತಿಯ ಸ್ನೇಹಿತರೇ ಆಗಿದ್ದ ಇದೇ ಕಾಲೋನಿಯ ನಿವಾಸಿಗಳೂ ಆಗಿರುವ ಆವೇಶ ಹಾಗೂ ರಾಜು ಎನ್ನುವವರನ್ನು ಬಂಧಿಸಲಾಗಿದೆ ಎಂದರು.

ಈ ಇಬ್ಬರು ತಿರುಪತಿಗೆ ದೂರದ ಸಂಬಂಧಿಯೂ ಆಗಿದ್ದಾರೆ. ಈ ಮೂವರಲ್ಲಿ ಆಗಾಗ ಮನಸ್ತಾಪವಾಗಿ ಸಣ್ಣ ಪುಟ್ಟ ಜಗಳವನ್ನು ಮಾಡಿಕೊಳ್ಳುತ್ತಿದ್ದರು ಮತ್ತೆ ಸ್ನೇಹವನ್ನು ಮುಂದುವರಿಸುತ್ತಿದ್ದರು. ಆದರೆ, ಇತ್ತೀಚೆಗೆ ಆದ ಜಗಳ ಕೊಲೆಯಲ್ಲಿ ಅಂತ್ಯವಾಗಿದೆ. ಈ ಮೂವರಲ್ಲಿನ ಹಳೆ ವೈಷಮ್ಯ ಒಂದು ಕಾರಣವಾದರೆ ಮೊಬೈಲ್ ವಿಚಾರಕ್ಕೆ ಸಂಬಂಧಿಸಿದಂತೆಯೂ ಇನ್ನೊಂದು ಕಾರಣವಿರಬಹುದು ಎಂದು ತಿಳಿಸಿದರು.

ತಿರುಪತಿಯ ಮನೆಯಲ್ಲಿ ಅವನನ್ನು ಕೊಲೆಗೈದ ಆವೇಶ ಹಾಗೂ ರಾಜು ತಿರುಪತಿಯ ಮನೆಯಿಂದ ಅಂದಾಜು ಮೂರು ಮೀಟರ್ ದೂರದಲ್ಲಿ ಅವನ ರುಂಡವನ್ನು ಬೀಸಾಕಿದ್ದರು. ಅದನ್ನು ವಶಪಡಿಸಿಕೊಳ್ಳಲಾಗಿದೆ. ಕೊಲೆಗೆ ಬಳಸಿದ ಮಾರಕಾಸ್ತ್ರಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದರು.

ತಿರುಪತಿಯ ತಂದೆ ನೀಡಿದ ದೂರಿನನ್ವಯ ಆವೇಶ ಹಾಗೂ ರಾಜುನನ್ನು ಬಂಧಿಸಿದಾಗ ತಾವೇ ತಿರುಪತಿಯನ್ನು ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾರೆ.

ಈ ಕೊಲೆ ತನಿಖಾ ತಂಡದಲ್ಲಿ ನಗರದ ಡಿವೈಎಸ್ಪಿ ಶಾಂತವೀರ, ಪಶ್ಚಿಮ ಪೊಲೀಸ್ ಠಾಣೆಯ ಸಿಪಿಐ ಉಮೇಶ ಕಾಂಬ್ಳೆ, ಸಂಚಾರಿ ಠಾಣೆಯ ಪಿಎಸ್‌ಐ ಸಣ್ಣವೀರೇಶ,ಗ್ರಾಮೀಣಠಾಣೆಯ ಪಿಎಸ್‌ಐ ಪ್ರಕಾಶ ಡಂಬಳ, ಪಿಎಸ್‌ಐ ಲಕ್ಷ್ಮೀದೇವಿ ಸೇರಿದಂತೆ ಇನ್ನು ಅನೇಕ ಅಧಿಕಾರಿಗಳ ತಂಡ ಮಿಂಚಿನ ಕಾರ್ಯಾಚರಣೆ ಮಾಡಿ ಆಪಾದಿತರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದರು.

ಸಂಪಾದಕೀಯ

ಪಾದಚಾರಿಗಳ ಹಕ್ಕು ರಕ್ಷಣೆ

ಸುರಕ್ಷಿತವಾದ ಹಾಗೂ ನಿಗದಿಪಡಿಸಲ್ಪಟ್ಟ ಪಾದಚಾರಿ ಮಾರ್ಗ(ಫುಟ್‌ಪಾತ್)ದಲ್ಲಿ ಸಂಚರಿಸುವುದು ಪ್ರತಿಯೊಬ್ಬ ಪಾದಚಾರಿಯ ಹಕ್ಕು ಎಂಬುದಾಗಿ ಸುಪ್ರೀಂ ಕೋರ್ಟ್ ಇತ್ತೀಚೆಗೆ ನೀಡಿರುವ ತೀರ್ಪು ನಮ್ಮ ಸ್ಥಳೀಯಾಡಳಿತಗಳು ಕಡೆಗಣಿಸಿರುವ ಅತ್ಯಂತ ಮಹತ್ವದ ವಿಷಯವೊಂದರತ್ತ ಗಮನ ಸೆಳೆದಿದೆ. ರಸ್ತೆಯಿರುವುದು ಕೇವಲ ವಾಹನಗಳಿಗಷ್ಟೇ ಅಲ್ಲ, ನಡೆದಾಡುವ ಪಾದಚಾರಿಗಳೂ ಸೂಕ್ತ ವ್ಯವಸ್ಥೆಯಿರಬೇಕು ಎಂಬ ಮೂಲಭೂತ ಅಂಶವನ್ನು ಇದು ಎತ್ತಿ ತೋರಿದೆ. ಕೋಟ್ಯಂತರ ಭಾರತೀಯರಿಗೆ ಪ್ರತಿನಿತ್ಯವೂ ನಡಿಗೆಯೆಂಬುದು ಜೀವನಶೈಲಿಯಷ್ಟೇ ಅಲ್ಲ, ಅದು ಅನಿವಾರ್ಯ ಆವಶ್ಯಕತೆಯಾಗಿದೆ. ಹಾಗಾಗಿ ಆಡಳಿತವು ರಸ್ತೆಗಳನ್ನು ನಿರ್ಮಿಸುವ ಜತೆಗೇ ಪಾದಚಾರಿಗಳಿಗಾಗಿ ಪ್ರತ್ಯೇಕ ಪಾದಚಾರಿ ಮಾರ್ಗ ರಚಿಸುವುದೂ ಅಗತ್ಯವಾಗಿದೆ. ಮುಖ್ಯವಾಗಿ ಪಟ್ಟಣಗಳಲ್ಲಿ, ನಗರಗಳಲ್ಲಿ, ಗ್ರಾಮೀಣ ಮಾರುಕಟ್ಟೆ ಪ್ರದೇಶಗಳಲ್ಲಿ ಇದು ಅಗತ್ಯವಾಗಿದೆ. ನಗರ, ಪಟ್ಟಣಗಳಲ್ಲಿ ಬಹುತೇಕವಾಗಿ ಪಾದಚಾರಿ



ಮಾರ್ಗಗಳು ಇರುತ್ತವಾದರೂ ಅದನ್ನು ಸಣ್ಣಪುಟ್ಟ ಅಂಗಡಿಗಳು, ಅಂಗಡಿಗಳ ಸಾಮಾನು ಸರಂಜಾಮುಗಳು, ಕಟ್ಟಡ ನಿರ್ಮಾಣ ಸಾಮಗ್ರಿಗಳು ಆಕ್ರಮಿಸಿರುತ್ತವೆ. ಹಲವೆಡೆಗಳಲ್ಲಿ ಫುಟ್‌ಪಾತ್‌ನಲ್ಲಿ ವಾಹನಗಳನ್ನು ಪಾರ್ಕ್ ಮಾಡುವುದೂ ಇದೆ. ಫುಟ್‌ಪಾತ್‌ನಲ್ಲೇ ವಾಹನಗಳನ್ನೆ ಓಡಿಸುವ ದುಸ್ಸಾಹಸಿಗಳೂ ಕಡಿಮೆಯೇನಿಲ್ಲ. ಇದರಿಂದಾಗಿ ಪಾದಚಾರಿಗಳು ರಸ್ತೆಯಲ್ಲೇ ನಡೆಯಬೇಕಾದ ಪರಿಸ್ಥಿತಿ ಎದುರಿಸುವಂತಾಗುತ್ತದೆ. ಇದು ಅವರನ್ನು ಅಪಾಯಕ್ಕೆ ದೂಡುತ್ತದೆ.

ಇದು ಕಡೆಗಣಿಸುವಂತಹ ಕ್ಷುಲ್ಲಕ ವಿಷಯವಲ್ಲ. ರಸ್ತೆ ಸಾರಿಗೆ ಮತ್ತು ಹೆದ್ದಾರಿ ಪ್ರಾಧಿಕಾರದ 2024ರ ವರದಿಯ ಪ್ರಕಾರ 36,526 ಮಂದಿ ಪಾದಚಾರಿಗಳು ರಸ್ತೆ ಅಪಘಾತಗಳಲ್ಲಿ ಸಾವನ್ನಪ್ಪಿದ್ದರು. ಅಂದರೆ ರಸ್ತೆ ದುರಂತಗಳಲ್ಲಿ ಸಾವಿಗೀಡಾಗುತ್ತಿರುವವರಲ್ಲಿ ಶೇ. 20.6ರಷ್ಟು ಪಾದಚಾರಿಗಳು. ನಗರಗಳ ರಸ್ತೆಗಳಲ್ಲಿ ವಾಹನಗಳೇ ಅಧಿಕವಾಗಿ ಪ್ರಾಧಾನ್ಯತೆ ಪಡೆಯುತ್ತವಾದರೂ, 2019ರ ಸಮೀಕ್ಷೆಯೊಂದರ ಪ್ರಕಾರ ರಸ್ತೆಯನ್ನು ಉಪಯೋಗಿಸುವವರಲ್ಲಿ ಶೇ.63 ರಷ್ಟು ಮಂದಿ ಪಾದಚಾರಿಗಳು. ಪ್ರತಿದಿನ 54 ಲಕ್ಷ ಜನರು ವಾಹನಗಳಲ್ಲಿ ಸಂಚರಿಸುವವರಾದರೆ 4.5 ಕೋಟಿ ಜನರು ಪಾದಚಾರಿಗಳಾಗಿ ಸಂಚರಿಸುತ್ತಿರುತ್ತಾರೆ. ವಾಹನಚಾಲಕರು ಪಾದಚಾರಿಗಳನ್ನು ಉಪದ್ರವಿಗಳೆಂಬಂತೆ ಪರಿಗಣಿಸುತ್ತಾರೆ ಎಂದು ನ್ಯಾಯಾಲಯವು ಅಭಿಪ್ರಾಯಿಸಿದ್ದು, ಪಾದಚಾರಿಗಳ ಸುರಕ್ಷೆಗಾಗಿ ರಾಜ್ಯ ಮಟ್ಟದ ಮತ್ತು ಜಿಲ್ಲಾ ಮಟ್ಟದ ರಸ್ತೆ ಸುರಕ್ಷಾ ಸಮಿತಿಗಳನ್ನು ರಚಿಸುವಂತೆ ಸರಕಾರಗಳಿಗೆ ಸೂಚನೆ ನೀಡಿರುವುದು ಸೂಕ್ತ ಕ್ರಮವಾಗಿದೆ.

ನಗರವೊಂದು ವಾಹನಗಳ ಸುರಕ್ಷಿತ ಸಂಚಾರಕ್ಕಷ್ಟೇ ಅನುಕೂಲಕರವಾಗಿರಬೇಕಾದುದಲ್ಲ. ಕಾಲ್ನಡಿಗೆಯಲ್ಲಿ ಸಂಚರಿಸುವ ಪ್ರತಿಯೊಬ್ಬ ನಾಗರಿಕನ ಸುರಕ್ಷೆಯನ್ನೂ ಪಾಲಿಸುವಂತಾಗಬೇಕು.

ಮುಸುಕಿನಲ್ಲೇ ಕೆಲಸ ಮಾಡುವ ಅಸಾಮಾನ್ಯ ದೈತ್ಯ ಕಂಪನಿಗಳು

ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ
raghavaankana@gmail.com



ಕಳೆದ ವಾರದ ಅಂಕಣದಲ್ಲಿ ಹೆಚ್ಚಿನ ಜನರು ಹೆಸರೇ ಕೇಳಿರದ, ಆದರೆ ಇಡೀ ಉದ್ಯಮವೊಂದನ್ನೇ ಹೆಚ್ಚೂಕಡಿಮೆ ತಮ್ಮ ಏಕಸ್ವಾಮ್ಯದಿಂದ ನಿಯಂತ್ರಿಸುವ ಕೆಲವು ಕಂಪನಿಗಳ ಬಗ್ಗೆ ಬರೆದಿದ್ದೆ. ಆದರೆ ಏಕಸ್ವಾಮ್ಯವಿಲ್ಲದಿದ್ದರೂ ಉದ್ಯಮವೊಂದನ್ನು ನಿಯಂತ್ರಿಸುವ, ಸಂಪೂರ್ಣ ನಿಯಂತ್ರಣವೆಂದೇನೂ ಇಲ್ಲದಿದ್ದರೂ ಈ ಉದ್ಯಮಕ್ಕೆ ಗಣನೀಯ ಕೊಡುಗೆಯನ್ನು ನೀಡಿದ, ಲಕ್ಷಾಂತರ ಜನರಿಗೆ ಉದ್ಯೋಗ ನೀಡಿರುವ, ಆದರೂ ಜಗತ್ತು ಅವುಗಳ ಹೆಸರನ್ನೇ ಕೇಳಿರದ ಕೆಲವೊಂದು ಕಂಪನಿಗಳಿವೆ. ಇವು ನಮ್ಮೆಲ್ಲರ ದೈನಂದಿನ ಜೀವನದಲ್ಲೂ ಅತ್ಯಂತ ನಿಕಟಪಾತ್ರವೊಂದನ್ನು ವಹಿಸಿದ್ದರೂ, ನಮಗದರೇ ಅರಿವೇ ಇಲ್ಲದಂತೆ ನಾವಿದ್ದೇವೆ ಎಂದರೆ ನಂಬುತ್ತೀರಾ?

ಸಂಪೂರ್ಣ ಕೈಗಾರಿಕೆಯೊಂದರ ಮೇಲೆ ಸದ್ದಿಲ್ಲದೆ ಪ್ರಭಾವ ಬೀರುವ, ರಾಷ್ಟ್ರಗಳನ್ನೇ ನಿರ್ಮಿಸುವ, ಲಕ್ಷಾಂತರ ಜನರಿಗೆ ಆಹಾರವನ್ನು ನೀಡುವ, ಜಾಗತಿಕ ವ್ಯಾಪಾರಕ್ಕೇ ಬೆನ್ನೆಲುಬಾಗಿರುವ ಮತ್ತು ಶತಕೋಟಿ ಡಾಲರ್ ಮೌಲ್ಯದ ಯೋಜನೆಗಳನ್ನು ಕಾರ್ಯಗತಗೊಳಿಸುವ ಕೆಲವು ಕಂಪನಿಗಳ ಬಗ್ಗೆ ಮಾಹಿತಿ, ಈ ವಾರದಲ್ಲಿ. ಇವರೆಲ್ಲರೂ ವ್ಯಾಪಾರ ಜಗತ್ತಿನ ಅದೃಶ್ಯ ದೈತ್ಯರು. ಕೆಲವು ಕಂಪನಿಗಳು ಖಾಸಗಿ ಒಡೆತನದಲ್ಲಿವೆ, ಇನ್ನು ಕೆಲವು ಕುಟುಂಬ-ನಿಯಂತ್ರಿತವಾಗಿವೆ, ಮತ್ತೆ ಕೆಲವು ಗ್ರಾಹಕರಿಗೆ ನೇರವಾಗಿ ಮಾರಾಟ ಮಾಡುವ ಬಿ-ಟು-ಸಿ ಅಂದರೆ ಬ್ಯುಸಿನೆಸ್ ಟು ಕನ್ಸ್ಯೂಮರ್ ಬದಲಿಗೆ ಬಿ-ಟು-ಬಿ ಅಂದರೆ ಕಂಪನಿಯಿಂದ ಕಂಪನಿಗೆ ಮಾರಾಟ ಮಾಡುತ್ತಾ, ತೆರೆಮರೆಯಲ್ಲಿ ಕಾರ್ಯನಿರ್ವಹಿಸುತ್ತವೆ. ನಮಗೇ ಗೊತ್ತಿಲ್ಲದಂತೆ ಜೀವನದ ಮೇಲೆ ಅವುಗಳ ಪ್ರಭಾವವು ಅನೇಕ ಗೃಹಬಳಕೆಯ ಬ್ರ್ಯಾಂಡ್‌ಗಳಿಗಿಂತಲೂ ಹೆಚ್ಚಾಗಿರುತ್ತದೆ. ಉದಾಹರಣೆಗೆ ಕಾರ್ಗಿಲ್. ಅಲ್ಲಲ್ಲ, ನಮ್ಮ ಪಾಕಿಸ್ತಾನದ ಗಡಿಯ ಬಳಿಯಿರುವ ಕೆ ಅಕ್ಷರದಿಂದ ಪ್ರಾರಂಭವಾಗುವ ಕಾರ್ಗಿಲ್ ಎಂಬ ಹಳ್ಳಿಯಲ್ಲ, ಬದಲಿಗೆ ಸಿ ಅಕ್ಷರದಿಂದ ಪ್ರಾರಂಭವಾಗುವ, ವಿಶ್ವದ ಆಹಾರ ಪೂರೈಕೆಯ ಹಿಂದಿರುವ ಅಮೆರಿಕನ್ ಕಂಪನಿ ಕಾರ್ಗಿಲ್. 1865ರಲ್ಲಿ ಸ್ಥಾಪನೆಯಾದ ಕಾರ್ಗಿಲ್ ವಿಶ್ವದ ಅತಿದೊಡ್ಡ ಖಾಸಗಿ ಕಂಪನಿಗಳಲ್ಲೊಂದು. ಹೆಚ್ಚಿನ ಜನರು ಕಾರ್ಗಿಲ್ ಎಂಬ ಹೆಸರಿನ ಲೇಬಲ್ ಇರುವ ಉತ್ಪನ್ನವನ್ನು ಎಂದಿಗೂ ಖರೀದಿಸಿರುವುದಿಲ್ಲ, ಆದರೂ ಅದರ ಪೂರೈಕೆ ಸರಪಳಿಗಳ ಮೂಲಕ ಹಾದುಹೋಗುವ ಆಹಾರವನ್ನು ಅವರು ಸೇವಿಸಿರುವ ಸಾಧ್ಯತೆ 85%ಗೂ ಹೆಚ್ಚು. ಈ ಕಂಪನಿಯು ತನ್ನನ್ನು ಧಾನ್ಯ ವ್ಯಾಪಾರ, ಪಶು ಆಹಾರ, ಖಾದ್ಯ ತೈಲಗಳು, ಆಹಾರ ಪದಾರ್ಥಗಳು ಮತ್ತು ಕೃಷಿ ಸರಕುಗಳಲ್ಲಿ ಆಳವಾಗಿ ತೊಡಗಿಸಿಕೊಂಡಿದೆ. ಪ್ರಪಂಚದಾದ್ಯಂತ ಕೃಷಿ ಉತ್ಪನ್ನಗಳನ್ನು ಖರೀದಿಸುತ್ತದೆ, ಸಂಗ್ರಹಿಸುತ್ತದೆ, ಸಾಗಿಸುತ್ತದೆ, ಸಂಸ್ಕರಿಸುತ್ತದೆ ಮತ್ತು ಮಾರಾಟ ಮಾಡುತ್ತದೆ.

ಕೋಚ್ ಇಂಡಸ್ಟ್ರೀಸ್ (Koch) ಎಂಬ ಮತ್ತೊಂದು ಅಮೆರಿಕನ್ ದೈತ್ಯ ವಿಶ್ವದ ಅತಿದೊಡ್ಡ ಖಾಸಗಿ ಕಂಪನಿಗಳಲ್ಲೊಂದು. ಎಂದಿಗೂ ಜಾಹೀರಾತುಗಳಲ್ಲಿ ಕಾಣಸಿಗದ ಈ ಕಂಪನಿ ಮೂಲತಃ ರಾಸಾಯನಿಕಗಳು, ಸಂಸ್ಕರಣೆ, ಹತ್ತುಹಲವು ಉತ್ಪನ್ನಗಳ ಉತ್ಪಾದನೆ, ವಿದ್ಯುಚ್ಛಕ್ತಿ, ಕಾಗದದ ಉತ್ಪನ್ನಗಳು ಮತ್ತು ಲಾಜಿಸ್ಟಿಕ್ಸ್‌ನಂತಹ ಕೈಗಾರಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಸುಮಾರು ಒಂದು ಲಕ್ಷದ ಇಪ್ಪತ್ತು ಸಾವಿರ ಜನರಿಗೆ ನೇರವಾಗಿ ಕೆಲಸ ಕೊಟ್ಟಿರುವ ಈ ಕುಟುಂಬ ನಿಯಂತ್ರಿತ ಕಂಪನಿ ಕೈಗಾರಿಕಾ ವಸ್ತುಗಳಿಂದ ಹಿಡಿದು ದಿನಂದಿನ ಜೀವನದಲ್ಲಿ ಬಳಕೆಯಾಗುವ ಗ್ರಾಹಕ ಸರಕುಗಳವರೆಗೆ ಎಲ್ಲವನ್ನೂ ತಯಾರಿಸುತ್ತವೆ. ಇದರ ಅನೇಕ ಉತ್ಪನ್ನಗಳು ಇತರ ವ್ಯವಹಾರಗಳು ಬಳಸುವ ಮಧ್ಯಂತರ ಘಟಕಗಳಾಗಿರುವುದರಿಂದ, ಅಗಾಧ ಆರ್ಥಿಕ ಹೆಜ್ಜೆಗುರುತನ್ನು ಹೊಂದಿದ್ದರೂ, ಸಾಮಾನ್ಯ ಗ್ರಾಹಕರಿಗೆ ಈ ಕಂಪನಿಯ ಇರುವಿಕೆಯೇ ಗಮನಕ್ಕೆ ಬರಲಿಕ್ಕಿಲ್ಲ.

ಗಗನಚುಂಬಿ ಕಟ್ಟಡಗಳು, ವಿಮಾನ ನಿಲ್ದಾಣಗಳು, ಅಣೆಕಟ್ಟುಗಳು ಮತ್ತು ವಿದ್ಯುತ್ ಸ್ಥಾವರಗಳನ್ನು ನಾವೆಲ್ಲರೂ ನೋಡುತ್ತೇವೆ. ಅವುಗಳ ಮೇಲಿರುವ ಒಡೆತನದ ಕಂಪನಿಯ ಹೆಸರುಗಳನ್ನು ನೋಡಿ ಗುರುತಿಸುತ್ತಾರೆ. ಆದರೆ ಅವುಗಳನ್ನು ನಿಜವಾಗಿಯೂ ನಿರ್ಮಿಸುವ ಕಂಪನಿಗಳ ಬಗ್ಗೆ ಯೋಚಿಸಲು ಹೋಗುವುದೇ ಇಲ್ಲ. ವರ್ಜೀನಿಯಾದ ರೆಸ್ಟನ್‌'ನಲ್ಲಿ ಪ್ರಧಾನ ಕಚೇರಿಯನ್ನು ಹೊಂದಿರುವ ಬೆಕ್ಟೆಲ್ ವಿಶ್ವದ ಅತಿದೊಡ್ಡ ಎಂಜಿನಿಯರಿಂಗ್, ಪ್ರೊಕ್ಯೂರ್‌ಮೆಂಟ್ ಮತ್ತು ನಿರ್ಮಾಣಸಂಸ್ಥೆಗಳಲ್ಲೊಂದು. ನೂರಾಇಪ್ಪತ್ತೈದು ವರ್ಷಗಳ ಇತಿಹಾಸವಿರುವ, ಅಷ್ಟೂ ವರ್ಷಗಳಲ್ಲಿ ಕುಟುಂಬದಿಂದಲೇ ನಿಯಂತ್ರಿತವಾಗಿ ಉಳಿದುಕೊಂಡು, ಯಾವುದೇ ಸ್ಟಾಕ್ ಮಾರುಕಟ್ಟೆಯಲ್ಲಿ ಲಿಸ್ಟ್ ಮಾಡಿಕೊಳ್ಳದೇ ಯಾವ ಶೇರುದಾರರಿಗೂ ನಷ್ಟವನ್ನುಂಟುಮಾಡದೇ ಹಲವುಬಿಲಿಯನ್ನುಗಟ್ಟಲೇ ಮೊತ್ತದ ಪ್ರಾಜೆಕ್ಟುಗಳನ್ನು ನಿರ್ವಹಿಸಿ, ಶತಮಾನದಿಂದಲೂ ಲಾಭವನ್ನೂ ಗಳಿಸುತ್ತಲೇ ಬಂದಿದೆ. ವಿಮಾನ ನಿಲ್ದಾಣಗಳು, ಹೆದ್ದಾರಿಗಳು, ರೈಲು ವ್ಯವಸ್ಥೆಗಳು, ಪರಮಾಣು ಸ್ಥಾವರಗಳು, ಇಂಧನ ಸಂಸ್ಕರಣಾ ಘಟಕಗಳು ಮತ್ತು ಗಣಿಗಾರಿಕೆ ಕಾರ್ಯಾಚರಣೆಗಳು ಸೇರಿದಂತೆ ಇದುವರೆಗೆ ಕೈಗೊಂಡ ಕೆಲವು ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಭಾಗವಹಿಸಿದೆ. ನಮ್ಮ ಅಂಬಾನಿಯವರ ಒಡೆತನದ, ವಿಶ್ವದ ಅತೀದೊಡ್ಡ ತೈಲ ಸಂಸ್ಕರಣಾ ಘಟಕ ಜಾಮ್'ನಗರದಲ್ಲಿರುವುದು ಗೊತ್ತಲ್ಲ. ಅದರ ವಿನ್ಯಾಸ ಮತ್ತು ನಿರ್ಮಾಣ ಎರಡೂ ಬೆಕ್ಟೆಲ್ಲಿನದ್ದೇ. ಆಧುನಿಕ ಜಗತ್ತಿನ ಅದ್ಭುತವಾದ ಹೂವರ್ ಅಣೆಕಟ್ಟು, ಇಂಗ್ಲಿಷ್ ಕಾಲುವೆಯ ನೀರಿನಡಿನಲ್ಲಿ ಕಟ್ಟಿರುವ ಚಾನೆಲ್ ಟನಲ್ ರೈಲು ದಾರಿ, ಚೆರ್ನೋಬಿಲ್ ಸ್ಥಾವರದ ಮೇಲಿನ ಛಾವಣಿ, ಮೊದಲ ಗಲ್ಫ್ ಯುದ್ಧದಲ್ಲಿ ಕುವೈತಿನಲ್ಲಿ ಹತ್ತಿ ಉರಿಯುತ್ತಿದ್ದ ತೈಲಭಾವಿಗಳ ಬೆಂಕಿಯನ್ನು ಆರಿಸುವಿಕೆ ಮತ್ತು ಮರುನಿರ್ಮಾಣ, ಜುಬೈಲ್ ಎಂಬ ಕೈಗಾರಿಕಾ ಮಹಾನಗರದ ನಿರ್ಮಾಣ ಮುಂತಾದ ಮೆಗಾ ಪ್ರಾಜೆಕ್ಟುಗಳನ್ನು ಮಾಡಿರುವ ಈ ಕಂಪನಿಯ ಹೆಸರು ಗೊತ್ತಿದ್ದವರಿಗಷ್ಟೇ ಗೊತ್ತು.

ಅನೇಕ ಜನರು ಬಾಷ್ ಅನ್ನು ವಿದ್ಯುತ್ ಉಪಕರಣಗಳು ಅಥವಾ ಗೃಹೋಪಯೋಗಿ ಉಪಕರಣಗಳ ತಯಾರಕ ಎಂದಷ್ಟೇ ತಿಳಿದಿದ್ದಾರೆ. ಆದರೆ, ಈ ಜರ್ಮನ್ ಕಂಪನಿ ವಿಶ್ವದ ಅತ್ಯಂತ ಪ್ರಭಾವಶಾಲಿ ಕೈಗಾರಿಕಾ ತಂತ್ರಜ್ಞಾನ ಸಂಸ್ಥೆಗಳಲ್ಲೊಂದು ಎಂಬುದು ಹೆಚ್ಚಿನವರ ಗಮನಕ್ಕೆ ಬಂದಿರುವುದಿಲ್ಲ. ಬಾಷ್ ವಿಶ್ವಾದ್ಯಂತ ಆಟೋಮೊಬೈಲ್ ತಯಾರಕರಿಗೆ ಅತ್ಯಂತ ಸೂಕ್ಷ್ಮ ಮತ್ತು ನಿರ್ಣಾಯಕ ಭಾಗಗಳನ್ನು ಪೂರೈಸುತ್ತದೆ. ಬ್ರೇಕಿಂಗ್ ಸಿಸ್ಟಮ್‌ಗಳು ಮತ್ತು ಇಂಧನ ಇಂಜೆಕ್ಷನ್ ತಂತ್ರಜ್ಞಾನಗಳಿಂದ ಹಿಡಿದು, ಸೆನ್ಸರುಗಳು ಮತ್ತು ಎಲೆಕ್ಟ್ರಾನಿಕ್ಸ್‌ಗಳವರೆಗೆ, ಲೆಕ್ಕವಿಲ್ಲದಷ್ಟು ವಾಹನಗಳು ಬಾಷ್‌'ನ ಪೇಟೆಂಟ್'ಯುಕ್ತ ತಂತ್ರಜ್ಞಾನಗಳನ್ನು ಅವಲಂಬಿಸಿವೆ.

ಇದೇ ರೀತಿಯ ಇನ್ನೊಂದು ದೈತ್ಯ ಮೇರ್ಸ್ಕ್ (Maersk). ಜಾಗತಿಕ ವ್ಯಾಪಾರದ ಅಪಧಮನಿಯಾಗಿ ಕೆಲಸ ಮಾಡುವ ಈ ಕಂಪನಿಯ ಪೂರೈಕೆ ಸರಪಳಿಯ ಮೂಲಕವೇ ನಾವು ಖರೀದಿಸುವ ಬಹುತೇಕ ವಸ್ತುಗಳು ಪ್ರಯಾಣಿಸಿರುತ್ತವೆ. ಜಾಗತಿಕ ವ್ಯಾಪಾರದ ಗಮನಾರ್ಹ ಭಾಗವು ಒಂದಲ್ಲಾ ಒಂದು ಹಂತದಲ್ಲಿ ಡೆನ್ಮಾರ್ಕ್‌ನ ಮಾರ್ಸ್ಕ್ ಜಾಲದ ಮೂಲಕವೇ ಹಾದುಹೋಗಿರುತ್ತದೆ. ವಿಶ್ವದ ಅತಿದೊಡ್ಡ ಕಂಟೇನರ್ ಶಿಪ್ಪಿಂಗ್ ಮತ್ತು ಲಾಜಿಸ್ಟಿಕ್ಸ್ ಕಂಪನಿಗಳಲ್ಲಿ ಒಂದಾಗಿರುವ ಮೇರ್ಸ್ಕ್, ದೇಶಗಳ ಅಲ್ಲಲ್ಲ ಖಂಡಗಳ ನಡುವೆ ಸರಕುಗಳನ್ನು ಸಾಗಿಸಲು ಸಹಾಯ ಮಾಡುತ್ತದೆ. ಏಷ್ಯಾದ ಎಲೆಕ್ಟ್ರಾನಿಕ್ಸ್ ಆಗಿರಲಿ, ಯುರೋಪಿನ ಯಂತ್ರೋಪಕರಣಗಳಾಗಿರಲಿ ಅಥವಾ ಅಮೆರಿಕದ ಕೃಷಿ ಉತ್ಪನ್ನಗಳಾಗಿರಲಿ, ಈ ಕಂಪನಿಯು ಜಾಗತಿಕ ವಾಣಿಜ್ಯವಲಯದಲ್ಲಿ ನಿರ್ಣಾಯಕ ಕೊಂಡಿಯಾಗಿ ರೂಪುಗೊಳ್ಳುತ್ತದೆ. ರಸ್ತೆಯಲ್ಲಿ ಆಗಾಗ ಟ್ರಕ್ಕುಗಳ ಮೇಲೆ ಕೂತಿರುವ ದೈತ್ಯಗಾತ್ರದ ಮೇರ್ಸ್ಕ್ ಹೆಸರಿ ಕಂಟೈನರುಗಳನ್ನು ನೋಡಿದ್ದು ಬಿಟ್ಟರೆ, ಹೆಚ್ಚಿನ ಗ್ರಾಹಕರು ಈ ಹೆಸರನ್ನು ಎಂದಿಗೂ ಗಮನಿಸಿರುವುದಿಲ್ಲ. ಬ್ರಿಟನ್‌ನ ಜಾನ್ ಸ್ವೈರ್ ಸನ್ಸ್, ಹಡಗು ಸಾಗಣೆ, ವಾಯುಯಾನ, ಪಾನೀಯಗಳು ಮತ್ತು ಆಸ್ತಿಯಲ್ಲಿ ಪ್ರಭಾವ ಹೊಂದಿರುವ ಶತಮಾನಗಳಷ್ಟು ಹಳೆಯದಾದ ಸಂಘಟನೆ. ಯುಎಇಯ ಡಿಪಿ ವರ್ಲ್ಡ್, ಜಾಗತಿಕವಾಗಿ ಅತ್ಯಂತ ಪ್ರಭಾವಶಾಲಿ ಬಂದರು ನಿರ್ವಹಣೆ ಮತ್ತು ಲಾಜಿಸ್ಟಿಕ್ಸ್ ಕಂಪನಿಗಳಲ್ಲೊಂದು. ಲೂಯಿ ವಿಟಾನ್ ಬ್ರಾಂಡಿನ ಬಗ್ಗೆ ಎಲ್ಲರಿಗೂ ಗೊತ್ತಿದ್ದರೂ, ಅದರ ಮಾಲೀಕರಾದ ಅರ್ನಾಲ್ಟ್ ಕುಟುಂಬದ ಬಗ್ಗೆ ಯಾರಿಗೂ ಹೆಚ್ಚು ಗೊತ್ತಿರಲಿಕ್ಕಿಲ್ಲ. ಹಾಗೆಯೇ ಗುಚ್ಚಿ, ವೈಎಸ್ಎಲ್, ಬೆಲೆನ್ಸಿಯಾಗ, ಬೊಟೆಗ್ ವೆನ್ನೀಟ, ಅಲೆಕ್ಸಾಂಡರ್ ಮೆಕ್-ಕ್ವೀನ್ ಮುಂತಾದ ಪ್ರಸಿದ್ಧ ಬ್ರಾಂಡುಗಳ ಬಗ್ಗೆ ಗೊತ್ತಿರುವ ಯಾರಿಗೂ ಅದರ ಹೋಲ್ಡಿಂಗ್ ಕಂಪನಿಯಾದ ಫ್ಯಾಷನ್ ದೈತ್ಯ ಕೆರಿಂಗ್ ಬಗ್ಗೆಯಾಗಲೀ, ಮತ್ತದರ ಮಾಲೀಕರಾದ ಪಿನಾಲ್ಟ್ ಕುಟುಂಬದ ಬಗ್ಗೆ ತಿಳಿದಿರಲಿಕ್ಕಿಲ್ಲ.

ಇವೆಲ್ಲವೂ ಹೊರಗೆಲ್ಲೂ ಕಾಣಿಸಿಕೊಳ್ಳಲು ಬಯಸದ, ಗೌಜುಗದ್ದಲದಿಂದ ದೂರವೇ ಇದ್ದು ಅತ್ಯಂತ ಖಾಸಗಿಯಾಗಿ ಬದುಕಲಿಚ್ಚಿಸುವ ಜನರಿಂದ ನಡೆಸಲ್ಪಡುವ ಖಾಸಗಿ ಕಂಪನಿಗಳು. ಆದರೂ ಈ ಕಂಪನಿಗಳ ಮಾಲೀಕರು ಆಯಾ ದೇಶದ ಪ್ರಧಾನಿ ಅಥವಾ ಅಧ್ಯಕ್ಷನಿಗೆ ರಾತ್ರಿ ಹನ್ನೊಂದಕ್ಕೂ ಫೋನಾಯಿಸಿ ನಿದ್ದೆಯಿಂದ ಎಬ್ಬಿಸಬಲ್ಲಷ್ಟು ಬಲಿಷ್ಠರು. ಈ ಕಂಪನಿಗಳು ಒಂದುವೇಳೆ ಸ್ಟಾಕ್ ಮಾರ್ಕೆಟ್ಟಿನಲ್ಲಿ ಲಿಸ್ಟ್ ಆಗಿದ್ದಿದ್ದರೆ ನಿಸ್ಸಂದೇಹವಾಗಿ ಫಾರ್ಚೂನ್ 100 ಕಂಪನಿಗಳಪಟ್ಟಿಯಲ್ಲಿ ಕಂಡುಬರುತ್ತಿದ್ದರು. ಪ್ರತಿಯೊಂದು ಕಂಪನಿಯೂ ಲಕ್ಷಕ್ಕೂ ಹೆಚ್ಚು ಜನರಿಗೆ ನೇರ ಉದ್ಯಮ ಕಲ್ಪಿಸಿಕೊಟ್ಟಂತವು. ಸಾಮಾಜಿಕ ಮಾಧ್ಯಮದಲ್ಲಿ ವಿರಳವಾಗಿ ಕಾಣಿಸಿಕೊಂಡು, ತಮ್ಮ ವ್ಯವಹಾರದಲ್ಲಿ ಅಸಾಧಾರಣ ಪ್ರಾಬಲ್ಯ ಸಾಧಿಸುವ ಇಂತಹ ಕಂಪನಿಗಳು ನಿಜಕ್ಕೂ ಮಾನ್ಯಯೋಗ್ಯ ಹಾಗೂ ವ್ಯವಹಾರ ಚತುರತೆಯ ಪಾಠ ಕಲಿಸಬಲ್ಲ ರತ್ನಗಳು.

ಪರಿಸರದ ಉಳಿವಿಗಾಗಿ ಗೋವು ಅತ್ಯವಶ್ಯಕ

ಧರಣಿ ಮಂಡಲ
• ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com



ಪ್ರಕೃತಿಯಲ್ಲಿ ಆಗುವ ಬದಲಾವಣೆಗಳನ್ನು ಬಹಳ ಪೂರ್ವದಲ್ಲಿಯೇ ಗ್ರಹಿಸುವ ಶಕ್ತಿಯನ್ನು ಭಾರತೀಯ ಗೋತಳಿಗಳು ಹೊಂದಿವೆ. ಮನೆಯ ಸದಸ್ಯರಲ್ಲಿ ಯಾರಿಗಾದರೂ ಅನಾರೋಗ್ಯವಾದಾಗ ಅಥವಾ ಮನೆಯ ಹಿರಿಯರ ಮೃತ್ಯುವಾದಾಗ ಆ ಮನೆಯಲ್ಲಿರುವ ಗೋವುಗಳು ಅದಕ್ಕೆ ಸ್ಪಂದಿಸಿ ಅನ್ನ, ಆಹಾರ ಮತ್ತು ನೀರನ್ನು ಬಿಟ್ಟ ಉದಾಹರಣೆಗಳು ಸಾಕಷ್ಟು ಕಂಡುಬರುತ್ತವೆ. 1993, ಸೆಪ್ಟೆಂಬರ್ 30ರಂದು ಮಹಾರಾಷ್ಟ್ರದ ಲಾತೂರ್ ಜಿಲ್ಲೆಯಲ್ಲಿ ಭೂಕಂಪ ಸಂಭವಿಸಿ ಅಪಾರ ಪ್ರಮಾಣದ ಹಾನಿಯಾದದ್ದು ಮರೆಯಲಾಗದ ಒಂದು ದುರಂತ. ಈ ದುರಂತಕ್ಕೆ ಕಾರಣವಾದ ಭೂಕಂಪ ಸಂಭವಿಸುವ ಕೆಲ ದಿನಗಳ ಮೊದಲು ಆ ಭಾಗದ ದೇವಣಿ ತಳಿಯ ಗೋವುಗಳು ಯಾವುದೇ ಕಾರಣವಿಲ್ಲದೆ ಕೆನೆಯುವುದು, ಕೂಗುವುದು ಮತ್ತು ಸುಮ್ಮಸುಮ್ಮನೆ ಕುಣಿದಾಡುತ್ತಿದ್ದವು. ಅರ್ಥಾತ್ ಭೂಮಿಯಲ್ಲಿ ಏನೋ ಬದಲಾವಣೆ ಬರಲಿದೆ ಎಂಬುದು ಮಾನವನಿಗೆ ಅರಿವಾಗುವ ಮೊದಲೇ ಅವುಗಳ ಒಳಗಣ್ಣಿಗೆ ಗೋಚರವಾಗಿತ್ತು ಎನ್ನುವುದು ದಾಖಲಾದ ಸಂಗತಿ. ಹಾಗೆಯೇ ಕೆಲವು ವರ್ಷಗಳ ಹಿಂದೆ ಘಟಿಸಿದ ಭೀಕರ ಸುನಾಮಿಯ ಸಂದರ್ಭದಲ್ಲಿ ತಮಿಳುನಾಡಿನ ಗೋತಳಿಗಳಾದ ಬರಗೂರು, ಅಂಬ್ಲಾಚೆರಿ ಮತ್ತು ಕಂಗಾಯಂ ಸೇರಿದಂತೆ ಉಳಿದೆಲ್ಲಾ ಗೋವುಗಳು ಕೂಡಾ ತಮ್ಮ ವಿಚಿತ್ರ ವರ್ತನೆಗಳಿಂದ ವಾತಾವರಣದ ಬದಲಾವಣೆಗಳನ್ನು ಗುರುತಿಸಿದ್ದು ದಾಖಲಾಗಿದೆ.

ಭೂಮಿಯ ಅಯಸ್ಕಾಂತೀಯ ಪ್ರದೇಶದ ಬಗ್ಗೆ ಗೋವುಗಳಿಗೆ ಪ್ರಜ್ಞೆ ಇರುವುದು ವೈಜ್ಞಾನಿಕವಾಗಿ ಸಾಬೀತಾಗಿದೆ. ಇವು ಪ್ರಜ್ಞಾಪೂರ್ವಕವಾಗಿ ಉತ್ತರ ದಕ್ಷಿಣಾಭಿಮುಖವಾಗಿಯೇ ಹೆಚ್ಚು ಹೊತ್ತು ಕಾಲ ಕಳೆಯುತ್ತವೆ. ಇವು ವಿಶ್ರಮಿಸುತ್ತಿರುವಾಗ ಇಲ್ಲವೇ ಮೇಯುವಾಗ ತಮ್ಮ ದೇಹವು ಉತ್ತರ ಮತ್ತು ದಕ್ಷಿಣ ದಿಕ್ಕಿನತ್ತಲೇ ಇರುವಂತೆ ನೋಡಿಕೊಳ್ಳುತ್ತವೆ. ಉತ್ತರ ಮತ್ತು ದಕ್ಷಿಣ ಧ್ರುವವನ್ನು ಗುರುತಿಸುವ ಕಂಪಾಸ್‌ನ ಮುಳ್ಳಿನಂತೆಯೇ ಇವು ವರ್ತಿಸುತ್ತವೆ. ಇದಕ್ಕೆ ಇವುಗಳಿಗೆ ಭೂಮಿಯ ಅಯಸ್ಕಾಂತ ಭೂಪ್ರದೇಶದ ಪ್ರಜ್ಞೆ ಇರುವುದೇ ಕಾರಣ ಎಂಬುದಾಗಿ ಸಂಶೋಧಕರು ಅಭಿಪ್ರಾಯಿಸಿದ್ದಾರೆ. ಅಂತರ್ಜಾಲತಾಣ ಗೂಗಲ್‌ನ ಅರ್ಥ್ ಸಾಫ್ಟ್‌ವೇರ್ ನೆರವಿನಿಂದ ಭೂಮಿಯ ವಿವಿಧ ಭಾಗಗಳಲ್ಲಿ ಸೆರೆ ಹಿಡಿದಿರುವ ಗೋವುಗಳ ಚಿತ್ರಗಳು ಈ ವಾದವನ್ನು ಪುಷ್ಟೀಕರಿಸುತ್ತವೆ.

ಚೀನಾ, ಜಪಾನ್ ಮತ್ತು ಪೂರ್ವ ಏಷ್ಯಾದ ಇತರ ದೇಶಗಳಲ್ಲಿ ಗೋವುಗಳಂತೆ ವಿವಿಧ ಸಮುದ್ರ ಜೀವಿಗಳನ್ನು ಸಹ ಅಪಾರ ಪ್ರಮಾಣದಲ್ಲಿ ತಿನ್ನಲಾಗುತ್ತಿದೆ. ಇಂಡೋನೇಷ್ಯಾದಲ್ಲೂ ಸಹ ಅಪಾರ ಪ್ರಮಾಣದಲ್ಲಿ ಜಲಚರ ಜೀವಿಗಳನ್ನು ಇಂದಿಗೂ ಭಕ್ಷಿಸಲಾಗುತ್ತಿದೆ. ಹಲವು ವರ್ಷಗಳ ಹಿಂದೆ ಇದೇ ಇಂಡೋನೇಷ್ಯಾದಲ್ಲಿ ಸುನಾಮಿ ಕಾಣಿಸಿಕೊಂಡು ಅಪಾರ ಪ್ರಮಾಣದ ಪ್ರಾಣ ಹಾನಿ ಸಂಭವಿಸಿದ್ದನ್ನು ನಾವು ಕಂಡಿದ್ದೇವೆ. ಇದಕ್ಕೂ ಮುಂಚೆ ಇಂಡೋನೇಷ್ಯಾದ ಆಸುಪಾಸಿನಲ್ಲಿ ಮತ್ತು ಇದಕ್ಕೆ ಅಂಟಿಕೊಂಡಿರುವ ಹಿಂದೂ ಮಹಾಸಾಗರದಲ್ಲಿ ಬಹುದೊಡ್ಡ ಪ್ರಮಾಣದಲ್ಲಿ ಮೀನುಗಳನ್ನು ಹಿಡಿಯಲಾಗಿತ್ತು. ಇಂತಹ ಸಮುದ್ರದಲ್ಲಿ ಇರುವ ಜೀವಿಗಳು ಸಮುದ್ರದ ಅಡಿಯಲ್ಲಿರುವ ಭೂಮಿಯ ಸಮತೋಲನವನ್ನು ಕಾಪಾಡುವುದನ್ನು ವೈಜ್ಞಾನಿಕರು ದೃಢಪಡಿಸಿದ್ದರು. ಇಂತಹ ಜೀವಿಗಳನ್ನು ಯಥೇಚ್ಛವಾಗಿ ಭಕ್ಷಿಸಿದಾಗ ಅವುಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿ ಪ್ರಕೃತಿ ವಿಕೋಪ ಉಂಟಾಗುವ ಸಾಧ್ಯತೆ ಹೆಚ್ಚಾಗುತ್ತದೆ. ಹಾಗಾಗಿ ಸಮುದ್ರದ ಈ ಜೀವಿಗಳ ಸಂಖ್ಯೆ ಕಡಿಮೆಯಾದಾಗ ಸುನಾಮಿ ಕಾಣಿಸಿಕೊಂಡು ಸಮುದ್ರದ ದಡದಲ್ಲಿ ವಾಸಿಸುವವರನ್ನು ಅದು ನುಂಗಿ ಹಾಕಿದೆ ಎಂಬುದಾಗಿ ವಿಶ್ವದ ಖ್ಯಾತ ಸಮುದ್ರ ವಿಜ್ಞಾನಿಗಳು ಅಭಿಪ್ರಾಯಿಸಿದ್ದರು. ಇದರಿಂದ ನಮಗೆ ತಿಳಿಯುವುದೇನೆಂದರೆ ಪ್ರಪಂಚದಲ್ಲಿ ಆಗುವ ಪ್ರಾಕೃತಿಕ ವಿಪತ್ತುಗಳ ಮೂಲ ಹಿಂಸೆ ಎಂಬುದು. ಹಾಗೆಯೇ ಪ್ರಪಂಚದಲ್ಲಿ ಸಂಭವಿಸುತ್ತಿರುವ ಭೂಕಂಪ, ಜ್ವಾಲಾಮುಖಿ ಮತ್ತು ಸುನಾಮಿಯಂತಹ ವಿಪತ್ತುಗಳನ್ನು ಅಧ್ಯಯನ ಮಾಡಿದಂತಹ ವಿಶ್ವದ ಖ್ಯಾತ ವೈಜ್ಞಾನಿಕರ ಸಂಶೋಧನೆಯಿಂದ ತಿಳಿದುಬರುವುದೇನೆಂದರೆ ಭೂಮಿ ಹಾಗೂ ಸಮುದ್ರದಲ್ಲಿರುವ ಜೀವಿಗಳನ್ನು ದೊಡ್ಡ ಪ್ರಮಾಣದಲ್ಲಿ ನಾಶ ಮಾಡಿದಾಗ ಇಂತಹ ವಿಪತ್ತುಗಳು ಮುಂದೊಂದು ದಿನ ಮಾನವನನ್ನೇ ನುಂಗಿ ಹಾಕುತ್ತವೆ ಎಂದು. ಇದಕ್ಕೆ ಸಾಕ್ಷಿಯೆಂಬಂತೆ ಲಾತೂರ್ ಭೂಕಂಪವಾದ ನಂತರ ದೆಹಲಿಯಲ್ಲಿ ನಡೆದ ಚಿಂತನಾ ಸಭೆಯಲ್ಲಿ ಆ ಪ್ರದೇಶದ ಸುತ್ತ ಮುತ್ತ ಪ್ರತಿನಿತ್ಯ ನಡೆಯುತ್ತಿರುವ ಗೋವುಗಳ ಹತ್ಯೆಯ ಪರಿಣಾಮವೇ ಪ್ರಕೃತಿ ವಿಕೋಪ ಹಾಗೂ ನೆರೆ ಹಾವಳಿಯಂತಹ ಅನಾಹುತಕ್ಕೆ ಕಾರಣ ಎಂದು ಅಭಿಪ್ರಾಯಿಸಲಾಯಿತು. ಇದರೊಂದಿಗೆ ಕಸಾಯಿಖಾನೆಯಲ್ಲಿ ಪ್ರತಿ ನಿತ್ಯ ಹತ್ಯೆಯಾಗುವ ಗೋವುಗಳ ಆಕ್ರಂದನವು ಭೂಕಂಪಕ್ಕೆ ಪ್ರಮುಖ ಕಾರಣ ಎಂಬುದಾಗಿ ಉತ್ತರ ಕಾಶಿ ಮತ್ತು ಲಾತೂರಿನ ಭೂಕಂಪನದ ಅಧ್ಯಯನದ ವರದಿ ಸಹ ದೃಢಪಡಿಸಿತ್ತು.

ಮತ್ತೊಂದೆಡೆ ವಿಶ್ವ ಸಂಸ್ಥೆಯು ಪರಿಸರ ವರದಿಯೊಂದನ್ನು ಬಹಿರಂಗಪಡಿಸಿದೆ. ಅದರ ಪ್ರಕಾರ ಪ್ರಸಕ್ತ ಜಗತ್ತಿನಲ್ಲಿ ಮಾಂಸ ತಯಾರಿಕೆಯ ಬೇರೆ ಬೇರೆ ಹಂತಗಳಲ್ಲಿ ಬಿಡುಗಡೆಯಾಗುವ ಹಸಿರು ಮನೆ ಅನಿಲ ಜಗತ್ತಿನ ಒಟ್ಟು ವಾಹನಗಳು ಹಾಗೂ ಕೈಗಾರಿಕೆಗಳು ಉಗುಳುವ ವಿಷಾನಿಲಕ್ಕಿಂತಲೂ ಹೆಚ್ಚಾಗಿದೆ. ಮಾಂಸಾಹಾರ ತಯಾರಿಕೆ ಸಂದರ್ಭದಲ್ಲಿ ಬಿಡುಗಡೆಯಾಗುವ ಮಿಥೇನ್ ಜಾಗತಿಕ ತಾಪಮಾನಕ್ಕೆ ಕಾರಣವಾಗುವ ಇಂಗಾಲದ ಡೈ ಆಕ್ಸೈಡ್‌ಗಿಂತ 23 ಪಟ್ಟು ಹೆಚ್ಚು ಅಪಾಯಕಾರಿಯಾಗಿದೆ ಎಂಬುದು ವರದಿಯಿಂದ ಬಹಿರಂಗವಾಗಿತ್ತು. ಒಬ್ಬ ಮನುಷ್ಯ ಮಾಂಸಾಹಾರವನ್ನು ತ್ಯಜಿಸಿದನೆಂದರೆ ಆತ ಪರಿಸರ ಮಾಲಿನ್ಯಕ್ಕೆ ಕಾರಣವಾಗುವ ಸುಮಾರು 1.5 ಟನ್‌ಗಳಷ್ಟು ಇಂಗಾಲದ ಡೈ ಆಕ್ಸೈಡ್ ಎಂಬ ವಿಷಾನಿಲದ ಉತ್ಪಾದನೆಯನ್ನು ತಡೆದಂತಾಗುತ್ತದೆ. ಕೆಲವರು ಮಾಂಸಾಹಾರ ಸೇವಿಸುತ್ತಿರುವುದರಿಂದ ಅತ್ಯಧಿಕ ಮಂದಿ ಹೆಚ್ಚಿನ ಪ್ರಮಾಣದಲ್ಲಿ ಮಿಥೇನ್, ನೈಟ್ರಸ್ ಆಕ್ಸೈಡ್ ಮತ್ತು ಕಾರ್ಬನ್ ಡೈ ಆಕ್ಸೈಡ್‌ನಂತಹ ವಿಷಾನಿಲವನ್ನು ಕುಡಿಯುವಂತಾಗಿದೆ. ಹಾಗೆಯೇ ಮತ್ತೊಂದು ಅಧ್ಯಯನದ ಪ್ರಕಾರ ಮಾಂಸಕ್ಕಾಗಿ ಪ್ರತಿ ವರ್ಷ ವಿಶ್ವದಾದ್ಯಂತ ಸುಮಾರು 2,500 ಕೋಟಿಗೂ ಹೆಚ್ಚು ಪ್ರಾಣಿಗಳನ್ನು ಕೊಲ್ಲಲಾಗುತ್ತಿದೆ. ಅಮೆರಿಕಾ ಒಂದರಲ್ಲೇ ಒಬ್ಬ ವ್ಯಕ್ತಿ ಒಂದು ವರ್ಷದಲ್ಲಿ ಸುಮಾರು 90 ಪ್ರಾಣಿಗಳನ್ನು ತಿನ್ನುತ್ತಿದ್ದಾನೆ. ಇವರೆಲ್ಲರೂ ಮಾಂಸಾಹಾರವನ್ನು ತ್ಯಜಿಸಿದರೆ ಮುಂದಿನ ಪೀಳಿಗೆಗೂ ನಾವು ಈ ಭೂಮಿಯನ್ನು ಉಳಿಸಬಹುದಾಗಿದೆ.

ಭಾರತೀಯ ಗೋವಿನ ಉತ್ಪನ್ನವಾದ ಸಗಣಿ ಅಥವಾ ಗೋಮಯ ಅಣುವಿಕಿರಣವನ್ನು ತಡೆಗಟ್ಟುತ್ತದೆಂದು ಜಪಾನಿನ ವಿಜ್ಞಾನಿಗಳು ಸಂಶೋಧನೆಯ ಮೂಲಕ ಬಹಳ ಹಿಂದೆಯೇ ದೃಢಪಡಿಸಿದ್ದಾರೆ. ಗೋಮಯ ತೀವ್ರತರ ಅಣುವಿಕಿರಣ ವಿರೋಧಿಯಾದ್ದರಿಂದ ಇಂದಿನ ವಾತಾವರಣದಲ್ಲಿ ಕಾರ್ಖಾನೆಗಳ ತ್ಯಾಜ್ಯದ ಮೂಲಕ ಪರಿಸರದಲ್ಲಿ ಹರಡಿಕೊಳ್ಳುವ ವಿಕಿರಣ ಇತ್ಯಾದಿಗಳಿಗೆ ಗೋಮಯ ಪರಿಣಾಮಕಾರಿ ಉತ್ತರವಾಗಿದೆ ಎಂಬುದನ್ನು ಕಂಡುಕೊಂಡಿದ್ದಾರೆ. ಹಾಗೆಯೇ ಸಗಣಿಯಿಂದ ಸಾರಿಸಿದ ನೆಲ ಅಥವಾ ಗೋಡೆ ಉಷ್ಣ, ಶೀತಗಳನ್ನು ನಿಯಂತ್ರಿಸುತ್ತದೆ ಮತ್ತು ಹಾನಿಕಾರಕಗಳ ಪ್ರವೇಶವನ್ನು ತಡೆಯುತ್ತದೆ ಎಂಬುದು ದೃಢಪಟ್ಟಿದೆ. ಗೋಡೆಗೆ ಮತ್ತು ಛಾವಣಿಗೆ ಸಗಣಿಯ ಲೇಪನ ಮಾಡಿದರೆ ಅದು ರೇಡಿಯೇಷನ್‌ನನ್ನು ತಡೆದು ನಿಲ್ಲಿಸುವುದು ಸಾಬೀತಾಗಿದೆ. ಅಷ್ಟೇ ಅಲ್ಲದೆ ಮಿಂಚು ಹೊಡೆಯುವುದರಿಂದ ಆಗುವ ದುಷ್ಪರಿಣಾಮವನ್ನು ತಪ್ಪಿಸುತ್ತದೆ ಎಂಬುದನ್ನು ವೈಜ್ಞಾನಿಕರು ಕಂಡುಕೊಂಡಿದ್ದಾರೆ.

ಜಪಾನ್‌ನ ಮೇಲೆ 1945ರಲ್ಲಿ ಅಮೆರಿಕಾ ಅಣುಬಾಂಬ್ ಹಾಕಿದಾಗ ಉಂಟಾದ ಅಣುವಿಕಿರಣದಿಂದ ಜಪಾನ್ ದೇಶ ಇಂದಿಗೂ ಪೂರ್ತಿ ಚೇತರಿಸಿಕೊಂಡಿಲ್ಲ. ಆದರೆ ಭಾರತೀಯ ಗೋವಿನ ಸಗಣಿಯನ್ನು ಸಾರಿಸಿದರೆ ವಿಕಿರಣದ ತೊಂದರೆಯನ್ನು ನಿವಾರಿಸಿಕೊಳ್ಳಬಹುದೆಂದು ತಿಳಿದು ಆ ಮೂಲಕ ಪ್ರಯತ್ನಿಸಿ ಜಪಾನ್‌ನ ಅನೇಕ ಕಡೆ ಅಂದಿನಿಂದ ಇಂದಿನವರೆಗೂ ಗೋಮಯವನ್ನು ಈ ಉದ್ದೇಶಕ್ಕಾಗಿ ಬಳಸಲಾಗುತ್ತಿದೆ. ಅಷ್ಟೇ ಅಲ್ಲದೆ ಸಗಣಿಯ ನೀರಿನಲ್ಲಿ ಬಟ್ಟೆಯನ್ನು ನೆನೆಸಿ ಒಣಗಿಸಿ ಧರಿಸುವ ಕಾರಣದಿಂದ ಅಣುವಿಕಿರಣದಿಂದ ರಕ್ಷಿತರಾಗುತ್ತಿದ್ದಾರೆ. ಗೋಮಯದ ಬೂದಿಯನ್ನು ನೀರಿನಲ್ಲಿ ಕರಡಿ ದುರ್ಗಂಧ ಬರುವ ವಸ್ತುವಿನ ಮೇಲೆ ಎರಚಿದರೆ ದುರ್ಗಂಧ ನಾಶವಾಗುವುದನ್ನು ಅರಿತು ಕಾರ್ಯಪ್ರವರ್ತರಾಗಿದ್ದಾರೆ. ಒಮ್ಮೆ ರಷ್ಯಾದ ಅಣು ಕೇಂದ್ರದಲ್ಲಿ ರೇಡಿಯೋ ಆ್ಯಕ್ಟಿವ್ ದ್ರವ್ಯವು ಸೋರಿಕೆಯಾದಾಗ ಅಣುವಿಕಿರಣದಿಂದ ರಕ್ಷಿಸಿಕೊಳ್ಳಲು, ಸುತ್ತಮುತ್ತಲಿನ ಹಳ್ಳಿಗರು ಆಕಳ ಸಗಣಿಯನ್ನು ತಮ್ಮ ಗುಡಿಸಲುಗಳಿಗೆ ಮೆತ್ತಿ ಸಂರಕ್ಷಿಸಿಕೊಂಡದ್ದು ದಾಖಲಾಗಿದೆ. ನಂತರ ಪರೀಕ್ಷಿಸಿದಾಗ ಹಳ್ಳಿಯ ಜನರಿಗೆ ಅದು ರಕ್ಷಣೆ ನೀಡಿದ್ದು ಸತ್ಯವೆಂದು ತಿಳಿದು ಬಂದಿದೆ.

ಮತ್ತೊಂದು ಸಮೀಕ್ಷೆಯ ಪ್ರಕಾರ ಒಂದು ಗೋವಿನಿಂದ ಪ್ರತಿವರ್ಷ 4500 ಲೀಟರ್ ಬಯೋಗ್ಯಾಸ್ ದೊರೆಯುತ್ತದೆ. ಈ ಬಯೋಗ್ಯಾಸ್‌ನ ಬಳಕೆಯಿಂದ 6 ಕೋಟಿ 80 ಲಕ್ಷ ಟನ್ ಕಟ್ಟಿಗೆ ಉರುವಲಾಗಿ ಬಳಸುವುದು ತಪ್ಪುತ್ತಿದೆ. ಅಷ್ಟು ಕಟ್ಟಿಗೆ ಪಡೆಯಲು 14 ಕೋಟಿ ಮರಗಳು ಉಳಿದು ಪರಿಸರ ಸಂರಕ್ಷಣೆಯಾಗುತ್ತಿದೆ. ಇನ್ನೊಂದು ಅಚ್ಚರಿಯ ವಿಚಾರವೇನೆಂದರೆ 2005ರ ಆಗಸ್ಟ್ 31 ರಂದು ಅಮೆರಿಕದ ವಾಷಿಂಗ್ಟನ್ ಡಿ.ಸಿ.ಯಲ್ಲಿ ನಡೆದ ಅಮೆರಿಕನ್ ಕೆಮಿಕಲ್ ಸೊಸೈಟಿಯ ಸಭೆಯಲ್ಲಿ ಮಂಡನೆಯಾದ ವರದಿಯಲ್ಲಿ, ವಿಶ್ವದಲ್ಲಿ ಹೆಚ್ಚುತ್ತಿರುವ ತಾಪಮಾನಕ್ಕೆ ಕಾರಣವಾಗುವ ಅನಿಲಗಳ ಹೊರಸೂಸುವಿಕೆಗೆ ಮತ್ತು ಜಗತ್ತನ್ನು ತಾಪದ ಮಾದರಿಯಿಂದ ರಕ್ಷಿಸಬೇಕೆಂದರೆ ನಮ್ಮಲ್ಲಿರುವ ಈಗಿನ ಏಕೈಕ ಅಸ್ತ್ರವೆಂದರೆ 'ಗೋವು' ಎಂದು ಅಭಿಪ್ರಾಯಿಸಲಾಗಿದೆ. ಇಷ್ಟು ಸಾಕಲ್ಲವೇ ಧರ್ಮಾತೀತವಾಗಿ ಗೋಸಂಪತ್ತನ್ನು ಉಳಿಸಿ ಬೆಳೆಸಲು..?

ಏಕರೂಪವಾಗಿ ಉಳಿಯುವುದು

ಸ್ವೈವ ಪರಂ ನ ವಿನಶ್ಯತಿ ತನುರಪಿ ಯಾ ಶ್ರೀರ್ನಿವೇಶಿತಾ ಸತ್ಸು।
ಅವಶಿಷ್ಯತೇ ಹಿಮಾಂಶೋಃ ಸೈವ ಕಲಾ ಯಾ ಸ್ಥಿತಾ ಶಂಭೌ ।। -ಸುಭಾಷಿತಾವಲಿ

ಸ್ವಲ್ಪವಾದರೂ ಸರಿ. ಸಜ್ಜನರಿಗೆ ದಾನ ಮಾಡಿದ್ದಷ್ಟೇ ಶಾಶ್ವತವಾಗಿ ಉಳಿಯುವುದು. ಶಿವನ ಶಿರಸ್ಸಿನಲ್ಲಿದ್ದ ಅರೆಕೊರೆಯಾದ ಚಂದ್ರನ ಕಲೆಮಾತ್ರ ಹೆಚ್ಚುಕಡಿಮೆಯಾಗದೆ ಏಕರೂಪವಾಗಿ ಉಳಿಯುವುದು-ಎಂಬುದು ಶ್ಲೋಕಾರ್ಥ.

ಮನುಷ್ಯನಾದವನು ದಾನ ಮಾಡ ಬೇಕು. ದಾನವೆಂಬುದು ಮನುಕುಲದ ಉನ್ನತಿಯನ್ನುಂಟು ಮಾಡುತ್ತದೆ. ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಸದಾಚಾರವೆಂದರೆ ದಾನ... ಇತ್ಯಾದಿ.

ದಾನದ ಹಿರಿಮೆಯನ್ನು ಪ್ರಸ್ತುತ ಶ್ಲೋಕ ಪ್ರತಿಪಾದಿಸುತ್ತದೆ. 'ದಾನಾಯ ಲಕ್ಷ್ಮೀಃ' ಸಂಪತ್ತು ದಾನಕ್ಕಾಗಿ ಇರುವಂಥದ್ದು ಎಂಬುದು ಸೂಕ್ತಿಯ ಸಾರ. ದಾನವು ಪ್ರೀತಿಪೂರ್ವಕ ಮಾತಿನಿಂದ ಕೂಡಿರಬೇಕು ಎಂಬುದನ್ನು 'ದಾನಂ ಪ್ರಿಯವಾಕ್ ಸಹಿತಮ್' ಎಂಬ ಮಾತು ತಿಳಿಸುತ್ತದೆ. ದಾನವೇ ಜಗತ್ತಿನಲ್ಲಿ ಉತ್ತಮ ಆಭರಣ. ದಾನವು ದಾರಿದ್ರ್ಯದ ನಿವಾರಕ. ದಾನವು ಸ್ವರ್ಗದ ಮೆಟ್ಟಿಲು. ದಾನದಿಂದ ಶಾಂತಿಯೂ ಸಿಗುತ್ತದೆ, ಸುಖವೂ ಸಿಗುತ್ತದೆ. ದಾನ ಮಾಡುವಾಗ ಯೋಗ್ಯರನ್ನು ಹುಡುಕಿ, ಯೋಗ್ಯ ರೀತಿಯಲ್ಲಿ , ಯೋಗ್ಯವಾದದ್ದನ್ನು ಕೊಡಬೇಕು ಎಂಬ ಎಚ್ಚರವಿರಬೇಕು.



ಯಾವುದನ್ನು ದಾನ ನೀಡುತ್ತೇವೆ, ಎಷ್ಟನ್ನು ದಾನ ಮಾಡುತ್ತೇವೆ ಎಂಬುದಕ್ಕಿಂತ ಹೇಗೆ ಮಾಡುತ್ತೇವೆ, ಯಾವ ಭಾವನೆಯಿಂದ ದಾನ ಮಾಡುತ್ತೇವೆ ಎಂಬುದು ಮುಖ್ಯವಾಗುತ್ತದೆ.

ಸ್ವಲ್ಪವೇ ಆದರೂ ಯೋಗ್ಯರೆನಿಸಿದವರಿಗೆ, ಸಜ್ಜನರಿಗೆ ದಾನ ಮಾಡಬೇಕು. ಯಾರಿಗೆ ತೀರಾ ಅವಶ್ಯಕತೆ ಇದೆ ಎಂಬುದನ್ನು ತಿಳಿದು ಅವರಿಗೆ ಅವಶ್ಯಕತೆಯುಳ್ಳದನ್ನೇ ದಾನ ಮಾಡಿದರೆ ಅದು ಶಾಶ್ವತವಾಗಿ ಉಳಿಯುತ್ತದೆ. ಪೂರ್ಣ ಪ್ರಯೋಜನಕ್ಕೆ ಬರುತ್ತದೆ. ಸತ್ಯದ ಆಶ್ರಯದಲ್ಲಿ ದಾನ ಕ್ರಿಯೆ ನಡೆಯಬೇಕು.

ಅನರ್ಹರಿಗೆ, ಅಯೋಗ್ಯರಿಗೆ ದಾನ ಮಾಡಿದರೆ ಅದರಿಂದ ಯಾವ ಪ್ರಯೋಜನವೂ ಇಲ್ಲ. ದಾನ ಮಾಡಿದವನೂ, ಪಡೆದವನೂ ಇಬ್ಬರೂ ಸತ್ಪ್ರಯೋಜನದಿಂದ ವಂಚಿತರಾಗುತ್ತಾರೆ. ಆದ್ದರಿಂದಲೇ ಯಾರಿಗೆ ದಾನ ಮಾಡಬೇಕು? ಹೇಗೆ ದಾನ ಮಾಡಬೇಕು? ಯಾವುದನ್ನು ದಾನ ಮಾಡಬೇಕು? ಎಲ್ಲಿ ದಾನ ಮಾಡಬೇಕು? ಎಷ್ಟು ದಾನ ಮಾಡಬೇಕು... ಇತ್ಯಾದಿ ವಿಚಾರಗಳ ಕುರಿತು ಹಿರಿಯರು ಸಾಕಷ್ಟು ವಿಚಾರವನ್ನು ತಿಳಿಸಿದ್ದಾರೆ. ಇವುಗಳನ್ನೆಲ್ಲ ಸರಿಯಾಗಿ ತಿಳಿದುಕೊಂಡು ದಾನಕ್ರಿಯೆಯಲ್ಲಿ ತೊಡಗುವುದು ಉತ್ತಮವಾದದ್ದು. ನಾವು ಮಾಡುವ ದಾನಕ್ಕೆ ಶಾಶ್ವತ ಬೆಲೆ ಬರಬೇಕು; ಸದ್ವಿನಿಯೋಗವಾಗಬೇಕು. ಆಗ ಅದು ನಮ್ಮನ್ನು ಒಂದೇ ರೀತಿಯಲ್ಲಿ ಇರಲು ಕಾರಣವಾಗುತ್ತದೆ.

ಚಂದ್ರನಿಗೆ ಏರಿಳಿತವಿದೆ. ಅವನೆಂದೂ ಇದ್ದಂತೆ ಇರುವುದಿಲ್ಲ. ವೃದ್ಧಿ-ಕ್ಷಯವೆಂಬುದು ಚಂದ್ರನ ಗುಣ ಧರ್ಮ. ಆದರೆ ಅವನ ಒಂದು ಕಲೆ ಶಿವನ ಜಟೆಯನ್ನು ಅಲಂಕರಿಸಿದೆ. ಇದಕ್ಕೆ ವೃದ್ಧಿ- ಕ್ಷಯಗಳಿಲ್ಲ. ಏಕರೂಪವಾಗಿರುತ್ತದೆ. ಇದಕ್ಕೆ ಸಜ್ಜನನಾದ ಶಿವನನ್ನು ಆಶ್ರಯಿಸಿರುವುದು. ಸದಾ ಕಾಲವು ಏಕಪ್ರಕಾರವಾಗಿ ಇರುವುದಕ್ಕೆ ಗುಣಾಢ್ಯನಾದ ಶಿವನ ಸಾಮೀಪ್ಯವೇ ಕಾರಣ.

'ನಾವು ಕೂಡ ಗುಣವಂತರ ಒಡನಾಟ ಮಾಡಿ ಅವರ ನಡೆ-ನುಡಿಗಳನ್ನು ಅಳವಡಿಸಿಕೊಂಡರೆ ಏರಿಳಿತವಿಲ್ಲದ ನೆಮ್ಮದಿಯ ಬದುಕನ್ನು ಕಂಡುಕೊಳ್ಳಬಹುದು.

ಆರೆಸ್ಸೆಸ್ ಬಗ್ಗೆ ಅನವಶ್ಯ ವಿವಾದ

▸ ರಾಮ್ ಮಾಧವ್



> ಸಂಘದ ನೋಂದಣಿ ಬಗ್ಗೆ ಪ್ರಶ್ನೆ ಎತ್ತುತ್ತಿದ್ದಾರೆಂದರೆ ಒಂದೋ ಅದು ಅವರ ಅಜ್ಞಾನದಿಂದ ಅಥವಾ ರಾಜಕೀಯ ದುರುದ್ದೇಶದಿಂದ.

ಕರ್ನಾಟಕ ಗೃಹಸಚಿವ ಪ್ರಿಯಾಂಕ್ ಖರ್ಗೆ ಅವರು ಆರೆಸ್ಸೆಸ್ ಸರಸಂಘಚಾಲಕ ಮೋಹನ್ ಭಾಗ್ವತ್ ಅವರಿಗೆ ಬರೆದ ಪತ್ರವು ಕಳೆದ ಕೆಲ ದಿನಗಳಿಂದ ದೊಡ್ಡ ಸುದ್ದಿ ಮಾಡುತ್ತಿದೆ. ''ದೇಶದ ಯಾವ ಕಾನೂನಿನಡಿಯಲ್ಲಿ ಆರೆಸ್ಸೆಸ್ ಕಾರ್ಯಾಚರಿಸುತ್ತಿದೆ?'' ಎಂದು ಪ್ರಶ್ನಿಸಿರುವ ಅವರು, ''ಆರೆಸ್ಸೆಸ್ ತನ್ನ ಕಾನೂನು ಸ್ಥಾನಮಾನ , ನೋಂದಣಿ ಮತ್ತು ಪದಾಧಿಕಾರಿಗಳ ವಿವರ, ದೇಣಿಗೆ, ವೆಚ್ಚ, ತೆರಿಗೆ, ಸಾರ್ವಜನಿಕ ಚಟುವಟಿಕೆಗೆ ಪಡೆದಿರುವ ಅನುಮತಿ ಮೊದಲಾದವುಗಳ ವಿವರ ನೀಡಬೇಕು'' ಎಂದು ಸೂಚಿಸಿದ್ದಾರೆ. ಭಾಗ್ವತ್‌ರವರು ಈ ಪತ್ರವನ್ನು 'ರಾಜಕೀಯ' ಎಂದು ತಿರಸ್ಕರಿಸಿ ಉತ್ತರ ನೀಡಲು ನಿರಾಕರಿಸಿದ್ದಾರೆ. ''ಇದೊಂದು ರಾಜಕೀಯ. ಇಂತಹ ಗಿಮಿಕ್‌ಗಳನ್ನು ಈ ಹಿಂದೆಯೂ ಬಹಳಷ್ಟು ಬಾರಿ ಸಂಘದ ವಿರುದ್ಧ ಪ್ರಯತ್ನಿಸಲಾಗಿದೆ'' ಎಂದು ಅವರು ಹೇಳಿದ್ದಾರೆ.

ಟಿವಿ ಸಂದರ್ಶನವೊಂದರಲ್ಲಿ ಖರ್ಗೆಯವರು, ಆರೆಸ್ಸೆಸ್ ಈ ನೆಲದ ಕಾನೂನಿಗೆ ಬದ್ಧವಾಗಿರಬೇಕು ಎಂದಷ್ಟೇ ತಾನು ಹೇಳುತ್ತಿರುವುದಾಗಿ ನುಡಿದರು. ಆರೆಸ್ಸೆಸ್ ಯಾವ ಕಾನೂನನ್ನು ಉಲ್ಲಂಘಿಸಿದೆ ಎಂದು ಟಿವಿ ಸಂದರ್ಶನಕಾರರು ಪ್ರಶ್ನಿಸಿದಾಗ ಅವರಲ್ಲಿ ಉತ್ತರವಿರಲಿಲ್ಲ. ಆರೆಸ್ಸೆಸ್ ಯಾವ ಕಾನೂನಿನಡಿಯಲ್ಲಿ ಕಾರ್ಯಾಚರಿಸುತ್ತಿದೆಯೆಂದು ತನಗೆ ಗೊತ್ತಿಲ್ಲ ಎಂದು ಹಾರಿಕೆಯ ಉತ್ತರ ನೀಡಿದರು. ಸಂವಿಧಾನದ 19 (1) (ಸಿ) ವಿಧಿಯು ''ದೇಶದ ಎಲ್ಲಾ ನಾಗರಿಕರೂ ಸಂಘ ಅಥವಾ ಒಕ್ಕೂಟ ಅಥವಾ ಸಹಕಾರ ಸಂಘಗಳನ್ನು ಸ್ಥಾಪಿಸುವ ಅಧಿಕಾರವನ್ನು ಹೊಂದಿದ್ದಾರೆ'' ಎಂದು ಸ್ಪಷ್ಟವಾಗಿ ಹೇಳುತ್ತದೆ. ಈ ಸಂವಿಧಾನದ ವಿಧಿಯಡಿಯಲ್ಲಿ ಆರೆಸ್ಸೆಸ್ ಕೂಡಾ ಈ ದೇಶದಲ್ಲಿ ತನ್ನ ಚಟುವಟಿಕೆಗಳನ್ನು ಮುಕ್ತವಾಗಿ ನಡೆಸಲು ಅಧಿಕಾರ ಹೊಂದಿದೆ. ಇಂತಹ ಸಂಘಗಳು ನೋಂದಣಿ ಮಾಡುವುದು ಕಡ್ಡಾಯ ಎಂದು ಸಂವಿಧಾನವು ಎಲ್ಲಿಯೂ ಹೇಳಿಲ್ಲ. ಸರಕಾರದಿಂದ ಅನುದಾನ ಪಡೆಯುವ ಅಥವಾ ವಾಣಿಜ್ಯಿಕ ಚಟುವಟಿಕೆಗಳಲ್ಲಿ ತೊಡಗಿರುವ ಸಂಘಗಳು ಮಾತ್ರ ನೋಂದಣಿ ಮಾಡಿಕೊಳ್ಳುವುದು ಕಡ್ಡಾಯವಾಗಿದೆ. ಇದಾವುದೂ ಆರೆಸ್ಸೆಸ್‌ಗೆ ಅನ್ವಯವಾಗುವುದಿಲ್ಲ.

ಆರೆಸ್ಸೆಸ್ ತನ್ನ ನೋಂದಣಿ ಪತ್ರ ತೋರಿಸಬೇಕೆಂದು ಖರ್ಗೆಯವರು ಹೇಳುತ್ತಿರುವುದು ಕ್ಷುಲ್ಲಕವಾಗಿದೆ. ಆರೆಸ್ಸೆಸ್ ಕಳೆದ 100 ವರ್ಷಗಳಿಂದ ಈ ದೇಶದಲ್ಲಿ ಕಾರ್ಯಾಚರಿಸುತ್ತಿದೆ. ಅದರಲ್ಲೂ ಕಳೆದ 75 ವರ್ಷಗಳಿಂದ ಈ ದೇಶದ ಸಂವಿಧಾನದ ಅಡಿಯಲ್ಲೇ ಕಾರ್ಯಾಚರಿಸುತ್ತಿದೆ. ಗಾಂಧಿ ಹತ್ಯೆಯ ಕ್ಷುಲ್ಲಕ ಕಾರಣವೊಡ್ಡಿ ನೆಹರೂರವರು ಆರೆಸ್ಸೆಸ್ ನಿಷೇಧ ಹೇರಿದ್ದರಾದರೂ ಬಳಿಕ ಆರೆಸ್ಸೆಸ್‌ನ ಕಾರ್ಯವಿಧಾನ ಹಾಗೂ ಇನ್ನಿತರ ಚಟುವಟಿಕೆಗಳ ಅರಿವಾದ ಬಳಿಕ ಸರಕಾರವು ನಿಷೇಧ ಹಿಂತೆಗೆದುಕೊಂಡಿತ್ತು.



ಆರೆಸ್ಸೆಸ್ ದೇಶದ ಸಂವಿಧಾನ ಮತ್ತು ಕಾನೂನಿನಡಿಯಲ್ಲಿಯೇ ತನ್ನ ಕಾರ್ಯ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿದೆ. 1963ರಲ್ಲಿ ನೆಹರೂ ಕಾಲಾವಧಿಯಲ್ಲೇ ಸಂಘವು ಗಣರಾಜ್ಯ ಪೆರೇಡ್‌ನಲ್ಲಿ ಭಾಗವಹಿಸಿತ್ತು. 1965ರ ಯುದ್ಧದ ಸಮಯದಲ್ಲಿ ಪ್ರಧಾನಿ ಲಾಲ್ ಬಹಾದ್ದೂರ್ ಶಾಸ್ತ್ರಿಯವರು ಆರೆಸ್ಸೆಸ್ ಸರಸಂಘಚಾಲಕ ಶ್ರೀ ಗುರೂಜಿ ಅವರನ್ನು ಸಮಾಲೋಚನೆಗೆ ಕರೆಸಿಕೊಂಡಿದ್ದರು. 1973ರಲ್ಲಿ ಶ್ರೀ ಗುರೂಜಿಯವರು ತೀರಿಕೊಂಡಾಗ ಪ್ರಧಾನಿ ಇಂದಿರಾಗಾಂಧಿಯವರು ಸಂಸತ್ತಿನಲ್ಲಿ ಅವರಿಗೆ ಗೌರವ ಸಲ್ಲಿಸುತ್ತಾ, ''ನಾವು ದೇಶದ ಮಹನೀಯ ವ್ಯಕ್ತಿತ್ವದವರಾದ ಗೋಳ್ವಲ್ಕರ್‌ರನ್ನು ಕಳೆದುಕೊಂಡಿದ್ದೇವೆ. ತಮ್ಮ ವ್ಯಕ್ತಿತ್ವ ಮತ್ತು ತಮ್ಮ ಧ್ಯೇಯದಿಂದ ಅವರು ಗೌರವಾದರ ಹೊಂದಿರುವವರಾಗಿದ್ದಾರೆ'' ಎಂದು ಹೇಳಿದ್ದರು. ಈ ಪ್ರಧಾನಿಗಳಾರೂ ಆರೆಸ್ಸೆಸ್ ಏಕೆ ನೋಂದಣಿ ಮಾಡಿಕೊಂಡಿಲ್ಲವೆಂದು ಪ್ರಶ್ನಿಸಿರಲಿಲ್ಲ.

1961ರ ಆದಾಯ ತೆರಿಗೆ ಕಾಯ್ದೆಯಡಿಯಲ್ಲಿ ಆರೆಸ್ಸೆಸ್ಸನ್ನು 'Body of Individuals' ಎಂಬುದಾಗಿ ಮಾನ್ಯ ಮಾಡಲಾಗಿದೆ. ಕಂಪೆನಿಯಲ್ಲದ, ಸಾರ್ವಜನಿಕ ಟ್ರಸ್ಟ್ ಅಲ್ಲದ ಅಥವಾ ನೋಂದಾಯಿತ ಟ್ರಸ್ಟ್ ಅಲ್ಲದ 'ಅನೌಪಚಾರಿಕ ನಾಗರಿಕರ ಸಂಘಟನೆ' ಎಂದಿದರ ಅರ್ಥ. ಆರೆಸ್ಸೆಸ್ ತನ್ನ ದೇಣಿಗೆ ಸಂಗ್ರಹದ ಮಾದರಿಗೆ ಕೂಡ ವಿವರಣೆ ಹೊಂದಿದೆ. ಪ್ರತಿವರ್ಷ ವ್ಯಾಸಪೂರ್ಣಿಮೆಯ ದಿನದಂದು ಅಥವಾ ಇನ್ನಾವುದೋ ನಿರ್ದಿಷ್ಟ ಪವಿತ್ರ ದಿನದಂದು 'ದಕ್ಷಿಣೆ ದಿನ'ವನ್ನು ಆಚರಿಸಲಾಗುವುದು ಹಾಗೂ ಸ್ವಯಂಸೇವಕರು ಸ್ವಯಂಪ್ರೇರಿತವಾಗಿ ಸಲ್ಲಿಸುವ ದಕ್ಷಿಣೆಯನ್ನು ಸ್ವೀಕರಿಸುವುದು ಎಂದು ಹೇಳಲಾಗಿದೆ. ಹೀಗೆ ಸ್ವಯಂಪ್ರೇರಿತವಾಗಿ ದಕ್ಷಿಣೆ ನೀಡುವುದನ್ನು 'ಗುರುದಕ್ಷಿಣೆ' ಎಂದು ಕರೆಯಲಾಗುತ್ತಿದ್ದು ಆದಾಯ ತೆರಿಗೆ ಕಾನೂನಿನ 'mutuality' ಕಲಮಿನಡಿ ಬರುತ್ತದೆ. mutuality ತತ್ವದ ಪ್ರಕಾರ ಕೆಲವು ವ್ಯಕ್ತಿಗಳ ಗುಂಪೊಂದು ಸಾಮಾನ್ಯ ಉದ್ದೇಶಕ್ಕೆ ಹಣ ಸಂಗ್ರಹಿಸಿದರೆ ಹಾಗೂ ಇಂಥ ಹಣವನ್ನು ಯಾವುದೇ ವಾಣಿಜ್ಯಿಕ ಉದ್ದೇಶಕ್ಕೆ ಬಳಸಲು ಯೋಜಿಸಿರದಿದ್ದರೆ ಈ ಆದಾಯವು ತೆರಿಗೆ ವ್ಯಾಪ್ತಿಗೆ ಬರುವುದಿಲ್ಲ. ಈ mutuality ತತ್ವದ ಆಧಾರದಲ್ಲಿ ಕೇಂದ್ರೀಯ ನೇರ ತೆರಿಗೆ ಮಂಡಳಿಯು ತನ್ನ ಆದೇಶವೊಂದರಲ್ಲಿ ''ಸ್ವಯಂಸೇವಕರಿಂದ ಗುರುದಕ್ಷಿಣೆಯ ಮೂಲಕ ಸಂಗ್ರಹಿಸಲಾದ ಹಣದ ಮೇಲೆ ತೆರಿಗೆ ವಿಧಿಸುವಂತಿಲ್ಲ'' ಎಂದು ಹೇಳಿದೆ. 1994ರ ಪ್ರಕರಣವೊಂದರಲ್ಲಿ ಪಾಟ್ನಾ ಹೈಕೋರ್ಟ್ ಕೂಡಾ ಕೇಂದ್ರೀಯ ನೇರ ತೆರಿಗೆ ಮಂಡಳಿಯ ಆದೇಶವನ್ನು ಎತ್ತಿ ಹಿಡಿದಿದೆ.

ಹಲವಾರು ಧಾರ್ಮಿಕ ಮತ್ತು ಇನ್ನಿತರ ಸಂಘಟನೆಗಳು ಈ ದೇಶದಲ್ಲಿ ನೋಂದಣಿಯಾಗದಿದ್ದರೂ ಮುಕ್ತವಾಗಿ ಕಾರ್ಯಾಚರಿಸುತ್ತಿವೆ. ಆರೆಸ್ಸೆಸ್‌ಗೆ ಸಂಬಂಧಿಸಿ ಹೇಳುವುದಾದರೆ, ಪ್ರಮುಖ ವ್ಯಕ್ತಿಗಳ ಗುಂಪು ಹೊರತುಪಡಿಸಿ ಉಳಿದಂತೆ ಎಲ್ಲಾ ಚಟುವಟಿಕೆಗಳು (ಅದರ ಆಸ್ತಿಪಾಸ್ತಿ, ಶಾಲೆ, ಸ್ವಯಂಸೇವಾ ಸಂಘಟನೆಗಳು ಮತ್ತು ಪರಿವಾರ ಸಂಘಟನೆಗಳು) ಸೂಕ್ತವಾದ ನೋಂದಾಯಿತ ಟ್ರಸ್ಟ್ ಮತ್ತು ಸಂಘಟನೆಗಳ ಮೂಲಕವೇ ಕಾರ್ಯಾಚರಿಸಲ್ಪಡುತ್ತವೆ. ಬ್ರಿಟಿಷರಿಂದ ದೇಶಕ್ಕೆ ಸ್ವಾತಂತ್ರ್ಯ ದೊರಕಿಸುವ ಉದ್ದೇಶದಿಂದ 1925ರಲ್ಲಿ ಆರೆಸ್ಸೆಸ್ ಸ್ಥಾಪನೆಯಾಯಿತು. ಆಗ ವಿದೇಶಿ ಸರಕಾರದಡಿಯಲ್ಲಿ ನೋಂದಣಿ ಮಾಡಿಕೊಳ್ಳುವ ಪ್ರಶ್ನೆಯೇ ಬರಲಿಲ್ಲ. ಸ್ವಾತಂತ್ರ್ಯೋತ್ತರದಲ್ಲಿ ಭಾರತೀಯ ಕಾನೂನಿನ ಪ್ರಕಾರ ಸಂಘವು ನೋಂದಣಿರಹಿತ ಸಂಘಟನೆಯಾಗಿಯೇ ಕಾರ್ಯಾಚರಿಸಿಕೊಂಡು ಬಂದಿದೆ. ಇದನ್ನು ಈವರೆಗಿನ ಎಲ್ಲಾ ಸರಕಾರಗಳೂ ಮಾನ್ಯ ಮಾಡಿವೆ. ಈಗ ಯಾರಾದರೂ ಈ ಕುರಿತಂತೆ ಪ್ರಶ್ನೆ ಎತ್ತುತ್ತಿದ್ದಾರೆಂದರೆ ಒಂದೋ ಅದು ಅವರ ಅಜ್ಞಾನದಿಂದ ಅಥವಾ ರಾಜಕೀಯ ದುರುದ್ದೇಶದಿಂದ.

ಸ್ವಿಜರ್ಲೆಂಡ್‌ನಲ್ಲಿ ಅಮೆರಿಕ–ಇರಾನ್ ಮಾತುಕತೆ

ಚರ್ಚೆಗಿಂತ ಮೌನ ಸಮರವೇ ಹೆಚ್ಚು!



• ಬರ್ನ್‌ಸ್ಟಾಕ್: ಸ್ವಿಜರ್ಲೆಂಡ್‌ನಲ್ಲಿ ನಡೆದ ಅಮೆರಿಕ- ಇರಾನ್ ಉನ್ನತ ಮಟ್ಟದ ಶಾಂತಿ ಮಾತುಕತೆ ರಾಜತಾಂತ್ರಿಕ ಮುಜುಗರ, ಪರಸ್ಪರ ನಿರ್ಲಕ್ಷ್ಯ ಹಾಗೂ ಸಭಾತ್ಯಾಗದ ಪ್ರಸಂಗಗಳಿಂದ ಸುದ್ದಿಯಾಗಿದೆ.

ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಮತ್ತು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಮಾತುಕತೆಯಲ್ಲಿ ಭಾಗವಹಿಸಿದ್ದರೂ, ಉಭಯ ನಾಯಕರು ಒಟ್ಟಾಗಿ ಕಾಣಿಸಿಕೊಂಡ ಒಂದೇ ಒಂದು ಅಧಿಕೃತ ಚಿತ್ರವೂ ಬಿಡುಗಡೆಯಾಗಿಲ್ಲ. ಪರಸ್ಪರ ಹಸ್ತಲಾಘವವಾಗಲಿ, ಜಂಟಿ ಪತ್ರಿಕಾಗೋಷ್ಠಿಯಾಗಲಿ ನಡೆದಿಲ್ಲ. ಛಾಯಾಚಿತ್ರ ತೆಗೆಸಿಕೊಳ್ಳಲು ಮತ್ತು



ಆರಂಭಿಕ ಭಾಷಣ ಮಾಡಲು ಇರಾನ್ ನಿಯೋಗ ನಿರಾಕರಿಸಿದೆ ಎನ್ನಲಾಗಿದೆ.

ಮಾತುಕತೆಯ ಸ್ಥಳಕ್ಕೆ ಆಗಮಿಸಿದ ಅರಾಘ್ಚಿ, ಮಧ್ಯಸ್ಥಿಕೆ ವಹಿಸಿದ್ದ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಅವರನ್ನು ಆತ್ಮೀಯವಾಗಿ ಅಪ್ಪಿಕೊಂಡರು. ಆದರೆ ಸಮೀಪದಲ್ಲೇ ಇದ್ದ ವ್ಯಾನ್ಸ್ ಅವರನ್ನು ಗಮನಿಸದೆ ತೆರಳಿದಂತೆ ಕಂಡ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡಿವೆ. ಕತಾರ್ ಪ್ರಧಾನಿಯೂ ವ್ಯಾನ್ಸ್ ಅವರನ್ನು ಕಡೆಗಣಿಸಿ ಷರೀಫ್ ಅವರತ್ತ ತೆರಳಿದಂತೆ ಕಾಣಿಸಿದ ದೃಶ್ಯಗಳು ಚರ್ಚೆಗೆ ಕಾರಣವಾಗಿವೆ.

ಟ್ರಂಪ್ ಹೇಳಿಕೆಗೆ ಆಕ್ರೋಶ: ಮಾತುಕತೆ ನಡೆಯುತ್ತಿದ್ದ ವೇಳೆಯಲ್ಲೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಹಾರ್ಮುಜ್ ಜಲಸಂಧಿಯನ್ನು ಮುಚ್ಚಿದರೆ ಇರಾನ್ ವಿರುದ್ಧ ಮತ್ತೆ ಕಠಿಣ ಸೇನಾ ಕ್ರಮ ಕೈಗೊಳ್ಳುವುದಾಗಿ ಬೆದರಿಕೆ ಹಾಕಿದ್ದರು. ಇದರಿಂದ ಆಕ್ರೋಶಗೊಂಡ ಇರಾನ್ ನಿಯೋಗ ಸಭೆಯಿಂದ ಹೊರನಡೆದಿದೆ. ಟ್ರಂಪ್ ಹೇಳಿಕೆ ತಮ್ಮ ಪ್ರತಿನಿಧಿಗಳ

- ಅಮೆರಿಕ - ಇರಾನ್ ಸಭೆಯಲ್ಲಿ ಹಸ್ತಲಾಘವವಿಲ್ಲ, ಜಂಟಿ ಚಿತ್ರವೂ ಇಲ್ಲ
- ಟ್ರಂಪ್ ಬೆದರಿಕೆಗೆ ಸಿಟ್ಟಾಗಿ ಸಭೆಯಿಂದ ಹೊರನಡೆದ ಇರಾನ್ ನಿಯೋಗ

ಸುರಕ್ಷತೆಗೂ ಬೆದರಿಕೆಯಾಗಿದೆ ಎಂದು ಇರಾನ್ ಮಧ್ಯಸ್ಥ ದೇಶಗಳಿಗೆ ಅಧಿಕೃತ ಪ್ರತಿಭಟನೆ ಸಲ್ಲಿಸಿತು. ಬಳಿಕ ಪಾಕಿಸ್ತಾನ ಮತ್ತು ಕತಾರ್ ಮಧ್ಯಸ್ಥಿಕೆಯಲ್ಲಿ ಮಾತುಕತೆ ಪುನರಾರಂಭಗೊಂಡಿತು.

ಸುಮಾರು 18 ಗಂಟೆಗಳ ಕಾಲ ನಡೆದ ಸಭೆಯಲ್ಲಿ ಇರಾನ್‌ನ ಅಣು ಕಾರ್ಯಕ್ರಮ, ಹಾರ್ಮುಜ್ ಜಲಸಂಧಿಯಲ್ಲಿ ಸರಕು ಹಡಗುಗಳ ಸುರಕ್ಷಿತ ಸಂಚಾರ ಹಾಗೂ ಲೆಬನಾನ್‌ನಲ್ಲಿನ ಸಂಘರ್ಷದ ಕುರಿತು ಚರ್ಚಿಸಲಾಗಿದೆ. ಉದ್ವಿಗ್ನ ವಾತಾವರಣದ ನಡುವೆಯೂ ಪ್ರೋತ್ಸಾಹದಾಯಕ ಪ್ರಗತಿ ಸಾಧಿಸಲಾಗಿದೆ ಎಂದು ಮಧ್ಯಸ್ಥ ದೇಶಗಳು ತಿಳಿಸಿವೆ. ತಾಂತ್ರಿಕ ಮಟ್ಟದ ಮಾತುಕತೆ ವಾರಪೂರ್ತಿ ಮುಂದುವರಿಯಲಿದೆ.

ಕ್ರೆಡ್ ಸಂಸ್ಥಾಪಕ ಕುನಾಲ್ ಶಾ ಜಾಗತಿಕ ಸಿಇಒ: ಮೆಟಾ

ವಾಟ್ಸ್‌ಆ್ಯಪ್‌ಗೆ ಭಾರತೀಯ ಸಾರಥಿ

• ಹೊಸದಿಲ್ಲಿ: ಜಗತ್ತಿನ ಅತಿದೊಡ್ಡ ಮೆಸೇಜಿಂಗ್ ವೇದಿಕೆಗಳಲ್ಲೊಂದಾದ ವಾಟ್ಸ್‌ಆ್ಯಪ್‌ಗೆ ಭಾರತೀಯ ಉದ್ಯಮಿ, ಕ್ರೆಡ್ ಸಂಸ್ಥಾಪಕ ಕುನಾಲ್ ಶಾ ಅವರನ್ನು



ಜಾಗತಿಕ ಮುಖ್ಯಸ್ಥರಾಗಿ ನೇಮಕ ಮಾಡಲಾಗಿದೆ. 2019ರಿಂದ ವಾಟ್ಸ್‌ಆ್ಯಪ್ ನೇತೃತ್ವ ವಹಿಸಿದ್ದ ವಿಲ್ ಕ್ಯಾಟ್‌ಕ್ಯಾಟ್ ಅವರ ಸ್ಥಾನಕ್ಕೆ ಕುನಾಲ್ ಶಾ ಅಧಿಕಾರ ಸ್ವೀಕರಿಸಲಿದ್ದಾರೆ.

ಮೆಟಾ ಸಂಸ್ಥೆ ಈ ಮಹತ್ವದ ಘೋಷಣೆಯನ್ನು ಸೋಮವಾರ ಪ್ರಕಟಿಸಿದ್ದು, ಭಾರತದ ತಂತ್ರಜ್ಞಾನ ಪ್ರತಿಭೆಗೆ ಜಾಗತಿಕ ಮಟ್ಟದಲ್ಲಿ ಮತ್ತೊಂದು ದೊಡ್ಡ ಮಾನ್ಯತೆ ದೊರೆತಂತಾಗಿದೆ. ಮೆಟಾದ ಮುಖ್ಯ ಉತ್ಪನ್ನ ಅಧಿಕಾರಿ ಕ್ರಿಸ್ ಕಾಕ್ಸ್ ಕುನಾಲ್ ಶಾ ಅವರನ್ನು ಈ ಹುದ್ದೆಗೆ ಆಹ್ವಾನಿಸಿದ್ದಾಗಿ ಕಂಪನಿ ತಿಳಿಸಿದೆ.

ಫ್ರೀಚಾರ್ಜ್ ಸಹ-ಸಂಸ್ಥಾಪಕರಾಗಿದ್ದ ಕುನಾಲ್ ಶಾ, ಬಳಿಕ ಕ್ರೆಡ್ ಸಂಸ್ಥೆಯನ್ನು ಕಟ್ಟಿಬೆಳೆಸಿ ಭಾರತದ ಪ್ರಮುಖ ಫಿನ್‌ಟೆಕ್ ಕಂಪನಿಗಳ ಸಾಲಿನಲ್ಲಿ ನಿಲ್ಲಿಸಿದ್ದಾರೆ. ಗ್ರಾಹಕರ ವರ್ತನೆ, ಡಿಜಿಟಲ್ ಪಾವತಿ ವ್ಯವಸ್ಥೆ ಹಾಗೂ ತಂತ್ರಜ್ಞಾನ ಆವಿಷ್ಕಾರ ಕ್ಷೇತ್ರಗಳಲ್ಲಿ ಅವರ ಪರಿಣತಿ ಗಮನ ಸೆಳೆದಿತ್ತು.

ಈ ನೇಮಕಾತಿಯ ಜೊತೆಗೆ ಮೆಟಾ ಸಂಸ್ಥೆ ಕ್ರೆಡ್‌ನಲ್ಲಿ ಸುಮಾರು 900 ಮಿಲಿಯನ್ ಡಾಲರ್ ಹೂಡಿಕೆ ಮಾಡುತ್ತಿರುವುದಾಗಿ ವರದಿಯಾಗಿದೆ. ಇದರಿಂದ ಮೆಟಾ ಮತ್ತು ಆಖಇಆ ನಡುವಿನ ಕಾರ್ಯತಂತ್ರದ ಸಹಭಾಗಿತ್ವ ಮತ್ತಷ್ಟು ಬಲವಾಗುವ ನಿರೀಕ್ಷೆಯಿದೆ.



ಪಾಶ್ಚಿಮಾತ್ಯ ಒಕ್ಕೂಟದಲ್ಲಿ ರಾಜತಾಂತ್ರಿಕ ಬಿರುಗಾಳಿ!

ಫ್ರಾನ್ಸ್ ಜತೆ ಮುಂದುವರಿದ ಉದ್ವಿಗ್ನತೆ

ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಮತ್ತು ಟ್ರಂಪ್ ನಡುವಿನ ಸಂಬಂಧ 2017ರ ಮೊದಲ ಭೇಟಿಯಿಂದಲೂ ಏರಿಳಿತಗಳಿಂದ ಕೂಡಿದೆ. ಇಬ್ಬರ ನಡುವಿನ ದೀರ್ಘಾವಧಿಯ ಕೈ ಕುಲುಕುವಿಕೆ ಅವರ ಸ್ಪರ್ಧಾತ್ಮಕ ರಾಜತಾಂತ್ರಿಕ ಶೈಲಿಗೆ ಸಂಕೇತವಾಗಿತ್ತು. ಒಮ್ಮೆ ಇವರ ಸ್ನೇಹವನ್ನು ವಿಶ್ಲೇಷಕರು ಲೆ ಬ್ರೋಮ್ಯಾನ್ಸ್(ಆಪ್ತ ಸ್ನೇಹ) ಎಂದು ಕರೆದಿದ್ದರು. ಆದರೆ ಇದಕ್ಕೆ ಪ್ರತಿಕ್ರಿಯಿಸಿದ್ದ ಟ್ರಂಪ್, ಮ್ಯಾಕ್ರನ್ ಅವರ ಮಾತುಗಳು ಅವಮಾನಕರ ಮತ್ತು ಗೌರವವಿಲ್ಲದ್ದು ಎಂದು ಕರೆದಿದ್ದರು. ಇತ್ತೀಚೆಗೆ ಅವರು ದಾವೋಸ್ ಸಮ್ಮೇಳನದಲ್ಲಿ ಮ್ಯಾಕ್ರನ್ ಅವರ ನೋಟವನ್ನು ಲೇವಡಿ ಮಾಡಿದ್ದರಲ್ಲದೆ, ಮ್ಯಾಕ್ರನ್ ಮತ್ತು ಅವರ ಪತ್ನಿ ಬ್ರಿಗಿಟ್ಟೆ ಅವರ ವೈಯಕ್ತಿಕ ವಿಷಯಗಳ ಬಗ್ಗೆಯೂ ಕಾಮೆಂಟ್ ಮಾಡಿದ್ದರು. ಯುದ್ಧ ಮತ್ತು ಶಾಂತಿಯ ಬಗೆಗಿನ ಚರ್ಚೆಗಳನ್ನು ಗಂಭೀರವಾಗಿ ಮತ್ತು ಸ್ಥಿರವಾಗಿ ನಡೆಸಬೇಕು ಎಂದು ಮ್ಯಾಕ್ರನ್ ಇದಕ್ಕೆ ತಿರುಗೇಟು ನೀಡಿದ್ದರು. ಇತ್ತೀಚಿನ ಜಿ7 ಶೃಂಗಸಭೆಯ ನಂತರ ವರ್ಸೈಲ್ಸ್ ಅರಮನೆಗೆ ಟ್ರಂಪ್ ಭೇಟಿ ನೀಡಿದಾಗ ಉಭಯ ನಾಯಕರ ನಡುವೆ ಸೌಹಾರ್ದತೆ ಕಂಡುಬಂದಿತ್ತು.

ಜರ್ಮನಿ ಜತೆಗಿನ ಭಿನ್ನಾಭಿಪ್ರಾಯ

ಜರ್ಮನಿ ಚಾನ್ಸಲರ್ ಫ್ರೆಡ್ರಿಕ್ ಮೆರ್ಜ್ ಕೂಡ ಟ್ರಂಪ್ ಅವರಿಂದ ಕಿರಿಕಿರಿ ಅನುಭವಿಸಿದ್ದಾರೆ. ಜಿ7 ಶೃಂಗಸಭೆಯಲ್ಲಿ ಮೆರ್ಜ್ ಅವರು ಟ್ರಂಪ್‌ಗೆ ವಿಶೇಷ ಫುಟ್‌ಬಾಲ್ ಜರ್ಸಿಯನ್ನು ಉಡುಗೊರೆಯಾಗಿ ನೀಡಿದ್ದರೂ, ಅದಕ್ಕೂ ಮುಂಚಿನ ಅವರ ಮಾತುಕತೆಗಳು ಅಷ್ಟೇನೂ ಸ್ನೇಹಪೂರ್ಣವಾಗಿರಲಿಲ್ಲ. ಮಾತುಕತೆಯ ಸಮಯದಲ್ಲಿ ಅಮೆರಿಕವನ್ನು ಇರಾನ್ ಅವಮಾನಿಸುತ್ತಿದೆ ಎಂದು ಮೆರ್ಜ್ ವಾದಿಸಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ್ದ ಟ್ರಂಪ್, ಜರ್ಮನ್ ನಾಯಕ ಅತ್ಯಂತ ಕಳಪೆ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದ್ದರಲ್ಲದೆ, ಜರ್ಮನಿಯಿಂದ ಅಮೆರಿಕದ ಸೈನಿಕರನ್ನು ಹಿಂಪಡೆಯುವ ಎಚ್ಚರಿಕೆ ನೀಡಿದ್ದರು. ಜರ್ಮನ್ ಚಾನ್ಸಲರ್ ವಾಷಿಂಗ್ಟನ್‌ನೊಂದಿಗೆ ಸಹಕಾರವನ್ನು ಕಾಯ್ದುಕೊಳ್ಳುತ್ತಲೇ, ಮತ್ತೊಂದೆಡೆ ಯುರೋಪಿನ ಸ್ವಾವಲಂಬನೆಗೆ ಒತ್ತು ನೀಡುತ್ತಿದ್ದಾರೆ. ಅಧಿಕಾರ ವಹಿಸಿಕೊಳ್ಳುವ ಮುನ್ನ ಅವರು, ಯುರೋಪ್ ಕ್ರಮೇಣ ಅಮೆರಿಕದಿಂದ ಸ್ವತಂತ್ರವಾಗಬೇಕು ಮತ್ತು ಟ್ರಂಪ್ ಆಡಳಿತ ಯುರೋಪಿನ ಭವಿಷ್ಯದ ಬಗ್ಗೆ ಕಡಿಮೆ ಕಾಳಜಿ ಹೊಂದಿದೆ ಎಂದು ಹೇಳಿದ್ದರು.

ಸ್ಪೇನ್ ಬಹಿರಂಗ ವಿರೋಧ

ಸ್ಪೇನ್ ಪ್ರಧಾನಿ ಪೆಡ್ರೊ ಸ್ಯಾಂಚೆಸ್, ಟ್ರಂಪ್ ಅವರ ಪ್ರಬಲ ಯುರೋಪಿಯನ್ ವಿಮರ್ಶಕರಲ್ಲಿ ಒಬ್ಬರು. ಇರಾನ್ ವಿಷಯದಲ್ಲಿ ಅಮೆರಿಕದ ಕ್ರಮಗಳನ್ನು ಖಂಡಿಸಿರುವ ಸ್ಯಾಂಚೆಸ್, ಇದರಿಂದ ಲಕ್ಷಾಂತರ ಜೀವಗಳು ಅಪಾಯದಲ್ಲಿವೆ ಎಂದು ಎಚ್ಚರಿಸಿದ್ದಾರೆ. ಇರಾನ್ ವಿರುದ್ಧದ ಮಿಲಿಟರಿ ಹಸ್ತಕ್ಷೇಪ ಅಸಮರ್ಥನೀಯ, ಅಪಾಯಕಾರಿ ಮತ್ತು ಅಂತಾರಾಷ್ಟ್ರೀಯ ಕಾನೂನಿಗೆ ವಿರುದ್ಧ ಎಂದು ಅವರು ಬಣ್ಣಿಸಿದ್ದಾರೆ. ಇದಕ್ಕೆ ತೀವ್ರವಾಗಿ ಪ್ರತಿಕ್ರಿಯಿಸಿರುವ ಟ್ರಂಪ್, ಸ್ಪೇನ್ ತನ್ನ ಮಿಲಿಟರಿ ನೆಲೆಗಳಿಗೆ ಪ್ರವೇಶ ನಿರಾಕರಿಸಿದ ನಂತರ ಆ ದೇಶದೊಂದಿಗಿನ ವ್ಯಾಪಾರವನ್ನು ಕಡಿತಗೊಳಿಸುವುದಾಗಿ ಬೆದರಿಕೆ ಹಾಕಿದ್ದಾರೆ. ನ್ಯಾಟೋ ಮೈತ್ರಿಕೂಟಕ್ಕೆ ಸ್ಪೇನ್ ನೀಡುತ್ತಿರುವ ಕೊಡುಗೆಯನ್ನು ಟೀಕಿಸಿರುವ ಟ್ರಂಪ್, ಆ ದೇಶವನ್ನು ಮೈತ್ರಿಕೂಟದಿಂದಲೇ ತೆಗೆದುಹಾಕಬಹುದು ಎಂದೂ ಸೂಚಿಸಿದ್ದಾರೆ.

ಬ್ರಿಟನ್ ಜತೆಗಿನ ಕಿರಿಕಿರಿ

ಟ್ರಂಪ್ ಅವರೊಂದಿಗೆ ಬಲವಾದ ಸಂವಹನ ಕಾಯ್ದುಕೊಳ್ಳಬಲ್ಲ ನಾಯಕ ಎಂದು ಬಿಂಬಿತವಾಗಿದ್ದ ಬ್ರಿಟನ್ ಪ್ರಧಾನಿ ಸರ್ ಕೀರ್ ಸ್ಟಾರ್ಮರ್ ಕೂಡ ತೊಂದರೆಗಳನ್ನು ಎದುರಿಸಿದರು. ಅಮೆರಿಕ ಮತ್ತು ಬ್ರಿಟನ್ ನಡುವಿನ ವಿಶೇಷ ಸಂಬಂಧ ದುರ್ಬಲಗೊಂಡಿದೆ ಎಂದು ವಾದಿಸಿರುವ ಟ್ರಂಪ್, ಇರಾನ್ ಮತ್ತು ಹಾರ್ಮುಜ್ ಜಲಸಂಧಿಗೆ ಸಂಬಂಧಿಸಿದ ಅಮೆರಿಕದ ಕಾರ್ಯಾಚರಣೆಗಳಿಗೆ ಸ್ಟಾರ್ಮರ್ ಸಾಕಷ್ಟು ಬೆಂಬಲ ನೀಡುತ್ತಿಲ್ಲ ಎಂದು ಟೀಕಿಸಿದ್ದಾರೆ. ಸ್ಟಾರ್ಮರ್ ಅವರ ವಲಸೆ ನೀತಿಗಳು ಮತ್ತು ನವೀಕರಿಸಬಹುದಾದ ಇಂಧನ ಕಾರ್ಯಸೂಚಿಯನ್ನೂ ಟ್ರಂಪ್ ಟೀಕಿಸಿದ್ದಾರೆ. ಮತ್ತೊಂದೆಡೆ, ಇರಾನ್ ವಿಷಯದಲ್ಲಿ ಟ್ರಂಪ್ ಮಾತಿಗೆ ಸ್ಟಾರ್ಮರ್ ಸಾರ್ವಜನಿಕವಾಗಿ ದೂರ ಉಳಿದಿದ್ದಾರೆ ಮತ್ತು ಬ್ರಿಟನ್ ತನ್ನದೇ ಆದ ಮೌಲ್ಯಗಳು ಮತ್ತು ತತ್ವಗಳ ಪ್ರಕಾರ ಕಾರ್ಯನಿರ್ವಹಿಸುವುದನ್ನು ಮುಂದುವರಿಸುತ್ತದೆ ಎಂದಿದ್ದಾರೆ.

ಅಮೆರಿಕದ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಅವರ ಎರಡನೇ ಅವಧಿಯಲ್ಲಿ ಯುರೋಪಿನ ಪ್ರಮುಖ ನಾಯಕರೊಂದಿಗಿನ ಅವರ ಸಂಬಂಧ ಮತ್ತಷ್ಟು ಹಳಸಿದೆ. ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಅವರೊಂದಿಗಿನ ಇತ್ತೀಚಿನ ವಿವಾದ, ವಿದೇಶಾಂಗ ನೀತಿ, ರಕ್ಷಣೆ, ವ್ಯಾಪಾರ ಮತ್ತು ರಾಜತಾಂತ್ರಿಕ ನಡವಳಿಕೆಗಳ ವಿಷಯದಲ್ಲಿ ಫ್ರಾನ್ಸ್, ಜರ್ಮನಿ, ಸ್ಪೇನ್ ಮತ್ತು ಬ್ರಿಟನ್ ನಾಯಕರೊಂದಿಗೆ ಈಗಾಗಲೇ ಇರುವ ಭಿನ್ನಾಭಿಪ್ರಾಯಗಳ ಪಟ್ಟಿಗೆ ಹೊಸ ಸೇರ್ಪಡೆಯಾಗಿದ್ದು, ಇದು ಜಾಗತಿಕ ರಾಜತಾಂತ್ರಿಕ ವಲಯದಲ್ಲಿ ಹೊಸ ಸಂಚಲನಕ್ಕೆ ಕಾರಣವಾಗಿದೆ.

ಮೆಲೋನಿ, ಮ್ಯಾಕ್ರನ್, ಸ್ಟಾರ್ಮರ್ ಗುರಿಯಾಗಿಸಿ ಟ್ರಂಪ್ ಹೇಳಿಕೆಗೆ ಜಾಗತಿಕ ಸಂಚಲನ



ಇಟಲಿ ಜತೆಗಿನ ಇತ್ತೀಚಿನ ಕೋಳಿ ಜಗಳ

ಫ್ರೆಂಚ್ ಆಲ್ಪ್ಸ್‌ನಲ್ಲಿ ನಡೆದ ಜಿ7 ಶೃಂಗಸಭೆಯ ನಂತರ ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಕುರಿತು ಟ್ರಂಪ್ ನೀಡಿದ್ದಾರೆನ್ನಲಾದ ಹೇಳಿಕೆಗಳು ಹೊಸ ವಿವಾದ ಸೃಷ್ಟಿಸಿವೆ. ಇಟಲಿಯ ಲಾ7 ವಾಹಿನಿ ವರದಿಯ ಪ್ರಕಾರ, ಟ್ರಂಪ್, ಮೆಲೋನಿಗೆ ನನ್ನೊಂದಿಗೆ ಫೋಟೋ ತೆಗೆಸಿಕೊಳ್ಳುವ ತೀವ್ರ ಆಸೆಯಿತ್ತು, ಆಕೆಯ ಮೇಲಿನ ಮರುಕದಿಂದ ನಾನು ಅದಕ್ಕೆ ಒಪ್ಪಿಕೊಂಡೆ ಎಂದು ಹೇಳಿದ್ದಾರೆನ್ನಲಾಗಿದೆ.

ಅಲ್ಲದೆ, ನಾನು ಆಕೆಯೊಂದಿಗೆ ಮಾತನಾಡಿದ್ದಕ್ಕೆ ಆಕೆಗೆ ಸಂತೋಷವಾಗಿರಬಹುದು, ಆದರೆ ನಾನು ಆಕೆಯೊಂದಿಗೆ ಮಾತನಾಡುವ ಅಗತ್ಯವಿರಲಿಲ್ಲ ಎಂದೂ ಟ್ರಂಪ್ ಹೇಳಿದ್ದಾರೆ ಎನ್ನಲಾಗಿದೆ. ಈ ಹೇಳಿಕೆಗಳು ಇಟಲಿಯಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿವೆ. ಇಟಲಿಯ ಉಪ ಪ್ರಧಾನಿ ಆಂಟೋನಿಯೊ ತಜಾನಿ ತಮ್ಮ ನಿಗದಿತ ಅಮೆರಿಕ ಪ್ರವಾಸವನ್ನು ರದ್ದುಗೊಳಿಸಿದ್ದು, ಈ ಹೇಳಿಕೆಗಳು ದೇಶಕ್ಕೆ ಮಾಡಿದ ಅವಮಾನ ಎಂದಿದ್ದಾರೆ. ಟ್ರಂಪ್ ಮಾತುಗಳನ್ನು ಸುಳ್ಳು ಎಂದು ತಿರಸ್ಕರಿಸಿರುವ ಮೆಲೋನಿ, ತಾವಾಗಲಿ ಅಥವಾ ಇಟಲಿಯಾಗಲಿ ಯಾರ ಬಳಿಯೂ ಎಂದಿಗೂ ಬೇಡಿಕೊಂಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಎಕ್ಸ್ ಜಾಲತಾಣದಲ್ಲಿ ವೀಡಿಯೊ ಹಂಚಿಕೊಂಡಿರುವ ಅವರು, ಅಮೆರಿಕ ಅಧ್ಯಕ್ಷರು ಮಿತ್ರರಾಷ್ಟ್ರಗಳೊಂದಿಗೆ ಈ ರೀತಿ ಏಕೆ ನಡೆದುಕೊಳ್ಳುತ್ತಿದ್ದಾರೆ ಎಂದು ಪ್ರಶ್ನಿಸಿದ್ದಾರೆ.

ನಂತರ ಟ್ರಂಪ್ ತಮ್ಮ ಟ್ರುತ್ ಸೋಷಿಯಲ್ ಖಾತೆಯಲ್ಲಿ, ಮೆಲೋನಿ ತಮ್ಮ ರಾಜಕೀಯ ಸ್ಥಾನಮಾನವನ್ನು ಸುಧಾರಿಸಿಕೊಳ್ಳಲು ನನ್ನೊಂದಿಗೆ ಸ್ನೇಹ ಬಯಸಿದ್ದರು ಎಂದು ಪ್ರತಿಪಾದಿಸಿದ್ದಾರೆ. ಇರಾನ್ ಪರಮಾಣು ಅಸ್ತ್ರ ಹೊಂದುವುದನ್ನು ತಡೆಯುವ ಪ್ರಯತ್ನಗಳ ಕುರಿತಾದ ಭಿನ್ನಾಭಿಪ್ರಾಯಗಳಿಗೂ, ಮೆಲೋನಿ ಜನಪ್ರಿಯತೆಗೂ ಟ್ರಂಪ್ ಸಂಬಂಧ ಕಲ್ಪಿಸಿದ್ದಾರೆ.

ಕಿರುಸುದ್ದಿ

ನೀಟ್: ಬಿಹಾರದಲ್ಲಿ 30 ಮಂದಿ ಬಂಧನ

• ಪಾಟ್ನಾ: ಬಿಹಾರದಲ್ಲಿ ನಡೆದ ನೀಟ್-ಯುಜಿ ಮರುಪರೀಕ್ಷೆಯಲ್ಲಿ ಅಕ್ರಮ ನಡೆಸಲು ಯತ್ನಿಸಿದ ಆರೋಪದಲ್ಲಿ ಪರೀಕ್ಷಾ ಕೇಂದ್ರಗಳ ಸಿಬ್ಬಂದಿ, ನಕಲಿ ಅಭ್ಯರ್ಥಿಗಳು ಸೇರಿದಂತೆ ಕನಿಷ್ಠ 30 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ. ಬಯೋಮೆಟ್ರಿಕ್ ಪರಿಶೀಲನೆಯ ನಿಯಮಗಳನ್ನು ಉಲ್ಲಂಘಿಸಿ ನಕಲಿ ಅಭ್ಯರ್ಥಿಗಳು ಹಾಗೂ ಮಧ್ಯವರ್ತಿಗಳೊಂದಿಗೆ ಶಾಮೀಲಾದ ಆರೋಪದಡಿ ಪರೀಕ್ಷಾ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ 18 ಸಿಬ್ಬಂದಿಯನ್ನು ಬಂಧಿಸಲಾಗಿದೆ. ಉಳಿದವರಲ್ಲಿ ಹೆಚ್ಚಿನವರು ನೈಜ ಅಭ್ಯರ್ಥಿಗಳ ಬದಲಿಗೆ ಪರೀಕ್ಷೆ ಬರೆಯಲು ಬಂದ ನಕಲಿ ಅಭ್ಯರ್ಥಿಗಳಾಗಿದ್ದಾರೆ. ಬಯೋಮೆಟ್ರಿಕ್ ಪರಿಶೀಲನಾ ಪ್ರಕ್ರಿಯೆಯನ್ನು ದುರ್ಬಲಗೊಳಿಸಿ ನಕಲಿ ಅಭ್ಯರ್ಥಿಗಳಿಗೆ ನೆರವಾದ ಆರೋಪದಡಿ 18 ಸಿಬ್ಬಂದಿಯನ್ನು ಬಂಧಿಸಲಾಗಿದೆ ಎಂದು ಬಿಹಾರದ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಸುಧಾಂಶು ಕುಮಾರ್ ತಿಳಿಸಿದ್ದಾರೆ. ನಕಲಿ ರೂಪದಲ್ಲಿ ಬಂದವರ ಪೈಕಿ ಹೆಚ್ಚಿನವರು ವೈದ್ಯಕೀಯ ವಿದ್ಯಾರ್ಥಿಗಳೇ ಆಗಿದ್ದಾರೆ.

ಸಾಲಿಸಿಟರ್ ಜನರಲ್ ಮೆಹ್ತಾ ಅಧಿಕಾರ ಅವಧಿ ವಿಸ್ತರಣೆ

• ಹೊಸದಿಲ್ಲಿ: ಸುಪ್ರೀಂಕೋರ್ಟ್ ಮತ್ತು ಇತರ ಸಾಂವಿಧಾನಿಕ ನ್ಯಾಯಾಲಯಗಳ ಮುಂದೆ ಕೇಂದ್ರದ ಕಾನೂನು ನಾಯಕತ್ವದಲ್ಲಿ ನಿರಂತರತೆಯನ್ನು ಖಾತ್ರಿಪಡಿಸುವ ಸಲುವಾಗಿ ಭಾರತದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರನ್ನು ಇನ್ನೂ ಮೂರು ವರ್ಷಗಳ ಅವಧಿಗೆ ಮರು ನೇಮಕ ಮಾಡಲು ಸಂಪುಟದ ನೇಮಕಾತಿ ಸಮಿತಿಯು(ಎಸಿಸಿ) ಅನುಮೋದನೆ ನೀಡಿದೆ. ಸಿಬ್ಬಂದಿ ಮತ್ತು ತರಬೇತಿ ಇಲಾಖೆ (ಡಿಒಪಿಟಿ) ಹೊರಡಿಸಿದ ಆದೇಶದ ಮೂಲಕ ಈ ನಿರ್ಧಾರವನ್ನು ತಿಳಿಸಲಾಗಿದೆ. ಮೆಹ್ತಾ ಅವರು ದೇಶದ ಎರಡನೇ ಅತ್ಯುನ್ನತ ಕಾನೂನು ಅಧಿಕಾರಿಯಾಗಿ ಹೊಸ ಮೂರು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಈ ಹುದ್ದೆಯಲ್ಲಿ ಮುಂದುವರಿಯುತ್ತಾರೆ.

ಒಡಿಶಾದ ಹಲವು ಸ್ಥಳಗಳಿಗೆ ಮರುನಾಮ

• ಭುವನೇಶ್ವರ: ಒಡಿಶಾದ ಮಿಲೇನಿಯಮ್ ಸಿಟಿ ಕಟಕ್ ಅನ್ನು ಇನ್ನು ಮುಂದೆ ಕಟಕಾ ಎಂದು ಉಚ್ಚರಿಸುವಂತೆ ಸೂಚನೆ ನೀಡಲಾಗಿದೆ. ರಾಜ್ಯ ಸರ್ಕಾರವು ಸೋಮವಾರ ಜಿಲ್ಲೆಗಳು, ಉಪವಿಭಾಗಗಳು, ತಾಲ್ಲೂಕುಗಳು, ಬ್ಲಾಕ್‌ಗಳು ಮತ್ತು ನಗರ ಸಂಸ್ಥೆಗಳು ಸೇರಿ 64 ಸ್ಥಳಗಳ ಇಂಗ್ಲಿಷ್ ಕಾಗುಣಿತವನ್ನು ಬದಲಾಯಿಸಿದೆ. ಅದೇ ರೀತಿಯಲ್ಲಿ ಬಾಲಸೋರ್ ಅನ್ನು ಇನ್ನು ಬಾಲೇಶ್ವರ ಮತ್ತು ರೂರ್ಕೆಲಾವನ್ನು ರೌರ್ಕೆಲಾ ಎಂದು ಬರೆಯಲಾಗುತ್ತದೆ. ಈ ತಿದ್ದುಪಡಿಗಳು ಇಂಗ್ಲಿಷ್ ಕಾಗುಣಿತಗಳಿಗೆ ಮಾತ್ರ ಅನ್ವಯಿಸುತ್ತವೆ.

ಬಂಗಾಳ ಬಜೆಟ್‌ನಲ್ಲಿ ಭರಪೂರ ಘೋಷಣೆ

- 1 ಲಕ್ಷ ಹುದ್ದೆ ಭರ್ತಿ: ನೌಕರರ ತುಟ್ಟಿಭತ್ಯೆ 20% ಹೆಚ್ಚಳ
- ಆಯುಷ್ಮಾನ್ ಭಾರತಕ್ಕೆ 3,100 ಕೋಟಿ ರೂ.

• ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ಅಧಿಕಾರಕ್ಕೇರಿದ ಬಳಿಕ ತನ್ನ ಚೊಚ್ಚಲ ಪೂರ್ಣ ಪ್ರಮಾಣದ ಬಜೆಟ್ ಮಂಡಿಸಿರುವ ಬಿಜೆಪಿ ಸರ್ಕಾರ, ಒಂದು ಲಕ್ಷ ಸರ್ಕಾರಿ ಹುದ್ದೆಗಳ ಭರ್ತಿ, ನೌಕರರ ತುಟ್ಟಿಭತ್ಯೆ ಹೆಚ್ಚಳ ಹಾಗೂ ಮಹಿಳಾ ಕಲ್ಯಾಣ ಯೋಜನೆಗಳಿಗೆ ಹೆಚ್ಚಿನ ಅನುದಾನ ಘೋಷಿಸಿದೆ. ಹಣಕಾಸು ಸಚಿವ ಸ್ವಪನ್ ದಾಸ್‌ಗುಪ್ತ ಅವರು ಸೋಮವಾರ ವಿಧಾನಸಭೆಯಲ್ಲಿ 2026-27ನೇ ಸಾಲಿನ 4.38 ಲಕ್ಷ ಕೋಟಿ ರೂ.ಗಳ ಗಾತ್ರದ ಬಜೆಟ್ ಮಂಡಿಸಿದರು. ಮುಖ್ಯಮಂತ್ರಿ ಸುವೇಂದು ಅಧಿಕಾರಿ ನೇತೃತ್ವದ ಬಿಜೆಪಿ ಸರ್ಕಾರವು ಮೇ ತಿಂಗಳಲ್ಲಿ ಅಧಿಕಾರ ವಹಿಸಿಕೊಂಡ ಬಳಿಕ ಮಂಡಿಸಿದ ಮೊದಲ ಪೂರ್ಣ ಬಜೆಟ್ ಇದಾಗಿದೆ. ಹಿಂದಿನ ಟಿಎಂಸಿ ಸರ್ಕಾರ ಫೆಬ್ರವರಿಯಲ್ಲಿ 4.06 ಲಕ್ಷ ಕೋಟಿ ರೂ. ಮೊತ್ತದ ಲೇಖಾನುದಾನ ಮಂಡಿಸಿತ್ತು. ಶೇ.38ರಷ್ಟಕ್ಕೆ ತುಟ್ಟಿ ಭತ್ಯೆ ಹೆಚ್ಚಳ, ಪೊಲೀಸ್ ಶಿಕ್ಷಣ ಇಲಾಖೆಯಲ್ಲಿ ಖಾಲಿ ಹುದ್ದೆಗಳ ನೇಮಕ, ಇದರಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿ, ಅಗ್ನಿವೀರರಿಗೆ ಶೇ.10 ಮೀಸಲು, ನೇಮಕಾತಿಯ ಗರಿಷ್ಠ ವಯೋಮಿತಿ 5 ವರ್ಷಗಳ ಸಡಿಲಿಕೆ, ಪದವೀಧರ ನಿರುದ್ಯೋಗಿಗಳಿಗೆ 3 ಸಾವಿರ ರೂ. ಮಾಸಿಕ ನೆರವು, ಇತರೆ ಅರ್ಹ ನಿರುದ್ಯೋಗಿಗಳಿಗೆ 2 ಸಾವಿರ ರೂ. ನೆರವು ಇದರಲ್ಲಿ ಸೇರಿದೆ. ಆಯುಷ್ಮಾನ್ ಭಾರತ್ ಯೋಜನೆ ಅನುಷ್ಠಾನಕ್ಕೆ 3,100 ಕೋಟಿ ರೂ. ಒದಗಿಸಲಾಗಿದೆ. ಕಲ್ಕತ್ತಾ ಸ್ಟಾಕ್ ಎಕ್ಸ್‌ಚೇಂಜ್ ಮರುಆರಂಭಿಸಲು ಘೋಷಿಸಲಾಗಿದೆ.

ಮಹಾ ಪರಿಷತ್ ಸಮರ: ಬಿಜೆಪಿ ಮೈತ್ರಿ ಜಯಭೇರಿ

• ಮುಂಬೈ: ಮಹಾರಾಷ್ಟ್ರ ವಿಧಾನ ಪರಿಷತ್‌ಗೆ ಜೂ.18ರಂದು ನಡೆದ ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳ ಚುನಾವಣೆಯ ಫಲಿತಾಂಶ ಪ್ರಕಟವಾಗಿದ್ದು, 17 ಸ್ಥಾನಗಳ ಪೈಕಿ 16 ಸ್ಥಾನಗಳು ಬಿಜೆಪಿ ನೇತೃತ್ವದ ಮಹಾಯುತಿ ಮೈತ್ರಿಕೂಟದ ಪಾಲಾಗಿವೆ. ಉದ್ಧವ್ ಠಾಕ್ರೆಯ ಶಿವಸೇನೆ ಮತ್ತು ಶರದ್ ಪವಾರ್ ಅವರ ಎನ್‌ಸಿಪಿ ಒಂದೇ ಒಂದು ಸ್ಥಾನ ಗೆಲ್ಲದೆ ಹೀನಾಯ ಸೋಲುಂಡಿವೆ. ಚುನಾವಣೆಗೂ ಮುನ್ನವೇ ಆಡಳಿತಾರೂಢ ಮಹಾಯುತಿ ಅಭ್ಯರ್ಥಿಗಳು 6 ಕ್ಷೇತ್ರಗಳಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದು, ಇದೀಗ ಉಳಿದ 11 ಸ್ಥಾನಗಳ ಫಲಿತಾಂಶ ಪ್ರಕಟವಾಗಿದ್ದು ಮಹಾಯುತಿ ಮೈತ್ರಿಕೂಟವು 17 ಸ್ಥಾನಗಳ ಪೈಕಿ 16 ಸ್ಥಾನಗಳಲ್ಲಿ ಜಯಗಳಿಸಿದೆ. ನಾಸಿಕ್‌ನಲ್ಲಿ ಮಾತ್ರವೇ ಆಳುವ ಮೈತ್ರಿಕೂಟದ ಅಂಗಪಕ್ಷ ಶಿವಸೇನೆ(ಶಿಂದೆ)ಯ ಅಧಿಕೃತ ಅಭ್ಯರ್ಥಿ ನರೇಂದ್ರ ದರಡೆ ಅವರು ಸೋಲುಂಡು, ಅಲ್ಲಿ ಸ್ವತಂತ್ರ ಅಭ್ಯರ್ಥಿ ಮತ್ತು ಬಿಜೆಪಿ ಬಂಡಾಯ ಅಭ್ಯರ್ಥಿ ಗೋಕುಲ್ ಗೀತೆ ಗೆಲುವು ಸಾಧಿಸಿದ್ದಾರೆ. ಚುನಾವಣೆಯಲ್ಲಿ ಬಿಜೆಪಿ 11 ಸ್ಥಾನಗಳಲ್ಲಿ, ಶಿವಸೇನೆ ನಾಲ್ಕು ಸ್ಥಾನಗಳಲ್ಲಿ ಮತ್ತು ಎನ್‌ಸಿಪಿ ಎರಡು ಸ್ಥಾನಗಳಲ್ಲಿ ಸ್ಪರ್ಧಿಸಿದ್ದವು. ಥಾಣೆಯಿಂದ ಶಿವಸೇನೆಯ ರವೀಂದ್ರ ಫಾಟಕ್, ಯಾವತ್ಮಾಲ್‌ನಿಂದ ದುಶ್ಯಂತ್ ಚತುರ್ವೇದಿ, ರಾಯಗಡ-ರತ್ನಗಿರಿ-ಸಿಂಧುದುರ್ಗದಿಂದ ಎನ್‌ಸಿಪಿ(ಅಜಿತ್)ಯ ಅನಿಕೇತ್ ತತ್ಕರೆ, ಪುಣೆಯಿಂದ ವಿಕ್ರಮ್ ಕಾಕಡೆ, ವಾರ್ಧಾ-ಗಡ್ಚಿರೋಲಿ-ಚಂದ್ರಾಪುರದಿಂದ ಬಿಜೆಪಿಯ ಅರುಣ್ ಲಖಾನಿ, ಅಹಲ್ಯಾನಗರದಿಂದ ಪ್ರಜಕ್ತ್ ತಾನ್ಪುರೆ ಛತ್ರಪತಿ ಸಂಭಾಜಿನಗರ-ಜಲ್ನಾದಿಂದ ಸುಹಾಸ್ ಶಿರ್ಸಾತ್, ನಾಗ್ಪುರದಿಂದ ರಾಜೀವ್ ಪೋತರ್, ನಾಂದೇಡ್‌ನಿಂದ ಅಮರ್ ರಾಜೂರ್ಕರ್ ಆಯ್ಕೆಯಾಗಿದ್ದಾರೆ.

ಬ್ರಿಟನ್ ಪ್ರಧಾನಿ ಸ್ಥಾನಕ್ಕೆ ಸ್ಟಾರ್ಮರ್ ರಾಜೀನಾಮೆ

• ಲಂಡನ್: ಬ್ರಿಟನ್ ಪ್ರಧಾನಿ ಹಾಗೂ ಲೇಬರ್ ಪಕ್ಷದ ನಾಯಕ ಸ್ಥಾನಕ್ಕೆ ಕಿರ್ ಸ್ಟಾರ್ಮರ್ ಸೋಮವಾರ ರಾಜೀನಾಮೆ ಘೋಷಿಸಿದ್ದಾರೆ. ಮುಂಬರುವ ವಾರಗಳಲ್ಲಿ ಹೊಸ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಲು ಅವರು ವೇಳಾಪಟ್ಟಿ ನಿಗದಿಪಡಿಸಿದ್ದು, ಸೆಪ್ಟೆಂಬರ್ ವೇಳೆಗೆ ಹೊಸ ನಾಯಕರ ಆಯ್ಕೆ ಪ್ರಕ್ರಿಯೆ ಪೂರ್ಣಗೊಳ್ಳಲಿದೆ. ಆಡಳಿತ ಪಕ್ಷ ಹೊಸ ನಾಯಕರನ್ನು ಆಯ್ಕೆ ಮಾಡುವವರೆಗೆ ಸ್ಟಾರ್ಮರ್ ಅಧಿಕಾರದಲ್ಲಿ ಮುಂದುವರಿಯಲಿದ್ದಾರೆ. ಜು.9ರಂದು ನಾಮನಿರ್ದೇಶನ ಪ್ರಕ್ರಿಯೆ ಆರಂಭವಾಗಲಿದ್ದು, ಜು.17ಕ್ಕೆ ನಿಗದಿಯಾಗಿರುವ ಸಂಸತ್ತಿನ ಬೇಸಿಗೆ ರಜೆಯೊಳಗೆ ಈ ಪ್ರಕ್ರಿಯೆ ಪೂರ್ಣಗೊಳ್ಳಲಿದೆ. ರಾಷ್ಟ್ರೀಯ ಕಾರ್ಯಕಾರಿ ಸಮಿತಿ, ಈ ಪ್ರಕ್ರಿಯೆಯನ್ನು ರೂಪಿಸಲಿದೆ. ಸಂಭಾವ್ಯ ಅಭ್ಯರ್ಥಿಗಳಿಗೆ ಶೇ.20ರಷ್ಟು ಪಕ್ಷದ ಸಂಸದರ ಬೆಂಬಲ ಮತ್ತು ಶೇಕಡಾ ಐದರಷ್ಟು ಕ್ಷೇತ್ರ ಪಕ್ಷಗಳು ಅಥವಾ ಮೂರು ಸಂಯೋಜಿತ ಸಂಸ್ಥೆಗಳ ಬೆಂಬಲದ ಅಗತ್ಯವಿದೆ. ಕಳೆದ ವಾರ ಉಪಚುನಾವಣೆಯಲ್ಲಿ ಜಯಗಳಿಸಿದ ಆಂಡಿ ಬರ್ನ್‌ಹ್ಯಾಮ್ ಸೋಮವಾರ ಹೌಸ್ ಆಫ್ ಕಾಮನ್ಸ್‌ಗೆ ಮರಳಿದ್ದಾರೆ. ಬರ್ನ್‌ಹ್ಯಾಮ್ ಅವರು ಅವಿರೋಧವಾಗಿ ಆಯ್ಕೆಯಾಗುವ ಸಾಧ್ಯತೆಗಳಿವೆ. ವೆಸ್ ಸ್ಟ್ರೀಟಿಂಗ್ ಕೂಡ ಮತ್ತೊಬ್ಬ ಸಂಭಾವ್ಯ ಸ್ಪರ್ಧಿ ಎನ್ನಲಾಗುತ್ತಿದೆ. ಸ್ಟಾರ್ಮರ್ ರಾಜ ಮನೆತನದ 3ನೇ ಚಾರ್ಲ್ಸ್ ಜತೆಗೆ ಮಾತನಾಡಿ ನಿರ್ಧಾರವನ್ನು ತಿಳಿಸಿದ್ದಾರೆ. ಪೀಟರ್ ಮ್ಯಾಂಡೆಲ್ಸನ್‌ರನ್ನು ಅಮೆರಿಕದ ರಾಯಭಾರಿಯನ್ನಾಗಿ ನೇಮಿಸಿದ ವಿಷಯ ಮತ್ತು ಅಭಿವೃದ್ಧಿ ವಿಚಾರಗಳಲ್ಲಿ ತಮ್ಮ ನಿರ್ಧಾರಗಳಿಂದಾಗಿ ಇತ್ತೀಚಿನ ತಿಂಗಳುಗಳಲ್ಲಿ ಸ್ಟಾರ್ಮರ್ ಜನಪ್ರಿಯತೆ ಕುಸಿದಿತ್ತು.

ಜುಲೈನಲ್ಲಿ ಇನ್ನೂ 2 ಸ್ವದೇಶಿ ಯುದ್ಧ ನೌಕೆ ಸೇರ್ಪಡೆ

• ಹೊಸದಿಲ್ಲಿ: ಭಾರತೀಯ ನೌಕಾಪಡೆಗೆ ಮೂರು ಸ್ಥಳೀಯ ಯುದ್ಧನೌಕೆಗಳನ್ನು ನಿಯೋಜಿಸಿದ ಬೆನ್ನಲ್ಲೇ ಇನ್ನೂ ಎರಡು ಸ್ವದೇಶಿ ಯುದ್ಧ ನೌಕೆಗಳನ್ನು ಸೇರ್ಪಡೆಗೊಳಿಸಲು ಸಿದ್ಧತೆಗಳು ನಡೆಯುತ್ತಿದೆ. ಸ್ಟೆಲ್ತ್ ಫ್ರಿಗೇಟ್ ಮಹೇಂದ್ರಗಿರಿ ಮತ್ತು ಆಂಟಿ-ಸಬ್‌ಮರೀನ್ ವಾರ್ಫೇರ್ ಶಾಲೋ ವಾಟರ್ ಕ್ರಾಫ್ಟ್(ಎಎಸ್‌ಡಬ್ಲ್ಯು-ಎಸ್‌ಡಬ್ಲ್ಯುಸಿ) ಮಾಲ್ವಾನ್ ಅನ್ನು ಜುಲೈನಲ್ಲಿ ನಿಯೋಜಿಸುವ ನಿರೀಕ್ಷೆಯಿದೆ. ಇದು ಭಾರತದ ಸ್ಥಳೀಯ ನೌಕಾ ನಿರ್ಮಾಣವನ್ನು ವೇಗಗೊಳಿಸುತ್ತದೆ. ಅವಳಿ ಸೇರ್ಪಡೆಗಳು ವಾರಗಳಲ್ಲಿ ನಿಯೋಜಿಸಲಾದ ಸ್ಥಳೀಯ ನೌಕಾ ಸೇರ್ಪಡೆಗಳ ಸಂಖ್ಯೆಯನ್ನು ಐದಕ್ಕೆ ಕೊಂಡೊಯ್ಯುತ್ತವೆ. ಹಿಂದು ಮಹಾಸಾಗರ ಪ್ರದೇಶದಲ್ಲಿ ಅಭಿವೃದ್ಧಿ ಹೊಂದುತ್ತಿರುವ ಕಡಲ ಭದ್ರತಾ ಸವಾಲುಗಳ ನಡುವೆ ಈ ಬೆಳವಣಿಗೆ ನಡೆದಿದೆ. ಮಹೇಂದ್ರಗಿರಿಯನ್ನು ಪೂರ್ವ ಕರಾವಳಿಯಲ್ಲಿ ನಿಯೋಜಿಸುವ ನಿರೀಕ್ಷೆಯಿದ್ದರೆ, ಮಾಲ್ವಾನ್ ಪಶ್ಚಿಮ ಕರಾವಳಿಯಲ್ಲಿ ನೌಕಾಪಡೆಗೆ ಸೇರುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಹನುಮ ಜನ್ಮಭೂಮಿ ವಿವಾದ: ಕರ್ನಾಟಕ ಹೈನಲ್ಲೇ ಇತ್ಯರ್ಥವಾಗಲಿ

ತುರ್ತು ವಿಚಾರಣೆಗೆ ಸುಪ್ರೀಂ ನಕಾರ

• ಹೊಸದಿಲ್ಲಿ: ಹನುಮ ಜನ್ಮಭೂಮಿ ವಿವಾದಕ್ಕೆ ಸಂಬಂಧಿಸಿದ ಪ್ರಕರಣದ ತುರ್ತು ವಿಚಾರಣೆ ನಡೆಸಬೇಕೆಂಬ ಮನವಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ತಿರಸ್ಕರಿಸಿದೆ. ಪ್ರಕರಣಕ್ಕೆ ಸಂಬಂಧಿಸಿದ ಗೊಂದಲವನ್ನು ಕರ್ನಾಟಕ ಹೈಕೋರ್ಟ್‌ನಲ್ಲೇ ಪರಿಹರಿಸಿಕೊಳ್ಳಬೇಕು ಎಂದು ನ್ಯಾಯಾಲಯ ಸೂಚಿಸಿದೆ.

ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಜೋಯ್‌ಮಾಲ್ಯ ಬಾಗ್ಚಿ ಅವರ ಪೀಠದ ಮುಂದೆ ವಕೀಲರು ಪ್ರಕರಣವನ್ನು ತುರ್ತಾಗಿ ಪ್ರಸ್ತಾಪಿಸಿದರು. ಕರ್ನಾಟಕ ಹೈಕೋರ್ಟ್ ಪ್ರಕರಣದ ತೀರ್ಪನ್ನು ಕಾಯ್ದಿರಿಸಿ, ಬಳಿಕ ಮುಕ್ತ ನ್ಯಾಯಾಲಯದಲ್ಲಿ ಪ್ರಕಟಿಸಿತ್ತು. ಆದರೆ ತೀರ್ಪು ಪ್ರಕಟಿಸಿದ ನಂತರವೂ ಪ್ರಕರಣವನ್ನು ಮತ್ತೆ ವಿಚಾರಣೆಗೆ ಪಟ್ಟಿ ಮಾಡಲಾಗಿದೆ ಎಂದು ವಕೀಲರು ಆಕ್ಷೇಪಿಸಿದರು.

ಒಮ್ಮೆ ತೀರ್ಪು ಪ್ರಕಟಿಸಿ ಸಹಿ ಹಾಕಿದ ಬಳಿಕ, ನಿರ್ದಿಷ್ಟ ಕಾನೂನುಬದ್ಧ ಸಂದರ್ಭಗಳನ್ನು ಹೊರತುಪಡಿಸಿ ನ್ಯಾಯಾಲಯ ಮತ್ತೆ ಅದೇ ಪ್ರಕರಣದ ವಿಚಾರಣೆ ನಡೆಸಲು ಸಾಧ್ಯವಿಲ್ಲ. ಹೀಗಾಗಿ ಸುಪ್ರೀಂ ಕೋರ್ಟ್ ತಕ್ಷಣ ಮಧ್ಯಪ್ರವೇಶಿಸಬೇಕು ಎಂದು ಅರ್ಜಿದಾರರ ಪರ ವಕೀಲರು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ನಾಗರತ್ನ, ಕರ್ನಾಟಕ ಹೈಕೋರ್ಟ್‌ನಲ್ಲಿ ಬೀಯಿಂಗ್ ಸ್ಪೋಕನ್ ಟು ಎಂಬ ಮಾನ್ಯ ಪ್ರಕ್ರಿಯೆ ಇದೆ. ಇದರ ಅನ್ವಯ ತೀರ್ಪಿನಲ್ಲಿನ ಗೊಂದಲಗಳನ್ನು ಸ್ಪಷ್ಟಪಡಿಸುವುದು, ಲೋಪಗಳನ್ನು ಸರಿಪಡಿಸುವುದು ಅಥವಾ ಅಗತ್ಯ ಅಂಶಗಳನ್ನು ಪರಿಶೀಲಿಸಲು ನ್ಯಾಯಾಲಯಕ್ಕೆ ಅವಕಾಶವಿದೆ ಎಂದು ತಿಳಿಸಿದರು. ಈ ಹಂತದಲ್ಲಿ ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸುವ ಅಗತ್ಯವಿಲ್ಲ ಎಂದು ಹೇಳಿದ ಪೀಠ, ತುರ್ತು ವಿಚಾರಣೆಯ ಮನವಿಯನ್ನು ನಿರಾಕರಿಸಿತು.

- ತೀರ್ಪಿನ ಬಳಿಕ ಮತ್ತೆ ಪ್ರಕರಣ ಪಟ್ಟಿ ಮಾಡಿದ್ದಕ್ಕೆ ಅರ್ಜಿದಾರರ ಆಕ್ಷೇಪ


ಮೂರು ಸ್ಥಳಗಳ ಹಕ್ಕು ಪ್ರತಿಪಾದನೆ

ಹನುಮಂತನ ಜನ್ಮಸ್ಥಳದ ಕುರಿತು 2021ರಿಂದ ವಿವಾದ ನಡೆಯುತ್ತಿದೆ. ಆಂಧ್ರಪ್ರದೇಶದ ತಿರುಮಲದಲ್ಲಿರುವ ಅಂಜನಾದ್ರಿಯೇ ಹನುಮನ ಜನ್ಮಸ್ಥಳ ಎಂದು ತಿರುಮಲ ತಿರುಪತಿ ದೇವಸ್ಥಾನ ಪ್ರತಿಪಾದಿಸಿದೆ. ಮತ್ತೊಂದೆಡೆ, ಕರ್ನಾಟಕದ ಹಂಪಿ ಸಮೀಪದ ಕಿಷ್ಕಿಂಧಾ ಪ್ರದೇಶದಲ್ಲಿರುವ ಅಂಜನಾದ್ರಿಯೇ ನಿಜವಾದ ಜನ್ಮಭೂಮಿ ಎಂದು ಶ್ರೀ ಹನುಮದ್ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಹೇಳಿದೆ. ಕರ್ನಾಟಕದ ರಾಮಚಂದ್ರಾಪುರ ಮಠವು ಉತ್ತರ ಕನ್ನಡ ಜಿಲ್ಲೆಯ ಗೋಕರ್ಣವೇ ಹನುಮನ ಜನ್ಮಸ್ಥಳ ಎಂದು ಪ್ರತಿಪಾದಿಸಿದೆ.

ಕತಾರ್‌ನ ಅನಿಲ ಸ್ಥಾವರದಲ್ಲಿ ಭಾರೀ ಸ್ಫೋಟ

ಭಾರತೀಯರು ಸೇರಿ 13 ಸಾವು

• ದುಬೈ: ಕತಾರ್‌ನಲ್ಲಿ ನಡೆದ ಅನಿಲ ಸ್ಥಾವರದ ಸ್ಫೋಟದಲ್ಲಿ ಭಾರತೀಯ ಮತ್ತು ಪಾಕಿಸ್ತಾನಿ ಪ್ರಜೆಗಳು ಸೇರಿದಂತೆ 13 ಜನರು ಮೃತಪಟ್ಟಿದ್ದು, 66 ಮಂದಿ ಗಾಯಗೊಂಡಿದ್ದಾರೆ ಎಂದು ಕತಾರ್ ಇಂಧನ ಸಚಿವ ಸಾದ್ ಅಲ್-ಕಾಬಿ ಸೋಮವಾರ ತಿಳಿಸಿದ್ದಾರೆ. ಕತಾರ್‌ನ ದೇಶೀಯ ಇಂಧನ ಮೂಲಸೌಕರ್ಯದಲ್ಲಿ ಬರ್ಜಾನ್ ಅನಿಲ ಸೌಲಭ್ಯವು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಈ ಸ್ಥಾವರವು ದಿನಕ್ಕೆ ಸುಮಾರು 1.4 ಶತಕೋಟಿ ಸ್ಟ್ಯಾಂಡರ್ಡ್ ಕ್ಯೂಬಿಕ್ ಅಡಿ ಮಾರಾಟ ಅನಿಲವನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿದೆ. ಇದನ್ನು ಪ್ರಾಥಮಿಕವಾಗಿ ವಿದ್ಯುತ್ ಉತ್ಪಾದನೆ ಘಟಕಗಳಿಗೆ ಶಕ್ತಿ ತುಂಬಲು ಬಳಸಲಾಗುತ್ತದೆ. ಕತಾರ್ ಈ ಸೌಲಭ್ಯದಲ್ಲಿ ಅಗಾಧವಾದ ಬಹುಪಾಲು ಪಾಲನ್ನು ಹೊಂದಿದ್ದರೆ, ಇಂಧನ ದೈತ್ಯ ಎಕ್ಸಾನ್‌ಮೊಬಿಲ್ ಅಲ್ಪ ಪ್ರಮಾಣದ ಪಾಲನ್ನು ಹೊಂದಿದೆ. ಈ ವರ್ಷದ ಆರಂಭದಲ್ಲಿ ಮಾರ್ಚ್‌ನಲ್ಲಿ ಇರಾನಿನ ಕ್ಷಿಪಣಿಯು ರಾಸ್ ಲಾಫಾನ್‌ಗೆ ಅಪ್ಪಳಿಸಿದ ನಂತರ ಈ ಸೌಲಭ್ಯದಲ್ಲಿ ಕಾರ್ಯನಿರ್ವಹಣೆಯನ್ನು ಸ್ಥಗಿತಗೊಳಿಸಲಾಗಿತ್ತು. ಕ್ಷಿಪಣಿ ದಾಳಿಯಿಂದ ಭಾರೀ ಬೆಂಕಿ ಕಾಣಿಸಿಕೊಂಡಿತ್ತು. ಭದ್ರತಾ ಕಾಳಜಿ ಮತ್ತು ಪ್ರಾದೇಶಿಕ ಯುದ್ಧಗಳಿಗೆ ಸಂಬಂಧಿಸಿದ ಅಡೆತಡೆಗಳಿಂದಾಗಿ ಉತ್ಪಾದನಾ ಚಟುವಟಿಕೆಗಳನ್ನು ಅಂದಿನಿಂದ



ಸ್ಥಗಿತಗೊಳಿಸಲಾಗಿತ್ತು. ಇದನ್ನು ಸ್ಥಳೀಯ ವಿದ್ಯುತ್ ಉತ್ಪಾದನೆಗೆ ಮತ್ತು ಅರೇಬಿಯಾ ಪರ್ಯಾಯ ದ್ವೀಪದ ಮರುಭೂಮಿ ಪ್ರದೇಶಗಳಲ್ಲಿನ ಉಪ್ಪುನೀರಿನ ಸಂಸ್ಕರಣಾ ಘಟಕಗಳಿಗೆ ವಿದ್ಯುತ್ ನೀಡಲು ಕತಾರ್ ಬಳಸುತಿತ್ತು. ಕತಾರ್ ಬಹುತೇಕ ಎಲ್ಲಾ ಸ್ಥಾವರವನ್ನು ಹೊಂದಿದೆ.

ಸಹಾಯವಾಣಿ: ದೋಹಾದಲ್ಲಿರುವ ಭಾರತೀಯ ರಾಯಭಾರ ಕಚೇರಿ ಘಟನೆ ಬಗ್ಗೆ ಸಂತಾಪ ವ್ಯಕ್ತಪಡಿಸಿದೆ. ಭಾರತೀಯ ಪ್ರಜೆಗಳು ಮತ್ತು ಅವರ ಕುಟುಂಬಗಳಿಗೆ ತುರ್ತು ಸಹಾಯವಾಣಿ ಸಂಖ್ಯೆಗಳನ್ನು ಸಕ್ರಿಯಗೊಳಿಸಿದೆ. ರಾಯಭಾರ ಕಚೇರಿಯನ್ನು +974-55647502, +974-55384683 ಅಥವಾ doha@mea.gov.in. ಇಮೇಲ್ ಮೂಲಕ ಸಂಪರ್ಕಿಸಬಹುದು.

CHANGE OF NAME

I, **MALAN CHOUDHARI** (Old Name) Resident of 2585, 01th Ward, Near Ghandi Circle, Hanamasagar, Tq Kushtagi, Dist: Koppal - 583281, Karnataka, India have changed my name as **MALAN** (New Name) henceforth I will be called and recognized by new name for all future purposes, dated: 22/06/2026.

CHANGE OF NAME

I, **SHIVASHANKAR HAMPIHOLI** (Old Name) Resident of H No 2 Ganga Apartment 2nd Cross Bharati Nagar Dharwad 580001 (Address) have changed my name as **SHIVASHANKAR NARAHARIRAO HAMPIHOLI** (New Name) henceforth I will be called and recognized by new name for all future purposes, dated: 22/06/2026.

CHANGE OF NAME

I, **ZAINABBI PALLAN** (Old Name) Resident of B/1003 Police Line Durga Nagar, Haliyal, Uttara Kannada Karataka - 581329, have changed my name as **ZAINABBI MAJIDANDI** (New Name) henceforth I will be called and recognized by new name for all future purposes, dated: 22/06/2026.

CHANGE OF NAME

I, **AFTABALI MOHAMEDHANEEF BANKAPUR** (Old Name) Resident of H No Shivayogishwar Nagar, 1st Cross Post - Haveri - 581110 in the Distret of Haveri in Karnataka State, have changed my name as **AFTAB ALI BANKAPUR** (New Name) for all purposes, vide affidavit dated: 20/06/2026 before notary **T. G. Balannavar.**

CHANGE OF NAME

I, **SAYED MUQSIT** (Old Name) Resident of 7094/62, Vidyanagar, Hangal, Haveri, Karnataka, Pin Code: 581104, have changed my name as **SAYED MUQSIT MULLA** (New Name) henceforth I will be called and recognized by new name for all future purposes, dated: 22/06/2026.

CHANGE OF NAME

I, **DODDAMANI PADMA KRISHNA @ PADMAVATHI P M** (Old Name) Resident of Big House Opp Kariyamma Temple Saidapur Dharwad 580001 Karnataka have changed my name as **PADMA DODAMANI** (New Name) henceforth I will be called and recognized by new name for all future purposes, dated: 22/06/2026.

CHANGE OF NAME

I, **SANIYA KOUSAR BURBURI** (Old Name) Resident of H No Shivayogishwar Nagar, 1st Cross Post - Haveri - 581110 in the Distret of Haveri in Karnataka State, have changed my name as **SANIYA KOUSAR AFTAB ALI BANKAPUR** (New Name) for all purposes, vide affidavit dated: 20/06/2026 before notary **T. G. Balannavar.**

CHANGE OF NAME

I, **NIDA TARANNUM QURESHI** (Old Name) Resident of H. No 64, Aakashpark Kusugal Road, Hubballi Pin - 580023 (address) have changed my name as **NIDATARANNUM AHTESHAM QURESHI** (New Name) for all purposes, vide affidavit dated: 22/06/2026 before notary **Bidaralli N. B.**

CHANGE OF NAME

I, **KAMLESH RAWAL** (Old Name) Resident of D No 3 Shagun Apartment, Keshwapur Kusugal Road Hubballi 580023 Karnataka have changed my name as **KAMLESH MAGANLAL RAWAL** (New Name) henceforth I will be called and recognized by new name for all future purposes, dated: 22/06/2026.

CHANGE OF NAME

I, **AFSANA YALAWIGI** (Old Name) Resident of Old Bus Stand Savanur 581118 (Address) have changed my name as **AFSANA MOHAMMED FAHEEM JAHANGIR** (New Name) henceforth I will be called and recognized by new name for all future purposes, dated: 22/06/2026.

CHANGE OF NAME

I, **RIHANABEGUM RAMDURG** (Old Name) Resident of Ward No 25, L B S Nagar, Gangavathi, Hosalli Road, Gangavathi, Koppal, State: Karnataka, Pin Code: 583227 have changed my name as **RIHANA BEGUM** (New Name) henceforth I will be called and recognized by new name for all future purposes, dated: 22/06/2026.

CHANGE OF NAME

I, **MAHANTESH DEVENDRAPPA VEERAPUR** (Old Name) Resident of Shiva Sai Plot No 1 And 2 Hampannavar, Layout Near Ishwar Temple Kumareshwar Nagar, Dharwad 580008 Karnataka have changed my name as **MAHANTESH VEERAPUR** (New Name) henceforth I will be called and recognized by new name for all future purposes, dated: 22/06/2026.

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ(ಐ.ಟಿ)

ಇ–ಟೆಂಡರ ಅಧಿಸೂಚನೆ

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದೇಶ 1999–2000 ರ ಪ್ರಕಾರ ಆಕ್ಟ 2000ರ ನಿಯಮದಂತೆ ಸರ್ಕಾರದ ಅಧೀಕೃತ ಏಜನ್ಸಿದಾರರು/ಪರವಾನಿಗೆ ಹೊಂದಿರುವ/ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರರು ಇ–ಪ್ರೊಕ್ಯೂರಮೆಂಟ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳ ಟೆಂಡರಗಳಲ್ಲಿ ಭಾಗವಹಿಸಬಹುದು.

ಸಾಮಾನ್ಯ ಸೂಚನೆಗಳು:– ಗುತ್ತಿಗೆದಾರರು ಗುತ್ತಿಗೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸುವುದು.

ಹೆಚ್ಚಿನ ಮಾಹಿತಿಯನ್ನು ಕಾರ್ಯನಿರ್ವಾಹಕ ಇಂಜಿನೀಯರ (ಐ.ಟಿ) ಇವರ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂಖ್ಯೆ: 0836–2251955 ಮತ್ತು ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ **https://kppp.karnataka.gov.in/** ರಲ್ಲಿ ಪಡೆಯಬಹುದು ಹಾಗೂ ಸದರ ಟೆಂಡರ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರಮೆಂಟನಲ್ಲಿ ಅ.ನಂ 1 ರಿಂದ 5ರ ವರೆಗಿನ ದಾಖಲೆಗಳನ್ನು ದಿ:–**24.06.2026** ರಿಂದ ಪಡೆಯಬಹುದು. ಒಂದು ವೇಳೆ ಸದರಿ ಟೆಂಡರಗಳಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಇ–ಪೋರ್ಟಲ್ ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಟೆಂಡರ್ ಕಾಮಗಾರಿ

ಅ. ನಂ	ಇಂಡೆಂಟ್ ನಂ	ವಾರ್ಡ ಅನುದಾನ ಮತ್ತು ವಾರ್ಡ ನ.ಂ	ಅಂದಾಜು ಮೊತ್ತ (ಲಕ್ಷಗಳಲ್ಲಿ)	ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	ಟೆಂಡರ ತೆರೆಯುವ ದಿನಾಂಕ
1	DMA/2026-27/OW/WORK_INDENT57288	51ನೇ ವಾರ್ಡ ಅನುದಾನ	20.00	09.07.2026 ಸಾಯಂಕಾಲ 05:00 ಗಂಟೆಗೆ	10.07.2026 ಸಾಯಂಕಾಲ 05:30 ಗಂಟೆಗೆ
2	DMA/2026-27/OW/WORK_INDENT60171	77ನೇ ವಾರ್ಡ ಅನುದಾನ	21.00		
3	DMA/2026-27/SE7947	ಸಾಮಾನ್ಯ ಅನುದಾನ	402.64		
4	DMA/2026-27/SE8088		68.00		
5	DMA/2026-27/IND6379		15.00	30.06.2026 ಸಾಯಂಕಾಲ 05:00 ಗಂಟೆಗೆ	01.07.2026 ಸಾಯಂಕಾಲ 05:30 ಗಂಟೆಗೆ

ಕಾರ್ಯನಿರ್ವಾಹಕ ಅಭಿಯಂತರರು (ಐ.ಟಿ)
ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ

ವಾಸಾಸಂಇ/ಧಾ/ದಿಶಾ/345/2026–27

ಪಟ್ಟಣ ಪಂಚಾಯತ ಕಾರ್ಯಾಲಯ ರಟ್ಟೀಹಳ್ಳಿ ಜಿಲ್ಲೆ॥ ಹಾವೇರಿ

ದೂರವಾಣಿ : 08376-286532 e-mail :itstaff_ulb_rattihalli@yahoo.com

ಇ–ಟೆಂಡರ್ ಪ್ರಕಟಣೆ

ರಟ್ಟಿಹಳ್ಳಿ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಸನ್ 2026–27ನೇ ಸಾಲಿನ ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನದಲ್ಲಿ 01 ಕಾಮಗಾರಿ, ಸನ್ 2026–27 ನೇ ಸಾಲಿನ ಎಸ್.ಎಫ್.ಸಿ ಬಂಡವಾಳ ಆಸ್ತಿ ಸೃಜನೆಯಲ್ಲಿ 01 ಕಾಮಗಾರಿ ಮತ್ತು ಪಟ್ಟಣ ಪಂಚಾಯತ ನಿಧಿಯ ಪರಿಶಿಷ್ಟ ಜಾತಿಯಲ್ಲಿ 01 ಕಾಮಗಾರಿ ಹಾಗೂ ಪರಿಶಿಷ್ಟ ಪಂಗಡದವರ ಕಲ್ಯಾಣಕ್ಕಾಗಿ ಕಾಯ್ದಿರಿಸಿದ ಅನುದಾನದಲ್ಲಿ 01 ಕಾಮಗಾರಿಯನ್ನು ಸೇರಿ ಒಟ್ಟು 04 ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000 ರ ಪ್ರಕಾರ ಆಕ್ಟ 2000ರ ನಿಯಮದಂತೆ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ನಿಯಮದನ್ವಯ ಗುತ್ತಿಗೆದಾರರಿಂದ ಇ– ಪ್ರಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಟೆಂಡರನ್ನು ಏಕಲಕೋಟೆ ಪದ್ಧತಿಯಲ್ಲಿ ಈ ಕೆಳಗೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರು ಇ–ಪ್ರಕ್ಯೂರಮೆಂಟ್ ವೆಬ್‌ಸೈಟ್ http:kppp.karnatak.gov.in ನಲ್ಲಿ ಟೆಂಡರಗಾಗಿ ಭಾಗವಹಿಸಬಹುದು ಹಾಗೂ ಪ್ರಕಟಣೆಯ ವಿವರಗಳನ್ನು ಪಟ್ಟಣ ಪಂಚಾಯತ ಕಛೇರಿಯ ವೆಬ್‌ಸೈಟ್ http://www.rattihalli.mrc.gov.in ರಲ್ಲಿ ಪಡೆಯಬಹುದಾಗಿದೆ. ಸಂಜೆ 5.30 ರವರೆಗೆ ಹೆಚ್ಚಿನ ವಿವರಗಳಿಗೆ ಪಟ್ಟಣ ಪಂಚಾಯತ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು.

ಕ್ರ. ಸಂ.	ಕಾಮಗಾರಿಗಳ ಹೆಸರು	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)	ಟೆಂಡರ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ ತೆರೆಯುವ ದಿನಾಂಕ
1	ಪಟ್ಟಣದ ವಾರ್ಡ ನಂ.02ರ ರಾಘವೇಂದ್ರ ಶಿಪ್ಪಣ್ಣನವರ ಮನೆ ಹತ್ತಿರ, ವಾರ್ಡ ನಂ.10ರ ಸರ್ಫರಾಜ್ ನವಾಜ್ ಮಾಸೂರು ಇವರ ಮನೆ ಹತ್ತಿರ, ವಾರ್ಡ ನಂ.15ರ ಸರ್ಕಾರಿ ಆಸ್ಪತ್ರೆಯ ಹಿಂಬಾಗದಲ್ಲಿ ಹಾಗೂ ವೀರುಪಾಕ್ಷಪ್ಪ ಕಚವಿಯವರ ಮನೆಯ ಹತ್ತಿರ ಬೋರವೆಲ್ ಕೊರೆಸುವುದು. DMA/2026-27/WS/WORK_INDENT59428	4.80	26-06-2026	27-06-2026
2	ವಾರ್ಡ ನಂ 01ರಲ್ಲಿ ಬಸವರಾಜ ಕೃಷ್ಣಪ್ಪ ಬಾಗೋಡಿ ಇವರ ಮನೆಯ ಹತ್ತಿರ ರಸ್ತೆ ಡಾಂಬರೀಕರಣ ಮಾಡುವುದು. DMA/2026-27/RD/WORK_INDENT59439	4.39	02-07-2026	03-07-2026
3	ಡಾ. ಬಿ ಅರ್ ಅಂಬೇಡ್ಕರ್ ಭವನದ ಹತ್ತಿರ ಕುಡಿಯವ ನೀರಿನ ಬೋರವೆಲ್ ಕೊರೆಸುವುದು. DMA/2026-27/WS/WORK_INDENT59452	1.24	02-07-2026	03-07-2026
4	ವಾರ್ಡ ನಂ 02ರಲ್ಲಿ ಬೇಡರ ಕಣ್ಣಪ್ಪ ದೇವಸ್ಥಾನದ ಹತ್ತಿರ ಬೋರವೆಲ್ ಕೊರೆಸುವುದು. DMA/2026-27/WS/WORK_INDENT55944	1.10	02-07-2026	03-07-2026

ಸಹಿ/– ಅಧ್ಯಕ್ಷರು
ಪಟ್ಟಣ ಪಂಚಾಯತ ರಟ್ಟೀಹಳ್ಳಿ

ವಾಸಾಸಂಇ/ಹಾವೇರಿ/181/ಕೆಎಸ್‌ಎಂಸಿಎ/2026–27

ಸಹಿ/– ಮುಖ್ಯಾಧಿಕಾರಿ
ಪಟ್ಟಣ ಪಂಚಾಯತ, ರಟ್ಟೀಹಳ್ಳಿ

ಅಸಲು ದಾವಾ ನಂ.156/2026
ಮಾನ್ಯ ದಿವಾನಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ಬ್ಯಾಡಗಿ ಇವರ ನ್ಯಾಯಾಲಯಕ್ಕೆ

ವಾದಿಯರು :ಮಣ್ಣಪ್ಪ ತಂದೆ ನಾಗಪ್ಪ ಹಡಪದ ಉರ್ಫ ಕ್ಷವರದ ಹಾಗೂ ಇತರರು

–: ವಿರುದ್ಧ :–

ಪ್ರತಿವಾದಿಯರು:ಮುಸ್ತಾಕಅಹ್ಮದ ತಂದೆ ಅಬ್ದುಲರೌಫಸಾಬ ಬ್ಯಾಡಗಿ ಹಾಗೂ ಇತರರು

–: ಇಸ್ತಿಯಾರ ನಾಮಾ :–

ಈ ಪ್ರಕರಣದಲ್ಲಿ ವಾದಿಯರಾದ ನಾವು ಈ ಮೂಲಕ ಸಾರ್ವಜನಿಕರ ಗಮನಕ್ಕಾಗಿ ಪ್ರಕಟಿಸಿದ ನೋಟಿಸ್ ಏನೆಂದರೆ,

ಸದರ ಮೇಲ್ಕಂಡ ದಾವೆಯಲ್ಲಿ ವಾದಿಯರು ಪ್ರತಿವಾದಿಯರ ವಿರುದ್ಧ ಓ.ಎಸ್ ನಂ: 156/2026 ನೇದ್ದನ್ನು ದಾವೆ ದಾಖಲಿಸಿದ್ದು, ಸದರಿ ದಾವೆಯಲ್ಲಿನ3ನೇ ಪ್ರತಿವಾದಿಯಾದ ರಿಯಾಜಅಹ್ಮದ ತಂದೆ ಅಬ್ದುಲರೌಫಸಾಬ ಬ್ಯಾಡಗಿ ಹಾಗೂ 6ನೇ ಪ್ರತಿವಾದಿಯಾದ ರಫೀಕ್ ಸಾಬ ತಂದೆ ಅಬ್ದುಲ ರಹಿಮಾನಸಾಬ ಬ್ಯಾಡಗಿ ಇವರು ಉದ್ದೇಶಪೂರ್ವಕವಾಗಿ ಮಾನ್ಯ ನ್ಯಾಯಾಲಯದ ಸಮನ್ಸ ವ ನೋಟಿಸ್ ಜಾರಿಯಿಂದ ತಪ್ಪಿಸಿಕೊಳ್ಳುತ್ತಿರುತ್ತಾರೆ. ಕಾರಣ ಸದರ ದಾವೆಯು ದಿನಾಂಕ: 23/07/2026 ರಂದು ಮುಂದುವರಿದ್ದು ಇರುತ್ತದೆ. ಸದರಿ ದಿನಾಂಕದಂದು ಮಾನ್ಯ ನ್ಯಾಯಾಲಯಕ್ಕೆ ಬೆಳಿಗ್ಗೆ 10:30 ಗಂಟೆಗೆ ಖುದ್ದು ಹಾಜರಾಗಿ, ಅಥವಾ ತಮ್ಮ ವಕೀಲರ ಮೂಲಕವಾಗಿ ಹಾಜರಾಗತಕ್ಕದ್ದು ಎಂದು ಈ ದಿನಪತ್ರಿಕೆಯ ಮೂಲಕ ಸಮನ್ಸನ್ನು ಜಾರಿಮಾಡಲಾಗಿದೆ.

ಮಾನ್ಯ ನ್ಯಾಯಾಲಯದ ಮೊಹರಿನೊಂದಿಗೆ ಇಂದು ದಿ:22/06/26 ರಂದು ನೀಡಿದೆ.
ಸ್ಥಳ :ಬ್ಯಾಡಗಿ
ದಿನಾಂಕ:22–06–2026
ಮಾನ್ಯ ಗೌರವಾನ್ವಿತ ನ್ಯಾಯಾಧೀಶರ ಆದೇಶದ ಮೇರೆಗೆ

ಸಹಿ/–ಶಿರಸ್ತೇದಾರರು ಮಾನ್ಯ ದಿವಾನಿ ನ್ಯಾಯಾಧೀಶರ ನ್ಯಾಯಾಲಯ, ಬ್ಯಾಡಗಿ.
ಸಹಿ/–(ಶ್ರೀ ದಯಾನಂದ ಎಸ್ ಉಳ್ಳಾಗಡ್ಡಿ) ಅರ್ಜಿದಾರರ ಪರ ವಕೀಲರು

IN THE COURT OF THE III ADDITIONAL CIVIL JUDGE & J.M.F.C. AT BALLARI
Crl. M.C. No. 534/2025
Between:-HULIGEMMA ..Petitioner
And
The Tahasildar cum Register of Births and Deaths, Taluk Office, Ballari and others ...Respondents

NOTICE
TO WHOM SO EVER IT MAY CONCERNED

To
Respondent: The Tahasildar cum Register of Births and Deaths, Taluk Office, Ballari and others

WHEREAS, the above named petitioner has filed the above petition against you under section 13 (2) of Births and Deaths Act. 1969, for seeking the death certificate of petitioners husband certificate by name GUDDUAYYA, S/o Late HONNURA who died 01-06-1995 at above stated address at Ward No. 1, Harijana Colony, Sirivara Village, Kappagal Post, Ballari Taluk and District.

You are hereby directed to appear in this court in person or by a plea der duly instructed on 25/07/2026 at about 11-00a.m.in the before this court to show cause against the above petition failing which the petition will be heard and determined ex-parte.

Given under my hand and seal of the court on this 21st day of June 2026

By Order of the Court,
Sd/-Sherestedar,Chief Ministerial Officer 3rd Addl Civil Judge and JMFC Court at Ballari
Sd/-K.VEERESH,Advocate for the petitioner

CHANGE OF NAME

I, **MEGHA VEERAPUR** (Old Name) Resident of Shiva Sai Plot No 1 And 2 Hampannavar, Layout Near Ishwar Temple Kumareshwar Nagar, Dharwad 580008 Karnataka have changed my name as **MEGHA MAHANTESH VEERAPUR** (New Name) henceforth I will be called and recognized by new name for all future purposes, dated: 22/06/2026.

CHANGE OF NAME

I, **ASHIF PANARI** (Old Name) Resident of No 873 Tahsildar Galli Ulladaggi Khanapur Belagavi 591221 Karnataka have changed my name as **ASHIF MALIK PANARI** (New Name) henceforth I will be called and recognized by new name for all future purposes, dated: 22/06/2026.

CHANGE OF NAME

I, **SHIVADEVI MANUR** (Old Name) Resident of Shiva Sai Plot No 1 And 2 Hampannavar, Layout Near Ishwar Temple Kumareshwar Nagar, Dharwad 580008 Karnataka have changed my name as **SHIVADEVI SIDDANNA MANUR** (New Name) henceforth I will be called and recognized by new name for all future purposes, dated: 22/06/2026.

CHANGE OF NAME

I, **KHAIRUNNISA JANGUBAI** (Old Name) Resident of 65, Kasaba Galli, Haliyal, Karwar - 581329, Karnataka, have changed my name as **KHAIRUNNISA MAHMED AKBAR JANGUBHAI** (New Name) henceforth I will be called and recognized by new name for all future purposes, dated: 10/06/2026.

CHANGE OF NAME

I, **MUSKAN KALKERI** (Old Name) Resident of Plot No 28, Lakamanahalli Industrial Area, Dharwad, Hubballi - Dharwad City - 580004, Karnataka, India have changed my name as **MUSKAN DAVALSAB KALKERI** (New Name) henceforth I will be called and recognized by new name for all future purposes, dated: 22/06/2026.

CHANGE OF NAME

I, **HUSSAIN AHAMED KHAN** (Old Name) Resident of 1128, 1st Cross, Bhovi Colony, Tarikere, Dist: Chikkamagaluru - 577228 Karnataka, India have changed my name as **HUSSAIN AHMED KHAN** (New Name) henceforth I will be called and recognized by new name for all future purposes, dated: 22/06/2026.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳಲ್ಲಿ ವಿಶ್ವಾಸ ಪೂರ್ಣವೆನ್ನಿಸುವ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

CHANGE OF NAME

I, **CHETAN KUMAR** (Old Name) Resident of House No 2630, Rangoli Galli, Hukkeri, Belagavi - 591309, Karnataka, India have changed my name as **CHETANKUMAR NABHIRAJ ALAWADE** (New Name) henceforth I will be called and recognized by new name for all future purposes, dated: 22/06/2026.

ಕೃಷಿ ಇಲಾಖೆ
ಕೃಷಿ ಉತ್ಪನ್ನ ನಿರ್ದೇಶಕರು–2 ಕಾರ್ಯಾಲು,

ಗಿರೀಶ ನಗರ ಜಮಖಂಡಿ
E-mail :dda2jkd@gmail.com
ಫೋನ್ ನಂ : 08354 - 235370 [Fax] 235370

ಸಂಖ್ಯೆ:ಉಕೃನಿ–1/ಹೊರಗುತ್ತಿಗೆ/ಸಿಬ್ಬಂದಿ/2026–27 ದಿನಾಂಕ:20–06–2026

ಇ–ಟೆಂಡರ್ ದಾಸ್ತಾವೇಜು

ಸನ್ 2026–27 ನೇಸಾಲಿಗೆ ಈ ಕಚೇರಿಯ ಅಧೀನದಲ್ಲಿ ಬರುವ ಸಹಾಯಕ ಕೃಷಿ ನಿರ್ದೇಶಕರು ಜಮಖಂಡಿ. ಬೀಳಗಿ ಮತ್ತು ಮುಧೋಳ ಮತ್ತು ಮಣ್ಣು ಆರೋಗ್ಯ ಕೇಂದ್ರ ಜಮಖಂಡಿ ಕಚೇರಿಗಳಲ್ಲಿ ಕೃಷಿ ನಿರ್ದೇಶನಾಲಯ ಮತ್ತು ಮಣ್ಣು ಆರೋಗ್ಯ ಚೀಟಿ ಕಾರ್ಯಕ್ರಮ / ಅಭಿಯಾನ ಯೋಜನೆಯಡಿ ಕಾರ್ಯನಿರ್ವಹಿಸಲು ಅನುಬಂಧ–1 ರಂತೆ ಬೆರಳಚ್ಚುಗಾರರು, ಗ್ರೂಪ ಡಿ. ವಾಹನ ಚಾಲಕರು, ತಾಂತ್ರಿಕ ಸಿಬ್ಬಂದಿ, ಮಣ್ಣು ಮಾದರಿ ವಿಶ್ಲೇಷಕರು, ಪ್ರಯೋಗಶಾಲಾ ಸಹಾಯಕರು, ಪ್ರಯೋಗಶಾಲಾ ಪರಿಚಾರಕರು, ಡಾಟಾಎಂಟ್ರಿ ಆಪರೇಟರ್, ಗ್ರೂಪ ಡಿ ಹುದ್ದೆಗಳ ಸೇವೆ ಅವಶ್ಯಕತೆಯಿದ್ದು ಮತ್ತು ಅನುಬಂಧ–2 ರಲ್ಲಿ ಸಿಬ್ಬಂದಿಗಳ ವಿದ್ಯಾರ್ಹತೆ ಮತ್ತು ಸೇವಾ ಅನುಭವಗಳ ಮಾಹಿತಿಯನ್ನು ನಮೂದಿಸಿದ್ದು, ಈ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದಮೇಲೆ ಸಿಬ್ಬಂದಿಗಳನ್ನು ಪೂರೈಸಲು ಆಸಕ್ತ ಸಂಸ್ಥೆಗಳಿಂದ ಟೆಂಡರನ್ನು ಕರೆಯಲಾಗಿದೆ. ಟೆಂಡರ ಅವಧಿಯು ಒಂಭತ್ತು ತಿಂಗಳಿಗೆ ಅಥವಾ ಇಲಾಖೆಯು ನಿಗದಿಪಡಿಸಿರುವ ಮುಂದಿನ ಆದೇಶದವರೆಗೆಇರುತ್ತದೆ.

ಟೆಂಡರಗೆ ಸಂಬಂಧಿಸಿದ ಇತರೆ ಷರತ್ತುಗಳು ಮತ್ತು ನಿಬಂಧನೆಗಳು ಟೆಂಡರ ದಾಸ್ತಾವೇಜಿನಲ್ಲಿ ನಮೂದಿಸಲಾಗಿದ್ದು, ಹೆಚ್ಚಿನ ಮಾಹಿತಿಗಾಗಿ **Website:WWW.kppp.karnataka.gov.in** ಮತ್ತು ಈ ಕಚೇರಿಯ ದೂರವಾಣಿ ಸಂಖ್ಯೆ 08353–220052 ಗೆ ಕಚೇರಿ ವೇಳೆಯಲ್ಲಿ ಕರೆಮಾಡಿ ಮಾಹಿತಿ ಪಡೆಯಬಹುದಾಗಿದೆ.

ಬಿಡ್‌ನ್ನು ಸಲ್ಲಿಸುವ ಕೊನೆಯ ದಿನಾಂಕ	30–06–2026
ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ	02–07–2026
ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ	ತಾಂತ್ರಿಕ ಬಿಡ್‌ನ ವಿಶ್ಲೇಷಣೆಯ ನಂತರ ತಿಳಿಸಲಾಗುವುದು
ಟೆಂಡರ್‌ನ್ನು ತೆರೆಯುವ ಸ್ಥಳ	ಉಪ ಕೃಷಿ ನಿರ್ದೇಶಕರು–2 ಕಾರ್ಯಾಲಯ, ಗಿರೀಶನಗರ, ಜಮಖಂಡಿ ದೂರವಾಣಿ ಸಂಖ್ಯೆ: 08353–220052 E-mail:dda2jkd@gmail.com

ಸಹಿ/–
ಉಪ ಕೃಷಿ ನಿರ್ದೇಶಕರು–2
ಜಮಖಂಡಿ

ವಾ.ಸಾ.ಸಂ.ಇ/ಬಾಗಲಕೋಟೆ/104/ದೇಶಪಾಂಡೆಪಬ್ಲಿಸಿಟಿ/2026–27

ಕ್ರಿಮಿನಲ್ ಮಿಸನಿಯಸ್ ನಂ :144/2026
ಮಾನ್ಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ನವಲಗುಂದ, ಇವರ ನ್ಯಾಯಲಯದಲ್ಲಿ ನವಲಗುಂದ.

ಅರ್ಜಿದಾರ:ಮಂಜುನಾಥ ತಂದೆ ರಾಮಪ್ಪ ಭಾವಿ

ವಿರುದ್ಧ

ಎದುರುದಾರರು: ಮಾನ್ಯ, ತಹಶಿಲ್ದಾರರು,ಜನನ–ಮರಣ ನೋಂದಣಾಧಿಕಾರಿಗಳು ನವಲಗುಂದ.

ಪತ್ರಿಕಾ ಪ್ರಕಟಣೆ.

ಮೇಲ್ಕಾಣಿಸಿದ ಅರ್ಜಿಯಲ್ಲಿಯ ಅರ್ಜಿದಾರರ ತಂದೆಯಾದ ರಾಮಪ್ಪ ತಂದೆ ನಿಂಗಪ್ಪ ಭಾವಿ (RAMPPA S/O NINGAPPA BHAVI) ಇವರು ನವಲಗುಂದ ತಾಲೂಕ ಪೈಕಿ ಅಳಗವಾಡಿ ಗ್ರಾಮದಲ್ಲಿ ದಿನಾಂಕ:15–05–1976 ರಂದು ಮೋತಿಯಾಗಿರುತ್ತಾರೆ ಅಂತಾ ಎದುರುದಾರರ ಜನನ–ಮರಣ ನೋಂದಣಿಪುಸ್ತಕದಲ್ಲಿ ನೋಂದಣಿ ಮಾಡಿಕೊಳ್ಳಲು ಹುಕುಂ ಪಡೆಯುವ ಸಲುವಾಗಿ ಮಾನ್ಯ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ಈ ಬಗ್ಗೆ ಯಾರದ್ದಾದರೂ ತಕರಾರು ಇದ್ದರೆ ಅಥವಾ ಬೇರೆ ಯಾರಾದರೂ ವಾರಸುದಾರರು ಇದ್ದರೆ ದಿನಾಂಕ:23/7/2026 ರಂದು ಬೆಳಿಗ್ಗೆ 11ಗಂಟೆಗೆ ಈ ಮೇಲ್ಕಾಣಿಸಿದ ನ್ಯಾಯಾಲಯಕ್ಕೆ ಸ್ವತಃ ಆಗಲಿ ಅಥವಾ ವಕೀಲರ ಮೂಲಕವಾಗಿಯಾಗಲಿ ಹಾಜರ ಆಗತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಯಾರದೂ ತಕರಾರು ಇರುವುದಿಲ್ಲಾ ಅಂತ ಏಕ ತರ್ಫಿ ಆದೇಶವನ್ನುಮಾಡಲಾ ಗುವುದು.

ಈ ಸಾರ್ವಜನಿಕ ನೋಟಿಸು ಇಂದಿನ ದಿವಸ ದಿ:22/6/2026ರಂದು ಈ ಮೆ॥ ನ್ಯಾಯಾಲಯದ ಮೋಹರನೊಂದಿಗೆ ಕೊಡಲ್ಪಟ್ಟದ್ದು ಇರುತ್ತದೆ.
ನ್ಯಾಯಾಲಯದ ಆದೇಶದ ಮೇರೆಗೆ
ನವಲಗುಂದ
ದಿನಾಂಕ: 22–06–2026

ಸಹಿ/–ಶಿರಸ್ತೇದಾರರು, ದಿವಾಣಿ ವ ಜೆ.ಎಂ.ಎಫ್.ಸಿ.ನ್ಯಾಯಾಲಯ ನವಲಗುಂದ
ಸಹಿ/–(ಶ್ರೀ.ವಾಯ್.ಬಿ.ಕುರಹಟ್ಟಿ) ಅರ್ಜಿದಾರರ ಪರ ನ್ಯಾಯವಾದಿ ನವಲಗುಂದ.

ಕ್ರಿಮಿನಲ್ ಮಿಸಲೇನಿಯಸ ನಂ :394/2026
ಮಾನ್ಯ ಪ್ರಥಮ ದರ್ಜೆಯ ನ್ಯಾಯಿಕದಂಡಾಧಿಕಾರಿಗಳು ಸವಣೂರ ಇವರ ನ್ಯಾಯಾಲಯಕ್ಕೆ

ಅರ್ಜಿದಾರರು :1)ಅನಸೂಯಾ ಕೋಂ ರವಿ ಸಂಗಳಕರ

ವಿರುದ್ಧ

ಎದುರುಗಾರರು :ಮೇ॥ ಜನನ–ಮರಣ ನೋಂದಣಾಧಿಕಾರಿಗಳು ಪುರಸಭೆ ಕಾರ್ಯಾಲಯ ಸವಣೂರ,ಜಿ:ಹಾವೇರಿ

ಪತ್ರಿಕಾ ಪ್ರಕಟಣೆ

ಇದರಲ್ಲಿ ಅರ್ಜಿದಾರಳ ತಂದೆಯಾದ ಶ್ರೀ ಪೀರು ಪಾಕ್ಷಪ್ಪ ತಂದೆ ಶಿವಪ್ಪ ಹೂಗಾರಇವರು ದಿನಾಂಕ :23–12–2014 ರಂದು ಸವಣೂರ ನಗರ ತಾ॥ ಸವಣೂರ ನಲ್ಲಿ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿರುವುದು ಇರುತ್ತದೆ. ಸದರಿ ಅರ್ಜಿದಾರರಿಗೆ ವಾರಸಾ ಮಾಡಿಸಲು ಮರಣ ಪ್ರಮಾಣ ಪತ್ರದ ಅವಶ್ಯಕತೆ ಇರುತ್ತದೆ.ಆದಕ್ಕೆ ಮರಣ ದಿನಾಂಕವನ್ನು ಎದುರುಗಾರರಲ್ಲಿ ದಾಖಲ ಪಡಿಸುವ ಸಲುವಾಗಿ ಮೇ॥ ನ್ಯಾಯಾ ಲಯದಲ್ಲಿ ಪ್ರಕರಣ ದಾಖಲಿಸಿದ್ದು ಇದ್ದು,ಅದು ದಿನಾಂಕ: 27–07–2026 ರಂದು ಮುದ್ದತ್ತು ನೇಮಿಸಿದ್ದು ಇದ್ದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರಾದರೂ ಆಸಕ್ತಿಯುಳ್ಳವರು ಮೇಲಿನ ದಿನಾಂಕದಂದು ಮೇ॥ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕಹಾಜರಾಗಿ ತಕರಾರು ವಗ್ಯೆರೆ ಇದ್ದರೆ ಸಲ್ಲಿಸತಕ್ಕದ್ದು.ತಪ್ಪಿದಲ್ಲಿ ಏಕತರ್ಫಿಯಾಗಿ ಮುಂದಿನ ಆದೇಶ ಮಾಡ ಲಾಗುವುದು ಅಂತಾ ಕೊಟ್ಟ ಪತ್ರಿಕಾ ಪ್ರಕಟಣೆ.

ನ್ಯಾಯಾಲಯದ ಆದೇಶ ಹಾಗೂ ಮೋಹರ ನೊಂದಿಗೆ ಹೊರಡಿಸಲಾಗಿತು.
ನ್ಯಾಯಾಲಯದ ಆದೇಶದ ಮೇರಿಗೆ
ಸ್ಥಳ :ಸವಣೂರ
ದಿನಾಂಕ:20–06–2026

ಸಹಿ/–ಶಿರಸ್ತೇದಾರರು
ಜೆ.ಎಮ್.ಎಫ್.ಸಿ ನ್ಯಾಯಾಲಯ ಸವಣೂರ
ಸಹಿ/– ಶ್ರೀ ಐ.ಬಿ.ಹುರಕಡ್ಲಿ
ಅರ್ಜಿದಾರರ ಪರ ವಕೀಲರು,ಹಾವೇರಿ

ಆರ್.ಎ ನಂ. 14/2025
ಮೆ॥ 1ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಲಯ ಬಾಗಲಕೋಟೆ ಇವರ ನ್ಯಾಯಾಲಯದಲ್ಲಿ

1.ಮಲ್ಲವ್ವ ಹೊರಟ್ಟಿ ಹಾಗೂ ಇತರರು ..ಮೇಲ್ಮನವಿದಾರರು

–ವಿರುದ್ಧ–

1. ಮೌಲಾಸಾಬ ಮಿಯಾಸಾಬ ಮನಿಯಾರ .....ಎದುರುದಾರ

ಕೋರ್ಟ ಸಮನಸ್ಸ
ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 5 ನಿಯಮ 20(ಎ) ಅಡಿಯಲ್ಲಿ

ಗೆ,1ಜಿ)ಯಾಸೀನ ಗಂ.ಮುಸಪಾ ಚೌಧರಿ ವಯಾ: 38ವರ್ಷ ಉದ್ಯೋಗ:ಮನೆಕೆಲಸ 1ಐ)ಮಹಜಬೀನ ಗಂ.ಮಹಮ್ಮದಅಶರಫ ಪೀರಜಾದೆ ವಯಾ: 34ವರ್ಷ ಉದ್ಯೋಗ:ಮನೆಕೆಲಸ ಇಬ್ಬರೂ ಸಾ॥ ಸದರಬಜಾರ, ಕಲಾದಗಿ ತಾಜಿ॥ ಬಾಗಲಕೋಟೆ
1ಎಲ್) ಶಾಹಿಸ್ತಾ ಗಂ. ಹಾಕಮಹಾಫೀಜ ಯಂಡಿಗೇರಿ ವಯಾ:26 ವರ್ಷ ಉದ್ಯೋಗ: ಮನೆಕೆಲಸ ಸಾ॥ಸಹಬಾಜ, ಬಾಗಲಕೋಟೆ
1ಎಮ್)ಮುಸಬಾ ಗಂ.ಸಲೀಮ ಆಲಾಸೆ ವಯಾ: 24 ವರ್ಷ ಉದ್ಯೋಗ: ಮನೆಕೆಲಸ ಸಾ॥ ಬನಹಟ್ಟಿ, ತಾ॥ ಬನಹಟ್ಟಿ ಜಿ॥ ಬಾಗಲಕೋಟೆ

ಈ ಕೋರ್ಟಿನ ಸಮನಸ್ಸ ಮೂಲಕ ನಿಮಗೆ ತಿಳಿಯ ಪಡಿಸುವದೇನೆಂದರೆ.

ಸದರಿ ನಂಬರ ಕೇಸಿನಲ್ಲಿ ಮೇಲ್ಮನವಿದಾರರು ಎದುರುದಾರರ ವಿರುದ್ಧ ಹಾಜರುಪಡಿಸಿದ ಹಾತ ನಕಾಶೆಯ ಪ್ರಕಾರ 'ಎ.ಬಿ.ಸಿ.ಡಿ' ಹಾಗೂ 'ಇ.ಎಫ್ ಜಿ.ಎಚ್'. ಅಂತಾ ತೋರಿಸಿದ ದಾರಿಯನ್ನು ಹಾಗೂ ಭೂಮಾಪನ ಸಹಾಯಕ ನಿರ್ದೇಶಕರು, ಬಾಗಲಕೋಟ ಇವರು ತಯಾರಿಸಿದಬಾಗಲಕೋಟದಿಂದ ಕಲಾದಗಿಗೆ ಹೋಗುವ ಹಾಗೂ ಸದರಿ ರಸ್ತೆಯಿಂದ ಚಿಕ್ಕಶೆಲ್ಲಿಕೇರಿಗೆ ಮೇಲೆ ಹೇಳಿದ ರಸ್ತೆಗೆ ಕೆಳ ನ್ಯಾಯಾಲಯದಲ್ಲಿ ವಾದಿಯರ ವಹಿವಾಟ ಮತ್ತು ಉಪಭೋಗಕ್ಕೆ ಪ್ರತಿವಾದಿಯು ಯಾವುದೇ ರೀತಿ ತಂಟೆ, ತಕರಾರು ಮಾಡಬಾರದು ಅಂತಾ ಕನ್ಸಿಕ್ವೆನ್ಸಿಲ್ ರಿಲೀಫ್ ನಿರಂತರ ಮನಾಯಿ ಕುರಿತು ಹಾಗೂ ದಾವಾ ದಾರಿಯನು. 'ಎ.ಬಿ.ಸಿ.ಡಿ' ಹಾಗೂ'ಇ.ಎಫ್.ಜಿ.ಎಚ್'. ತೋರಿಸಿದ ದಾರಿಯನ್ನು ಕಳೆದ 50–60 ವರ್ಷಗಳಿಂದ ವಹಿವಾಟ, ಉಪಭೋಗ ಮಾಡುತ್ತಾ ಬಂದಿರುವದರಿಂದ ವಾದಿಯರು ಸದರ ದಾರಿಯ ಮೇಲೆ "ಇಜಮೆಂಟ್ ಆಫ್ ಪ್ರಿಸ್ಕ್ರಿಪ್ಟಿವ್ ಆಫ್ ರೈಟ್ ವೇ" ಯನ್ನು ಸಾಧಿಸಿದ್ದರಿಂದ ಸದರಿ ದಾರಿಯ ಹಕ್ಕಿನ ಬಗ್ಗೆ ಠರಾಯಿಸುವ ಕುರಿತು ದಾವೆಯನ್ನು ಮಾಡಿದ್ದು ಸದರಿ ದಾವೆಯು ವಜಾ ಆಗಿದ್ದು ಅದನ್ನು ಪ್ರಶ್ನಿಸಿ ಈ ಮೇಲ್ಮನವಿಯನ್ನು ಮಾಡಿದ್ದು ಇರುತ್ತದೆ.

ಸದರಿ ಮೇಲ್ಮನವಿಯು ದಿ:20/8/2026ರಂದು ನಿಮ್ಮ ಹಾಜರಾತಿಗಾಗಿ ಮುಂಜಾನೆ10:30ಘಂಟೆಗೆ ಇರುತ್ತದೆ. ಅವತ್ತಿನ ದಿವಸ ನೀವಾಗಲಿ ಅಥವಾ ನಿಮ್ಮ ಪರ ವಕೀಲರ ಮುಖಾಂತರವಾಗಲಿ ಹಾಜರಾಗಿಯಾಗಲಿ ನಿಮ್ಮದ್ದು ಯಾವುದಾದರು ತಂಟೆ ತಕರಾರು ಇದ್ದಲ್ಲಿ ಸಲ್ಲಿಸಬೇಕು.ಇಲ್ಲದಿದ್ದಲ್ಲಿ ನಿಮ್ಮ ಗೈರು ಹಾಜರಾತಿಯಲ್ಲಿ ಏಕ ತರ್ಫಿ ಹುಕುಂ ಮಾಡುವದರಲ್ಲಿ ಬರುವುದು.

ಇವತ್ತು ದಿನಾಂಕ: 18 /6/2026ರಂದು ಕೋರ್ಟಿನ ಮಹೋರನೊಂದಿಗೆ ನಮ್ಮ ಸಹಿ ಮಾಡಲ್ಪಟಿತ್ತು.
ನ್ಯಾಯಾಲಯದ ಆದೇಶದ ಮೆರೆಗೆ
ಸ್ಥಳ: ಬಾಗಲಕೋಟೆ
ದಿನಾಂಕ:10–06–2026

ಸಹಿ/–ಶಿರಸ್ತೇದಾರರು, ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರ ಬಾಗಲಕೋಟೆ
ಸಹಿ/–(ಡಾ. ರವೀಂದ್ರ ವಿ. ಕವಡಿಮಟ್ಟಿ) ವಾದಿಯ ಪರ ವಕೀಲರು.

ದರಖಾಸ್ತು ಅರ್ಜಿ ನಂ: 03/2022
ಸಿವಿಲ್ ನ್ಯಾಯಾಧೀಶರು ಶಿಗ್ಗಾಂವ ಅವರ ನ್ಯಾಯಾಲಯದಲ್ಲಿ ಸಾ:ಶಿಗ್ಗಾಂವ

ಡಿಕ್ರೀ ಹೊಲ್ಡರ್ :ಶ್ರೀಮತಿ ಹೇಮಾವತಿ ಕೋಂ ಮಹಾಂತಪ್ಪ ಕಾಡಿ

ವಿರುದ್ಧ

ಜಡ್ಜಮೇಂಟ್ ಡೇಟರ :ಶ್ರೀಮತಿ ಯಲ್ಲವ್ವ ಕೋಂ ಶಿವಪ್ಪ ಸಂಶಬಾನವರ

ಸಾರ್ವಜನಿಕ ಪ್ರಕಟಣೆ

ಸದರ ಮೇಲ್ಕಂಡ ನಂಬರ ದಾವೆಯಲ್ಲಿ ನಾನು ಜಡ್ಜಮೇಂಟ್ ಡೇಟರ್ ವಿರುದ್ಧ ಕೋರ್ಟಿನ ಮುಂದೆ ಈ ಕೆಳಗಿನಂತೆ ಪಾಗಣೆ ಬೇಡಿ ದಾವಾ ದಾಖಲಿಸಿದ್ದು ಇರುತ್ತದೆ.

1)ಸದರ ದಾವಾದ ಆಸ್ತಿಯಾದ ದುಂಡಶಿಗ್ರಾಮದ ಖಿಲ್ಲಾ ಜಾಗೆ ವಿ.ಪಿ.ಸಿ.ನಂ:33/1 ಸ್ವತ್ತಿನ ಸಂಖ್ಯೆ: 151700700300100240ನೇದ್ದರ ಅಳತೆಪೂರ್ವ –ಪಶ್ಚಿಮ 11.60 ಉತ್ತರ–ದಕ್ಷಿಣ 0.5 ಒಟ್ಟು 58.00 ಚೌಮೀ ಇದನ್ನು ಡಿಕ್ರೀ ಹೋಲ್ಡರರಿಗೆ ಖರೀದಿ ಒಪ್ಪಂದ ಕರಾರು ಪತ್ರ ಮಾಡಿ ಕೊಟ್ಟಿದ್ದು ಸದರ ಖರೀದಿ ಕರಾರು ಪತ್ರದ ಪ್ರಕಾರ ನಡೆದುಕೊಳ್ಳದೇ ಇರುವ ಕಾರಣ ಈ ಪ್ರಕಾರ ಡಿಕ್ರಿ ಹೋಲ್ಡರರು ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ನಂ: 66/2018 ನೇದನ್ನು ದಾಖಲಿಸಿ ಸದರ ದಾವಾದಲ್ಲಿ ದಿನಾಂಕ:04–01–2019 ರಂದು ಡಿಕ್ರೀ ಪಡೆದುಕೊಂಡಿದ್ದು ಇರುತ್ತದೆ ಡಿಕ್ರೀ ಪ್ರಕಾರ ಮೇಲ್ಕಾಣಿಸಿದ ಧರಖಾಸ್ತ ಅರ್ಜಿಯನ್ನು ಹಾಜರ ಮಾಡಿದ್ದು ಸದರ ದಾವೆಯಲ್ಲಿ ಇದರಲ್ಲಿ ಈ ನ್ಯಾಯಾಲಯದವರು ಕೋರ್ಟ ಕಮಿಷನರ್ ನೇಮೂಣಿಕಿ ಮಾಡಿದ್ದು ಸದರ ಪ್ರಕಾರ ಜಡ್ಜಮೆಂಟ್ ಡಿಕ್ರೀದಾರರು ಖರೀದಿ ಕರಡು ಪ್ರತಿ ಹಾಜರ ಮಾಡಿದ್ದು ಇದನ್ನು ನ್ಯಾಯಾಲಯವು ಜಡ್ಜಮೇಂಟ್ ಡೇಟರ್ ಇವರಿಗೆ ಕೋರ್ಟ ಕಮಿಷನರ್ ಟ್ರಾಪ್ಟ ನೋಟಿಸು ಶ್ರೀಮತಿ ಯಲ್ಲವ್ವ ಕೋಂ ಶಿವಪ್ಪ ಸಂಶಬಾನವರ ವಯಾ : 43ವರ್ಷ, ಉದ್ಯೋಗ : ಮನೆಗೆಲಸ, ಸಾ: ದುಂಡಶಿ, ತಾ: ಶಿಗ್ಗಾಂವ, ಜಿ: ಹಾವೇರಿ, ನೇದ್ದವರಿಗೆ ಸಾಕಷ್ಟು ಬಾರಿ ನ್ಯಾಯಾಲಯದಿಂದ ಖರೀದಿ ಕರಡು ಪ್ರತಿ ನೋಟಿಸ ಕಳುಹಿಸಿದ್ದು ಸದರಿ ಜಡ್ಜಮೇಂಟ್ ಡೇಟರ್‌ನಿಗೆ ನೋಟಿಸ ಜಾರಿಯಾಗಿರುವುದಿಲ್ಲ.

ಅದ್ದರಿಂದ ಈ ಜೆ.ಡಿ.ಅರ್‌ದವರು ಹಾಜರಾಗಲು ಹಾಗೂ ಖರೀದಿ ಕರಡು ಪ್ರತಿ ತಕರಾರು ವಗ್ಯೆರೆ ಇದ್ದರೆ ಹಾಜರ ಮಾಡಲು ಸಾರ್ವಜನಿಕ ಪ್ರಕಟಣೆಯನ್ನು ತೆಗೆದುಕೊಳ್ಳಲು ಆದೇಶ ಮಾಡಿದ್ದು ಯಾರಾದರೂ ತಕರಾರು ಇದ್ದಲ್ಲಿ ದಿನಾಂಕ:8–07–2026ರಂದು ನೀವು ಅಥವಾ ನಿಮ್ಮ ಪರ ವಕೀಲರು ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸಬೇಕು. ಇಲ್ಲದಿದ್ದರೆ ನಿಮ್ಮ ಹಾಜರಾತಿ ವ. ತಕರಾರು ಇಲ್ಲಾ ಅಂತಾ ಕೋರ್ಟ ಕಮಿಷನರ್ ಡ್ರಾಫ್ಟ ಪ್ರಕಾರ ಕೋರ್ಟ ಕಮಿಷನರ್ ಧರಖಾಸ್ತ ಅರ್ಜಿಯನ್ನು ನಿರ್ಣಯಿಸಬೇಕಾಗುತ್ತ ದೆ ಅಂತಾ ಕೊಟ್ಟ ಪತ್ರಿಕಾ ಪ್ರಕಟಣೆ.

ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ಕೊಡಲ್ಪಟ್ಟಿದೆ.

ಸಹಿ/– ಶಿರಸ್ತೇದಾರ ದಿವಾಣಿ ನ್ಯಾಯಾಲಯ (ಕಿ.ವಿ) ಶಿಗ್ಗಾಂವ
ಸಹಿ/–ಶ್ರೀ ಕೆ.ಎಸ್.ಧರ್ಮಪ್ಪನವರ ವಕೀಲರು ಶಿಗ್ಗಾಂವ ಅರ್ಜಿದಾರರ ಪರ ವಕೀಲರು

IN THE COURT OF THE IInd Addl. CIVIL JUDGE AND JMFC AT BALLARI
Crl.Misc. No. 676/2026
Between:-1.Smt. Maremma w/o Yerriswamy @ Do. Mariswamy, aged about 75 years, house wife, 2.Smt. Basamma w/o Late. Pennayya, aged about 55 years, coolie, 3.Smt. Smt. Pennamma w/o Late. Hanumayya, aged about 48 years, coolie, 4.Boya Yasod amma w/o B. Basappa, coolie, aged about 44 years, 5.Babu s/o Yerriswamy, aged about 32 years, coolie, All are R/o ward No.7, near water tank, Kamela road, Ballari. ....Petitioners.
And
The Health Officer-CUM-Registrar of Births & Deaths,City corporation office, Ballari. .... Respondent.

TO WHOM SO EVER IT MAY CONCERN NOTICE

Whereas above named petitioner herein have instituted above petition under section 13(2) of births and deaths Act 1969 before the respondent for the purpose of seeking death certificate of petitioner No.1's father-in-law by name Honnurappa s/o Hanumanthi, who was expired on 01.03.1993 at his residence.

Any person interested are hereby summoned to appear before this court in person or by pleader duly instructed and able to answer all material questions relating to the petition on 13/08/26 at 11.00 a.m. before this court.

In default of your appearance on the date/day of above petition will be heard an determined as 'ex-parte'.

Given under my hand and seal of the court of this 19th day of June 2026

By order of the court.
Sd/-Sherestedar Chief Ministerial Officer 2nd Addl Civil Judge & JMFC Court BallariK.
Sd/- Ramesh, Advocate for petitioners

ಕ್ರಿಮಿನಲ್ ಮಿಸಲೇನಿಯಸ ನಂ :395/2026
ಮಾನ್ಯ ಪ್ರಥಮ ದರ್ಜೆಯ ನ್ಯಾಯಿಕದಂಡಾಧಿಕಾರಿಗಳು ಸವಣೂರ ಇವರ ನ್ಯಾಯಾಲಯಕ್ಕೆ

ಅರ್ಜಿದಾರರು :1)ಅನಸೂಯಾ ಕೋಂ ರವಿ ಸಂಗಳಕರ

ವಿರುದ್ಧ

ಎದುರುಗಾರರು :ಮೇ॥ ಜನನ–ಮರಣ ನೋಂದಣಾಧಿಕಾರಿಗಳು ಪುರಸಭೆ ಕಾರ್ಯಾಲಯ ಸವಣೂರ,ಜಿ:ಹಾವೇರಿ

ಪತ್ರಿಕಾ ಪ್ರಕಟಣೆ

ಇದರಲ್ಲಿ ಅರ್ಜಿದಾರಳ ಶ್ರೀಮತಿ ಗಂಗವ್ವ ಕೋಂ ಬಸಪ್ಪ ಹೂಗಾರಇವರು ದಿನಾಂಕ :04–10–1996 ರಂದು ಸವಣೂರ ನಗರ ತಾ॥ ಸವಣೂರ ನಲ್ಲಿ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿರುವುದು ಇರುತ್ತದೆ. ಸದರಿ ಅರ್ಜಿದಾರರಿಗೆ ವಾರಸಾ ಮಾಡಿಸಲು ಮರಣ ಪ್ರಮಾಣ ಪತ್ರದ ಅವಶ್ಯಕತೆ ಇರುತ್ತದೆ.ಆದಕ್ಕೆ ಮರಣ ದಿನಾಂಕವನ್ನು ಎದುರುಗಾರರಲ್ಲಿ ದಾಖಲ ಪಡಿಸುವ ಸಲುವಾಗಿ ಮೇ॥ ನ್ಯಾಯಾ ಲಯದಲ್ಲಿ ಪ್ರಕರಣ ದಾಖಲಿಸಿದ್ದು ಇದ್ದು,ಅದು ದಿನಾಂಕ: 28–07–2026 ರಂದು ಮುದ್ದತ್ತು ನೇಮಿಸಿದ್ದು ಇದ್ದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರಾದರೂ ಆಸಕ್ತಿಯುಳ್ಳವರು ಮೇಲಿನ ದಿನಾಂಕದಂದು ಮೇ॥ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕಹಾಜರಾಗಿ ತಕರಾರು ವಗ್ಯೆರೆ ಇದ್ದರೆ ಸಲ್ಲಿಸತಕ್ಕದ್ದು.ತಪ್ಪಿದಲ್ಲಿ ಏಕತರ್ಫಿಯಾಗಿ ಮುಂದಿನ ಆದೇಶ ಮಾಡ ಲಾಗುವುದು ಅಂತಾ ಕೊಟ್ಟ ಪತ್ರಿಕಾ ಪ್ರಕಟಣೆ.

ನ್ಯಾಯಾಲಯದ ಆದೇಶ ಹಾಗೂ ಮೋಹರ ನೊಂದಿಗೆ ಹೊರಡಿಸಲಾಗಿತು.
ನ್ಯಾಯಾಲಯದ ಆದೇಶದ ಮೇರಿಗೆ
ಸ್ಥಳ :ಸವಣೂರ
ದಿನಾಂಕ:20–06–2026

ಸಹಿ/–ಶಿರಸ್ತೇದಾರರು
ಜೆ.ಎಮ್.ಎಫ್.ಸಿ ನ್ಯಾಯಾಲಯ ಸವಣೂರ
ಸಹಿ/– ಶ್ರೀ ಐ.ಬಿ.ಹುರಕಡ್ಲಿ
ಅರ್ಜಿದಾರರ ಪರ ವಕೀಲರು,ಹಾವೇರಿ

IN THE COURT OF THE HON'BLE V ADDL. CIVIL JUDGE & J.M.F.C. AT BALLARI
Crl. M.C. No. 611/2026
Between:-1.GOURAMMA W/o Late. DODDAPPA, aged about 68 years, 2.G Nagaraj S/o late. DODDAPPA, aged about 57 years. 3.G Mallappa S/o ate. DODDAPPA, aged about 46 years. 4.G Basava raj S/o ate. DODDAPPA, aged about 43 years.Both are resident at: Ward No. 1, Vaddahatti Village, Kurugodu Taluk, Ballari District. ....Petitioners
And
The Tahasildar cum Register of Births and Deaths, Taluk office, Kurugodu ....Respondent

NOTICE
TO WHOM SO EVER IT MAY CONCERNED

To
Respondent: The Tahasildar cum Register of Births and Deaths, Taluk office, Kurugodu

WHEREAS, the above named petitioner has filed the above petition against you under section 13 (2) of Births and Deaths Act. 1969, for seeking the death certificate of petitioners husband /father death certificate by name DODD APPA S/o Late.DURUGAPPA died on 23-05-2003 at Ward No.1 Vaddahatti Village, Kurugodu Taluk, Ballari District.

You are hereby directed to appear in this court in person or by a pleader duly instructed on 23/7/2026 at about 10-30.a.m.in the before this court to show cause against the above petition, failing which the petition will be heard and determined ex-parte.

Given under my hand and seal of the court on this 20th day of June 2026.

By Order of the Court,
Sd/-Sherestedar, Chief Ministerial Officer 5th Addl Civil Judge & JMFC at Ballari
Sd/-LALIYA NAIK,Advocate for the petitioner

IN THE COURT OF THE HON'BLE V ADDL. CIVIL JUDGE & J.M.F.C. AT BALLARI
Crl. M.C. No. 610/2026
Between:-1.G. HONNURSWAMY S/o Late. G. MARISWAMY, aged about 41 years, 2. G Pampanna S/o Late G.MARISWAMY, aged about 56 years,Both are resident at: Ward No. 1,Vaddahatti Village, Kurugodu Taluk, Ballari District.
And
The Thasildar cum Register of Births and Deaths, Taluk Office, Kurugodu ....Respondent

NOTICE
TO WHOM SO EVER IT MAY CONCERNED

To
Respondent: The Thasildar cum Register of Births and Deaths, Taluk ffice, Kurugodu

WHEREAS, the above named petitioner has filed the above petition against you under section 13 (2) of Births and Deaths Act. 1969, for seeking the death certificate of petitioners father death certificate by name. G.MARISWAMY S/o Late. DURUGAPPA who died on 20-08-2002 at Ward No. 1, Vaddahatti Village, Kurugodu Taluk, Ballari District.

You are hereby directed to appear in this court in person or by a pleader duly instructed on 23/7/2026 at about 10.30.a.m. in the before his court to show cause against the above petition, failing which the petition will be heard and determined ex-parte.

Given under my hand and seal of the court on this 20th day of June 2026

By Order of the Court,Sherestedar
Sd/-Chief Ministerial Officer 5th Addl Civil Judge & JMFCat Ballari
SD/-LALIYA NAIK,Advocate for the

ಕೋರ್ಟ ಸಮನ್ಸ್
ಅಸಲು ದಾವಾ ನಂ. 137/2022
ಮೆ॥ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ನ್ಯಾಯಾಲಯ ಬಾಗಲಕೋಟ ಇವರ ನ್ಯಾಯಾಲಯದಲ್ಲಿ

1) ಪುಷ್ಪಾ ಗಂಡ ರಾಜಶೇಖರನಾಯ್ಕರ ...ವಾದಿ

–ವಿರುದ್ಧ–

1) ಶಾರದಾ ಗಂಡ ಬಸವರಾಜ ಶಿಕ್ಕೇರಿ ಹಾಗೂ ಇತರರು ....ಪ್ರತಿವಾದಿಯರು

ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 5 ನಿಯಮ 20(ಎ) ಅಡಿಯಲ್ಲಿ

ಗೆ
ಸುಗಿತಾ ತಂದೆ ಬಸವರಾಜ @ ಬಸಪ್ಪ ಶಿಕ್ಕೇರಿ @ ಯಲಿಗಾರವಯಾ: 25ವರ್ಷ, ಉದ್ಯೋಗ: ಖಾಸಗಿ ಕೆಲಸ ಸಾ॥ ವಿನಾಯಕ ನಗರ ಶಿಕ್ಕೇರಿ ಚಾಳ ಬಾಗಲಕೋಟ ತಾ॥ಜಿ ಬಾಗಲಕೋಟೆ

ಈ ಕೋರ್ಟಿನ ಸಮನಸ್ಸ ಮೂಲಕ ನಿಮಗೆ ತಿಳಿಯ ಪಡಿಸುವದೇನೆಂದರೆ,

ಸದರಿ ದಾವೆಯಲ್ಲಿ ವಾದಿಯು ನಿಮ್ಮ ಹಾಗೂ ಇನ್ನುಳಿದ ಪ್ರತಿವಾದಿಯರ ವಿರುದ್ಧ ಮೇಲ್ಕಾಣಿಸಿದ ನ್ಯಾಯಾಲಯದಲ್ಲಿ ವಾದಿಯು ದಾವಾ ಆಸ್ತಿಯಾದ ಬಾಗಲಕೋಟ ಶಹರದ ಬಿನ್ ಶೇತ್ಕಿ ಸರ್ವೆ ನಂ. 239/2ಎ+ಬಿ/ಗಿಡಬ್ಲ್ಯು/4 ಈ ಆಸ್ತಿಗೆ ಅಕ್ರಮ ಪ್ರವೇಶ ಮಾಡಿ ಮನೆಯಿಂದ ಹೊರಗೆ ಹಾಕಲು ಹಾಗೂ ಕಬ್ಜಾ ಪಡೆಯುವ ಸಲುವಾಗಿ ಮತ್ತು ವಾದಿಯ ಕಬ್ಜಾಕ್ಕೆ ಹರಕತ್ ಮಾಡಬಾರದು ಅಂತ ನಿರಂತರ ಮನಾಯಿ ಕೋರಿ ದಾವೆಯನ್ನು ಮಾಡಿದ್ದು ಇರುತ್ತದೆ. ಸದರಿ ದಾವೆಯು ದಿ:31/07/2026 ರಂದು ನಿಮ್ಮ ಹಾಜರಾತಿಗಾಗಿ ಮುಂಜಾನೆ 10–30ಘಂಟೆಗೆ ಇರುತ್ತದೆ. ಅವತ್ತಿನ ದಿವಸ ನೀವಾಗಲಿ ಅಥವಾ ನಿಮ್ಮ ಪರ ವಕೀಲರ ಮುಖಾಂತರವಾಗಲಿ ಹಾಜರಾಗಿ ನಿಮ್ಮದು ಯಾವುದಾದರು ತಂಟೆ ತಕರಾರು ಇದ್ದಲ್ಲಿ ಸಲ್ಲಿಸಬೇಕು. ಇಲ್ಲದಿದ್ದಲ್ಲಿ ನಿಮ್ಮ ಗೈರು ಹಾಜರಾತಿಯಲ್ಲಿ ಏಕತರ್ಫಿ ಹುಕುಂ ಮಾಡುವದರಲ್ಲಿ ಬರುವುದು.

ಇವತ್ತು ದಿನಾಂಕ: 21/06/2026 ರಂದು ಕೋರ್ಟಿನ ಮಹೋರನೊಂದಿಗೆ ನಮ್ಮ ಸಹಿ ಮಾಡಲ್ಪಟ್ಟಿತ್ತು.
ನ್ಯಾಯಾಲಯದ ಆದೇಶದ ಮೆರೆಗೆ
ಸ್ಥಳ : ಬಾಗಲಕೋಟ
ದಿನಾಂಕ:21–06–2026

ಸಹಿ/–ಶಿರಸ್ತೇದಾರರು, ಪ್ರಧಾನ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಬಾಗಲಕೋಟ
ಸಹಿ/–(ಡಾ.ರವೀಂದ್ರ.ವಿ.ಕವಡಿಮಟ್ಟಿ)

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಿನ್ ಸಂಖ್ಯೆ: U04010KA2002SGC030436

ಸಂಖ್ಯೆ: ಗುವಿಸಕಂನಿ/ಅಅ(ವಿ)(ಖರೀದಿ)/ ಕಾನಿಇಂ/ಸಕಾನಿಇಂ/26–27/27584–89 ದಿನಾಂಕ: 22.06.2026

:: ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ) ::

ಪಿಎ–1494: ಇಹೆಚ್‌ವಿ ಗ್ರೇಡ್ ಪರಿವರ್ತಕದ ತೈಲವನ್ನು ಗು.ವಿ.ಸ.ಕಂ.ನಿ.ಯ ತಾಂತ್ರಿಕ ನಿರ್ದಿಷ್ಟತೆಯಂತೆ ತಯಾರಿಕೆ ಮತ್ತು ಪೂರೈಕೆ ಮಾಡುವುದು (ಟೆಂಡರ್ ಮೊತ್ತ: ರೂ. **942.95** ಲಕ್ಷ).

ದಿನಾಂಕ: ಕೆ.ಪಿ.ಪಿ ಪೋರ್ಟಲ್‌ನಲ್ಲಿ ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ: **25.06.2026** ರಂದು ಅಥವಾ ನಂತರ. ಟೆಂಡರ್ ಬಿಡ್ ಸ್ವೀಕರಿಸುವ ಕೊನೆಯ ದಿನಾಂಕ, ತಾಂತ್ರಿಕ ಬಿಡ್ ತೆರೆಯುವ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: ಕೆ.ಪಿ.ಪಿ ಪೋರ್ಟಲ್‌ನಲ್ಲಿರುವಂತೆ.

ಬಿಡ್ಡುದಾರರ ಅರ್ಹತೆ ವಿವರ: ಟೆಂಡರ್ ದಸ್ತಾವೇಜು (ಐ.ಎಫ್.ಬಿ) ಪ್ರಕಾರ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಅಧೀಕ್ಷಕ ಅಭಿಯಂತರರು (ವಿ), ಖರೀದಿ, ನಿಗಮ ಕಾರ್ಯಾಲಯ, ಗು.ವಿ.ಸ.ಕಂ.ನಿ. ಕಲಬುರಗಿ–585 102. ಮೊ.ಸಂ: 94484 99997. ಅಂತರ್ಜಾಲತಾಣದ ವಿಳಾಸ: www.kppp.karnataka.gov.in.KPP ಪೋರ್ಟಲ್‌ನ ಬಗ್ಗೆ ಮಾಹಿತಿಗಾಗಿ ಸಹಾಯವಾಣಿ+91 – 8046010000/ 8068948777/ 9240214000/ 9240214001 ಗೆ ಇಮೇಲ್ ವಿಳಾಸ: support@eprochelpdesk.comಗೆ ಸಂಪರ್ಕಿಸಬಹುದಾಗಿದೆ

ಸಹಿ/– ಅಧೀಕ್ಷಕ ಅಭಿಯಂತರರು (ವಿ),
ಖರೀದಿ, ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/240/ಕೆ.ಎಸ್.ಎಂ.ಸಿ.ಎ/2026–27

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹಗರಿಬೊಮ್ಮನಹಳ್ಳಿ

ಸಂಖ್ಯೆ/ಕೃಮಾಇ/ಕೃಉಮಾಸ/ಹಬೊಹಳ್ಳಿ/ಲೀ&ಲೈ/107/2026-27 ದಿನಾಂಕ:- 18-06-2026

ಸಂಕ್ಷಿಪ್ತ ಪ್ರಕಟಣೆ

ಹಗರಿಬೊಮ್ಮನಹಳ್ಳಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಮಳಿಗೆಗಳನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಗಳು 2004ರ ನಿಯಮ 13 ಮತ್ತು 14ರ ಪ್ರಕಾರ ಲೀವ್ ಅಂಡ್ ಲೈಸನ್ಸ್ ಆಧಾರದ ಮೇಲೆ ಆರಂಭಿಕವಾಗಿ 11 ತಿಂಗಳ ಅವಧಿಗೆ, ಪ್ರತಿ 11 ತಿಂಗಳಿಗೊಮ್ಮೆ ನವೀಕರಿಸಿಕೊಳ್ಳಬಹುದಾದ ಗರಿಷ್ಠ 55 ತಿಂಗಳ ಅವಧಿಗೆ ಟೆಂಡರ್ ಸಹಿತ ಹರಾಜಿನ ಮೂಲಕ ಹಂಚಿಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಿದೆ.

ಕ್ರ ಸಂ	ವಿವರ.	ಖಾಲಿ ಇರುವ ವೇಬ್ರಿಡ್/ ಮಳಿಗೆಗಳ ಸಂಖ್ಯೆ	ನಿಗಧಿಪಡಿಸಿರುವ ಮಾಸಿಕ ಲೀವ್ ಅಂಡ್ ಲೈಸನ್ಸ್ ಶುಲ್ಕ (ರೂ.ಗಳಲ್ಲಿ)	ಆರಂಭಿಕ ಮುಂಗಡ ಠೇವಣಿ (ರೂ.ಗಳಲ್ಲಿ)	ಮೀಸಲಾತಿ ವಿವರ
ನಿಯಮ-13					
1)	ಧಾನ್ಯಗಳ ಶುದ್ಧೀಕರಣ ಘಟಕದ ಹತ್ತಿರ	ಮಳಿಗೆ ಸಂಖ್ಯೆ6/1	2690/-	5380/-	ಸಾಮಾನ್ಯ
2)	ಇರುವ 06 ಸಂಖ್ಯೆ ಚಿಕ್ಕ ಮಳಿಗೆಗಳು	ಮಳಿಗೆ ಸಂಖ್ಯೆ6/5	2690/-	5380/-	ಪರಿಶಿಷ್ಟ ಜಾತಿ
ನಿಯಮ-14					
6)	4 ಸಂಖ್ಯೆ ವಾಣಿಜ್ಯ ಮಳಿಗೆಯಲ್ಲಿರುವ ಮೊದಲನೇ ಮಹಡಿಯಲ್ಲಿರುವ	ಮಳಿಗೆ ಸಂಖ್ಯೆ 03 ಮತ್ತು 04	4520/-	9040/-	ಮಳಿಗೆ ಸಂಖ್ಯೆ03 ಪರಿಶಿಷ್ಟ ಜಾತಿಗೆ ಮಾತ್ರ ಮಳಿಗೆ ಸಂಖ್ಯೆ 04 ಸಾಮಾನ್ಯ ವರ್ಗಕ್ಕೆ
7)	ಎನ್.ಜಿ.ಆರ್.ಜಿ. ಗೋದಾಮಿನ ಹತ್ತಿರ ನಿರ್ಮಿಸಿರುವ 3 ಸಂಖ್ಯೆ ವಾಣಿಜ್ಯ ಮಳಿಗೆಯಲ್ಲಿರುವ ಮೊದಲನೇ ಮಹಡಿಯಲ್ಲಿರುವ	ಮಳಿಗೆ ಸಂಖ್ಯೆ4,	4875/-	9750/-	ಸಾಮಾನ್ಯ
8)		ಮಳಿಗೆ ಸಂಖ್ಯೆ5,	4765/-	9530/-	ಸಾಮಾನ್ಯ
9)		ಮಳಿಗೆ ಸಂಖ್ಯೆ6	4875/-	9750/-	ಸಾಮಾನ್ಯ

1.ಮಳಿಗೆ ಹಂಚಿಕೆಗಾಗಿ ಸಲ್ಲಿಸಬೇಕಾದ ಅರ್ಜಿ ನಮೂನೆ-VI ಹಾಗೂ ಟೆಂಡರ್ ಫಾರಂ ಪಡೆಯಲು ಅರ್ಜಿ ಶುಲ್ಕ ರೂ. 500=00 ಗಳನ್ನು ಪಾವತಿಸಲು ಕೊನೆಯ ದಿನಾಂಕ:-02/07/2026 ರ ಸಾಯಂಕಾಲ 04.9/07/2026 ರಂದು ಹಗರಿಬೊಮ್ಮನಹಳ್ಳಿನಲ್ಲಿನ ಈ ಸಮಿತಿಯ ಕಾರ್ಯಾಲಯದಲ್ಲಿ ವಿತರಿಸಲಾಗುವುದು. 2.ಅರ್ಜಿ ನಮೂನೆ-VIರಲ್ಲಿನ ಎಲ್ಲಾ ಮಾಹಿತಿಯನ್ನು ಭರ್ತಿಮಾಡಿ ಅವಶ್ಯಕ ದಾಖಲಾತಿಗಳೊಂದಿಗೆ ಅರ್ಜಿ ನಮೂನೆ-VI ಹಾಗೂ ಟೆಂಡರ್ ಫಾರಂನ್ನು ಸಲ್ಲಿಸಲು ಕೊನೆಯ ದಿನಾಂಕ:-13/07/2026 ರ ಮಧ್ಯಾಹ್ನ 03.00 ಘಂಟೆಯವರೆಗೆ. 3.ದಿನಾಂಕ:- 13/07/2026 ರಂದು ಸಾಯಂಕಾಲ 03.30ಕ್ಕೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿನ ಸಮಿತಿಯ ಆಡಳಿತ ಕಾರ್ಯಾಲಯದಲ್ಲಿ ಬಹಿರಂಗ ಹರಾಜು ಪ್ರಕ್ರಿಯೆ ಜರುಗಿಸಲಾಗುವುದು. ಬಹಿರಂಗ ಹರಾಜು ಪ್ರಕ್ರಿಯೆ ಮುಕ್ತಾಯದ ನಂತರ ಟೆಂಡರ್ ತೆರೆಯಲಾಗುವುದು. 4.ಭದ್ರತಾ ಠೇವಣಿಯನ್ನು ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,ಹಗರಿಬೊಮ್ಮನಹಳ್ಳಿ (SECRETARY APMC HAGARIBOMMANAHALLI) ಇವರ ಹೆಸರಿಗೆ ಡಿ.ಡಿ. ಮೂಲಕ ಪಾವತಿಸಬೇಕು. 5.ಹೆಚ್ಚಿನ ವಿವರಗಳನ್ನು ರಜಾ ದಿನಗಳನ್ನು ಹೊರತುಪಡಿಸಿ ಸಮಿತಿಯ ಕಾರ್ಯಾಲಯದಲ್ಲಿ ಪಡೆಯಬಹುದಾಗಿದೆ. ಸಹಾಯವಾಣಿ ದೂ.ಸಂ:08397-238248.

ಸಹಿ/-ಕಾರ್ಯದರ್ಶಿ, ಕೃ.ಉ.ಮಾ.ಸ.ಹ.ಬೊ.ಹಳ್ಳಿ
ವಾ.ಸಾ.ಸಂ.ಇ/ವಿಜಯನಗರ/2026-27/ ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/150
ಸಹಿ/-ಆಡಳಿತಾಧಿಕಾರಿಗಳು, ಕೃ.ಉ.ಮಾ.ಸ.ಹ.ಬೊ.ಹಳ್ಳಿ

ಕರ್ನಾಟಕ ಸರ್ಕಾರ
ತಾಲೂಕ ಪಂಚಾಯತ ಯಲಬುರ್ಗಾ

ದೂರವಾಣಿ: 08534-220136 E-mail : eo-tp-kakpyb@nic.in

ಸಂ/ತಾಪಂಯ/ಉಖಾಯೋ/ವಾಹನಟೆಂಡರ್/2026-27/434 ದಿನಾಂಕ: 20/06/2026

-:: ಟೆಂಡರ್ ಪ್ರಕಟಣೆ ::-

ಸಹಾಯಕ ನಿರ್ದೇಶಕರು ಗ್ರಾಮೀಣ ಉದ್ಯೋಗ ತಾಲೂಕ ಪಂಚಾಯತ ಯಲಬುರ್ಗಾ ಇವರು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಅನುಷ್ಠಾನಗೊಳ್ಳುವ ಕಾಮಗಾರಿಗಳನ್ನು ಮೇಲ್ವಿಚಾರಣೆ ಮತ್ತು ಅಧಿಕೃತ ಪ್ರವಾಸ ಕೈಗೊಳ್ಳುವ ಉದ್ದೇಶದಿಂದ ಷರತ್ತಿಗೊಳಪಟ್ಟು ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ ಯಲಬುರ್ಗಾ ಇವರಿಗೆ (ಮಾಹೆ ಜುಲೈ-2026 ರಿಂದ ಮಾಹೆ ಜೂನ್-2027 ರವರೆಗೆ) ಮಾಸಿಕ ರೂ 35,000/- ಬಾಡಿಗೆ ಆಧಾರದ ಮೇಲೆ ವಾಹನವನ್ನು ಒದಗಿಸಲು ಅರ್ಹ ವಾಹನ ಮಾಲೀಕರಿಂದ/ಸಂಸ್ಥೆಯಿಂದ ಟೆಂಡರ್ ಆಹ್ವಾನಿಸಿದೆ. ಟೆಂಡರ್ ದ್ವಿ-ಲಕೋಟೆ ಪದ್ಧತಿಯಲ್ಲಿ ಇದ್ದು ದಿನಾಂಕ: **22-06-2026** ರಂದು ಸಾಯಂಕಾಲ ಕಛೇರಿ ಅವಧಿಯಲ್ಲಿ ತಾಲೂಕ ಪಂಚಾಯತ ಕಾರ್ಯಾಲಯದಲ್ಲಿ ಇರುವ ಟೆಂಡರ್ ಪೆಟ್ಟಿಗೆಗೆ ಹಾಕತಕ್ಕದ್ದು, ದಿನಾಂಕ **30-06-2026** ರಂದು ಸಾಯಾಂಕಾಲ 12.00 ಗಂಟೆಗೆ ಟೆಂಡರ್ ಪೆಟ್ಟಿಗೆ ತೆರೆಯಲಾಗುವುದು.

1.ಖಾಲಿ ಟೆಂಡರ್ ಫಾರಂ ವಿತರಿಸುವ ದಿನಾಂಕ: **22/06/2026** ರಿಂದ **24/06/2026** ಸಾಯಂಕಲ 4.00 ಘಂಟೆಯವರೆಗೆ 2.ಭರ್ತಿ ಮಾಡಿದ ಟೆಂಡರ್ ಫಾರಂ ಸ್ವೀಕರಿಸುವ ಕೊನೆಯ ದಿನಾಂಕ: **29/06/2026** ರ ಸಾಯಂಕಾಲ 4.00 ಘಂಟೆಯ ವರೆಗೆ 3.ಟೆಂಡರ್ ಪೆಟ್ಟಿಗೆ ತೆರೆಯುವ ದಿನಾಂಕ ಮತ್ತು ಸ್ಥಳ: ದಿನಾಂಕ: **30/06/2026** ರಂದು ಮಧ್ಯಾಹ್ನ 12.00 ಘಂಟೆಗೆ ತಾಲೂಕ ಪಂಚಾಯತ ಸಭಾಂಗಣದಲ್ಲಿ ಹಾಜರಿದ್ದ ಟೆಂಡರ್ ದಾರರ ಸಮಕ್ಷಮದಲ್ಲಿ ತೆರೆಯಲಾಗುವುದು. 4.ನಿಗದಿಪಡಿಸಿದ ಇ.ಎಂ.ಡಿ ಮೊತ್ತ: **ರೂ.10,000/-** 5.ಟೆಂಡರ್ ಫಾರಂ ಬೆಲೆ: **ರೂ.500/-**

ಆಸಕ್ತ ಮಾಲಿಕರು/ಸಂಸ್ಥೆಯವರು, ಟೆಂಡರ್ ದಾರರು ಟೆಂಡರ್ ಫಾರಂಗಾಗಿ ರೂ.500/- ಗಳ ಡಿ.ಡಿ ಯನ್ನು ರಾಷ್ಟ್ರೀಕೃತ ಬ್ಯಾಂಕಿನಿಂದ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ ಯಲಬುರ್ಗಾ ರವರ ಹೆಸರಿನಲ್ಲಿ ಪಡೆದ ಡಿ.ಡಿ ಯನ್ನು ಸಲ್ಲಿಸಬಹುದಾಗಿದೆ. ಟೆಂಡರ್ ನಿಯಮ ಹಾಗೂ ಷರತ್ತುಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಅಧಿಕಾರಿಗಳು,
ತಾಲೂಕ ಪಂಚಾಯತ, ಯಲಬುರ್ಗಾ

ಡಿಐಪಿಆರ್/ಕೊಪ್ಪಳ/184/ಕೆಎಸ್‌ಎಂಸಿಎ/2026-27

CHANGE OF NAME

I, **MOHAMAD ABBRAR DHALAYAT (Old Name)** have changed my name as **MOHAMAD ABBRAR AHAMEDBASHA DHALAYAT (New Name).** Henceforth I will be recognized and called by the new name for all purposes. R/o H.No.1798/1, Nalwad Street, Gadag, Tq:/Dist:Gadag, State: Karnataka. Submitted an affidavit dated 16.06.2026 through M.M. Hiremath, Notary, Gadag.

CHANGE OF NAME

I, **SAMREEN KHAJAHUSEN KANDAGAL (Old Name)** have changed my name as **SAMREEN MOHAMMAD ISMAIL ABBIGERI (New Name).** Henceforth I will be recognized and called by the new name for all purposes. Gangimadi 1St Cross, Opp House No 250, Gadag Tq:/Dist: Gadag, State: Karnataka. Submitted an affidavit dated 20.06.2026 through M.M. Hiremath, Notary, Gadag.

ಮಾನ್ಯ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ, ಸೊರಬ

ಅ.ದಾ.ನಂ : 07/2026

ವಾದಿ : ವೀರಪ್ಪಗೌಡ ವಿರುದ್ಧ

ಪ್ರತಿವಾದಿಯರು : ಬಂಗಾರಗೌಡ ಪೌತಿ ವಾರಸುದಾರರು.

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಕೇಸಿನಲ್ಲಿ ವಾದಿಯು ಪ್ರತಿವಾದಿಯರ ವಿರುದ್ಧ ಓಸ್ ಕೋರಿ ದಾವೆ ಸಲ್ಲಿಸಿದ್ದು, ಸದರಿ ದಾವೆಯಲ್ಲಿ ಶ್ರೀಮತಿ ಬೇಬಿ ಬಿನ್ ಬಂಗಾರಗೌಡ, ಸುಮಾರು 32 ವರ್ಷ, ಗೃಹಿಣಿ, ಅಜ್ಜರಣಿ ಗ್ರಾಮ, ಶಿರಸಿ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಆದ ನೀವು 1ಎ ಪ್ರತಿವಾದಿಯಾಗಿರುತ್ತೀರಿ. ಕಾರಣ ಸದರಿ ದಾವೆಗೆ ನಿಮ್ಮದೇನಾದರೂ ತಕರಾರು ವಗೈರೆ ಇದ್ದಲ್ಲಿ ನೀವು **ದಿನಾಂಕ:08-07-2026** ರಂದು ನ್ಯಾಯಾಲಯದ ಸಮಯವಾದ **ಬೆಳಿಗ್ಗೆ 11 ಘಂಟೆಗೆ** ನೀವಾಗಲಿ, ನಿಮ್ಮ ಪರ ವಕೀಲರಾಗಲಿ ನ್ಯಾಯಾಲಯಕ್ಕೆ ಹಾಜರಾಗಿ ಹೇಳಿಕೆ ವಗೈರೆ ನೀಡತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಪರ ಏಕಪಕ್ಷೀಯ ಎಂದು ಪರಿಗಣಿಸಿ ಮುಂದಿನ ಆದೇಶ ಮಾಡಲಾಗುವುದು ತಿಳಿಯಿರಿ.

ವಾದಿ ಪರ ವಕೀಲರು
ಶ್ರೀ ಪವನ.ಕೆ.
ವಕೀಲರು, ಸೊರಬ
ರೋಲ್.ನಂ.ಕೆ.ಎ.ಆರ್. 1521/2023

ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/-ಹಿರಿಯ ಶಿರಸ್ತೇದಾರರು,
ಸಿವಿಲ್ ನ್ಯಾಯಾಲಯ, ಸೊರಬ

ಪುರಸಭಾ ಕಾರ್ಯಾಲಯ, ಶ್ರೀನಿವಾಸಪುರ

ಕೋಲಾರ ಜಿಲ್ಲೆ-563135 E mail :ka.srinivasapura.tmc@gmail.com
itstaff_ulb_srinivasapura@yahoo.co.in, Website:www.srinivasapuratown.mrc.gov.in,
ದೂ.ಸಂ.: 08157-245160

ಕ್ರಸ: ಪುಸಶ್ರೀ/ತಾಂತ್ರಿಕ ಶಾಖೆ/ಸಿಆರ್/01/2026-27 ದಿನಾಂಕ: 18.06.2026

ಮರು ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅದ್ಯಾದೇಶ 2000ರಂತೆ ಹಾಗೂ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ/06/ಪಿಸಿಎಲ್/2006, ಬೆಂಗಳೂರುರಂತೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಸರಬರಾಜುದಾರರು/ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಟೆಂಡರ್ ಸಲ್ಲಿಕೆಗಾಗಿ ಅಂತರ್ಜಾಲ **http//kppp.karnataka.gov.in** ಮೂಲಕ ಪಡೆದುಕೊಳ್ಳತಕ್ಕದ್ದು ಹಾಗೂ ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವುದು. ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಹಾಗೂ ಟೆಂಡರ್ ತಿದ್ದುಪಡಿಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರವೇ ಪ್ರಚುರಪಡಿಸಲಾಗುತ್ತದೆ.

ಕ್ರ ಸಂ	ಇಂಡೆಂಟ್ ನಂಬರ್	ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)
1.	DMA/2026-27/WS/WORK_INDENT58914/CALL-2	1,66,000/-	5,000/-
2.	DMA/2026-27/WS/WORK_INDENT58901/CALL-2	1,62,000/-	5,000/-

ಕರ್ನಾಟಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸಲು **ಕೊನೆಯ ದಿನಾಂಕ: 25.06.2026 ರಂದು ಸಂಜೆ 5.30 ಗಂಟೆ** ಹಾಗೂ ಇತರೆ ಮಾಹಿತಿಗಳನ್ನು ವೆಬ್‌ಸೈಟ್ ಮೂಲಕ ಪಡೆದುಕೊಳ್ಳತಕ್ಕದ್ದು.

ಸಹಿ/- ಆಡಳಿತಾಧಿಕಾರಿಗಳು ಪುರಸಭೆ, ಶ್ರೀನಿವಾಸಪುರ
ಸಹಿ/- ಮುಖ್ಯಾಧಿಕಾರಿ ಪುರಸಭೆ, ಶ್ರೀನಿವಾಸಪುರ

ವಾಸಾಸಂಇ/ಕೋಲಾರ/ಆರ್.ಓ.ನಂ:131/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ವಿಭಾಗ, ಬೀದರ.

ನಂ: ಇಇ/ಎಂಐಡಿ/ಬೀದರ/ತಾ.ಶಾ-1&2/ಟೆಂಡರ್/2026-27/ 1380 ದಿನಾಂಕ: 20-6-2026

ಕೆಪಿಪಿ-ಪ್ರೋಕ್ಯೂರಮೆಂಟ, ಟೆಂಡರ್ ಪ್ರಕಟಣೆ

1) ಕಾಮಗಾರಿಗಳ ವಿವರ. KPP-Portal ನಲ್ಲಿ ನಮೂದಿಸಿದಂತೆ. 2) ಕಾಮಗಾರಿಗಳ ಅಂದಾಜು ಮೊತ್ತ.KPP -Portal ನಲ್ಲಿ ನಮೂದಿಸಿದಂತೆ. 3) ಗುತ್ತಿಗೆದಾರರ ಅರ್ಹತೆ ವಿವರ.KPP -Portalನಲ್ಲಿ ನಮೂದಿಸಿದಂತೆ. 4) ಕಾಮಗಾರಿಗಳ ಟೆಂಡರ ಮೊತ್ತದ ವಿವರ. KPP-Portalನಲ್ಲಿ ನಮೂದಿಸಿದಂತೆ. 5) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ. KPP-Portalನಲ್ಲಿ ನಮೂದಿಸಿದಂತೆ. 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: ಕೆ.ಡಬ್ಲೂ -1, ಕೆ.ಡಬ್ಲೂ -2, ಕೆ.ಡಬ್ಲೂ -3 & ಕೆ.ಡಬ್ಲೂ -4 ಮಾತ್ರ **:29-06-2026 ರಂದು 17.00 ಗಂಟೆವರೆಗೆ,** 7) ಪ್ರೀಬಿಡ್ಡ್ ಮಿಟಿಂಗ ಸ್ಥಳ ದಿನಾಂಕ ಮತ್ತು ಸಮಯ. ಕೆ.ಡಬ್ಲೂ -4 ಮಾತ್ರ ಕಾರ್ಯನಿರ್ವಾಹಕ ಇಂಜಿನೀಯರರು,, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ, ಪ್ರತಾಪನಗರ ನೌಬಾದ, ಬೀದರ. **25-06-2026 ರಂದು 11.00 ಗಂಟೆಗೆ.** 8) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ ಕೆ.ಡಬ್ಲೂ -1, ಕೆ.ಡಬ್ಲೂ -2, ಕೆ.ಡಬ್ಲೂ -3 & ಕೆ.ಡಬ್ಲೂ -4 ಮಾತ್ರ **:01-07-2026 ರಂದು 16.00 ಗಂಟೆ ವರೆಗೆ,** 9) ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲೂ -1, ಕೆ.ಡಬ್ಲೂ -2, ಕೆ.ಡಬ್ಲೂ -3 & ಕೆ.ಡಬ್ಲೂ -4 ಮಾತ್ರ: **03-07-2026 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ,** 10) ಟೆಂಡರ ಆರ್ಥಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲೂ -1, ಕೆ.ಡಬ್ಲೂ -2, ಕೆ.ಡಬ್ಲೂ -3 & ಕೆ.ಡಬ್ಲೂ -4 ಮಾತ್ರ **06-07-2026 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ,** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ,ಕಛೇರಿ ವಿಳಾಸ, ದೂರವಾಣಿ ಸಂಖ್ಯೆ.ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ಇಲಾಖೆ.ವಿಭಾಗ, ಬೀದರ. ದೂರವಾಣಿ ಸಂ: 08482 232080 12) ಅಂತರ್ಜಾಲ ತಾಣದ ವಿಳಾಸ. KPP portal https://kppp.karnataka.gov.in

ಸಹಿ/- ಕಾರ್ಯ ನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ವಿಭಾಗ, ಬೀದರ.

ವಾ.ಸಾ.ಸಂ.ಇ/ಬೀದರ/70/ಕೆ.ಎಸ್.ಎಂ.ಸಿ.&ಎ/2026-27

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರವರ ಕಛೇರಿ, ಜಲಭವನ, ನಂ.ಪಿ-4, 10ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, 3ನೇ ಮಹಡಿ ಸರಸ್ವತಿ ಪುರಂ, ಮೈಸೂರು-09. **ದೂರವಾಣಿ ಸಂ:** 0821- 2545894,
ಇ-ಮೇಲ್: kwbcemys2014@gmail.com

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಕೊಲ್ಲೂರು ಪಟ್ಟಣದಲ್ಲಿ ಹಾಲಿ ಇರುವ 1.50 MLD ಸಾಮರ್ಥ್ಯದ MBBR ಮಾದರಿಯ STP ಯನ್ನು ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದ ಠೇವಣಿ ಕೊಡುಗೆಯಡಿ ಮೇಲ್ದರ್ಜೆಗೇರಿಸುವ ಕಾಮಗಾರಿಯ 2ನೇ ಕರೆ ಟೆಂಡರ್‌ನ್ನು (including 1 year DLP) (lumpsum tender - no variation) ಇಂಡೆಂಟ್ ಸಂಖ್ಯೆ: KUWSDB/2026-27/WT/WORK_INDENT508/CALL-2ರಲ್ಲಿ ಆಹ್ವಾನಿಸಲಾಗಿರುತ್ತದೆ.
ವಿವರಗಳಿಗೆ - **https://kppp.karnataka.gov.in**

ಸಹಿ/-ಮುಖ್ಯ ಅಭಿಯಂತರರು,
ಕ.ನ.ನೀ.ಸ ಮತ್ತು ಒ.ಚ ಮಂಡಳಿ, ಮೈಸೂರು

DIPR/DDMYS/362/KSMCA/239/2026-27

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನೀಯರವರ ಕಛೇರಿ, ತುಂ.ಮೇ.ಯೋ. ವಿಭಾಗ,
ಶಿವಮೊಗ್ಗ, ಫೋನ್ ನಂ. 08182-254832

1.ಟೆಂಡರ್ ಪ್ರಕಟಣೆ ಸಂಖ್ಯೆ: ಕನೀನಿನಿ/ತುಂ.ಮೆ.ಯೋ./ವಿ/ಪಿಬಿ-2/2026-27/ ಟೆಂಡರ್/05 ದಿನಾಂಕ: 20.06.2026
2.ಟೆಂಡರ್ ಪ್ರಕಟಣೆ ಸಂಖ್ಯೆ: ಕನೀನಿನಿ/ತುಂ.ಮೆ.ಯೋ./ವಿ/ಪಿಬಿ-2/2026-27/ ಟೆಂಡರ್/06 ದಿನಾಂಕ: 20.06.2026
3.ಟೆಂಡರ್ ಪ್ರಕಟಣೆ ಸಂಖ್ಯೆ: ಕನೀನಿನಿ/ತುಂ.ಮೆ.ಯೋ./ವಿ/ಪಿಬಿ-3/2026-27/ ಟೆಂಡರ್/07 ದಿನಾಂಕ: 20.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ., ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರು ಅರ್ಹ ಗುತ್ತಿಗೆದಾರರಿಂದ ಕೆ.ಪಿ.ಪಿ.-ಪೋರ್ಟಲ್ ಪದ್ಧತಿಯ ಮೂಲಕ ಲೆಕ್ಕ ಶೀರ್ಷಿಕೆ 4701-ತುಂಗಾ ಮೇಲ್ದಂಡೆ ಯೋಜನೆ ಅಡಿಯಲ್ಲಿ ಬರುವ ಮೂರು(03) ಕಾಮಗಾರಿಗಳಿಗೆ ಹಾಗೂ 4701- ತುಂಗಾ ಆಧುನೀಕರಣ ಯೋಜನೆ ಅಡಿಯಲ್ಲಿ ಬರುವ ಒಂದು(01) ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ.

(1) ಅಂದಾಜು ಪತ್ರಿಕೆಯಂತೆ ಟೆಂಡರಿಗೆ ಇಡಲಾದ ಮೊತ್ತ ರೂ.296.15 ಲಕ್ಷಗಳು(ಇ. ಸಂಖ್ಯೆ 4535), ರೂ.90.47 ಲಕ್ಷಗಳು(ಇ. ಸಂಖ್ಯೆ 4455), ರೂ.41.28 ಲಕ್ಷಗಳು(ಇ. ಸಂಖ್ಯೆ 4532) ಮತ್ತು ರೂ.42.33 ಲಕ್ಷಗಳು(ಇ. ಸಂಖ್ಯೆ 4567)(ಜಿ.ಎಸ್.ಟಿ ಹೊರತುಪಡಿಸಿ)
(2) ಟೆಂಡರ್ ಕುರಿತ ಪ್ರಶ್ನೆಗಳಿಗಾಗಿ/ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ: 25.06.2026 17.30 ಘಂಟೆಯವರೆಗೆ.
(3) ತುಂಬಿದ ಟೆಂಡರ್‌ಗಳನ್ನು ಸಲ್ಲಿಸುವ ದಿನಾಂಕ: 20.06.2026 ರಿಂದ 29.06.2026 ಸಾಯಂಕಾಲ 17.29 ಘಂಟೆಯವರೆಗೆ (ಕಚೇರಿ ವೇಳೆಯಲ್ಲಿ)

ಟೆಂಡರನ್ನು ತೆರೆಯುವ ದಿನಾಂಕ / ಕಾಮಗಾರಿಯ ವಿವರಗಳು /ಇ.ಎಂ.ಡಿ. ಮೊತ್ತ/ ಟೆಂಡರ್‌ನ ನಿಯಮಗಳು ಮತ್ತು ಷರತ್ತುಗಳು । ಗುತ್ತಿಗೆದಾರರ ದರ್ಜೆ ಇತ್ಯಾದಿ ಹೆಚ್ಚಿನ ವಿವರಗಳಿಗಾಗಿ ಟೆಂಡರ್ ಅಧಿಸೂಚನೆಯಲ್ಲಿ ಪಡೆಯಬಹುದು ಅಥವಾ ಕೆಳಗೆ ಸಹಿ ಮಾಡಿರುವವರ ಕಚೇರಿಯಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದು ಅಥವಾ https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದು.

ಸಹಿ/-
ಕಾರ್ಯಪಾಲಕ ಇಂಜಿನೀಯರರು,
ಕನೀನಿನಿ, ತುಂ.ಮೆ.ಯೋ. ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಶಿ/ನಂ.102-06/ ಝೇಂಕಾರ್/2026-27

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮುರುಘಾಮಠದ ಹತ್ತಿರ, ಸವದತ್ತಿ ರಸ್ತೆ ಧಾರವಾಡ-580008

ದೂರವಾಣಿ : 0836-2448157, 2970324 ಇ-ಮೇಲ್ : apmcdharwad@rediffmail.com

ಸಂ: ಕೃಮಾಇ : ಕೃಉಮಾಸ(ಧಾ): ಲೀ&ಲೈ: 176 :2026-27 ದಿನಾಂಕ : 20/06/2026

ಪ್ರಕಟಣೆ

ಧಾರವಾಡ ಹೊಸ ಮಾರುಕಟ್ಟೆ ಪ್ರಾಂಗಣ, ಹಳೇ ಹಾಗೂ ಜಾನುವಾರ ಮಾರುಕಟ್ಟೆ ಹಾಗೂ ಅಳ್ನಾವರ ಪ್ರಾಂಗಣದಲ್ಲಿರುವ ವಿವಿಧ ಕಟ್ಟಡಗಳನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿನ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಾವಳಿಗಳು 2004 ರ ನಿಯಮ 14 ರನ್ವಯ ಆಸಕ್ತಿಯುಳ್ಳವರಿಂದ ಕೋಷ್ಟಕ-1 ರಲ್ಲಿ ಕಾಣಿಸಿದ ಕಟ್ಟಡಗಳನ್ನು ಟೆಂಡರ್-ಕಂ-ಬಹಿರಂಗ ಹರಾಜು ಮೂಲಕ ಮತ್ತು ನಿಯಮ 13 ರನ್ವಯ ಕೋಷ್ಟಕ-2 ರಲ್ಲಿ ಕಾಣಿಸಿದ ಗೋದಾಮುಗಳನ್ನು ಕೃಷಿ ಮಾರಾಟ ಇಲಾಖೆಯಿಂದ / ಈ ಸಮಿತಿಯಿಂದ ಲೈಸೆನ್ಸ್ ಪಡೆದು ಘೋಷಿತ ಕೃಷಿ ಹುಟ್ಟುವಳಿಗಳ ವ್ಯಾಪಾರ ವಹಿವಾಟು ನಡೆಸುತ್ತಿರುವ ಪೇಟೆಕಾರ್ಯಕರ್ತರಿಂದ 11 ತಿಂಗಳಿಗೊಮ್ಮೆ ನವೀಕರಿಸುವ, 33 ತಿಂಗಳಿಗೆ ಶೇ. 5 ರಷ್ಟು ಲೀವ್ ಆ್ಯಂಡ್ ಲೈಸೆನ್ಸ್ ಶುಲ್ಕವನ್ನು ಹೆಚ್ಚಿಸುವ ಮತ್ತು ಸಮಿತಿಯು ವಿಧಿಸುವ ಷರತ್ತು-ವ-ನಿಬಂಧನೆಗಳಿಗೆ ಒಳಪಟ್ಟು ಗರಿಷ್ಠ 55 ತಿಂಗಳ ಅವಧಿಗೆ ಲೀವ್ಹ್ & ಲೈಸೆನ್ಸ್ ಶುಲ್ಕದ ಆಧಾರದ ಮೇಲೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ ವಿವರಗಳು ಈ ಕೆಳಗಿನಂತಿದೆ:

ಕ್ರ. ಸಂ.	ಕಟ್ಟಡದ ಹೆಸರು	ಕಟ್ಟಡದ ಸಂಖ್ಯೆ	ಸಮಿತಿಯು ನಿಗದಿಪಡಿಸಿದ ಮಾಸಿಕ ಲೀ& ಲೈ ಫೀ (ರೂ.ಗಳಲ್ಲಿ) (ಪ್ರತಿಯೊಂದಕ್ಕೆ ಜಿಎಸ್‌ಟಿ ಹೊರತುಪಡಿಸಿ)	ಡಿ.ಡಿ ಮೂಲಕ ಪಾವತಿಸ ಬೇಕಾದ ಇ.ಎಮ್.ಡಿ ಮೊತ್ತ	ಮೀಸಲಾತಿ	ಅರ್ಜಿ ನಮೂನೆ ಶುಲ್ಕ ರೂ ಗಳಲ್ಲಿ(ತೆರಿಗೆ ಪ್ರತ್ಯೇಕ)
1	2	3	4	5	6	
ಕೋಷ್ಟಕ-1 (ನಿಯಮ-14 ರನ್ವಯ ಟೆಂಡರ್-ಕಂ-ಬಹಿರಂಗ ಹರಾಜಿನ ಮೂಲಕ ಹಂಚಿಕೆ ಮಾಡಬೇಕಾದ ಕಟ್ಟಡಗಳು)						
1	ಹೊಸ ಮಾರುಕಟ್ಟೆ ಪ್ರಾಂಗಣದಲ್ಲಿರುವ 04 ಚಿಕ್ಕಮಳಿಗೆ ಪೈಕಿ (4ನೇ ಕರೆ)	02 ಮತ್ತು 03	5,500.00	11,000.00	ಎಸ್.ಟಿ-02 ಸಾಮಾನ್ಯ-03	500.00
2	ಜಾನುವಾರ ಮಾರುಕಟ್ಟೆ ಪ್ರಾಂಗಣದಲ್ಲಿರುವ 04 ಚಿಕ್ಕಮಳಿಗೆ ಪೈಕಿ (3ನೇ ಕರೆ)	02	4,800.00	10,000.00	ಸಾಮಾನ್ಯ	500.00
3	ಹಳೇ ಮಾರುಕಟ್ಟೆ ಪ್ರಾಂಗಣದಲ್ಲಿರುವ 28 ರ ಪೈಕಿ	41 & 42	10,200.00	20,500.00	ಸಾಮಾನ್ಯ	500.00
4	ಹಳೇ ಮಾರುಕಟ್ಟೆ ಪ್ರಾಂಗಣದಲ್ಲಿರುವ 14 ಬೆಲ್ಲದ ಅಂಗಡಿಗಳಿಗೆ ಹೊಂದಿಕೊಂಡು ದಕ್ಷಿಣ ದಿಕ್ಕಿಗೆ ಇರುವ ಮೂಲೆ 10*30 ಪ್ಲಾಟ್ ಖಾಲಿ ಜಾಗದಲ್ಲಿ ನಿಮಿಸಿದ ಶೆಡ್ಡ	01	3,850.00	8,000.00	ಸಾಮಾನ್ಯ	500.00
ಕೋಷ್ಟಕ-2 (ನಿಯಮ-13 ರನ್ವಯ ಜೇಷ್ಠತೆ ಆಧಾರದ ಮೇಲೆ ಪೇಟೆಕಾರ್ಯಕರ್ತರುಗಳಿಗೆ ಹಂಚಿಕೆ ಮಾಡಬೇಕಾದ ಗೋದಾಮುಗಳು)						
1	ಜಾನುವಾರ ಮಾರುಕಟ್ಟೆ ಪ್ರಾಂಗಣದಲ್ಲಿರುವ ಗೋದಾಮ (2ನೇ ಕರೆ)	02,03,04	28,800.00	57,600.00	ಸಾಮಾನ್ಯ-02 ಎಸ್.ಸಿ-03 ಎಸ್.ಟಿ-04	500.00
2	ಹೊಸ ಮಾರುಕಟ್ಟೆ ಪ್ರಾಂಗಣದಲ್ಲಿರುವ ಗೋದಾಮ(2ನೇ ಕರೆ)	ಕಚೇರಿ ಪಕ್ಕದಲ್ಲಿರುವ ಗೋದಾಮು	35,200.00	70,400.00	ಸಾಮಾನ್ಯ	500.00
3	ಅಳ್ನಾವರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿರುವ (2ನೇ ಕರೆ)	ಗೋದಾಮ-2	14,900.00	30,000.00	ಸಾಮಾನ್ಯ	500.00
4	ಜಾನುವಾರ ಮಾರುಕಟ್ಟೆ ಪ್ರಾಂಗಣದಲ್ಲಿರುವ ಗೋದಾಮ (ಸಿಬ್ಬಂದಿ ವಸತಿ ಗ್ರಹಗಳ ಹಿಂದುಗಡೆ) (2ನೇ ಕರೆ)	01 ಮತ್ತು 02	24,500.00	49,000.00	ಎಫ್.ಪಿ.ಓ-01 ಸಾಮಾನ್ಯ 02	500.00
5	ಆರ್.ಕೆ.ವ್ಹಿ.ಆಯ್‌ಯೋಜನೆಯಡಿ ಸಮಿತಿ ಹೊಸ ಮಾರುಕಟ್ಟೆ ಪ್ರಾಂಗಣದಲ್ಲಿರುವ ಅವಳಿ ಗೋದಾಮ (2ನೇ ಕರೆ)	01 ಮತ್ತು 02	11,500.00	23,000.00	ಸಾಮಾನ್ಯ-01 ಸಾಮಾನ್ಯ 02	500.00
6	ಹಳೇ ಮಾರುಕಟ್ಟೆ ಪ್ರಾಂಗಣದಲ್ಲಿರುವ ಜನ್ನಿಂಗ್ ಶೆಡ್ಡ	01	10,000.00	20,000.00	ಸಾಮಾನ್ಯ	500.00

ಷರತ್ತು ಮತ್ತು ನಿಬಂಧನೆಗಳು : (1) ಖಾಲಿ ಟೆಂಡರ್ ಫಾರ್ಮಗಾಗಿ ಅರ್ಜಿ ಸಲ್ಲಿಸುವವರು ವ್ಯವಹರಿಸುವ ವ್ಯವಹಾರಗಳಿಗೆ ಸಂಬಂಧಿಸಿದಂತೆ ಅಧಿಕೃತ ಪ್ರಮಾಣ ಪತ್ರದೊಂದಿಗೆ, ಈ ಕಚೇರಿಯಲ್ಲಿ ನೋಂದಣಿ ಮಾಡಿಸಿ, ಅರ್ಜಿಯನ್ನು ದಿನಾಂಕ : **10/07/2026** ರ ಒಳಗಾಗಿ ಸಲ್ಲಿಸತಕ್ಕದ್ದು (2) ಖಾಲಿ ಟೆಂಡರ್ ಫಾರ್ಮಗಳನ್ನು ಸಮಿತಿಯಿಂದ ದಿನಾಂಕ : **14/07/2026** ರಂದು ಕಛೇರಿ ವೇಳೆಯಲ್ಲಿ ಪಡೆದುಕೊಳ್ಳತಕ್ಕದ್ದು (3) ಭರ್ತಿ ಮಾಡಿದ ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕ : **17/07/2026** ರ ಮಧ್ಯಾಹ್ನ 03.30 ಘಂಟೆ ಒಳಗಾಗಿ ಮುಂಗಡದ ಠೇವಣಿ ಮೊತ್ತದ ಡಿ.ಡಿ.ಯನ್ನು "ಕಾರ್ಯದರ್ಶಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಧಾರವಾಡ" ಇವರ ಹೆಸರಿಗೆ ಪಡೆದು ಭರ್ತಿ ಮಾಡಿದ ಅರ್ಜಿ ಫಾರ್ಮನೊಂದಿಗೆ ಸಲ್ಲಿಸತಕ್ಕದ್ದು, ಸಾಧ್ಯವಾದಲ್ಲಿ ಕೋಷ್ಟಕ-1 ರಲ್ಲಿನ ಕಟ್ಟಡಗಳನ್ನು ಟೆಂಡರ್-ಕಂ-ಬಹಿರಂಗ ಹರಾಜನ್ನು ಅದೇ ದಿನ ಮಧ್ಯಾಹ್ನ 4.00 ಘಂಟೆಗೆ ಮಾಡಲಾಗುವುದು. (4) ಕೋಷ್ಟಕ-2 ರಲ್ಲಿನ ಕಟ್ಟಡಗಳ (ನಿಯಮ-13 ರಡಿಯಲ್ಲಿ) ಅರ್ಜಿ ಸಲ್ಲಿಸಿದ ಅರ್ಜಿದಾರರ ಪಟ್ಟಿಯನ್ನು ದಿನಾಂಕ : **20/07/2026** ರಂದು ಸೂಚನಾ ಫಲಕದ ಮೇಲೆ ಪ್ರಕಟಿಸಲಾಗುವುದು. (5) 2004 ರ ನಿಯಮಾವಳಿಯ 17 ನೇ ನಿಯಮದಂತೆ ಮೀಸಲಾತಿಯಡಿ ಕಾಯ್ದಿರಿಸಲಾದ ಮಳಿಗೆಗಳನ್ನು ಒಂದು ವೇಳೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಅಂಗವಿಕಲರು / ಮಾಜಿ ಸೈನಿಕರು /ರೈತ ಬೆಳೆಗಾರರ ಸಂಸ್ಥೆ ಮೀಸಲಾತಿಗೆ ಸಂಬಂಧಪಟ್ಟವರು ಅರ್ಜಿ ಸಲ್ಲಿಸದೇ ಇದ್ದಲ್ಲಿ ಮಳಿಗೆಗಳನ್ನು ಸಾಮಾನ್ಯ ವರ್ಗದವರಿಗೆ ಹಂಚಿಕೆಗೆ ಪರಿಗಣಿಸದೆ ಸದರಿ ಮೀಸಲಾತಿ ಪ್ರವರ್ಗದವರಿಗೆ ಕಾಯ್ದಿರಿಸಲಾಗುವುದು. (6) ಸದರ ಮೀಸಲಾತಿ ಪಡೆಯಲು ಇಚ್ಚಿಸುವವರು ಟೆಂಡರಿನೊಂದಿಗೆ ಮೀಸಲಾತಿ ಕುರಿತು ಇತ್ತೀಚಿಗೆ ಪಡೆದ ಮೂಲ ಪ್ರಮಾಣ ಪತ್ರದ ಪ್ರತಿಯನ್ನು ಸಲ್ಲಿಸತಕ್ಕದ್ದು. (7) ಯಾವುದೇ ಅಥವಾ ಎಲ್ಲಾ ಟೆಂಡರ್ ಹಾಗೂ ಹರಾಜಿನಲ್ಲಿನ ಬೇಡಿಕೆಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ.

ಹೆಚ್ಚಿನ ಮಾಹಿತಿ ಹಾಗೂ ಷರತ್ತು-ವ-ನಿಬಂಧನೆಗಳನ್ನು ರಜಾ ದಿನಗಳನ್ನು ಹೊರತುಪಡಿಸಿ ಈ ಕಛೇರಿ ವೇಳೆಯಲ್ಲಿ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/- ಕಾರ್ಯದರ್ಶಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಧಾರವಾಡ
ವಾಸಾಸಂಇ/ಧಾರವಾಡ/340/ಕೆಎಸ್‌ಎಂಸಿಎ/2026-27
ಸಹಿ/- ಆಡಳಿತಾಧಿಕಾರಿಗಳು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಧಾರವಾಡ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಕಾರ್ಯಾಲಯ
ಪಿ.ಎಂ.ಪೋಷಣ್ ಶಕ್ತಿ ನಿರ್ಮಾಣ್ (ಅಕ್ಷರ ದಾಸೋಹ ಯೋಜನೆ), ಧಾರವಾಡ

E-mail : eodarmms@yahoo.co.in ದೂರವಾಣಿ: 0836-2440053

ನಂ: ಬಿ1/ಅದಾ/ಜಾ.ವಾ. ಪ್ರಕಟಣೆ-ಸಿ ಆರ್-16/2026-27 ದಿನಾಂಕ: 22-06-2026

ಅಲ್ಪಾವಧಿ ಟೆಂಡರ್ ಪ್ರಕಟಣೆ
ಟೆಂಡರ್ ಮುಖಾಂತರ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ, **1999** ಹಾಗೂ ನಿಯಮಗಳು, **2000**ರ ಅನುಸಾರ ಅಕ್ಷರ ದಾಸೋಹ ಕಾರ್ಯಕ್ರಮದಡಿ ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ ಕಾರ್ಯಕ್ರಮ, ಜಿಲ್ಲಾ ಪಂಚಾಯತ, ಧಾರವಾಡ ಇವರಿಗೆ **2026-27** ನೇ ಸಾಲಿಗಾಗಿ ಕಚೇರಿ ಕೆಲಸ/ಪರಿವೀಕ್ಷಣಾ ಕಾರ್ಯಕ್ಕಾಗಿ ಬಾಡಿಗೆ ಆಧಾರದ ಮೇಲೆ ಒಂದು ವಾಹನ ಸೇವೆ ಪಡೆಯಲು ಇ-ಟೆಂಡರ್ ಕರೆಯಲಾಗಿದ್ದು, ಇ-ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.

ಕ್ರ ಸಂ	ವಾಹನಗಳ ವಿವರ	ವಾಹನದ ಸಂಖ್ಯೆ
1	Tavera/Bolero/Swift Dzire/Baleno/Ertiga	01

1) ಇ-ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 06-07-2026 4.00 P.M**
2) ಇ-ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 07-07-2026 4.30 P.M**
3) ಇ-ಪೋರ್ಟಲ್‌ನಲ್ಲಿ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 09-07-2026 11.30 A.M**
4) ಟೆಂಡರ್ ಮುಂಗಡ ಠೇವಣಿ **ರೂ.10,500/-**
5) ಟೆಂಡರ್ ಕಾಲಾವಧಿ **1** ವರ್ಷ
6) ಟೆಂಡರ್ ಸಂಖ್ಯೆ: **RDPR/2026-27/SE4041**

1) ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ: **0836-2440053** ಸಂಪರ್ಕಿಸಬಹುದಾಗಿದೆ.
2) ನೋಂದಾಯಿತ ಹಾಗೂ ಅರ್ಹ ಏಜೆನ್ಸಿಯವರು ಕರ್ನಾಟಕ ಸರ್ಕಾರದ e-procurement Web site **https://kppp.karnataka.gov.in** ಮೂಲಕ ಭಾಗವಹಿಸಬಹುದಾಗಿದೆ.

ಸಹಿ/-
ಶಿಕ್ಷಣಾಧಿಕಾರಿಗಳು
ಪಿ.ಎಂ ಪೋಷಣ್ ಶಕ್ತಿ ನಿರ್ಮಾಣ್
(ಅಕ್ಷರ ದಾಸೋಹ ಯೋಜನೆ)
ಜಿಲ್ಲಾ ಪಂಚಾಯತ, ಧಾರವಾಡ.

ವಾ.ಸಾ.ಸಂ.ಇ/ಧಾರವಾಡ/344/ದೇಶಪಾಂಡೆಪಬ್ಲಿಸಿಟಿ/2026-27

ಕರ್ನಾಟಕ ಸರ್ಕಾರ - ಕರ್ನಾಟಕ ಅರಣ್ಯ ಇಲಾಖೆ
ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ್ಗ-577204.

Ph. 08182-250785 Email: cfworkingplansmg@gmail.com

ಇ-ಟೆಂಡರ್ ಪ್ರಕಟಣೆ ಸಂಖ್ಯೆ: ಕಾಯೋಮೋಶಿ /ಎ2/RCCP/ಇ-ಟೆಂಡರ್/ ಸಿಆರ್-16/2026-27 ದಿನಾಂಕ: 19.06.2026.

KPPP Portal ಮುಖಾಂತರ ಇ-ಟೆಂಡರ್ ಪ್ರಕಟಣೆ

2026-27 ನೇ ಸಾಲಿನಲ್ಲಿ "Construction of RCC Pillars of Specified Dimension at the given locations along the Surveyed Notified Forests for the Purpose of Boundary Demarcation in the Divisions of Shivamogga, Bhadravathi, Sagar, Mangalore, Kundapura and Kudremukh Wildlife during the Year 2026-27",ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು KPPP Portal ಮುಖಾಂತರ ಒಟ್ಟು ಅಂದಾಜು ರೂ. 79.38 ಲಕ್ಷಗಳ ಒಟ್ಟು 36 ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕರ್ನಾಟಕ ಲೋಕೋಪಯೋಗಿ ಇಲಾಖೆಯ ಸಕ್ಷಮ ಪ್ರಾಧಿಕಾರದಿಂದ 4ನೇ ದರ್ಜೆಯ / ಮೇಲ್ಪಟ್ಟ ದರ್ಜೆಯ ಪರವಾನಗಿ ಹೊಂದಿರುವ ಆಸಕ್ತ ಅರ್ಹ ಲೋಕೋಪಯೋಗಿ ಗುತ್ತಿಗೆದಾರರು ದಿನಾಂಕ: 06.07.2026 ರ ಸಂಜೆಯೊಳಗೆ as per KPPP-Portal ಟೆಂಡರನ್ನು ಸಲ್ಲಿಸಬಹುದಾಗಿದೆ. ಇ-ಆಡಳಿತ ಕೇಂದ್ರ ಅಥವಾ ವೆಬ್ ಸೈಟ್ (https://kppp.karnataka.gov.in) ನಲ್ಲಿ ಪ್ರಕಟಿಸಿದಂತೆ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 08182-250785 ಅಥವಾ ಖುದ್ದಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/- (ಜ್ಞಾನಾನಂದ.ಎಸ್) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ, ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/105/06/417

ಪಟ್ಟಣ ಪಂಚಾಯತ ಕಾರ್ಯಾಲಯ ಮುಳಗುಂದ

ತಾ: ಜಿ: ಗದಗ

ಸಂ:ಪಪಂಮು/ತಾಂ.ವಿ./ಎಸ್.ಬಿ.ಎಂ/ಟೆಂಡರ/ವಹಿ-/2026-27 ದಿನಾಂಕ: 20-06-2026

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ
ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮೂಲಕ

ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತ ಮುಳಗುಂದ ಇವರಿಂದ ಮುಳಗುಂದ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ-**2000**ರ ಪ್ರಕಾರ **"ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್"** ಪದ್ಧತಿಯಲ್ಲಿ ಸ್ವಚ್ಛ ಭಾರತ ಮಿಷನ್ (ನಗರ) ಯೋಜನೆಯಡಿ ಇಂಡೆಂಟ್ ನಂಬರಗಳ ಸಂಖ್ಯೆಗಳು-**DMA/2026-27/SE7843/CALL-3** ನೇದ್ದರ ಕಾಮಗಾರಿಗಳ ನಿರ್ವಹಣೆಗಾಗಿ **ಕೆ.ಡಬ್ಲ್ಯೂ.1/2/3** ದಸ್ತಾವೇಜನಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಚಾಲ್ತಿ ಸಾಲಿನ ಅರ್ಹ ಏಜೇನ್ಸಿ/ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ದಾಖಲೆಗಳಿಗಾಗಿ **http://kppp.karnataka.gov.in** ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕವೇ ಟೆಂಡರ್ ಸಲ್ಲಿಸುವುದು.

1] ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 29-06-2026 ಸಂಜೆ: 16.00 ಗಂಟೆಗೆ**
2] ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 30-06-2026 ಸಂಜೆ: 16:30 ಗಂಟೆಗೆ**

ನಿಗದಿಪಡಿಸಿದ ದಿನಾಂಕಗಳು ಒಂದು ವೇಳೆ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು. ಯಾವುದೇ ತಿದ್ದುಪಡಿಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.

ಈ ಕಚೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲಾ ಕಾಮಗಾರಿ ಇ.ಎಂ.ಡಿ. ಪೂರ್ಣಗೊಳಿಸುವ ಅವಧಿ, ಗುತ್ತಿಗೆದಾರರ ದರ್ಜೆ ಹಾಗೂ ಇನ್ನಿತರ ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ ಕಚೇರಿಯ ವೆಬ್‌ಸೈಟ್ **http://www.mulagundatown.mrc.gov.in** ಹಾಗೂ ಕಚೇರಿ ವೇಳೆಯಲ್ಲಿ ಸಂಭಂಧಿಸಿದ ಶಾಖೆಯಲ್ಲಿ ಮಾಹಿತಿಯನ್ನು ಪಡೆಯಬಹುದು. ಇ-ಪೋರ್ಟಲ್‌ನ ಎಲ್ಲ ಷರತ್ತುಗಳು ಅನ್ವಯಿಸುತ್ತವೆ. ಹಾಗೂ ಟೆಂಡರ್ ಮಂಜೂರ ವ ನಾಮಂಜೂರ ಮಾಡುವ ಅಧಿಕಾರವನ್ನು ಪಟ್ಟಣ ಪಂಚಾಯತ ಕಾಯ್ದಿರಿಸಿಕೊಂಡಿದೆ.

ಸಹಿ/-
(ಶ್ರೀ.ಮಂಜುನಾಥ ಪಿ ಗುಳೇದ)
ಮುಖ್ಯಾಧಿಕಾರಿ
ಪಟ್ಟಣ ಪಂಚಾಯತ ಮುಳಗುಂದ

ಸಹಿ/-
(ಶ್ರೀನಿವಾಸಮೂರ್ತಿ ಕುಲಕರ್ಣಿ)
ಆಡಳಿತಾಧಿಕಾರಿಗಳು
ಪಟ್ಟಣ ಪಂಚಾಯತ ಮುಳಗುಂದ
ತಹಶೀಲ್ದಾರ ಹಾಗೂ ತಾಲೂಕಾ ದಂಡಾಧಿಕಾರಿಗಳು ಗದಗ

ವಾ.ಸಾ.ಸಂ.ಇ/ಗದಗ/133/ದೇಶಪಾಂಡೆಪಬ್ಲಿಸಿಟಿ/2026-27

ಮಂಗಳವಾರದ ಪಂದ್ಯಗಳು

ಪೋರ್ಚುಗಲ್-ಉಜ್ಬೇಕಿಸ್ತಾನ, ರಾತ್ರಿ 10.30

ಇಂಗ್ಲೆಂಡ್-ಘಾನಾ, ಮಧ್ಯರಾತ್ರಿ 1.30

ಪನಾಮ-ಕ್ರೊವೇಶಿಯಾ, ಬುಧವಾರ ಬೆ.4.30

ಕೊಲಂಬಿಯಾ-ಡಿಆರ್ ಕಾಂಗೊ, ಬುಧವಾರ ಬೆಳಗ್ಗೆ 7.30

ಉರಗ್ವೆ ವಿರುದ್ಧ 2-2 ಡ್ರಾ ಸಾಧನೆ | ನಾಕೌಟ್‌ಗಿನ್ನು ಒಂದೇ ಮೆಟ್ಟಿಲು

ಅಬ್ಬಬ್ಬಾ ಕೇಪ್ ವೆರ್ದೆ

• **ಮಯಾಮಿ ಗಾರ್ಡನ್ಸ್:** ಕೇಪ್ ವೆರ್ದೆ ತನ್ನ ಚೊಚ್ಚಲ ವಿಶ್ವಕಪ್‌ನಲ್ಲಿಯೇ ದೊಡ್ಡ ಸದ್ದು ಮಾಡುತ್ತಿದ್ದು, ಎರಡು ಬಾರಿಯ ವಿಶ್ವಕಪ್ ಚಾಂಪಿಯನ್ ಉರಗ್ವೆ ವಿರುದ್ಧ 2-2 ಡ್ರಾ ಸಾಧಿಸಿತು. ಇದೇ ಪಂದ್ಯದಲ್ಲಿ ಕೇಪ್ ವೆರ್ದೆ ಚೊಚ್ಚಲ ವಿಶ್ವಕಪ್ ಗೋಲ್ ದಾಖಲಿಸಿದ ಸಾಧನೆಗೈದಿದೆ. 5.3 ಲಕ್ಷ ಜನಸಂಖ್ಯೆಯ ಪುಟ್ಟ ದೇಶವೊಂದು ದೈತ್ಯ ತಂಡಗಳಿಗೆ ಸವಾಲೊಡ್ಡಿ ಅಬ್ಬಬ್ಬಾ ಎನ್ನಿಸಿದೆ.

ಫ್ರೀ ಕಿಕ್ ಪಡೆದಿದ್ದಾಗ ಕೆವಿನ್ ಪಿನಾ ಕೇಪ್ ವೆರ್ದೆ ಪರ ಮೊದಲ ವಿಶ್ವಕಪ್ ಗೋಲ್ ದಾಖಲಿಸಿದರು. ಹೆಲಿಯೊ ವರೆಲಾ ಇಕ್ವಲೈಸರ್ ಗೋಲ್ ಹೊಡೆಯುವ ಮೂಲಕ ಪಂದ್ಯದಲ್ಲಿ ಸಮಬಲ ಸಾಧಿಸಲು ನೆರವಾದರು. ಈ ಬಾರಿಯ ವಿಶ್ವಕಪ್‌ನಲ್ಲಿ ಕೇಪ್ ವೆರ್ದೆ ಅತಿ ಅಚ್ಚರಿಯ ತಂಡವಾಗಿ ಹೊರಹೊಮ್ಮಿದೆ.

ಕಳೆದ ವರ್ಷ ಅ.13ರಂದು ಎಸ್ವತಿನಿ ವಿರುದ್ಧ ಫುಟ್ಬಾಲ್ ಪಂದ್ಯ ಆಡುವುದರಿಂದ ಕೇಪ್ ವೆರ್ದೆ ಸರ್ಕಾರ ಅರ್ಧ ದಿನ ರಜೆ ಘೋಷಿಸಿತ್ತು. ಆ ಪಂದ್ಯದಲ್ಲಿ ಕೇಪ್ ವೆರ್ದೆ ತಂಡವು 3-0 ಗೋಲ್‌ಗಳ ಅಂತರದಿಂದ ಗೆದ್ದಿತ್ತು. ಅಲ್ಲಿಂದ ಕೇಪ್ ವೆರ್ದೆ ಈವರೆಗೆ ಹಿಂತಿರುಗಿ ನೋಡಿಲ್ಲ.

21ನೇ ನಿಮಿಷದಲ್ಲಿ ಪಿನಾ ಗೋಲ್ ದಾಖಲಿಸಿ ಮಹತ್ವದ ಮುನ್ನಡೆಯನ್ನು ನೀಡಿದರು. ಮೊದಲಾರ್ಧದ ಕೊನೆಯಲ್ಲಿ 44ನೇ ನಿಮಿಷದಲ್ಲಿ ಮ್ಯಾಕ್ಸಿಮಿಲಿಯಾನೊ ಮತ್ತು ಎಕ್ಸ್‌ಟ್ರಾ ಮಿನಿಟ್‌ಗಳಲ್ಲಿ (45+6) ಆಗಸ್ಟಿನ್ ಕ್ಯಾನೊಬಿ ಗೋಲ್ ದಾಖಲಿಸಿದ ಉರಗ್ವೆ ತಂಡಕ್ಕೆ 2-1 ಮುನ್ನಡೆ ಒದಗಿಸಿದರು. ಆದರೆ ದ್ವಿತೀಯಾರ್ಧ ಮೈದಾನಕ್ಕೆ ಪ್ರವೇಶಿಸಿದ ನಿಮಿಷಗಳೊಳಗೆ ಹೆಲಿಯೊ ವರೆಲಾ(61ನೇ ನಿಮಿಷ) ಐತಿಹಾಸಿಕ ಗೋಲ್ ದಾಖಲಿಸಿದರು.





ನಾಕೌಟ್‌ಗೇರಲು ಬೇಕು 2 ಅಂಕ!

ಮೊದಲ ವಿಶ್ವಕಪ್ ಪಂದ್ಯದಲ್ಲೇ ಬಲಾಢ್ಯ ಸ್ಪೇನ್ ವಿರುದ್ಧ ಸಮಬಲದ ಹೋರಾಟ ಪ್ರದರ್ಶಿಸಿದ್ದ ತಂಡವು ಎರಡನೇ ಡ್ರಾ ಫಲಿತಾಂಶ ಸಾಧಿಸಿತು. ಇದರೊಂದಿಗೆ ಕೇಪ್ ವೆರ್ದೆ 2 ಅಂಕಗಳನ್ನು ಸಂಪಾದಿಸಿದ್ದು, ನಾಕೌಟ್‌ಗೇರಲು 2 ಅಂಕಗಳ ಅಗತ್ಯವಿದೆ. ಎಚ್ ಗುಂಪಿನ ತನ್ನ ಕೊನೆಯ ಪಂದ್ಯದಲ್ಲಿ ಸ್ಪೇನ್ ಎದುರು ಹೀನಾಯ ಸೋಲುಂಡ ಸೌದಿ ಅರೇಬಿಯಾವನ್ನು ಕೇಪ್ ವೆರ್ದೆ ಶುಕ್ರವಾರ ಎದುರಿಸಲಿದೆ. ಸೌದಿ ವಿರುದ್ಧವೂ ಆಕ್ರಮಣಕಾರಿ ಆಟ ತೋರಿಸಿದರೆ ನಾಕೌಟ್ ಪ್ರವೇಶಿಸುವುದು ಖಚಿತ. ಮೊದಲ ವಿಶ್ವಕಪ್ ಆಡುತ್ತಿರುವ ಕೇಪ್ ವೆರ್ದೆ ಈವರೆಗೆ ಸೋತಿಲ್ಲ. ಇನ್ನೊಂದು ಅಚ್ಚರಿಯ ಫಲಿತಾಂಶ ಕಾಣುವ ಸಾಧ್ಯತೆಯಿದೆ.

ಗೋಲ್‌ಗಳ ವಿವರ

- 21ನೇ ನಿಮಿಷ - ಕೆವಿನ್ ಪಿನಾ (ಕೇಪ್ ವೆರ್ದೆ)
- 44ನೇ ನಿಮಿಷ-ಮ್ಯಾಕ್ಸಿಮಿಲಿಯಾನೊ ಅರೌಜೊ (ಉರಗ್ವೆ)
- 45+6 ನಿಮಿಷ - ಆಗಸ್ಟಿನ್ ಕ್ಯಾನೊಬಿ (ಉರಗ್ವೆ)
- 61ನೇ ನಿಮಿಷ - ಹೆಲಿಯೊ ವರೆಲಾ (ಕೇಪ್ ವೆರ್ದೆ)

ಈ ಸಲ ಈಜಿಪ್ಟ್ ಗೆಲ್ಲಿಸಿದ ಸಲಾಹ್



ನ್ಯೂಜಿಲೆಂಡ್ ಎದುರು 3-1 ಗೆಲುವು, ವಿಶ್ವಕಪ್‌ನಲ್ಲಿ ಚೊಚ್ಚಲ ಜಯ

• **ವ್ಯಾಂಕೊವರ್:** ಮೊಹಮ್ಮದ್ ಸಲಾಹ್ ಗೋಲ್ ನೆರವಿನಿಂದ ಈಜಿಪ್ಟ್ ಇದೇ ಮೊದಲ ಸಲ ವಿಶ್ವಕಪ್ ಪಂದ್ಯವೊಂದನ್ನು ಗೆದ್ದ ಸಾಧನೆಗೈದಿದೆ. ನ್ಯೂಜಿಲೆಂಡ್ ವಿರುದ್ಧ ಸಲಾಹ್ ಸ್ಕೋರ್ ಮಾಡಿದ್ದು, ಈಜಿಪ್ಟ್ ಮಹತ್ವದ 2-1 ಗೋಲ್‌ಗಳ ಮುನ್ನಡೆಯನ್ನು ಪಡೆದಿತ್ತು. ಪಂದ್ಯದ 67ನೇ ನಿಮಿಷದಲ್ಲಿ ಸಲಾಹ್ ತಮ್ಮ 68ನೇ ಅಂತಾರಾಷ್ಟ್ರೀಯ ಗೋಲ್ ದಾಖಲಿಸಿದ್ದರು. ಈ ಗೆಲುವಿನೊಂದಿಗೆ ಈಜಿಪ್ಟ್ ಜಿ ಗುಂಪಿನ ಅಗ್ರಸ್ಥಾನಕ್ಕೇರಿದೆ. ಶುಕ್ರವಾರ ಇರಾನ್ ತಂಡವನ್ನು ಈಜಿಪ್ಟ್ ಎದುರಿಸಲಿದೆ. ಇರಾನ್ ವಿರುದ್ಧ ಡ್ರಾ ಸಾಧಿಸಿದರೆ ಈಜಿಪ್ಟ್ ನಾಕೌಟ್ ಪ್ರವೇಶಿಸುವ ಅವಕಾಶವನ್ನು ಹೊಂದಿದೆ.

ನಾಲ್ಕು ವರ್ಷಗಳ ಹಿಂದೆ ಕತಾರ್‌ನಲ್ಲಿ ನಡೆದ ವಿಶ್ವಕಪ್‌ಗೆ ಈಜಿಪ್ಟ್ ತಂಡ ಅರ್ಹತೆ ಸಂಪಾದಿಸುವಲ್ಲಿ ವಿಫಲವಾಗಿತ್ತು. 2018ರ ರಷ್ಯಾ ವಿಶ್ವಕಪ್‌ನಲ್ಲಿ ಸಲಾಹ್ ಅವಳಿ ಗೋಲ್‌ಗಳನ್ನು ಹೊಡೆದಿದ್ದರು. ಆದರೆ ಈಜಿಪ್ಟ್ ಹೊರಬಿದ್ದಿತ್ತು. 15ನೇ ನಿಮಿಷದಲ್ಲಿ ಫಿನ್ ಸರ್ಮನ್ ಹೆಡ್ಡರ್ ಹೊಡೆದಿದ್ದರು. 58ನೇ ನಿಮಿಷದಲ್ಲಿ ಈಜಿಪ್ಟ್ ಪರ ಇಕ್ವಲೈಸರ್ ಗೋಲ್ ಹೊಡೆದ ಜಿಕೊ ಅಭಿಮಾನಿಗಳತ್ತ ಕೈ ತೋರಿಸಿ ಸಂಭ್ರಮಿಸಿದರು. ಜಿಕೊ ಅವರಿಂದ ಪಾಸ್ ಪಡೆದ ಸಲಾಹ್ 67ನೇ ನಿಮಿಷದಲ್ಲಿ ಗೋಲ್ ದಾಖಲಿಸಿದ್ದರು. ಟ್ರೆಜೆಗೆಟ್ ಡೈವಿಂಗ್ ಹೆಡ್ಡರ್‌ನಿಂದ ಈಜಿಪ್ಟ್ ಗೆಲುವಿನ ಅಂತರವನ್ನು ಹೆಚ್ಚಿಸಿದರು.

ಗೋಲ್‌ಗಳ ವಿವರ

- 15ನೇ ನಿಮಿಷ - ಫಿನ್ ಸರ್ಮನ್ (ನ್ಯೂಜಿಲೆಂಡ್)
- 58ನೇ ನಿಮಿಷ - ಮೊಸ್ತಫಾ ಜಿಕೊ (ಈಜಿಪ್ಟ್)
- 67ನೇ ನಿಮಿಷ - ಮೊಹಮ್ಮದ್ ಸಲಾಹ್ (ಈಜಿಪ್ಟ್)
- 82ನೇ ನಿಮಿಷ - ಟ್ರೆಜೆಗೆಟ್ (ಈಜಿಪ್ಟ್)

ರಾಷ್ಟ್ರೀಯ ತಂಡಕ್ಕೆ ನನ್ನ ಅತ್ಯುತ್ತಮ ಪ್ರದರ್ಶನ ನೀಡುತ್ತಾ ಬಂದಿದ್ದೇನೆ. ಇಂದು ವಿಶೇಷವಾದ ದಿನ. ವಿಶ್ವಕಪ್‌ನಲ್ಲಿ ಇದು ನಮ್ಮ ಮೊದಲ ಗೆಲುವು.
■ ಮೊಹಮ್ಮದ್ ಸಲಾಹ್, ಈಜಿಪ್ಟ್ ತಾರೆ

ಸ್ಪೇನ್ ಗೆಲುವಿನ ಕಂಬ್ಯಾಕ್ | ಸೌದಿ ವಿರುದ್ಧ 4-0 ಗೆಲುವು

ಯಮಾಲ್ ಗೋಲ್, ಸ್ಪೇನ್ ಕಮಾಲ್

• **ಅಟ್ಲಾಂಟ(ಅಮೆರಿಕ):** ವಿಶ್ವ ಫುಟ್ಬಾಲ್‌ನ ಟೀನೇಜ್ ಸೂಪರ್‌ಸ್ಟಾರ್ ಲಮೀನ್ ಯಮಾಲ್ 10ನೇ ನಿಮಿಷದಲ್ಲಿಯೇ ಗೋಲ್ ದಾಖಲಿಸುವ ಮೂಲಕ ಸ್ಪೇನ್ ತಂಡಕ್ಕೆ ಭರ್ಜರಿ ಆರಂಭ ಒದಗಿಸಿಕೊಟ್ಟರು. ಇದು ಯಮಾಲ್ ಅವರ ಚೊಚ್ಚಲ ವಿಶ್ವಕಪ್ ಗೋಲ್ ಆಗಿತ್ತು. 2026ರ ವಿಶ್ವಕಪ್‌ನಲ್ಲಿ ಸ್ಪೇನ್ 4-0 ಜಯ ಸಾಧಿಸಿದರೆ, ಸೌದಿ ಅರೇಬಿಯಾ ಹೀನಾಯ ಸೋಲುಂಡಿತು. ತನ್ನ ಹಿಂದಿನ ಪಂದ್ಯದಲ್ಲಿ ಕೇಪ್ ವೆರ್ದೆ ಎದುರು ಗೋಲ್‌ರಹಿತ ಡ್ರಾ ಕಂಡು ಕಳೆಗುಂದಿದ್ದ ಸ್ಪೇನ್, ಈ ಪಂದ್ಯದಲ್ಲಿ ತನ್ನ ನೈಜ ಆಟದೊಂದಿಗೆ ಲಯ ಕಂಡುಕೊಂಡಿದೆ. ಒಯಾರ್ಜಬಲ್ ಸ್ಪೇನ್ ಪರ ಅವಳಿ ಗೋಲ್ ದಾಖಲಿಸಿದರು. 49ನೇ ನಿಮಿಷದಲ್ಲಿ ಕುಕುರೆಲ್ಲಾ ಕಾರ್ನರ್‌ನಿಂದ ಹೊಡೆದ ಚೆಂಡನ್ನು ಗೋಲ್‌ಕೀಪರ್ ತಡೆದರೂ ಡಿಫೆಂಡರ್ ಹಸನ್‌ಗೆ ಬಡಿದ ಚೆಂಡು ನೆಟ್‌ಗೆ ಬಿದ್ದಿದ್ದು, ಸೌದಿ ದುರಾದೃಷ್ಟವನ್ನು ತೋರಿಸಿತು. ಈಗಾಗಲೇ ಫುಟ್ಬಾಲ್ ತಾರೆಯರಾದ ಲಿಯೊನೆಲ್ ಮೆಸ್ಸಿ, ಕಿಲಿಯನ್ ಎಂಬಾಪ್ಪೆ, ಎರ್ಲಿಂಗ್ ಹಾಲೆಂಡ್ ಮತ್ತು ಹ್ಯಾರಿ ಕೇನ್ ಗೋಲ್ ಬೇಟೆ ಆರಂಭಿಸಿದ್ದು, ಇವರ ಸಾಲಿಗೆ ಯಮಾಲ್ ಸೇರಿಕೊಂಡಿದ್ದಾರೆ. ಹಿಂದಿನ ಪಂದ್ಯದಲ್ಲಿ ಬದಲಿ ಆಟಗಾರನಾಗಿ ಮೈದಾನಕ್ಕಿಳಿದಿದ್ದ ಯಮಾಲ್ ಕಮಾಲ್ ಮಾಡಿರಲಿಲ್ಲ.



ಗೋಲ್‌ಗಳ ವಿವರ

- 10ನೇ ನಿಮಿಷ - ಲಮೀನ್ ಯಮಾಲ್ (ಸ್ಪೇನ್)
- 21ನೇ ನಿಮಿಷ - ಮಿಕೆಲ್ ಒಯಾರ್ಜಬಲ್ (ಸ್ಪೇನ್)
- 24ನೇ ನಿಮಿಷ - ಮಿಕೆಲ್ ಒಯಾರ್ಜಬಲ್ (ಸ್ಪೇನ್)
- 49ನೇ ನಿಮಿಷ - ಹಸ್ಸನ್ ಅಲ್-ತಂಬಾಕ್ತಿ (ಒವ್ನ್ ಗೋಲ್, ಸೌದಿ ಅರೇಬಿಯಾ)

ಕಿರುಸುದ್ದಿ

ಪಾಂಡ್ಯಗೆ ರಾಯಲ್ ಸ್ವಾಗತ?

• **ಮುಂಬೈ:** ಕಳೆದ ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್ ನಾಯಕರಾಗಿದ್ದ ಹಾರ್ದಿಕ್ ಪಾಂಡ್ಯ ಫ್ರಾಂಚೈಸಿ ತೊರೆದು ಚೆನ್ನೈ ಸೂಪರ್ ಕಿಂಗ್ಸ್ ಸೇರುವ ಸಾಧ್ಯತೆಯಿದೆ ಎಂಬ ಸುದ್ದಿ ಕೇಳಿಬಂದಿತ್ತು. ಆದರೆ ಇದೀಗ ರಾಜಸ್ಥಾನ್ ಅವರಿಗೆ ರಾಯಲ್ ಸ್ವಾಗತ ನೀಡುವ ಸಾಧ್ಯತೆಯಿದೆ ಎನ್ನಲಾಗುತ್ತಿದೆ. ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರನ್ನು ಆರಂಭಿಕ ಬ್ಯಾಟರ್ ಯಶಸ್ವಿ ಜೈಸ್ವಾಲ್ ಬದಲಿಗೆ ವಿನಿಮಯ ಮಾಡಿಕೊಳ್ಳಲು ಮುಂಬೈ ಇಂಡಿಯನ್ಸ್ ಮತ್ತು ರಾಜಸ್ಥಾನ ರಾಯಲ್ಸ್ ನಡುವೆ ಮಾತುಕತೆ ನಡೆಯುತ್ತಿದೆ ಎಂದು ವರದಿಯಾಗಿದೆ.



ಮುಂಬೈ ಪರ ದೇಶೀಯ ಕ್ರಿಕೆಟ್ ಆಡುವ ಜೈಸ್ವಾಲ್ ಅವರನ್ನೇ ತಂಡದ ಆರಂಭಿಕನಾಗಿ ಮುಂದಿನ ಐಪಿಎಲ್‌ನಲ್ಲಿ ಕಣಕ್ಕಿಳಿಸಲು ಮುಂಬೈ ಚಿಂತನೆ ನಡೆಸಿದೆ. ಗುಜರಾತ್ ಟೈಟಾನ್ಸ್‌ಗೆ ಚೊಚ್ಚಲ ಐಪಿಎಲ್ ಟ್ರೋಫಿ ಗೆಲ್ಲಿಸಿದ್ದ ಹಾರ್ದಿಕ್ ಅವರನ್ನು ಮುಂಬೈ 2024ರಲ್ಲಿ ಪುನಃ ಕರೆಸಿಕೊಂಡಿತ್ತು. ಹಾರ್ದಿಕ್ ಹಾಗೂ ಮುಂಬೈ ತಂಡದ ಆಟಗಾರರು, ಟೀಮ್ ಮ್ಯಾನೇಜ್‌ಮೆಂಟ್ ಮಧ್ಯೆ ಭಿನ್ನಾಭಿಪ್ರಾಯ ಮೂಡಿರುವ ಕಾರಣ ಹಾರ್ದಿಕ್ ಸ್ವತಃ ಫ್ರಾಂಚೈಸಿ ತೊರೆಯಲು ಬಯಸಿದ್ದಾರೆ ಎಂಬ ವದಂತಿಗಳು ಐಪಿಎಲ್ ಕೊನೆಯಲ್ಲಿ ಹಬ್ಬಿದ್ದವು. ಕಳೆದ ಆವೃತ್ತಿಯಲ್ಲಿ ಬ್ಯಾಟಿಂಗ್‌ನಲ್ಲೂ ಮಿಂಚದ ಪಾಂಡ್ಯ, ನಾಯಕತ್ವದಲ್ಲೂ ವೈಫಲ್ಯ ಕಂಡಿದ್ದರು. ಇದೇ ರೀತಿ ಲಖನೌ ಸೂಪರ್ ಜೈಂಟ್ಸ್ ನಾಯಕತ್ವಕ್ಕೆ ರಾಜೀನಾಮೆ ನೀಡಿರುವ ರಿಷಭ್ ಪಂತ್ ಬದಲಿಗೆ ಕುಲದೀಪ್ ಯಾದವ್‌ರನ್ನು ವಿನಿಮಯ ಮಾಡಿಕೊಳ್ಳಲು ಲಖನೌ ಫ್ರಾಂಚೈಸಿ ದಿಲ್ಲಿ ಕ್ಯಾಪಿಟಲ್ಸ್ ಜತೆ ಮಾತುಕತೆ ನಡೆಸಿದೆ ಎಂದು ಕಳೆದ ವಾರ ವರದಿಯಾಗಿತ್ತು.

ನಿಧಾನಗತಿ ಬೌಲಿಂಗ್‌ಗಾಗಿ ಇಂಗ್ಲೆಂಡ್ 12 ಅಂಕ ಕಡಿತ!

• **ಲಂಡನ್:** ನ್ಯೂಜಿಲೆಂಡ್ ವಿರುದ್ಧದ ತವರಿನ ಟೆಸ್ಟ್ ಸರಣಿಯಲ್ಲಿ ನಿಧಾನಗತಿ ಬೌಲಿಂಗ್ ನಡೆಸಿದ ಇಂಗ್ಲೆಂಡ್ ತಂಡಕ್ಕೆ ಶೇ.50 ಪಂದ್ಯ ವೇತನ ದಂಡವನ್ನು ಹಾಗೂ 12 ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಅಂಕಗಳ ಕಡಿತದ ಶಿಕ್ಷೆಯನ್ನು ಐಸಿಸಿ ವಿಧಿಸಿದೆ. ಇದರಿಂದಾಗಿ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪ್ರವೇಶಿಸಬೇಕೆಂಬ ಇಂಗ್ಲೆಂಡ್ ಕನಸು ನುಚ್ಚುನೂರಾಗಿದೆ. ನ್ಯೂಜಿಲೆಂಡ್ ವಿರುದ್ಧದ 3 ಪಂದ್ಯಗಳ ಟೆಸ್ಟ್ ಸರಣಿ ಸಮಬಲಗೊಂಡ ಹತಾಶೆಯಲ್ಲಿದ್ದ ಇಂಗ್ಲೆಂಡ್‌ಗೆ ಐಸಿಸಿ ವಿಧಿಸಿದ ದಂಡ ಶಿಕ್ಷೆಯು ಗಾಯದ ಮೇಲೆ ಬರೆ ಎಳೆದಂತಾಗಿದೆ. 12 ಓವರ್‌ಗಳಷ್ಟು ಕಡಿಮೆ ಎಸೆದಿರುವ ಕಾರಣಕ್ಕೆ ಇಂಗ್ಲೆಂಡ್ ತಂಡಕ್ಕೆ ದಂಡ ವಿಧಿಸಲಾಗಿದೆ. ಇದರಿಂದ ಇಂಗ್ಲೆಂಡ್ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಅಂಕ 37.72ರಿಂದ 26.38ಕ್ಕೆ ಇಳಿಕೆಯಾಗಿದೆ.

ಇಂದಿನಿಂದ ಯುಎಸ್ ಓಪನ್

• **ಫುಲರ್ಟನ್:** ಅಮೆರಿಕದಲ್ಲಿ ಮಂಗಳವಾರ ಆರಂಭವಾಗಲಿರುವ ಯುಎಸ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾರತದ ಲಕ್ಷ್ಯ ಸೇನ್ ಮತ್ತು ಟೀನೇಜ್ ತಾರೆ ತನ್ವಿ ಶರ್ಮಾ ಸಿಂಗಲ್ಸ್ ವಿಭಾಗದಲ್ಲಿ ಸ್ಪರ್ಧಿಸಲಿದ್ದಾರೆ. ಪುರುಷರ ಸಿಂಗಲ್ಸ್‌ನಲ್ಲಿ 14ನೇ ಶ್ರೇಯಾಂಕದ ಲಕ್ಷ್ಯ ಸೇನ್ ಮೊದಲ ಸುತ್ತಿನಲ್ಲಿ ಬೆಲ್ಜಿಯಂನ ಜೂಲಿಯನ್‌ರನ್ನು ಎದುರಿಸಲಿದ್ದಾರೆ. ಮಹಿಳಾ ಸಿಂಗಲ್ಸ್‌ನಲ್ಲಿ 17ರ ಹರೆಯದ ತನ್ವಿ ಶರ್ಮಾ ಜರ್ಮನಿಯ ಯೊವನ್ನೆ ಲಿ ಅವರನ್ನು ಎದುರಿಸಲಿದ್ದಾರೆ.

44ನೇ ವಯಸ್ಸಿನಲ್ಲಿ ಮರಳಿದ ಸೆರೆನಾ



• **ಲಂಡನ್:** 23 ಗ್ರ್ಯಾಂಡ್ ಸ್ಲಾಮ್ ಸಿಂಗಲ್ಸ್ ಪ್ರಶಸ್ತಿಗಳ ವಿಜೇತೆ, ಅಮೆರಿಕದ ಟೆನಿಸ್ ದಿಗ್ಗಜೆ ಸೆರೆನಾ ವಿಲಿಯಮ್ಸ್ ಸುಮಾರು ನಾಲ್ಕು ವರ್ಷಗಳ ವಿರಾಮದ ಬಳಿಕ ವೃತ್ತಿಪರ ಟೆನಿಸ್‌ಗೆ ಮರಳಿದ್ದು, ಇದೀಗ ವಿಂಬಲ್ಡನ್ ಸಿಂಗಲ್ಸ್ ವಿಭಾಗದಲ್ಲಿ ಸ್ಪರ್ಧಿಸಲಿದ್ದಾರೆ. ಭಾನುವಾರ ಪ್ರಕಟಿಸಿದ ಮಾಹಿತಿಯಲ್ಲಿ ವಿಂಬಲ್ಡನ್ ಚಾಂಪಿಯನ್‌ಶಿಪ್ ಆಯೋಜಕರು ಸೆರೆನಾಗೆ ಮಹಿಳೆಯರ ಸಿಂಗಲ್ಸ್ ವಿಭಾಗದ ಅಂತಿಮ ವೈಲ್ಡ್ ಕಾರ್ಡ್ ನೀಡಿರುವುದಾಗಿ ಘೋಷಿಸಿದರು. 44 ವರ್ಷದ ಸೆರೆನಾ ಸಿಂಗಲ್ಸ್ ಜೊತೆಗೆ ತಮ್ಮ ಅಕ್ಕ ವೀನಸ್ ವಿಲಿಯಮ್ಸ್ ಅವರೊಂದಿಗೆ ಡಬಲ್ಸ್ ವಿಭಾಗದಲ್ಲೂ ಸ್ಪರ್ಧಿಸಲಿದ್ದಾರೆ. 2022ರ ಯುಎಸ್ ಓಪನ್‌ನಲ್ಲಿ ಸೆರೆನಾರ ಕೊನೆಯ ಸಿಂಗಲ್ಸ್ ಆಡಿದ್ದರು. ನಂತರ ಟೆನಿಸ್‌ನಿಂದ ದೂರ ಉಳಿದಿದ್ದರು. 2023ರಲ್ಲಿ ಅವರ ಎರಡನೇ ಪುತ್ರಿ ಜನಿಸಿದ್ದರು.

ಅಗ್ರ ತಾರೆಯರ ಸವಾಲು: ಸದ್ಯ ಸೆರೆನಾಗೆ ಸಿಂಗಲ್ಸ್ ರ‍್ಯಾಂಕಿಂಗ್ ಇಲ್ಲ. ಆದ್ದರಿಂದ ಮೊದಲ ಸುತ್ತಿನಲ್ಲೇ ಹಾಲಿ ವಿಂಬಲ್ಡನ್ ಚಾಂಪಿಯನ್ ಇಗಾ ಸ್ವಿಯಾಟೆಕ್, ವಿಶ್ವ ನಂ.1 ಆರೀನಾ ಸಬಲೆಂಕಾ ಅಥವಾ ಇತರ ಅಗ್ರ ಶ್ರೇಯಾಂಕಿತೆಯರ ವಿರುದ್ಧ ಸೆಣಸುವ ಸಾಧ್ಯತೆಯಿದೆ. ವಿಂಬಲ್ಡನ್ ಸಿಂಗಲ್ಸ್ ಡ್ರಾ ಶುಕ್ರವಾರ ನಡೆಯಲಿದ್ದು, ಸೆರೆನಾರ ಮೊದಲ ಸುತ್ತಿನ ಎದುರಾಳಿ ಯಾರೆಂಬುದು ತಿಳಿಯಲಿದೆ.

ಏಳು ಗ್ರ್ಯಾಂಡ್ ಸ್ಲಾಮ್ ಗೆದ್ದಾಕೆ! : ವಿಂಬಲ್ಡನ್‌ನಲ್ಲಿ ಸೆರೆನಾ ಏಳು ಬಾರಿ (2002, 2003, 2009, 2010, 2012, 2015 ಮತ್ತು 2016) ಸಿಂಗಲ್ಸ್ ಪ್ರಶಸ್ತಿ ಗೆದ್ದಿದ್ದಾರೆ. ಜೊತೆಗೆ ವೀನಸ್ ಜೊತೆಗೂಡಿ ಆರು ವಿಂಬಲ್ಡನ್ ಡಬಲ್ಸ್ ಪ್ರಶಸ್ತಿಗಳನ್ನೂ ಜಯಿಸಿದ್ದಾರೆ. 2012ರ ಲಂಡನ್ ಒಲಿಂಪಿಕ್ಸ್ ವಿಂಬಲ್ಡನ್‌ನಲ್ಲೇ ನಡೆದ ಟೆನಿಸ್ ಸ್ಪರ್ಧೆಯಲ್ಲಿ ಸಿಂಗಲ್ಸ್ ಹಾಗೂ ಡಬಲ್ಸ್ ಎರಡರಲ್ಲೂ ಚಿನ್ನ ಗೆದ್ದಿದ್ದರು.

ಏಳು ಗೋಲ್ ತಡೆದ ಇರಾನ್ ತಡೆಗೋಡೆ ಬೈರನ್‌ವಾಂದ್



• **ಕ್ಯಾಲಿಫೋರ್ನಿಯಾ:** ಏಳು ಗೋಲ್‌ಗಳನ್ನು ತಡೆದ ಗೋಲ್‌ಕೀಪರ್ ಅಲಿರೆಜಾ ಬೈರನ್‌ವಾಂದ್ ಸಾಹಸವನ್ನು ಎಷ್ಟು ಮೆಚ್ಚಿಕೊಂಡರೂ ಸಾಲದು, ಅಕ್ಷರಶಃ ಇರಾನ್ ತಡೆಗೋಡೆಯಂತೆ ಮಿಂಚಿದರು. ಅಮೆರಿಕದಲ್ಲಿ ವಿಶ್ವಕಪ್ ಪಂದ್ಯವನ್ನಾಡಿದ ಇರಾನ್ ತನ್ನ ಆಟದಿಂದ ಮೆಚ್ಚುಗೆಗೆ ಪಾತ್ರವಾಗಿದೆ. ಜೆರೆಮಿ ಡೊಕು ಅನಾರೋಗ್ಯದಿಂದ ಪಂದ್ಯದಲ್ಲಿ ಆಡದ ಕಾರಣ ಬೆಲ್ಜಿಯಂ ಪರ 10 ಆಟಗಾರರಷ್ಟೇ ಮೈದಾನಕ್ಕೆ ಇಳಿದಿದ್ದರು. ಏಳು ಗೋಲ್‌ಗಳನ್ನು ಹೊಡೆಯಲು ಬೆಲ್ಜಿಯಂ ಪ್ರಯತ್ನಿಸಿತಾದರೂ ಯಶಸ್ವಿಯಾಗಲಿಲ್ಲ. 66ನೇ ನಿಮಿಷದಲ್ಲಿ ಇರಾನ್ ಆಟಗಾರ ಮೆಹದಿ ತರೆಮಿ ತಡೆಯುವ ಪ್ರಯತ್ನದಲ್ಲಿ ಫೌಲ್ ಮಾಡಿದ ಬೆಲ್ಜಿಯಂ ಡಿಫೆಂಡರ್ ರೆಫರಿಯಿಂದ ರೆಡ್ ಕಾರ್ಡ್ ಪಡೆದರು. ಆದರೂ ಬೆಲ್ಜಿಯಂ ಸಂಪೂರ್ಣ ಆಕ್ರಮಣಕಾರಿ ಆಟವನ್ನು ಪ್ರದರ್ಶಿಸಿತು. ಪ್ರತಿ ಕ್ಷಣವೂ ಬೆಲ್ಜಿಯಂ ಆಟಗಾರರು ಗೋಲ್ ದಾಖಲಿಸಲು ಅವಕಾಶ ಹುಡುಕುತ್ತಿದ್ದರು. ಆದರೆ ಇರಾನ್ ತಂಡವು ಹೆಚ್ಚಿನ ಅವಕಾಶ ಸೃಷ್ಟಿಸುವಲ್ಲಿ ವಿಫಲವಾಗಿದ್ದು, ಯಾವುದೇ ಗೋಲ್ ದಾಖಲಿಸಲಿಲ್ಲ. ಇದು ಇರಾನ್ ಗೋಲಿ ಬೈರನ್‌ವಾಂದ್ ಮೇಲೆ ಒತ್ತಡ ಹೇರಿತು. ಆದರೆ ಒತ್ತಡದಲ್ಲೂ ಬೆಲ್ಜಿಯಂನ ಎಲ್ಲಾ ಪ್ರಯತ್ನಗಳನ್ನೂ ಬೈರನ್‌ವಾಂದ್ ತಡೆದರು. ಈ ವಿಶ್ವಕಪ್‌ನಲ್ಲಿ ಬೆಲ್ಜಿಯಂ ಇನ್ನೂ ಗೋಲ್ ಖಾತೆ ತೆರೆದಿಲ್ಲ. 73ನೇ ನಿಮಿಷದಲ್ಲಿ ಅಚ್ಚರಿಯ ರೀತಿ ಬೆಲ್ಜಿಯಂ ಲೈನ್‌ಅಪ್ ಸೇರಿದ ರೊಮೆಲು ಲುಕಾಕು ಗೋಲ್ ಹೊಡೆದು ಅಚ್ಚರಿ ಮೂಡಿಸಲಿಲ್ಲ.

ಬೆಲ್ಜಿಯಂ ಎದುರು ಗೋಲ್‌ಲೆಸ್ ಡ್ರಾ ಸಾಧಿಸಿದ ಇರಾನ್

ತಾಹ, ಗೌತಮ್ ಗರ್ಜನೆ, ಗೆದ್ದ ಟೈಗರ್ಸ್

ಮೈಸೂರು: ಮೊಹಮ್ಮದ್ ತಾಹ ಮತ್ತು ನಾಯಕ ಅನೀಶ್ವರ್ ಗೌತಮ್ ಅವರ ಸ್ಫೋಟಕ ಅರ್ಧ ಶತಕಗಳ ನೆರವಿನಿಂದ ಮೈಸೂರು ವಾರಿಯರ್ಸ್ ವಿರುದ್ಧ ಹುಬ್ಬಳ್ಳಿ ಟೈಗರ್ಸ್ 7 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. 162 ರನ್ ಸವಾಲನ್ನು ಬೆನ್ನತ್ತಿದ ಹುಬ್ಬಳ್ಳಿ ಟೈಗರ್ಸ್ 17.3 ಓವರ್‌ಗಳಲ್ಲೇ ಗುರಿಮುಟ್ಟಿತು. ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ವಾರಿಯರ್ಸ್ ಪರ ಆರಂಭಿಕ ಕಾರ್ತಿಕ್(35), ರಿತೇಶ್ ಭಟ್ಕಳ್ (46) ಮತ್ತು ಕಾರ್ತಿಕೇಯ (27) ಕೊಡುಗೆ ನೀಡಿದ್ದು ಬಿಟ್ಟರೆ ಇತರರು ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ. ಮೈಸೂರಿನ ಮಧ್ಯಮ ಕ್ರಮಾಂಕ ಮತ್ತು ಕೆಳಕ್ರಮಾಂಕ ಸಂಪೂರ್ಣ ವೈಫಲ್ಯ ಕಂಡಿತು.




ಸಂಕ್ಷಿಪ್ತ ಸ್ಕೋರ್

ಮೈಸೂರು ವಾರಿಯರ್ಸ್ 161/10 (19.2): ಕಾರ್ತಿಕ್ 35(27), ಭಟ್ಕಳ್ 46(28), ಕಾರ್ತಿಕೇಯ 27(19), ಹಾರ್ದಿಕ್ 25ಕ್ಕೆ 3, ಕುಮಾರ್ 14ಕ್ಕೆ 3.

ಹುಬ್ಬಳ್ಳಿ ಟೈಗರ್ಸ್ 162/3 (17.3): ತಾಹ 57(38), ಅನೀಶ್ವರ್ 60(41)★, ಮಯಾಂಕ್ 19(11), ಬಜಾಜ್ 27ಕ್ಕೆ 2, ಭಟ್ಕಳ್ 24ಕ್ಕೆ 1.

ಪದಬಂಧ

» ರಾಜಾ ಸಂಗಮೇಶ ಹಿರೇಮಠ



6023

ಎಡದಿಂದ ಬಲಕ್ಕೆ

1.ಆನಂದವಾದಾಗ ಬರುವ ಕಣ್ಣೀರು (3)
3.ಎಡಗಡೆಯ ವಿರುದ್ಧ ಬದಿ (4)
5.ರಾಮನ ಬಿಲ್ಲಿನ ಕಡೆಯಲ್ಲಿ ಜುಲ್ಮಾನೆಯಿದೆ (3)
7.ಸುತನ ನಡುವೆ ಬುದ್ಧನ ಒಂದು ಹೆಸರಿದೆ (3)
8.ಇದ್ದಕ್ಕಿದ್ದಂತೆ ಕಾಣದಂತಾಗುವುದು ತಿರುಗಿದೆ (2)
10.ನಡುಗಡೇ ಧರಿಸಿದ ಆಭರಣ (2)
12.ಬಣ್ಣಗೆಡುವುದು-ಕಳಾಹೀನವಾಗುವುದು (3)
13.ಪಾಯದ ನಡುವೆ ಕುಡಿಯುವ ದ್ರವಪದಾರ್ಥವಿದೆ (3)
15.ಮುತ್ತು-ರತ್ನಗಳ ಸಂಗ್ರಹವಿರುವ ಸ್ಥಳ (4)
16.ಪ್ರಕೃತಿ-ಸಮೃದ್ಧಿಯ ಸಂಕೇತದ ಬಣ್ಣ (3)

ಮೇಲಿನಿಂದ ಕೆಳಕ್ಕೆ

1.ವಸಂತನ ಸ್ನೇಹಿತ-ಮನ್ಮಥ (5)
2.ಮೃದುವಾದುದು ತಲೆಕೆಳಗಾಗಿದೆ (3)
3.ಕಲಕಿದ,ಸ್ವಚ್ಛವಲ್ಲದ ನೀರು (3)
4.ಗಗನ-ತಟ್ಟಿ ಒಳಗೊಂಡ ಶೂರತನವಿದು (5)
6.ಇದು ಹಲ್ಲುಜ್ಜಲು ಬಳಸುವ ಪುಡಿ (4)
7.ಮೋಹಕನಗೆಯ ನಟಿ ಕಡೆಯಲ್ಲಿ ದೀರ್ಘವಾಗಿದ್ದಾಳೆ (4)
9. ಮಾರನ ನಡುವೆ ಫಲರಾಜವೃಕ್ಷವಿದೆ (5)
11.ಸೌಳಿನಿಂದ ಕೂಡಿದ ಜಲ (5)
13.ತಿಳಿವಳಿಕೆ ಕಡಿಮೆ ಇರುವವನು (3)
14.ತಾರುಣ್ಯವಿಲ್ಲಿ ತಲೆಕೆಳಗಾಗಿದೆ (3)

6022 ಉತ್ತರ

ಎಡದಿಂದ ಬಲಕ್ಕೆ:
1.ಕಡಗ 6.ಗುರುಶಿಷ್ಯರು
7.ಗಿಡುಗ 8.ಕರಾರು
9.ತಿಕ್ತ 10.ಚಿನ್ನ
11.ಪಟ್ಟಕ 12.ಕರಂಡ
15.ಸಮಕಾಲೀನ
17.ಸುನೇರಿ

ಮೇಲಿನಿಂದ ಕೆಳಕ್ಕೆ
: 1.ಕನಕಾಂಗಿ
2.ಗತಾನುಗತಿಕ
3.ಅಂಗುಲ 4.ಕಾಶಿ
5.ನಾರುಬೇರು
8.ಕನ್ನಡಕಸ್ತೂರಿ
11.ಪರಿಸರ 13.ಕತ್ತರಿಸು
14.ಜನಕ 16.ಕಾವ್ಯ

ಜು.3ರವರೆಗೆ ಜಾಲಹಳ್ಳಿಯ ವಾಯುಪಡೆ ನಿಲ್ದಾಣದಲ್ಲಿ 7ನೇ ಆವೃತ್ತಿ | ಈ ಬಾರಿ 16 ತಂಡಗಳ ಸ್ಪರ್ಧೆ

ಇಂದಿನಿಂದ ಮಾರ್ಷಲ್ ಅರ್ಜುನ್ ಸಿಂಗ್ ಸ್ಮರಣಾರ್ಥ ಹಾಕಿ

• **ಬೆಂಗಳೂರು:** ಮಾರ್ಷಲ್ ಆಫ್ ದಿ ಏರ್‌ಫೋರ್ಸ್ ಅರ್ಜನ್ ಸಿಂಗ್ ಸ್ಮಾರಕ ಹಾಕಿ ಟೂರ್ನಮೆಂಟ್ 2026ರ ಏಳನೇ ಆವೃತ್ತಿಯು ಜೂ.23ರಿಂದ ಜು.3ರವರೆಗೆ ಬೆಂಗಳೂರಿನ ಜಾಲಹಳ್ಳಿಯ ವಾಯುಪಡೆ ನಿಲ್ದಾಣದಲ್ಲಿ ನಡೆಯಲಿದೆ.

ವಾಯುಪಡೆಯ ಉಸ್ತುವಾರಿ ಅಧಿಕಾರಿ ಏರ್ ಮಾರ್ಷಲ್ ಎಸ್. ಶಿವಕುಮಾರ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರಗಳನ್ನು ನೀಡಿದರು.

ವಾಯುಪಡೆಯ ಕ್ರೀಡಾ ನಿಯಂತ್ರಣ ಮಂಡಳಿ(ಎಫ್‌ಎಸ್‌ಸಿಬಿ) 2018ರಿಂದ ಪಂದ್ಯಾವಳಿಯನ್ನು ಆಯೋಜಿಸುತ್ತಿದೆ. ವಾಯುಪಡೆಯ ಮಾರ್ಷಲ್ ಅರ್ಜನ್ ಸಿಂಗ್ ಅವರು ಅಪ್ರತಿಮ ಹಾಕಿ ಆಟಗಾರರಾಗಿದ್ದರು. ಯುದ್ಧದಲ್ಲಿ ಮಾತ್ರವಲ್ಲದೆ, ಕ್ರೀಡಾ ಕ್ಷೇತ್ರದಲ್ಲೂ ಮುಂಚೂಣಿಯಿಂದ ಮುನ್ನಡೆಸುವ ವಾಯು ಯೋಧರಿಗೆ ಅವರು ಸ್ಫೂರ್ತಿಯಾಗಿದ್ದರು. ಭಾರತೀಯ ವಾಯುಪಡೆಯು(ಐಎಎಫ್) ವಿವಿಧ ಅಂತಾರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾರತವನ್ನು ಪ್ರತಿನಿಧಿಸುವ ಮತ್ತು ರಾಷ್ಟ್ರಕ್ಕೆ ಹಾಗೂ ಐಎಎಫ್‌ಗೆ ಪ್ರಶಸ್ತಿಗಳನ್ನು ತಂದ ಕ್ರೀಡಾಪಟುಗಳನ್ನು ನಿರಂತರವಾಗಿ ನಿರ್ಮಾಣ ಮಾಡುತ್ತಿದೆ ಎಂದು ತಿಳಿಸಿದರು.

ಈ ಪಂದ್ಯಾವಳಿಯಲ್ಲಿ ಒಟ್ಟು 16 ತಂಡಗಳು ಭಾಗವಹಿಸಲಿವೆ. ಪಂದ್ಯಗಳು ಜಾಲಹಳ್ಳಿಯ ವಾಯುಪಡೆ ನಿಲ್ದಾಣದ ಹಾಕಿ ಕ್ರೀಡಾಂಗಣದಲ್ಲಿ ನಡೆಯಲಿವೆ. ಪಂದ್ಯಗಳನ್ನು ಲೀಗ್ ಕಮ್ ನಾಕೌಟ್ ಆಧಾರದ ಮೇಲೆ ನಡೆಸಲಾಗುವುದು. ಪಂದ್ಯಾವಳಿ ವಿಜೇತ ತಂಡ 10 ಲಕ್ಷ ರೂ. ನಗದು ಬಹುಮಾನ ಪಡೆದರೆ, ರನ್ನರ್ಸ್ ಅಪ್ ತಂಡವು 8 ಲಕ್ಷ ರೂ. ಬಹುಮಾನ ಗಳಿಸಲಿದೆ. ಪ್ರತಿ ಪಂದ್ಯದ ಪಂದ್ಯಶ್ರೇಷ್ಠ ಆಟಗಾರ 25 ಸಾವಿರ ರೂ. ಮತ್ತು ಪಂದ್ಯಾವಳಿಯ ಸರಣಿಶ್ರೇಷ್ಠ ಆಟಗಾರ 50 ಸಾವಿರ ರೂ. ನಗದು ಬಹುಮಾನ ಪಡೆದುಕೊಳ್ಳಲಿದ್ದಾರೆ ಎಂದರು. ಮಂಗಳವಾರ ನಡೆಯುವ ಉದ್ಘಾಟನಾ ಸಮಾರಂಭದಲ್ಲಿ ವಾಯುಪಡೆಯ ಉಸ್ತುವಾರಿ ಅಧಿಕಾರಿ ಏರ್ ಮಾರ್ಷಲ್ ಎಸ್. ಶಿವಕುಮಾರ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಜು.3ರ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ತರಬೇತಿ ಕಮಾಂಡಿಂಗ್-ಇನ್-ಚೀಫ್ ಏರ್ ಮಾರ್ಷಲ್ ಸೀತೆಪಲ್ಲಿ ಶ್ರೀನಿವಾಸ್ ವಹಿಸಲಿದ್ದಾರೆ.



ನಗದು ಬಹುಮಾನ (ಪ್ರಶಸ್ತಿ)

- 10 ಲಕ್ಷ ರೂ. - ಚಾಂಪಿಯನ್
- 8 ಲಕ್ಷ ರೂ. - ರನ್ನರ್‌ಅಪ್
- 25,000 ರೂ. - ಪಂದ್ಯಶ್ರೇಷ್ಠ
- 50,000 ರೂ. - ಸರಣಿಶ್ರೇಷ್ಠ

ಕಿರುಸುದ್ದಿ

ವಿಹಿಂಪ ಪದಾಧಿಕಾರಿಗಳ ಆಯ್ಕೆ

ಮುಂಡರಗಿ: ವಿಶ್ವ ಹಿಂದು ಪರಿಷತ್ ತಾಲೂಕು ಅಧ್ಯಕ್ಷರಾಗಿ ಪರಶುರಾಮ ಸುಣಗಾರ, ಕಾರ್ಯದರ್ಶಿಯಾಗಿ ಗಿರೀಶ ಅಂಗಡಿ ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ.

ಮುಂಡರಗಿ ಅಂಬಾಭವಾನಿ ದೇವಸ್ಥಾನದಲ್ಲಿ ಗದಗ ಜಿಲ್ಲಾ ವಿಶ್ವ ಹಿಂದೂ ಪರಿಷತ್ ಅಧ್ಯಕ್ಷ ಮಾರುತಿ ಪವಾರ ಹಾಗೂ ಜಿಲ್ಲಾ ಕಾರ್ಯದರ್ಶಿ ಸಂಜೀವ್ ಜೋಶಿ ಇವರ ಉಪಸ್ಥಿತಿಯಲ್ಲಿ ಜರುಗಿದ ಪ್ರಖಂಡ ಬೈಠಕ್‌ನಲ್ಲಿ ಸಮಿತಿಗಳ ಜವಾಬ್ದಾರಿಯನ್ನು ಘೋಷಣೆ ಮಾಡಲಾಯಿತು. ಉಪಾಧ್ಯಕ್ಷರು (ಪುರುಷ) ರಾಘವೇಂದ್ರ ಬಾಕಳೆ, ಉಪಾಧ್ಯಕ್ಷರು (ಮಹಿಳಾ) ಸುಭದ್ರ ಆರ್.ಶಿರೋಳ, ಭಜರಂಗದಳ ಸಂಯೋಜಕ-ಅಪ್ಪಣ್ಣ ಪತ್ತಾರ್ , ದುರ್ಗಾ ವಾಹಿನಿ ಸಂಯೋಜಕ ಸೌಭಾಗ್ಯ ದೊಡ್ಡ ಭೀಮಪ್ಪ ಸಂಶಿ, ಮಾತೃ ಶಕ್ತಿ ಪ್ರಮುಖ ಪ್ರಭಾವತಿ ಹೊಸಳ್ಳಿ ಹಿರೇಮಠ್, ಸತ್ಸಂಗ್ ಪ್ರಮುಖ ರಶ್ಮಿ ರವಿಕುಮಾರ ಅಕ್ಕಸಾಲಿಗಾರ ನೇಮಕಗೊಂಡಿದ್ದಾರೆ. ಸದಸ್ಯರಾಗಿ, ರಾಘವೇಂದ್ರ ಹಾದಿಮನಿ, ಜಗದೀಶ ಪತ್ರಿಮಠ, ರಾಜಶೇಖರಗೌಡ ಪಾಟೀಲ, ಮಾತೃ ಶಕ್ತಿ ಸದಸ್ಯರಾಗಿ ಸೌಮ್ಯ ಸಂಶಿ, ಶಾರದ ಇಬ್ರಾಹಿಂಪುರ್, ಸಾವಿತ್ರಿ ಲಮಾಣಿ, ಶೋಭಾ ಜೋಶಿ, ಪ್ರೇಮ ಕಾಂಬಳೆ ಅನ್ನಪೂರ್ಣ ಕುಬಸದ, ಸಾವಿತ್ರಿ ಹೂಗಾರ್, ಮಧುರ ಅಕ್ಕಸಾಲಿ ಆಯ್ಕೆಗೊಂಡಿದ್ದಾರೆ.

ಬ್ರಹ್ಮಾನಂದರ ರಥೋತ್ಸವ

ನರಗುಂದ: ತಾಲೂಕಿನ ಭೈರನಹಟ್ಟಿ ಗ್ರಾಮದಲ್ಲಿ ಸಂಪೂರ್ಣ ಕನ್ನಡಮಯವಾದ ಬ್ರಹ್ಮಾನಂದರ ರಥೋತ್ಸವವು ನೂರಾರು ಭಕ್ತರ ಹಾಗೂ ಸಕಲ ವಾದ್ಯಮೇಳದೊಂದಿಗೆ ಸಡಗರ ಸಂಭ್ರಮದಿಂದ ಸೋಮವಾರ ಗ್ರಾಮದ ಪ್ರಮುಖ ಬೀದಿಯಲ್ಲಿ ಜರುಗಿತು.

ದೊರೆಸ್ವಾಮಿ ವಿರಕ್ತಮಠದ ಶಾಂತಲಿಂಗ ಶ್ರೀಗಳು ರಥೋತ್ಸವಕ್ಕೆ ಚಾಲನೆ ನೀಡಿದರು. ರಥಕ್ಕೆ 15 ಅಡಿ ಎತ್ತರದ ಬೃಹತ್ ರುದ್ರಾಕ್ಷಿ ಮಾಲೆ ಸೇರಿದಂತೆ ತೇರಿನ ಸುತ್ತ ಕನ್ನಡ ಭಾವುಟಗಳಿಂದ ಅಲಂಕಾರ ಮಾಡಿದ ಕನ್ನಡಾಭಿಮಾನಿಗಳು ರಥವನ್ನು ಎಳೆದು ಧನ್ಯತಾಭಾವ ಮೆರೆದರು. ಸಂಜೆ ಮಹಾಪ್ರಸಾದದ ಜೊತೆಗೆ ಭಕ್ತರು ಬ್ರಹ್ಮಾನಂದರ ಮಹಾರಾಜಕೀ ಜೈ ಎಂಬ ಜಯಘೋಷಣೆ ಮೊಳಗಿಸಿದರು. ಜಾತ್ರೆಗೆ ಬಂದ ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ದೊರೆಸ್ವಾಮಿ ವಿರಕ್ತಮಠದ ಶಾಂತವೀರೇಶ್ವರ ಪಾಠಶಾಲೆಯ ವಟುಗಳಿಂದ ಪೂಜಾವಿಧಿ-ವಿಧಾನ ನೆರವೇರಿದ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಿದರು. ಭೈರನಹಟ್ಟಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸದ್ಭಕ್ತರು ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದರು.

ಮನೆಯಲ್ಲಿ ಕೈತೋಟ ನಿರ್ಮಾಣ ತರಬೇತಿ

ಗದಗ: ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಮಹಿಳಾ ಘಟಕ ಹಾಗೂ ಅಕ್ಕನ ಬಳಗದ ಸಂಯುಕ್ತ ಆಶ್ರಯದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಜೂ.24ರಂದು ಬೆಳಗ್ಗೆ 10.30ಕ್ಕೆ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಸಭಾಂಗಣದಲ್ಲಿ ಮನೆಯ ಪ್ರಾಂಗಣದಲ್ಲಿ ಕೈತೋಟ ನಿರ್ಮಾಣ ತರಬೇತಿ ಕಾರ್ಯಕ್ರಮ ಜರುಗಲಿದೆ. ಬಾಗಲಕೋಟೆಯ ತೋಟಗಾರಿಕಾ ಮಹಾವಿದ್ಯಾಲಯದ ಮುಖ್ಯ ಪ್ರಾಧ್ಯಾಪಕರು, ವಿಶೇಷ ಅಧಿಕಾರಿ ಡಾ.ಸತೀಶ ಪಾಟೀಲ, ಬಾಗಲಕೋಟೆಯ ತೋಟಗಾರಿಕಾ ಮಹಾವಿದ್ಯಾಲಯದ ಆಹಾರ ವಿಜ್ಞಾನ ವಿಭಾಗದ ಸಹ ಪ್ರಾಧ್ಯಾಪಕಿ ಎಚ್.ಪಿ.ಹಾದಿಮನಿ ಆಗಮಿಸುವರು. ಅಧ್ಯಕ್ಷತೆ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಜ್ಯೋತಿ ದಾನಪ್ಪಗೌಡ್ರ ವಹಿಸುವರು. ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ ಅಧ್ಯಕ್ಷ ಶರಣಬಸಪ್ಪ ಗುಡಿಮನಿ, ಕಾರ್ಯದರ್ಶಿ ಚನ್ನವೀರಪ್ಪ ಹುಣಶಿಕಟ್ಟಿ, ಅಕ್ಕನ ಬಳಗದ ಟ್ರಸ್ಟ್ ಅಧ್ಯಕ್ಷೆ ಕಸ್ತೂರಿ ಹಿರೇಗೌಡ, ಅಧ್ಯಕ್ಷೆ ಜಯಶ್ರೀ ಹುಬ್ಬಳ್ಳಿ ಆಗಮಿಸುವರು. ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಮಹಿಳಾ ಘಟಕದ ಕಾರ್ಯದರ್ಶಿ ಪೂರ್ಣಿಮಾ ಆಟದ, ಖಜಾಂಚಿ ರೇಣುಕಾ ಅಮಾತ್ಯ, ಅಕ್ಕನ ಬಳಗದ ಕಾರ್ಯದರ್ಶಿ ಜಯಶ್ರೀ ಪಾಟೀಲ, ಖಜಾಂಚಿ ಶಿವಲೀಲಾ ಹಿರೇಮಠ ಉಪಸ್ಥಿತರಿರುವರು. ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಮಹಿಳಾ ಘಟಕದ ಹಾಗೂ ಅಕ್ಕನ ಬಳಗದ ಸರ್ವ ಪದಾಧಿಕಾರಿಗಳು, ಸದಸ್ಯರು ಆಗಮಿಸಬೇಕೆಂದು ಅಕ್ಕನ ಬಳಗದ ಕಾರ್ಯದರ್ಶಿ ಜಯಶ್ರೀ ಪಾಟೀಲ ತಿಳಿಸಿದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಕಡಲೆಕಾಳು	2389-6165
ಅಲಸಂದೆ	7300-7300
ಬಟಾಣಿ	4550-4550
ಹೆಸರುಕಾಳು	1669-5700
ಶೇಂಗಾ	5739-8100
ಹುರುಳಿಕಾಳು	5700-5720
ಬೆಲ್ಲ	3870-3900
ಜೋಳ	2044-4577
ಮೆಕ್ಕೆಜೋಳ	2103-2188
ಕುಸುಬೆ	4824-5045
ಸೂರ್ಯಕಾಂತಿ	1500-6669
ಗೋಧಿ	2173-2600



ನರಗುಂದ: ತಾಲೂಕಿನ ಭೈರನಹಟ್ಟಿ ಗ್ರಾಮದಲ್ಲಿ ಸಂಪೂರ್ಣ ಕನ್ನಡಮಯವಾದ ಬ್ರಹ್ಮಾನಂದರ ರಥೋತ್ಸವವು ನೂರಾರು ಭಕ್ತರ ಹಾಗೂ ಸಕಲ ವಾದ್ಯಮೇಳದೊಂದಿಗೆ ಸಡಗರ ಸಂಭ್ರಮದಿಂದ ಸೋಮವಾರ ಗ್ರಾಮದ ಪ್ರಮುಖ ಬೀದಿಯಲ್ಲಿ ಜರುಗಿತು.

ಭಕ್ತರಿಗೆ ಶೌಚಾಲಯ, ಸ್ನಾನಗೃಹ ನಿರ್ಮಿಸಿ

ಶಿರಹಟ್ಟಿ: ಪಟ್ಟಣದ ಶ್ರೀ ಜ. ಫಕೀರೇಶ್ವರರ ಮಠ ಹಾಗೂ ಹಜರತ್ ಮೆಹಬೂಬ ಸುಬಾನಿ ದರ್ಗಾಕ್ಕೆ ಬರುವ ಭಕ್ತಾದಿಗಳಿಗೆ ಹಳ್ಳದ ದಂಡೆಯ ಮೇಲೆ ಶೌಚಾಲಯ ಹಾಗೂ ಸ್ನಾಹಗೃಹ ನಿರ್ಮಿಸಿಕೊಡಬೇಕೆಂದು ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆಯಿಂದ ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದರು. ಈ ವೇಳೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜ ವಡವಿ ಮಾತನಾಡಿ, ಪಟ್ಟಣದ ಭಾವೈಕ್ಯತೆಯ ಸಂಕೇತವಾದ ಫಕೀರೇಶ್ವರ ಮಠಕ್ಕೆ ದಿನ ನಿತ್ಯ ಸಾವಿರಾರು ಭಕ್ತರು ದರ್ಶನಕ್ಕೆ ಬರುತ್ತಾರೆ. ಜಾತ್ರಾ ಮಹೋತ್ಸವದ ಸಮಯದಲ್ಲಿ ಲಕ್ಷಾಂತರ ಭಕ್ತರು ಆಗಮಿಸುತ್ತಾರೆ. ಹಜರತ್ ಮೆಹಬೂಬ ಸುಬಾನಿ ದರ್ಗಾಕ್ಕೆ ನೂರಾರು ಭಕ್ತಾದಿಗಳು ಆಗಮಿಸುವರು. ಆದುದರಿಂದ ಇವುಗಳ ಸಮೀಪ ಹಳ್ಳದ ದಂಡೆಯ ಮೇಲೆ ಸಾರ್ವಜನಿಕ ಶೌಚಾಲಯ ಹಾಗೂ ಸ್ನಾನಗೃಹ ನಿರ್ಮಾಣ ಮಾಡುವದರಿಂದ ಮಹಿಳೆಯರಿಗೆ, ವೃದ್ಧರಿಗೆ ಹಾಗೂ ಭಕ್ತಾದಿಗಳಿಗೆ ಅನುಕೂವಾಗಲಿದೆ. ಕೂಡಲೇ ಇದರ ಬಗ್ಗೆ ಗಮನಹರಿಸಿ ನಿರ್ಮಾಣ ಮಾಡಬೇಕು ಎಂದರು.

ಪಪಂ ತಾಲೂಕು ಅಧಿಕಾರಿಗಳಾದ ತಾವುಗಳು ಸಂಬಂಧಿಸಿದ ಅಧಿಕಾರಿಗಳ ಚರ್ಚಿಸಿ, ಸ್ಥಳವನ್ನು ಪರಿಶೀಲನೆ ಮಾಡಿಸಿ ಸಾರ್ವಜನಿಕರಿಗೆ ಅನುಕೂಲ ಒದಗಿಸಬೇಕು ಎಂದರು.

ಈ ವೇಳೆ ದೇವೇಂದ್ರ ಶಿಂಧೆ, ಇಮ್ರಾನ್ ಭಾವಿಕಟ್ಟಿ, ಮಲಿಕ್ ನಗಾರಿ, ತೌರ್ಸಿಫ್ ವಡ್ಡಟ್ಟಿ, ಅನ್ವರ್ ಬರದ್ವಾಡ್, ಮೋದಿನ್ ಪರಿಟ್, ಆಸಿಪ್ ಪಠಾಣ, ಮಂಜು ಭಜಂತ್ರಿ, ದೀಪಾ ಹರಿಪೂರ ಹಾಗೂ ಅನೇಕ ಕಾರ್ಯಕರ್ತರು ಇದ್ದರು.



ಶಿರಹಟ್ಟಿ: ಪಟ್ಟಣದ ಶ್ರೀ ಜ. ಫಕೀರೇಶ್ವರ ಮಠ ಹಾಗೂ ಹಜರತ್ ಮೆಹಬೂಬ ಸುಬಾನಿ ದರ್ಗಾಕ್ಕೆ ಬರುವ ಭಕ್ತಾದಿಗಳಿಗೆ ಹಳ್ಳದ ದಂಡೆಯ ಮೇಲೆ ಶೌಚಾಲಯ ಹಾಗೂ ಸ್ನಾಹಗೃಹ ನಿರ್ಮಿಸಿಕೊಡಬೇಕೆಂದು ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆಯಿಂದ ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದರು.

ಜನಜಾಗೃತಿ ವಾಕ್‌ಥಾನ್ ಕಾರ್ಯಕ್ರಮಕ್ಕೆ ಐಜಿಪಿ ಪಾಟೀಲ್ ಚಾಲನೆ

ಮಾದಕ ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕೆ ಸಹಕಾರ ಅಗತ್ಯ

ಗದಗ: ಮಾದಕ ವ್ಯಸನ ಮುಕ್ತ ಸಮಾಜವನ್ನು ನಿರ್ಮಿಸುವುದು ಕೇವಲ ಪೊಲೀಸ್ ಇಲಾಖೆಯಿಂದ ಮಾತ್ರ ಸಾಧ್ಯವಿಲ್ಲ. ಸಾರ್ವಜನಿಕರು ಹಾಗೂ ಯುವಜನತೆ ಕೈಜೋಡಿಸಿದಾಗ ಮಾತ್ರ ಇದನ್ನು ಸಂಪೂರ್ಣವಾಗಿ ಮುಕ್ತಗೊಳಿಸಲು ಸಾಧ್ಯ ಎಂದು ಬೆಳಗಾವಿ ಉತ್ತರ ವಲಯದ ಐಜಿಪಿ ಸಂದೀಪ ಪಾಟೀಲ ಹೇಳಿದರು.

ಅಂತಾರಾಷ್ಟ್ರೀಯ ಮಾದಕ ದ್ರವ್ಯ ವಿರೋಧಿ ಮತ್ತು ಕಳ್ಳಸಾಗಣೆ ವಿರೋಧಿ ದಿನಾಚರಣೆ ಅಂಗವಾಗಿ ಜಿಲ್ಲಾ ಪೊಲೀಸ್ ಇಲಾಖೆಯಿಂದ ಹಮ್ಮಿಕೊಳ್ಳಲಾಗಿದ್ದ ಮಾದಕ ವ್ಯಸನ ಮುಕ್ತ ಗದಗ ವಾಕಥಾನ್ 2026 ಕಾರ್ಯಕ್ರಮ ಕುರಿತು ಆಟೋ ಮೂಲಕ ಜನ ಜಾಗೃತಿ ವಾಕಥಾನ್ ಕಾರ್ಯಕ್ರಮಕ್ಕೆ ಗಾಂಧಿ ಸರ್ಕಲ್‌ನಲ್ಲಿ ಸೋಮವಾರ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿ ಮಾತನಾಡಿ, ಪ್ರತಿಯೊಬ್ಬರ ಜೀವನದಲ್ಲೂ ಡಾಕ್ಟರ್, ಇಂಜಿನಿಯರ್, ಪೊಲೀಸ್ ಅಥವಾ ಕ್ರೀಡಾಪಟು ಆಗಬೇಕೆಂಬ ದೊಡ್ಡ ಕನಸುಗಳಿರುತ್ತವೆ. ಆದರೆ, ಒಮ್ಮೆ ಡ್ರಗ್ಸ್‌ನಂತಹ ದುಶ್ಚಟಗಳಿಗೆ ಬಲಿಯಾದರೆ ಆ ಎಲ್ಲ ಕನಸುಗಳು ನುಚ್ಚುನೂರಾಗುತ್ತವೆ. ಹೀಗಾಗಿ ಯುವಜನತೆ ಯಾವುದೇ ಕಾರಣಕ್ಕೂ ಇಂತಹ ವ್ಯಸನಗಳಿಗೆ ಒಳಗಾಗದೆ ಮಾದಕ ವಸ್ತುವಿಗೆ ಇಲ್ಲ ಎನ್ನಿ ಎಂಬ ಪಣವನ್ನು ಜೀವನದುದ್ದಕ್ಕೂ ಅಳವಡಿಸಿಕೊಳ್ಳಬೇಕು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ ಜಗದೀಶ ಮಾತನಾಡಿ, ಮಾದಕ ವಸ್ತುಗಳ ದುರ್ಬಳಕೆಯು ಕೇವಲ ಒಬ್ಬ ವ್ಯಕ್ತಿಯ ಮೇಲಷ್ಟೇ ಅಲ್ಲದೆ, ಅವರ ಇಡೀ ಕುಟುಂಬ ಹಾಗೂ ಯುವ ಪೀಳಿಗೆಯ ಭವಿಷ್ಯದ ಮೇಲೆ ಅತ್ಯಂತ ಗಂಭೀರವಾದ ಪರಿಣಾಮ ಬೀರುತ್ತಿದೆ. ಆದ್ದರಿಂದ ಪ್ರತಿಯೊಬ್ಬರೂ ಮಾದಕ ವ್ಯಸನದ ವಿರುದ್ಧ ಧ್ವನಿ ಎತ್ತಬೇಕಾಗಿದೆ ಎಂದರು.

ಅಪರ ಜಿಲ್ಲಾಧಿಕಾರಿ ಡಾ.ದುರಗೇಶ ಕೆ.ಆರ್. ಮಾತನಾಡಿ, ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆಯ ವತಿಯಿಂದ ಮಾದಕ ವಸ್ತುಗಳ ತಡೆಗೆ ಜಿಲ್ಲಾ ಮಟ್ಟದಲ್ಲಿ ಹಲವಾರು ಕಾರ್ಯಪಡೆಗಳನ್ನು ರಚಿಸಿ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಆದರೆ, ಕೇವಲ ಕಾನೂನು ಕ್ರಮಗಳಿಂದ ಮಾತ್ರ ಇದನ್ನು ತಡೆಯಲು ಸಾಧ್ಯವಿಲ್ಲ. ಸಮಾಜದಲ್ಲಿ ಇದರ ವಿರುದ್ಧ ವ್ಯಾಪಕ ಜನಜಾಗೃತಿ ಮೂಡಿಸುವುದು ಅತ್ಯಂತ ಅಗತ್ಯವಾಗಿದೆ ಎಂದರು.

ಡಿವೈಎಸ್ಪಿ ಮಹಾಂತೇಶ ಸಜ್ಜನ, ಡಿಎಸ್ಪಿ ಮುರ್ತುಜಾ ಖಾದ್ರಿ, ಬಸವೇಶ್ವರ ಪ್ಯಾರಾಮೆಡಿಕಲ್ ಕಾಲೇಜ್, ಸಿಎಸ್‌ಐ ನರ್ಸಿಂಗ್ ಕಾಲೇಜ್ ಬೆಟಗೇರಿ, ತೋಂಟದಾರ್ಯ ಎಂಜಿನಿಯರಿಂಗ್ ಕಾಲೇಜ್, ಸರ್ಕಾರಿ ಪದವಿಪೂರ್ವ ಕಾಲೇಜುಗಳು, ಐಎಂಎ ಗದಗ, ವರ್ತಕರ ಸಂಘ ಗದಗ-ಬೆಟಗೇರಿ, ಇನ್ನರ್‌ವೀಲ್ ಕ್ಲಬ್, ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದವರು ಇದ್ದರು.

ಮಾದಕ ವ್ಯಸನ ಮುಕ್ತ ಗದಗ ವಾಕಾಥಾನ್: ಈ ವಾಕಥಾನ್‌ವು ಗಾಂಧಿ ಸರ್ಕಲ್ ದಿಂದ ಪ್ರಾರಂಭವಾಗಿ ರೋಟರಿ ಸರ್ಕಲ್ ಮಾರ್ಗವಾಗಿ ಭೂಮರೆಡ್ಡಿ ಸರ್ಕಲ್, ಹಳೆ ಡಿಸಿ ಆಫೀಸ್, ಬಸವೇಶ್ವರ ಮೂರ್ತಿ ಭೀಷ್ಮಕೆರೆ ವರೆಗೆ ಬಂದು ತಲುಪಿತು.



ಸರ್ಕಾರಿ ಶಾಲೆಗೆ ತಾಪಂ ಇಒ ಭೇಟಿ

ನರಗುಂದ: ತಾಲೂಕಿನ ಉಸ್ತುವಾರಿ ಕಾರ್ಯದರ್ಶಿ ರಮೇಶ ಕಳಸದ ಅವರ ನೇತೃತ್ವದಲ್ಲಿ ಇತ್ತೀಚೆಗೆ ನಡೆದ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ತಾಲೂಕಿನ ಸರ್ಕಾರಿ ಶಾಲೆಗಳಲ್ಲಿ ಶಿಥಿಲಾವಸ್ಥೆಯಲ್ಲಿರುವ ಕೊಠಡಿಗಳ ದುರಸ್ತಿಗೆ ಕ್ರಮ ಕೈಗೊಳ್ಳುವಂತೆ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳ ಗಮನಕ್ಕೆ ತರಲಾದ ಹಿನ್ನೆಲೆಯಲ್ಲಿ ಸೋಮವಾರ ತಾಪಂ ಇಒ ಶ್ರೀಧರ ಚಿನಗುಂಡಿ ತಾಲೂಕಿನ ಸುರಕೋಡ, ಹದಲಿ, ರಡ್ಡೇರ ನಾಗನೂರ ಹಾಗೂ ಶಿರೋಳ ಗ್ರಾಮದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಭೇಟಿ ವೇಳೆ ಹಾನಿಗೊಳಗಾದ ಶಾಲಾ ಕೊಠಡಿಗಳನ್ನು ಪರಿಶೀಲಿಸಿದ ಅವರು, ಮಳೆಗಾಲದ ಸಂದರ್ಭದಲ್ಲಿ ಶಾಲಾ ಮಕ್ಕಳ ವಿದ್ಯಾಭ್ಯಾಸಕ್ಕೆ ಆಗುತ್ತಿರುವ ತೊಂದರೆ ಹಾಗೂ ಕೊಠಡಿಗಳ ಸುರಕ್ಷತಾ ಸ್ಥಿತಿಗತಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿದರು. ಮಕ್ಕಳ ಕಲಿಕಾ ಹಿತದೃಷ್ಟಿಯಿಂದ ಶಾಲಾ ಕೊಠಡಿಗಳ ಸುರಕ್ಷತೆ ಕುರಿತು ಶಾಲಾ ಮುಖ್ಯೋಪಾಧ್ಯಾಯರಿಂದ ವಿವರಗಳನ್ನು ಪಡೆದುಕೊಂಡರು.

ಶಿಕ್ಷಕರ ಹಾಜರಾತಿ ಪುಸ್ತಕ, ವಿದ್ಯಾರ್ಥಿಗಳ ಒಟ್ಟು ಹಾಜರಾತಿ ಹಾಗೂ ಸೋಮವಾರ ಶಾಲೆಗೆ ಹಾಜರಾದ ಮಕ್ಕಳ ಸಂಖ್ಯೆಯನ್ನು ಪರಿಶೀಲಿಸಿದರು.

ಈ ಸಂದರ್ಭದಲ್ಲಿ ರಡ್ಡೇರ ನಾಗನೂರು ಗ್ರಾಮದ ಸೀತಮ್ಮ ದೊಡ್ಡನಗೌಡ್ರ ಪ್ರೌಢ ಶಾಲೆಯ ಅಡುಗೆ ಸಿಬ್ಬಂದಿ ನಮೂನೆ-3 ರಜಿಸ್ಟರ್ ಅಪಡೇಟ್ ಮಾಡದೇ ಇರುವುದು ಇಒ ಅವರ ಗಮನಕ್ಕೆ ಬಂತು. ಅಕ್ಷರ ದಾಸೋಹದ ಸಹಾಯಕ ನಿರ್ದೇಶಕರಿಗೆ ದೂರವಾಣಿ ಕರೆ ಮಾಡಿ ತಾಲೂಕಿನ ಎಲ್ಲ ಶಾಲೆಗಳಲ್ಲಿ ಅಡುಗೆ ಸಿಬ್ಬಂದಿಗಳು ನಿರ್ವಹಿಸುವ ನಮೂನೆ-3 ರಜಿಸ್ಟರ್‌ನ್ನು ಅಪಡೇಟ್‌ಗೊಳಿಸಲು ಕ್ರಮವಹಿಸಿ ಅಂತ ತಿಳಿಸಿದರು.

ನಂತರ ಹದಲಿ ಗ್ರಾಮದ 122ನೇ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ, ರಜೆ ಮೇಲಿದ್ದ ಅಂಗನವಾಡಿ ಕಾರ್ಯಕರ್ತೆಯೊಬ್ಬರು ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿರುವುದು ಗಮನಕ್ಕೆ ಬಂತು. ಈ ಕುರಿತು ದೂರವಾಣಿ ಮೂಲಕ ಸಿಡಿಪಿಒ ಅವರೊಂದಿಗೆ ಮಾತನಾಡಿದ ಇಒ ಶ್ರೀಧರ ಚಿನಗುಂಡಿ ಅವರು, ಅನಧಿಕೃತವಾಗಿ ಹಾಜರಾತಿ ದಾಖಲಿಸಿರುವ ಕುರಿತು ಪರಿಶೀಲನೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲು ತಾಲೂಕು ಪಂಚಾಯಿತಿ ಕಚೇರಿಗೆ ವರದಿ ಸಲ್ಲಿಸುವಂತೆ ಸೂಚಿಸಿದರು.

ನರಗುಂದ ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಬಿ ಬೋಯಿಟೆ ಮತ್ತು ಶಾಲಾ ಸಿಬ್ಬಂದಿ ಅವರು ಹಾಜರಿದ್ದರು.



ಒತ್ತಡದ ಜೀವನಕ್ಕೆ ಸಂಗೀತವೇ ಮದ್ದು

ನರಗುಂದ: ಇಂದಿನ ಒತ್ತಡದ ಪ್ರಾಪಂಚಿಕ ಬದುಕಿನಲ್ಲಿ ಸಂಗೀತವು ನಮಗೆ ಸುಲಭದ ವಿಶ್ರಾಂತಿ ತಾಣವಾಗಿದೆ. ಈ ಸಂಗೀತವನ್ನು ಸಮಾಜಕ್ಕೆ ದಯಪಾಲಿಸಿದ ನಮ್ಮ ಅನಾದಿ ಸಂಗೀತದ ಎಲ್ಲ ಗುರು ಪರಂಪರೆಗೂ ಹಾಗೂ ಇಂದಿಗೂ ಸಂಗೀತವನ್ನು ಭಕ್ತಿ ಶ್ರದ್ಧೆಯಿಂದ ಕಲಿತು ಗಾನ ಗಂಗೆ ಹರಿಸುತ್ತಿರುವ ಕಲಾ ಬಳಗಕ್ಕೂ, ಕಲಾ ಆರಾಧಕರಿಗೂ, ಧನ್ಯವಾದಗಳನ್ನು ಹೇಳುವ ಸಮಯ ಈ ವಿಶ್ವ ಸಂಗೀತ ದಿನವಾಗಿದೆ ಎಂದು ಭಾರತೀಯ ಸಂಗೀತ ವಿದ್ಯಾಲಯದ ಪ್ರಾಚಾರ್ಯ ಪಂ. ಶ್ರೀನಿವಾಸ ಇನಾಮದಾರ ಹೇಳಿದರು.

ಸ್ಥಳೀಯ ಭಾರತೀಯ ಸಂಗೀತ ವಿದ್ಯಾಲಯದ ಆವರಣದಲ್ಲಿ ವಿಶ್ವ ಸಂಗೀತ ದಿನಾಚರಣೆ ಅಂಗವಾಗಿ ಆಯೋಜಿಸಿದ ಸಂಗೀತ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಪ್ರಕೃತಿಯಲ್ಲಿ ಹಾಸುಹೊಕ್ಕಾಗಿರುವ ಸಂಗೀತ. ನಮ್ಮ ಬದುಕಿನಿಂದ ಕಳೆದು ಹೋಗದಂತೆ ಎಚ್ಚರವಹಿಸಿ ಮುಂದಿನ ತಲೆಮಾರಿನವರಿಗೂ ಸಂಗೀತದ ಶ್ರೇಷ್ಠತೆಯನ್ನು ಅನುಭವಿಸುವಂತೆ ಉಳಿಸಿ ಬೆಳೆಸಲು ಈ ಆಚರಣೆ ಪ್ರೇರೇಪಿಸುತ್ತದೆ ಎಂದರು.

ಶ್ರೇಯಾ, ಛಾಯಾ, ಸಾತ್ವಿಕ, ಅನನ್ಯ, ಭವಾನಿ, ಆರೋಹಿ ಇವರ ಗಣೇಶ ಸ್ತುತಿ ಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ನಂತರ ಚಿರಂತನ ಭಟ್, ವೀರೇಶ, ಅಥರ್ವ ಇವರಿಂದ ಅಲಂಕಾರ ಗೀತ ಗಾಯನ ಜರುಗಿತು.

ತದನಂತರ ಅನ್ವಿತಾ ಅಡಣ್ಣಗಿ, ಆರೋಹಿ ಗುಜಮಾಗಡಿ, ತನಿಷ್ಕಾ ತಡಸದ, ವೈಷ್ಣವಿ ಸಜ್ಜನ್, ಸಿರಿ ಬೆಂತೂರ, ವೇದಶ್ರೀ ಸಜ್ಜನ್, ಭೂಪ ರಾಗದಲ್ಲಿ ಖ್ಯಾಲ್ ಹಾಗೂ ವಚನ ಗಾಯನ ಹಾಡಿದದರು.

ಸೃಷ್ಟಿ ಬೆಂತುರ್, ಪ್ರೇರಣಾ ಪೂಜಾರ, ಅಲೈಯ ಬಿಲಾವಲ್ ರಾಗದಲ್ಲಿ ಲಕ್ಷ್ಮಣ ಗೀತ ಛೋಟಾಖ್ಯಾಲ ಹಾಡಿದರು. ತದನಂತರ ಶ್ರೀನಿಧಿ ಕುಲಕರ್ಣಿ ಹಾಗೂ ವಿಜಯಲಕ್ಷ್ಮಿ ತಡಸದ, ಇವರಿಂದ ಜುಗಲ್ ಬಂದಿ ಹಿಂದುಸ್ತಾನಿ ಶಾಸ್ತ್ರೀಯ ಗಾಯನದಲ್ಲಿ ರಾಗ ಜೀವನಪುರಿ ಸುಂದರವಾಗಿ ಮೂಡಿ ಬಂತು. ದ್ರುತ ಲಯದಲ್ಲಿ ತರನಾಗೀತೆ ಹಾಡಿ ಕೇಳುಗರ ಮನ ಸೂರೆಗೊಂಡರು.

ಇವರಿಗೆ ಹಾರ್ಮೋನಿಯಂ ಸಾಥ್ ಪಂ. ಶ್ರೀನಿವಾಸ ಇನಾಮದಾರ ನೀಡಿದರು. ಮಹದೇವಪ್ಪ ಗುದಗಿ, ಗಿರಿಜಾ ಬಾಳಿಗೇರಿ, ಸೌಮ್ಯ ಗಜಾನನ್ ಭಟ್, ದಿವ್ಯಾ ಚಿದಂಬರ ಪಾಟೀಲ ಉಪಸ್ಥಿತರಿದ್ದರು.



ದೃಢ ಸಂಕಲ್ಪದಿಂದ ಸಾಧನೆ ಸಾಧ್ಯ: ಮುತ್ತು ಕಡಗದ

ನರೇಗಲ್ಲ: ಸಾಧಕರಿಗೆ ಪರಿಶ್ರಮ ಮತ್ತು ಧೃಡ ಸಂಕಲ್ಪ ಇದ್ದರೆ, ಏನು ಬೇಕಾದರು ಸಾಧನೆ ಮಾಡಬಹುದು ಎಂಬುದಕ್ಕೆ ಉತ್ತಮ ಉದಾಹರಣೆ ನಮ್ಮ ಗ್ರಾಮದ ಸಾಧಕರು. ಅಂತರವನ್ನು ಪ್ರೋತ್ಸಾಹಯಿಸುವದು ನಮ್ಮಲ್ಲರೆ ಹೊಣೆ ಎಂದು ಮುಖಂಡ ಮುತ್ತು ಕಡಗದ ತಿಳಿಸದರು.

ಸಮೀಪದ ಜಕ್ಕಲಿ ಗ್ರಾಮದ ಶ್ರೀ ಸ್ವಾಮಿ ವಿವೇಕಾನಂದ ಯುವಕ ಸಂಘ ಹಾಗೂ ಶ್ರೀ ಮಹಾಂತೇಶ್ವರ ಯುವಕ ಸಂಘಗಳ ಸಂಯುಕ್ತ ಆಶ್ರಯದಲ್ಲಿ ಅಟ್ಯಾ-ಪಟ್ಯಾ ಕ್ರೀಡೆಯಲ್ಲಿ ಭಾರತ ಮಹಿಳಾ ತಂಡಕ್ಕೆ ಆಯ್ಕೆಯಾಗಿರುವ ಪ್ರತಿಭಾವಂತ ಕ್ರೀಡಾಪಟು ಪ್ರೀತಿ ಸುಭಾಷ ಬುಳ್ಳಾ ಹಾಗೂ ಅಗ್ನಿವೀರ ಸೇನಾ ಪಡೆಗೆ ಆಯ್ಕೆಯಾಗಿರುವ ಪ್ರಜ್ವಲ ಕೋರಿ ಮತ್ತು ಶಂಕ್ರಪ್ಪ ಇಟಗಿ ಅವರನ್ನ ಸನ್ಮಾನ ಸಮಾರಂಭ ಜರುಗಿತು.

ಗ್ರಾಮಕ್ಕೆ ಕೀರ್ತಿ ತಂದ ಯುವ ಸಾಧಕರಿಗೆ ಸನ್ಮಾನ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ರೋಣ ಬಿಜೆಪಿ ಮಂಡಲದ ಮಾಜಿ ಅಧ್ಯಕ್ಷ ಮುತ್ತು ಕಡಗದ ಮಾತನಾಡಿ, ಗ್ರಾಮೀಣ ಪ್ರದೇಶದ ಯುವಕರು ತಮ್ಮ ಪ್ರತಿಭೆ, ಪರಿಶ್ರಮ ಹಾಗೂ ದೃಢ ಸಂಕಲ್ಪದ ಮೂಲಕ ರಾಷ್ಟ್ರೀಯ ಮತ್ತು ದೇಶ ಸೇವೆಯ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದರು.

ಸನ್ಮಾನ ಸ್ವೀಕರಿಸಿದ ಸಾಧಕರು ತಮ್ಮ ಯಶಸ್ಸಿನ ಹಿಂದೆ ಪಾಲಕರು, ಗುರುಗಳು ಹಾಗೂ ಗ್ರಾಮದ ಹಿರಿಯರ ಮಾರ್ಗದರ್ಶನ ಮತ್ತು ಪ್ರೋತ್ಸಾಹವೇ ಪ್ರಮುಖ ಕಾರಣವಾಗಿದೆ ಎಂದು ಕೃತಜ್ಞತೆ ವ್ಯಕ್ತಪಡಿಸಿದರು. ಪ್ರಕಾಶ ವಾಲಿ ಮಾತನಾಡಿದರು.

ಚನ್ನಬಸು ಕೊಪ್ಪದ, ಜಗದೀಶ ಪಲ್ಲೆದ, ಶಿವಕುಮಾರ್ ಸ್ಟ್ಯಾಂಪಿನ್, ಮಹಾಂತೇಶ ಇಟಗಿ, ನಾಗರಾಜ ಕಡಗದ, ಅಶೋಕ ವಾಲಿ, ಶರಣಪ್ಪ ಕೋರಿ, ಆದಾಮಸಾಬ್ ಬಾಲೇಸಾಬನವರ, ಮಹಾಂತೇಶ ಆನೆಹೊಸೂರು, ಸುಭಾಷ ಬುಳ್ಳಾ, ಗುರುಪಾದ ವಾಲಿ, ಮಂಜು ಪಲ್ಲೇದ, ಪ್ರವೀಣ ವಾಲಿ, ಆನಂದ ಕೊಪ್ಪದ, ನಾಗರಾಜ ಸೋಮನಕಟ್ಟಿ, ವಿವೇಕಾನಂದ ಗುಬ್ಬೇನಕೊಪ್ಪ, ಕಂಠಯ್ಯ ರೇಣುಕಮಠ, ಅರುಣ ಬೂದಿಹಾಳ, ಶಿವು ಬಳಗೇರ ಸೇರಿದಂತೆ ಗ್ರಾಮಸ್ಥರು, ಯುವಕರು ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.



ದೈಹಿಕ, ಮಾನಸಿಕ ಉತ್ತಮ ಆರೋಗ್ಯಕ್ಕೆ ಯೋಗ ರೂಢಿಸಿಕೊಳ್ಳಿ

ಗಜೇಂದ್ರಗಡ: ಶ್ರೀವಿಟಿ ರಾಯಬಾಗಿ ಆಂಗ್ಲ ಮಾಧ್ಯಮ ಶಾಲೆಯ ಲ್ಲಿ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಯೋಗ ಗುರು ಪಂಕಜಕುಮಾರ ಆಗಮಿಸಿ ವಿದ್ಯಾರ್ಥಿಗಳಿಗೆ ಯೋಗದ ಮಹತ್ವ, ಆರೋಗ್ಯದ ಮೇಲೆ ಅದರ ಪರಿಣಾಮ ಹಾಗೂ ದೈನಂದಿನ ಜೀವನದಲ್ಲಿ ಯೋಗದ ಅಗತ್ಯತೆಯ ಕುರಿತು ವಿವರಿಸಿದರು.

ಶಾಲೆಯ ಆಡಳಿತಾಧಿಕಾರಿ ಗೋವಿಂದ ದಂಡಿನ ಮಾತನಾಡಿ, ವಿದ್ಯಾರ್ಥಿಗಳು ದೈಹಿಕ ಹಾಗೂ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಯೋಗವನ್ನು ಜೀವನದ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಳ್ಳಬೇಕೆಂದು ತಿಳಿಸಿದರು.

ಶಾಲೆಯ ಅಧ್ಯಕ್ಷ ಗಣಪತಸಾ ಎಚ್. ರಂಗ್ರೇಜ ಅಧ್ಯಕ್ಷತೆ ವಹಿಸಿ ಮಾತನಾಡಿ, ಯೋಗವು ಭಾರತೀಯ ಸಂಸ್ಕೃತಿಯ ಅಮೂಲ್ಯ ಕೊಡುಗೆಯಾಗಿದ್ದು, ಪ್ರತಿಯೊಬ್ಬರೂ ನಿಯಮಿತವಾಗಿ ಯೋಗಾಭ್ಯಾಸ ಮಾಡಬೇಕು ಎಂದರು.

ಶಾಲೆಯ ಕಾರ್ಯದರ್ಶಿ ಗುರುನಾಸಾ ಕೆ.ರಾಯಬಾಗಿ, ಸಹ ಕಾರ್ಯದರ್ಶಿ ಭಾಸ್ಕರಸಾ ಎನ್. ರಾಯಬಾಗಿ, ಸದಸ್ಯರಾದ ಸುರೇಂದ್ರಸಾ ಎಸ್. ರಾಯಬಾಗಿ, ರಾಘವೇಂದ್ರ ರಾಯಬಾಗಿ, ಶಂಕರಸಾ ರಾಯಬಾಗಿ, ನಾಗರಾಜ್ ಪವಾರ, ಸಿದ್ರಾಮಸಾ ರಾಯಬಾಗಿ ಹಾಗೂ ಪ್ರಾಥಮಿಕ ಮತ್ತು ಪ್ರೌಢ ಶಾಲೆ ಎಲ್ಲ ಶಿಕ್ಷಕ- ಶಿಕ್ಷಕಿಯರು ಉಪಸ್ಥಿತರಿದ್ದರು.



ಎಲ್ ನಿನೋ ಎಫೆಕ್ಟ್ | ಅನ್ನದಾತರ ಆತಂಕ

ಮುಂಗಾರು ಮಳೆ ಕೊರತೆ ಭೀತಿ!

▸ ಮೆಹೆಬೂಬ ಎಚ್ ಮೋತೆಖಾನ್

ರೋಣ: ಪ್ರಸಕ್ತ ಸಾಲಿನ ಮುಂಗಾರು ಬೆಳೆಗಳನ್ನು ಬಿತ್ತನೆ ಮಾಡಿ ತಿಂಗಳು ಕಳೆಯುತ್ತಾ ಬಂದರೂ ಸಹ ತಾಲೂಕಿನಲ್ಲಿ ಮುಂಗಾರು ಮಳೆ ಸುರಿಯುವ ಲಕ್ಷಣಗಳು ಕಾಣುತ್ತಿಲ್ಲ. ಹೀಗಾಗಿ ರೈತ ಸಮುದಾಯ ಆತಂಕದಲ್ಲಿದ್ದು, ಎಲ್ ನಿನೋ ಎಫೆಕ್ಟ್ ರೋಣ ತಾಲೂಕಿಗೂ ತಟ್ಟಲಿದೆಯಾ ಎಂಬ ಭೀತಿ ಅನ್ನದಾತರನ್ನು ಕಾಡುತ್ತಿದೆ.

ತಾಲೂಕಿನಲ್ಲಿ ಮುಂಗಾರು ಹಂಗಾಮಿನ ಪ್ರಮುಖ ಬೆಳೆಯಾಗಿ ರೈತರು ಹೆಸರು ಬೆಳೆಯನ್ನು ಹೆಚ್ಚಾಗಿ ಬೆಳೆಯುತ್ತಾರೆ. ರೋಹಿಣಿ ಮಳೆ ಸ್ವಲ್ಪ ಮಟ್ಟಿಗೆ ಸುರಿದು ರೈತರಲ್ಲಿ ಆಶಾಭಾವನೆಯನ್ನು ಮೂಡಿಸಿತ್ತು. ಈ ಹಿನ್ನೆಲೆಯಲ್ಲಿ ರೈತ ಸಮುದಾಯ ಮುಂದಿನ ಮಳೆ ಆಗಬಹುದು ಎಂಬ ನಿರೀಕ್ಷೆಯನ್ನು ಇಟ್ಟುಕೊಂಡು ಸಾಲ ಸೋಲ ಮಾಡಿ ಬಿತ್ತನೆ ಮಾಡಿದ್ದಾರೆ. ರೋಹಿಣಿ ಮಳೆ ಕಳೆದು 10 ದಿನಗಳಾಗಿದ್ದು, ಈಗ ಮಿರಗನ ಮಳೆ ಸಹ ಸುರಿದಿಲ್ಲ. ಇದರಿಂದ ಆತಂಕಗೊಂಡಿರುವ ರೈತರು ಮೋಡದ ಕಡೆಗೆ ಮುಖ ಮಾಡುವಂತಾಗಿದೆ. ಮುಂಗಾರು ಹಂಗಾಮಿನಲ್ಲಿ ಹೆಸರು, ಮೆಕ್ಕೆಜೋಳ, ಜೋಳ ಸೇರಿದಂತೆ ಜೂನ್ ಮತ್ತು ಜುಲೈ ಮಧ್ಯದಲ್ಲಿ ಮಿಶ್ರ ಬೆಳೆಯಾಗಿರುವ ಈರುಳ್ಳಿ, ಮೆಣಸಿನಕಾಯಿ ಬೆಳೆಗಳ ಬಿತ್ತನೆ ಮಾಡುವುದು ಈ ಭಾಗದ ರೈತರ ವಾಡಿಕೆಯಾಗಿದೆ. ವಿಪರ್ಯಾಸ ಅಂದರೆ ಹೆಸರು ಮತ್ತು ಮೆಕ್ಕೆಜೋಳವನ್ನು ಬಿತ್ತನೆ ಮಾಡಿರುವ ರೈತರು ಕಳೆದ ಇಪ್ಪತ್ತು ದಿನಗಳಿಂದ ಸುರಿಯದ ಮಳೆಯ ವಾತವರಣವನ್ನು ಕಂಡು ಜಮೀನುಗಳನ್ನು ಹಸನುಗೊಳಿಸಿ ಬಿತ್ತನೆ ಮಾಡದೆ ಹಾಗೆ ಬಿಟ್ಟಿರುವುದು ಕೂಡ ತಾಲೂಕಿನಾದ್ಯಾಂತ ಕಂಡು ಬರುತ್ತಿದ್ದು. ಇದರಿಂದ ಕೃಷಿ ವಲಯಕ್ಕೆ ಪ್ರತಿಕೂಲ ಪರಿಣಾಮ ಬಿರುವ ಸಾಧ್ಯತೆಯಿದೆ. ಮಳೆ ಕೊರತೆಯಿಂದ ತಾಲೂಕಿನಲ್ಲಿ ಬಿತ್ತನೆ ಪ್ರಮಾಣ ಕೂಡ ಕಡಿಮೆಯಾಗಿದ್ದು, ಇದು ಆಹಾರ ಉತ್ಪಾದನೆಗೆ ತೀವ್ರ ಸಂಕಷ್ಟ ತರುವ ಕಳವಳಕಾರಿ ಎನ್ನುತ್ತಾರೆ ಕೃಷಿ ಪಂಡಿತರು.



> **ಎಲ್ ನಿನೋ ಎಫೆಕ್ಟ್ ನಮಗೂ ತಟ್ಟುವ ಲಕ್ಷಣಗಳಿದ್ದು, ಶೇ.64ರಷ್ಟು ಮಳೆ ಕೊರತೆಯಾಗುವ ಬಗ್ಗೆ ಮಾಹಿತಿಯಿದೆ. ಜಿಲ್ಲೆಯಲ್ಲಿ ವಾರದೊಳಗೆ ಮಳೆಯಾಗುವ ಬಗ್ಗೆ ಮೂನ್ಸೂಚನೆಯಿದೆ. 31.150 ಹೆಕ್ಟೇರ್ ಪ್ರದೇಶದ ಪೈಕಿ 31.126 ಹೆ.ಪ್ರದೇಶದಲ್ಲಿ ಹೆಸರು, 18.900 ಹೆ. ಪ್ರದೇಶದ ಪೈಕಿ 5.353 ಮೆಕ್ಕೆಜೋಳ ಬೆಳೆಗಳು ಬಿತ್ತನೆಯಾಗಿದ್ದು, ವಾಡಿಕೆ ಪ್ರಕಾರ 184 ಮಿ.ಮೀ. ಮಳೆಯಾಗಬೇಕಿತ್ತು.ಆಗಿದ್ದು 145 ಮಿ.ಮಿ.ಮಳೆ. ಶೇ 21 ರಷ್ಟು ಮಳೆ ಕಡಿಮೆಯಾಗಿದೆ.**
> ■ ಬಸವರಾಜ ಮೊಳೇದ, ಸಹಾಯಕ ಕೃಷಿ ನಿರ್ದೇಶಕ

ದಿಗಂತ ವಿಶೇಷ

▸▸ 4-6 ದಿನಗಳಲ್ಲಿ ಮಳೆಯಾಗದಿದ್ದರೆ ಹೆಸರು ಬೆಳೆ ಬರುವುದು ಕಷ್ಟವಾಗಬಹುದು ಎಂದು ಅಳಲು ತೋಡಿಕೊಂಡಿದ್ದಾರೆ ರೈತರಾದ ಅಂದಾನಯ್ಯ ಶಾಂತಗೀರಮಠ, ಬಸವರಾಜ ಮೇಟಿ

ಸಮಸ್ಯೆಗಳ ಸರಮಾಲೆ ಶಿಗ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ

▸ ಶಿವಲಿಂಗಯ್ಯ ಹೊತಗಿಮಠ

ಲಕ್ಷ್ಮೇಶ್ವರ: ತಾಲೂಕಿನ ಶಿಗ್ಲಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ (ಆಯುಷ್ಮಾನ್ ಕೇಂದ್ರ)ದಲ್ಲಿ ಆಸ್ಪತ್ರೆಯಲ್ಲಿನ ಉಪಕರಣಗಳು ಕೈಕೊಟ್ಟಿದ್ದರಿಂದ, ರೋಗಿಗಳ ಜೊತೆಗೆ ಹರಸಾಹಸವನ್ನು ಸಿಬ್ಬಂದಿಗಳು ಪಡುವ ಪರಸ್ಥಿತಿ ನಿರ್ಮಾಣವಾಗಿದೆ.

ಆರೋಗ್ಯ ಕೇಂದ್ರಕ್ಕೆ ಆಗಬೇಕಾಗಿದೆ ಸರ್ಜರಿ ಶಿಗ್ಲಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮ ಹಾಗೂ ಹಾವೇರಿ ಜಿಲ್ಲೆಯ ಗ್ರಾಮಗಳಿಂದ ದಿನನಿತ್ಯ ಅಂದಾಜು 160 ಕ್ಕಿಂತಲೂ ಹೆಚ್ಚು ಒಪಿಡಿ ಆಗುತ್ತದೆ. ಈ ರೋಗಿಗಳನ್ನು ನೋಡಲು ಸಿಬ್ಬಂದಿಗಳ ಕೊರತೆ ಕಾಡುತ್ತಿದೆ.

ಕಳೆದ 6 ವರ್ಷದಿಂದ ಉತ್ತಮವಾದ ನೂತನ ಕಟ್ಟಡದಲ್ಲಿ ಕೇವಲ ಡಿಪೆಟೇಷನ ಮೇಲೆ ವಾರಕ್ಕೆ 3 ದಿನಗಳ ವೈದ್ಯರು ಕಾರ್ಯನಿರ್ವಹಿಸುತ್ತಿದ್ದು, ದಿನನಿತ್ಯ ಹಗಲುನಲ್ಲಿ ಓರ್ವ ಸ್ಟಾಫ್ ನರ್ಸ್, ಇಬ್ಬರು ಡಿ-ಗ್ರೂಪ್, ಓರ್ವ ಫಾರ್ಮಾ ಸಿಸ್ಟ್ ಮೇಲೆ, ಕೆಲಸ ನಿರ್ವಹಿಸಬೇಕು. ರಾತ್ರಿ ಓರ್ವ ನರ್ಸ್ ಅಷ್ಟೇ ಕಾರ್ಯ ನಿರ್ವಹಿಸುತ್ತಿದ್ದಾರೆ.

ಸಮಸ್ಯೆಗಳಲ್ಲಿ ದಿನದೂಡುತ್ತಿರುವ ಆಸ್ಪತ್ರೆ: ಬಿಸಿನೀರಿಗಾಗಿ ಸೋಲಾರ ಅಳವಡಿಸಿದ್ದು ಕಲೆಕ್ಷನ್ ಕೊಟ್ಟಿಲ್ಲ, ವಿದ್ಯುತ್ ಕಡಿತ ಗೊಂಡಾಗ ಜನರೇಟರ ಇದ್ದು, 2ವರ್ಷದಿಂದ ಕೆಟ್ಟುನಿಂತಿದೆ. ಶುದ್ದ ನೀರಿನ ಘಟಕವಿದೆ. ಆದರೆ 1ವರ್ಷದಿಂದ ಕೆಟ್ಟು ನಿಂತಿದೆ. ಮಗುವಿಗೆ ಬೇಬಿ ವಾರ್ಮರ ಮಷಿನ್ ಕೆಟ್ಟು ನಿಂತು 2ವರ್ಷ ಕಳೆದಿದೆ. ಯುಪಿಎಸ್ ಎದೆ ಆದರೆ ಕಾರ್ಯ ನಿರ್ವಹಿಸುತ್ತಿಲ್ಲ. ಸಿಸಿ ಕ್ಯಾಮೆರಾಗಳು ಇವೆ. ಕಾರ್ಯ ನಿರ್ವಹಿಸುತ್ತಿಲ್ಲ, ಕೆಲವು ಸಿಸಿ ಕ್ಯಾಮೆರಾ ರಿಪೇರಿ ಅಂತಾ ತೆಗೆದುಕೊಂಡು ಹೋಗಿದ್ದು, ಇನ್ನು ರಿಪೇರಿ ಆಗಿಲ್ಲ. ರಾತ್ರಿಯಲ್ಲಿ ವಿದ್ಯುತ್ ಕೈಕೊಟ್ಟರೆ ನರ್ಸ್‌ಗಳ ಪಾಡು ಹೇಳತೀರದು. ಯುಪಿಎಸ್ ಜನರೇಟರ ಕೈಕೊಟ್ಟಿದ್ದರಿಂದ ಟಾರ್ಚ್‌ಗಳ ಬೆಳಕಿನ ಮೂಲಕ ರೋಗಿಗಳ ನೋಡೋ ಪರಸ್ಥಿತಿ. ಅಲ್ಲಿ ಕಾರ್ಯ ನಿರ್ವಹಿಸುವವರನ್ನು ದೇವರೆ ಕಾಪಾಡಬೇಕು.

ಸೊಳ್ಳೆಗಳ ಸಾಮ್ರಾಜ್ಯ, ಮುಳ್ಳುಕಂಟೆಗಳ ತಾಣ: ಆಸ್ಪತ್ರೆ ಸುತ್ತಲೂ ಮುಳ್ಳು ಕಂಟೆಗಳ ತಾಣ. ಅಸ್ವಚ್ಛತೆಯಿಂದ ಕೂಡಿದೆ. ಇದರಿಂದ ಹಗಲು ರಾತ್ರಿ ಆಸ್ಪತ್ರೆಯಲ್ಲಿ ಸೊಳ್ಳೆಗಳ ಕಾಟ,ಆಸ್ಪತ್ರೆ ಆವರಣದಲ್ಲಿ ಸಾರ್ವಜನಿಕರು ಧನಕರುಗಳನ್ನು ಮೇವಿಸಲು ಬಿಡುತ್ತಾರೆ. ಅಲ್ಲಿ ಹಾಕಿದ್ದ ಪ್ಲೆವರ್ಸ್ ಕಿತ್ತು ಹಾಳಾಗಿವೆ.



> **ಶಿಗ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸದ್ಯದಲ್ಲಿ ಭೇಟಿ ನೀಡಿ ಅಲ್ಲಿಯ ಸಿಬ್ಬಂದಿಗಳ ಹಾಗೂ ರೋಗಿಗಳ ಜೊತೆಗೆ ಸಮಸ್ಯೆಗಳನ್ನು ಆಲಿಸಿ ಒಂದು ವಾರದಲ್ಲಿ ಸಮಸ್ಯೆಗಳನ್ನು ಸರಿಪಡಿಸುತ್ತೇನೆ.**
> ■ ಡಾ.ಸುಭಾಷ ದಾಯಗೊಂಡ, ತಾಲೂಕ ವೈದ್ಯಾಧಿಕಾರಿ

> **ಶಿಗ್ಲಿ ಗ್ರಾಮದ ಆರೋಗ್ಯ ಕೇಂದ್ರಕ್ಕೆ ದಿನನಿತ್ಯ ನೂರಾರು ಜನ ರೋಗಿಗಳು ಬರುತ್ತಾರೆ ಅಲ್ಲಿ ಸಮರ್ಪಕ ಚಿಕಿತ್ಸೆ ಇದೆ. ಆದರೆ ಅಲ್ಲಿ ಇರುವ ಉಪಕರಣಗಳು ಕೆಟ್ಟು ನಿಂತಿವೆ. ಅವುಗಳನ್ನು ಸಂಬಂಧಪಟ್ಟ ಇಲಾಖೆಯವರು ರಿಪೇರಿಗೊಳಿಸಿ ಸರಿಪಡಿಸಬೇಕು.**
> ■ ಸಂತೋಷ ತಾಂದಳೆ, ಗ್ರಾಪಂ ಮಾಜಿ ಸದಸ್ಯ

ರೋಗಿಗಳಿಗೆ, ಸಮರ್ಪಕ ಮೆಡಿಷನಗಳ ಕೊರತೆ ಎದ್ದು ಕಾಣುತ್ತಿದೆ. ದಿನನಿತ್ಯ ಬರುವ ರೋಗಿಗಳಿಗೆ ಸಮರ್ಪಕ ಔಷಧಿ ಆಸ್ಪತ್ರೆಯಲ್ಲಿ ಸಿಗಬೇಕು, ಎಂಬುದು ಸ್ಥಳೀಯ ಮಂಜುನಾಥ ಯಲವಿಗಿ ಅವರ ಆಗ್ರಹವಾಗಿದೆ.

ಸಾಮಾಜಿಕ ನ್ಯಾಯಕ್ಕಾಗಿ ಜಾಗೃತಿ ಸಮಾವೇಶ | ಮಾಜಿ ಸಚಿವ ಬಿ.ಶ್ರೀರಾಮುಲು ಆರೋಪ

ಎಸ್‌ಟಿ ಮೀಸಲಾತಿಗೆ ಕೊಕ್ಕೆ ಹಾಕಿದ್ದೇ ಕಾಂಗ್ರೆಸ್



ವಿಜಯನಗರ: ವಾಲ್ಮೀಕಿ ನಾಯಕ ಸಮುದಾಯದ ಅನುಕೂಲಕ್ಕಾಗಿ ಹಿಂದಿನ ಬಿಜೆಪಿ ಸರ್ಕಾರ ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ.3ರಿಂದ ಶೇ.7ಕ್ಕೆ ಹೆಚ್ಚಿಸಿತ್ತು. ಆದರೆ, ನಮ್ಮಲ್ಲಿನ ಒಗ್ಗಟ್ಟಿನ ಕೊರತೆಯಿಂದ ಕಳೆದ ಚುನಾವಣೆಯಲ್ಲಿ ಸೋಲುವಂತಾಯಿತು. 2028ರಲ್ಲಿ ಸಮಾಜ ಜನತೆ ತಪ್ಪು ತಿದ್ದಿಕೊಂಡಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರುವುದು ನಿಶ್ಚಿತ. ವಾಲ್ಮೀಕಿ ಸಮುದಾಯದ ಅಭಿವೃದ್ಧಿಯೂ ಖಚಿತ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿದರು.

ಬಿಜೆಪಿ ಎಸ್‌ಟಿ ಮೋರ್ಚಾದಿಂದ ಹೊಸಪೇಟೆಯಲ್ಲಿ ಸೋಮವಾರ ಏರ್ಪಡಿಸಿದ್ದ ಸಾಮಾಜಿಕ ನ್ಯಾಯಕ್ಕಾಗಿ ಜಾಗೃತಿ ಸಮಾವೇಶದಲ್ಲಿ ಮಾತನಾಡಿದ ಅವರು, ವಾಲ್ಮೀಕಿ ಸೇರಿದಂತೆ ಸಣ್ಣ ಸಮುದಾಯಗಳ ಬಗ್ಗೆ ಕಾಂಗ್ರೆಸ್ ಪಕ್ಷಕ್ಕೆ ಒಂದಿಷ್ಟು ಕಾಳಜಿಯೂ ಇಲ್ಲ. ವಿಧಾನ ಪರಿಷತ್ ಚುನಾವಣೆಯಲ್ಲಿ ಟಿಕೆಟ್ ಸಿಗಬಹುದು ಎಂಬ ಆಸೆಯಿಂದ ಉಗ್ರಪ್ಪ ಬೇರೆ ಬೇರೆ ಜಿಲ್ಲೆಗಳಿಗೆ ಹೋಗಿ ಸುಳ್ಳು ಹೇಳುತ್ತ ನಡೆದರು. ಟಿಕೆಟ್ ಕೈತಪ್ಪಿದಂತೆ ಅವರೂ ಸುಮ್ಮನಾಗಿದ್ದಾರೆ ಎಂದರು.

ಮೀಸಲಾತಿ ವಿಚಾರವನ್ನು ಸಂವಿಧಾನದ 9ನೇ ಪರಿಚ್ಛೇದದಲ್ಲಿ ಸೇರಿಸಲು ಸಾಧ್ಯವೇ ಇಲ್ಲ. ಆದರೂ, ಕಾಂಗ್ರೆಸ್ ಮುಖಂಡರು ಸುಳ್ಳು ಹೇಳಿಕೆ ನೀಡಿ ಜನರ ಹಾದಿ ತಪ್ಪಿಸುತ್ತಿದ್ದಾರೆ. ಕೇಂದ್ರ ಸರ್ಕಾರದ ಬಗ್ಗೆ ತಪ್ಪು ಸಂದೇಶ ಸಾರುತ್ತಿದ್ದಾರೆ. ಕಾಂಗ್ರೆಸ್‌ನ ಈ ನಡೆಯಿಂದ ಈ ವರ್ಷದಲ್ಲಿ ರಾಜ್ಯದ 50 ಸಾವಿರದಷ್ಟು ವಿದ್ಯಾರ್ಥಿಗಳಿಗೆ ಅನ್ಯಾಯವಾಗುವಂತೆ ಮಾಡಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡರು.

ಮಾಜಿ ಶಾಸಕ ರಾಜೂಗೌಡ ಮಾತನಾಡಿ, ಶೇ.7 ಮೀಸಲಾತಿ ಕೊಡಿಸುವ ಕೆಲಸವನ್ನು ಸತೀಶ ಜಾರಕಿಹೊಳಿ ಮಾಡಿಸಬೇಕಿತ್ತು. ಆದರೆ, ಮಾಡುತ್ತಿಲ್ಲ. ಮೀಸಲಾತಿ ಕೊಡದಿದ್ದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡ್ತೇವೆ ಎಂಬ ಎಚ್ಚರಿಕೆಯೊಂದಿಗೆ ಸತೀಶ ಜಾರಕಿಹೊಳಿ ಒಂದೇ ಒಂದು ಹೇಳಿಕೆ ಕೊಡಲಿ ಸರ್ಕಾರವೇ ಅಲ್ಲಾಡುತ್ತದೆ. ಉಳಿದ 15 ಶಾಸಕರನ್ನು ನಾನು ಕೇಳೊಂದಿಲ್ಲ. ಕೋರ್ಟ್‌ನಲ್ಲಿ ಸರಿಯಾಗಿ ವಾದ ಮಂಡಿಸದೆ ತಡೆಯಾಜ್ಞೆ ತರುವಂತೆ ಮಾಡಿದ್ದೇ ಈ ಕಾಂಗ್ರೆಸ್ ಸರ್ಕಾರ. ಪರಿಣಾಮ ಸಾವಿರಾರು ಜನ ಎಸ್‌ಟಿ ವಿದ್ಯಾರ್ಥಿಗಳು ಮೆಡಿಕಲ್ ಸೀಟುಗಳಿಂದ ವಂಚಿತರಾಗಿದ್ದಾರೆ. ನಮ್ಮ ಮಕ್ಕಳ ಭವಿಷ್ಯ ಮಂಕಾಗುವಂತಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಬಿಜೆಪಿ ಎಸ್‌ಟಿ ಮೋರ್ಚಾ ರಾಜ್ಯಾಧ್ಯಕ್ಷ ಬಂಗಾರು ಹನುಮಂತು, ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ, ಮಾಜಿ ಸಚಿವ ಕೆ.ಶಿವನಗೌಡ ನಾಯಕ, ಮಾಜಿ ಸಂಸದ ಬಿ.ವಿ.ನಾಯಕ, ಫಕೀರಪ್ಪ, ಮಾಜಿ ಶಾಸಕ ಸೋಮಲಿಂಗಪ್ಪ, ಮೈಸೂರಿನ ಅಪ್ಪಣ್ಣ ಮಾತನಾಡಿದರು.

ವೇದಿಕೆ ಮೇಲೆ ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ಎಸ್.ಸಂಜೀವ ರೆಡ್ಡಿ, ಮುಖಂಡರಾದ ರಾಜೇಶ್, ಸಿದ್ದರಾಜು, ಶಿವಕುಮಾರ್, ವಿಜಯಲಕ್ಷ್ಮಿ, ಮಣಿಕಂಠ, ಓಬಳೇಶ್ ಇತರರು ಇದ್ದರು.

> ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ ವಿರುದ್ಧದ ಪ್ರಕರಣಗಳ ವಕಾಲತ್ತಿಗೆ ದೆಹಲಿಯಿಂದಲೇ ಪ್ರಸಿದ್ಧ ವಕೀಲರನ್ನು ಕರೆಸಲಾಗುತ್ತಿದೆ. ಆದರೆ, ಎಸ್‌ಟಿ ಮೀಸಲಾತಿ ವಿಚಾರದಲ್ಲಿ ನ್ಯಾಯಾಲಯಕ್ಕೆ ವಕೀಲರನ್ನೇ ಕಳುಹಿಸದೆ ಆದೇಶಕ್ಕೆ ತಡೆಯಾಜ್ಞೆ ತರುವ ಕೆಲಸವನ್ನು ಕಾಂಗ್ರೆಸ್ ಮಾಡಿದೆ. ಇದೆಲ್ಲವನ್ನೂ ಜನರು ಗಮನಿಸಿದ್ದಾರೆ. ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಇದಕ್ಕೆ ತಕ್ಕ ಉತ್ತರ ಕೊಡುತ್ತಾರೆ.
> ■ ರಾಜೂಗೌಡ, ಮಾಜಿ ಶಾಸಕ

ಹರಿಪ್ರಸಾದ್ ಚುನಾವಣೆ ಗೆದ್ದು ತೋರಿಸಲಿ

ವಿಜಯನಗರ: ಆರ್‌ಎಸ್‌ಎಸ್ ಬಗ್ಗೆ ಸದಾ ಟೀಕೆ ಮಾಡುವ ಕಾಂಗ್ರೆಸ್ ನಾಯಕ ಬಿ.ಕೆ. ಹರಿಪ್ರಸಾದ್ ಅವರಿಗೆ ಧೈರ್ಯವಿದ್ದರೆ ಮೊದಲು ಒಂದು ಗ್ರಾಮ ಪಂಚಾಯತಿ ಚುನಾವಣೆ ಗೆದ್ದು ತೋರಿಸಲಿ ಎಂದು ಮಾಜಿ ಸಚಿವ ಶ್ರೀರಾಮುಲು ಸವಾಲು ಹಾಕಿದರು.

ಹೊಸಪೇಟೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾ ಡಿದ ಅವರು, ಬಿ.ಕೆ. ಹರಿಪ್ರಸಾದ್ ತಮ್ಮ ಜೀವನುದುದ್ದಕ್ಕೂ ಹಿಂಬಾಗಿಲಿನಿಂದಲೇ ರಾಜಕೀಯ ಮಾಡಿಕೊಂಡು ಬಂದಿದ್ದಾರೆ. ಇಂತಹವರು ದೇಶಭಕ್ತ ಸಂಘಟನೆಯಾದ ಆರ್‌ಎಸ್‌ಎಸ್ ಬಗ್ಗೆ ಮಾತನಾಡುವುದು ಹಾಸ್ಯಾಸ್ಪದ ಎಂದು ವ್ಯಂಗ್ಯವಾಡಿದರು.

ಇದೇ ವೇಳೆ ಕಾಂಗ್ರೆಸ್ ಆಂತರಿಕ ಭಿನ್ನಮತದ ಕುರಿತು ಪ್ರತಿಕ್ರಿಯಿಸಿದ ಅವರು, ಕೆಪಿಸಿಸಿ ಅಧ್ಯಕ್ಷರ ಪದಗ್ರಹಣ ಕಾರ್ಯಕ್ರಮದಲ್ಲೇ ಡಿ.ಕೆ. ಶಿವಕುಮಾರ ಹಾಗೂ ಬಿ.ಕೆ.ಹರಿಪ್ರಸಾದ್ ನಡುವಿನ ಒಳ ಜಗಳ ಜಗಜ್ಜಾಹೀರಾಗಿದೆ. ಹರಿಪ್ರಸಾದ್ ಅವರು ನೇರವಾಗಿ ಡಿ.ಕೆ.ಶಿವಕುಮಾರ ಅವರಿಗೆ ವಾರ್ನಿಂಗ್ ನೀಡಿದ್ದಾರೆ. ನಾನು ಗಾಂಧಿ ಕುಟುಂಬದ ಐದು ತಲೆಮಾರಿನ ಜೊತೆ ಕೆಲಸ ಮಾಡಿದ್ದೇನೆ ಎಂದು ಹೇಳುವ ಮೂಲಕ ಡಿ.ಕೆ. ಶಿವಕುಮಾರ ಅವರನ್ನು ಹೆದರಿಸುವ ತಂತ್ರ ಮಾಡುತ್ತಿದ್ದಾರೆ ಎಂದು ಲೇವಡಿ ಮಾಡಿದರು.

ಆಣೆ-ಪ್ರಮಾಣ ಬೇಡ: ವಿಧಾನಪರಿಷತ್ ಚುನಾವಣೆಯಲ್ಲಿ ನಡೆದಿದೆ ಎನ್ನಲಾದ ಅಡ್ಡಮತದಾನ ಕುರಿತಂತೆ ಧರ್ಮಸ್ಥಳದಲ್ಲಿ ಆಣೆ, ಪ್ರಮಾಣ ಮಾಡುವುದು ಬೇಡವೆಂದು ಈಗಾಗಲೇ ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಸುರೇಶಕುಮಾರ ನೀಡಿರುವ ಹೇಳಿಕೆಗೆ ನಾನು ಬದ್ಧನಾಗಿದ್ದೇನೆ. ಧರ್ಮಸ್ಥಳಕ್ಕೆ ತನ್ನದೇ ಆದ ಧಾರ್ಮಿಕ ಪವಿತ್ರತೆ ಇದೆ. ಅದನ್ನು ರಾಜಕೀಯಕ್ಕೆ ಎಳೆದು ತರುವುದು ಬೇಡ. ಯಾರು ಅಡ್ಡಮತದಾನ ಮಾಡಿದ್ದಾರೆ ಎಂಬುದು ನನಗೂ ಗೊತ್ತಿದೆ. ಅದನ್ನು ಪಕ್ಷದ ವೇದಿಕೆಯಲ್ಲಿ ಮಾತನಾಡುತ್ತೇನೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಕಾರ್ಯವೈಖರಿ ಬಗ್ಗೆ ಯಾವುದೇ ಗೊಂದಲಗಳಿಲ್ಲ ಎಂದು ಸ್ಪಷ್ಟಪಡಿಸಿದರು.

ಗಂಗಾವಳಿ ನದಿಯಲ್ಲಿ ಕಲ್ಲು, ಮಣ್ಣು ತೆರವು ಕಾರ್ಯಾಚರಣೆ



ಅಂಕೋಲಾ: ತಾಲೂಕಿನ ಶಿರೂರಿನಲ್ಲಿ ಎರಡು ವರ್ಷಗಳ ಹಿಂದೆ ಗುಡ್ಡ ಕುಸಿತ ಸಂಭವಿಸಿ ಗಂಗಾವಳಿ ನದಿಯಲ್ಲಿ ತುಂಬಿರುವ ಕಲ್ಲು, ಮಣ್ಣುಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ಆರಂಭಗೊಂಡಿದೆ.

ನದಿಯಲ್ಲಿ ತುಂಬಿರುವ ಸಾವಿರಾರು ಟನ್ನುಗಟ್ಟಲೆ ಗುಡ್ಡದ ಕಲ್ಲು, ಮಣ್ಣು ನಡುಗಡ್ಡೆಗಳಂತೆ ಕಂಡು ಬರುವ ಮೂಲಕ ಸುತ್ತ ಮುತ್ತಲಿನ ನದಿ ಪಾತ್ರದ ಜನರಲ್ಲಿ ಮಳೆಗಾಲದಲ್ಲಿ ಕೃತಕ ನೆರೆ ಹಾವಳಿ ಸಂಭವಿಸುವ ಆತಂಕಕ್ಕೆ ಕಾರಣವಾಗಿದ್ದರಿಂದ ಮಣ್ಣು ತೆರವುಗೊಳಿಸುವಂತೆ ಸಾಕಷ್ಟು ಜನರಿಂದ ಸಾಕಷ್ಟು ಒತ್ತಾಯ ಕೇಳಿ ಬಂದಿದ್ದವು.

ಗಂಗಾವಳಿ ನದಿಯಲ್ಲಿ ತುಂಬಿರುವ ಮಣ್ಣು ತೆರವುಗೊಳಿಸುವ ಕಾರ್ಯಕ್ಕೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ 2 ಕೋಟಿ ರೂಪಾಯಿ ಅನುದಾನ ಮಂಜೂರಾಗಿದ್ದರೂ ಕಾರ್ಯಾಚರಣೆಗೆ ಸುಮಾರು 4 ಕೋಟಿಗಳಿಗಿಂತ ಹೆಚ್ಚಿನ ಹಣದ ಅಗತ್ಯ ಇರುವುದರಿಂದ ಯಾರೂ ಟೆಂಡರ್ ಹಾಕಲು ಆಸಕ್ತಿ ತೋರಿರಲಿಲ್ಲ.

ಕಾರವಾರ ಅಂಕೋಲಾ ಶಾಸಕ ಸತೀಶ ಸೈಲ್ ಅವರು ವಿಷಯವನ್ನು ಸರ್ಕಾರದ ಗಮನಕ್ಕೆ ತಂದು ರಾಜ್ಯ ವಿಪತ್ತು ನಿರ್ವಹಣಾ ನಿಧಿಯಿಂದ 2.34 ಕೋಟಿ ರೂ.ಹೆಚ್ಚುವರಿ ಅನುದಾನ ಬಿಡುಗಡೆ ಮಾಡಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮ ಕಲಂ 4ಜಿ ಅನ್ವಯ ನಿರ್ದಿಷ್ಟ ಸೇವೆಗಾಗಿ ಟೆಂಡರ್ ನಿಯಮಗಳ ವಿನಾಯತಿ ನಿಯಮದಡಿ ಶೀಘ್ರದಲ್ಲಿ ಮಣ್ಣು ತೆರವು ಕಾರ್ಯಾಚರಣೆಗೆ ಅನುಕೂಲ ಒದಗಿಸಿದ್ದು ಇತ್ತೀಚೆಗೆ ನದಿ ತೀರದಲ್ಲಿ ಪೂಜೆ ನಡೆಸಲಾಗಿತ್ತು.

ಗುತ್ತಿಗೆ ಪಡೆದ ಅಭಿನೇಶನ್ ಓಶಿಯನ್ ಸರ್ವಿಸ್ ಸಂಸ್ಥೆ ಸೋಮವಾರ ಎರಡು ಬಾರ್ಜ್ ಮತ್ತು ಮಣ್ಣು ತೆರವುಗೊಳಿಸುವ ಯಂತ್ರ, ಉಪಕರಣಗಳನ್ನು ಬಳಸಿ ಮಣ್ಣು ತೆರವು ಕಾರ್ಯ ನಡೆಸತೊಡಗಿದ್ದು ಮುಂದೆ ಇನ್ನಷ್ಟು ಆಧುನಿಕ ಯಂತ್ರಗಳು ಕಾರ್ಯಾಚರಣೆಯಲ್ಲಿ ತೊಡಗಿಕೊಳ್ಳಲಿವೆ.

ಎರಡು ವರ್ಷಗಳ ಹಿಂದೆ ಕೇರಳದ ಲಾರಿ ಪತ್ತೆ ಮಾಡಿರುವ ಕಾರ್ಯಾಚರಣೆ ಮಾದರಿಯಲ್ಲಿ ಮಣ್ಣು ತೆರವು ಕಾರ್ಯ ನಡೆಯುತ್ತಿದ್ದು ಮಣ್ಣಿನ ರಾಶಿ ಅಡಿಯಲ್ಲಿ ಏನು ಸಿಗುವುದೋ ಇದುವರೆಗೆ ಪತ್ತೆಯಾಗದ ಜಗನ್ನಾಥ ಮತ್ತು ಲೋಕೇಶರ ಮೃತದೇಹದ ಅವಶೇಷಗಳು ಪತ್ತೆಯಾಗುವುದೋ ಎಂಬ ಕುತೂಹಲ ಸ್ಥಳೀಯರಲ್ಲಿ ಹೆಚ್ಚಿದೆ.

2024ರಲ್ಲಿ ನದಿ ಪಾಲಾಗಿದ್ದ 11 ಜನ

ಭಾರೀ ಮಳೆಯಿಂದಾಗಿ 2024ರ ಜುಲೈ 16ರಂದು ಬೆಳಗ್ಗೆ ಅಂಕೋಲಾ ತಾಲೂಕಿನ ಶಿರೂರು ಬಳಿ ರಾಷ್ಟ್ರೀಯ ಹೆದ್ದಾರಿ 66 ಪಕ್ಕದಲ್ಲಿರುವ ಗುಡ್ಡ ಭಾರೀ ಪ್ರಮಾಣದಲ್ಲಿ ಕುಸಿದು ಅನಾಹುತ ಸಂಭವಿಸಿತ್ತು. ಗುಡ್ಡದ ಮಣ್ಣಿನ ಜೊತೆಗೆ ನದಿ ತೀರದಲ್ಲಿರುವ ಸಣ್ಣ ಹೋಟೆಲ್, ರಾಷ್ಟ್ರೀಯ ಹೆದ್ದಾರಿಯ ಪಕ್ಕ ನಿಂತ ವಾಹನಗಳು, ಗಿಡ ಮರಗಳು ಸೇರಿದಂತೆ ಗಂಗಾವಳಿ ನದಿ ಪಾಲಾಗಿದ್ದ ದುರಂತದಲ್ಲಿ 11 ಜನ ಮೃತಪಟ್ಟಿದ್ದರು. ಸುಮಾರು ಮೂರು ತಿಂಗಳು ನಡೆದ ರಕ್ಷಣಾ ಕಾರ್ಯಾಚರಣೆಯಲ್ಲಿ ಆರಂಭದ 10 ದಿನಗಳಲ್ಲಿ 8 ಮೃತದೇಹಗಳು ಪತ್ತೆಯಾದರೆ ಕೇರಳದ ಲಾರಿ ಮತ್ತು ಚಾಲಕನ ಮೃತದೇಹ 70 ದಿನಗಳ ನಂತರ ಪತ್ತೆಯಾಗಿತ್ತು.

ಕಿರುಸುದ್ದಿ

ರಾಜ್ಯಮಟ್ಟದ ಅಭಿನಂದನಾ ಸಮಾರಂಭ ಜೂ.28ರಂದು

ಹುಬ್ಬಳ್ಳಿ: ಕುರುಬ ಸಮಾಜ ಅಭಿವೃದ್ಧಿ ವೇದಿಕೆ ಕರ್ನಾಟಕ ವತಿಯಿಂದ ರಾಜ್ಯಸಭೆಗೆ ನೂತನ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಯಾದ ಮಾ. ನಾಗರಾಜ ಅವರ ರಾಜ್ಯ ಮಟ್ಟದ ಅಭಿನಂದನಾ ಸಮಾರಂಭ ಕುಸುಗಲ್ ರಸ್ತೆಯ ಶ್ರೀನಿವಾಸ ಗಾರ್ಡನ್‌ನಲ್ಲಿ ಜೂ. 28ರಂದು ಬೆಳಗ್ಗೆ 11ಕ್ಕೆ ಹಮ್ಮಿಕೊಳ್ಳಲಾಗಿದೆ ಎಂದು ಸಂಚಾಲಕ ರವೀಂದ್ರ ದಂಡಿನ ಹೇಳಿದರು. ನಗರದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಅಭಿನಂದನಾ ಸಮಾರಂಭವು ಕಾಗಿನೆಲೆ ಮಹಾಸಂಸ್ಥಾನ ಕನಕ ಗುರು ಪೀಠದ ನಿರಂಜನಾನಂದಪುರಿ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯಲಿದೆ. ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾದ ಮಾ. ನಾಗರಾಜ ಅವರನ್ನು ಸನ್ಮಾನಿಸಲಾಗುವುದು. ಅವರಿಗೆ ಸ್ಥಾನ ಲಭಿಸಲು ಶ್ರಮಿಸಿದ ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಸ್ಥಳೀಯ ಶಾಸಕರು ಮತ್ತು ಮುಖಂಡರನ್ನು ವೇದಿಕೆ ವತಿಯಿಂದ ಸನ್ಮಾನಿಸಲಾಗುವುದು ಎಂದು ಹೇಳಿದರು. ಕಾರ್ಯಕ್ರಮಕ್ಕೆ ಅಖಂಡ ಧಾರವಾಡ ಜಿಲ್ಲೆ ಸೇರಿದಂತೆ ರಾಜ್ಯದ ವಿವಿಧ ಪ್ರದೇಶಗಳಿಂದ ಸುಮಾರು ಮೂರು ಸಾವಿರಕ್ಕೂ ಹೆಚ್ಚು ಜನರು ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದರು. ಮಂಜುನಾಥ ಮಕ್ಕಳಗಿರಿ, ಬೀರಪ್ಪ ಖಂಡೇಕರ್, ಪರಶುರಾಮ ದಿವಾನದ, ಸಿದ್ದಪ್ಪ ಮುರಗೋಡ, ದೇವರಾಜ ಕಂಬಳಿ, ಡಿ.ಟಿ. ಪಾಟೀಲ, ಎಚ್.ಡಿ.ಪಾಟೀಲ, ರಾಜೇಶ್ವರಿ ಸಾಲಗಟ್ಟಿ ಇದ್ದರು.

ಎಂಟು ಕುರಿ ಹೊತ್ತೊಯ್ದ ಕಳ್ಳರು

ಹಾವೇರಿ: ಕುರಿ ದಡ್ಡಿಯಲ್ಲಿ ಇದ್ದ ಎಂಟು ಕುರಿಗಳನ್ನು ಕಳ್ಳರು ಕಳುವು ಮಾಡಿಕೊಂಡು ಹೋಗಿರುವ ಘಟನೆ ರಾಣೇಬೆನ್ನೂರ ತಾಲೂಕು ಕವಲೆತ್ತು ಗ್ರಾಮದಲ್ಲಿ ನಡೆದಿದೆ. ಕವಲೆತ್ತು ಗ್ರಾಮದ ಕುರಿಗಾಹಿಗಳಾದ ಬಸವರಾಜ ಮಹೇಶಪ್ಪ ಕೊಡೇರ ಹಾಗೂ ಅಣ್ಣನ ಮಗ ದಿಲೀಪ್ ಕೋಡೇರ ಎಂಬುವವರಿಗೆ ಸೇರಿದ ಕುರಿಗಳು ಇವಾಗಿವೆ. ದೂರುದಾರ ಬಸವರಾಜಗೆ ಸೇರಿದ 80 ಸಾವಿರ ಬೆಲೆಬಾಳುವ ನಾಲ್ಕು ಕುರಿಗಳು, ದಿಲೀಪ್‌ಗೆ ಸೇರಿದ 60 ಸಾವಿರ ರೂ.ಬೆಲೆ ಬಾಳುವ 4 ಕುರಿಗಳನ್ನು ಕಳವು ಮಾಡಲಾಗಿದೆ. ಕುರಿಯ ದಡ್ಡಿ ಸುತ್ತಲೂ ಜಾಲರಿ ಅಳವಡಿಕೆ ಮಾಡಿದ್ದರೂ ಸಹಿತ ಕಳ್ಳರು ಎಂಟು ಕುರಿಗಳನ್ನು ಕಳುವು ಮಾಡಿಕೊಂಡು ಹೋಗಿದ್ದಾರೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದೆ. ಕುಮಾರಪಟ್ಟಣಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪರೂಪದ ಬಿಳಿ ಕಾಗೆ ಪ್ರತ್ಯಕ್ಷ



ಯಲ್ಲಾಪುರ: ತಾಲೂಕಿನ ಕೊಂಡೆಮನೆ ಸರ್ಕಾರಿ ಶಾಲೆಯ ಆವರಣದಲ್ಲಿ ಸೋಮವಾರ ಮಧ್ಯಾಹ್ನ ಅಪರೂಪದ ಬಿಳಿ ಕಾಗೆಯೊಂದು ಕಂಡು ಬಂದು ಅಚ್ಚರಿ ಮೂಡಿಸಿದೆ. ಸಾಮಾನ್ಯವಾಗಿ ಕಪ್ಪು ಬಣ್ಣದಲ್ಲೇ ಕಂಡುಬರುವ ಕಾಗೆ ಅದಕ್ಕೆ ಅಪವಾದವೆಂಬಂತೆ ಕಾಗೆಯೊಂದು ಬಿಳಿ ಬಣ್ಣದಲ್ಲಿ ಕಾಣಿಸಿಕೊಂಡಿದ್ದು, ಮಕ್ಕಳಲ್ಲಿ ಕುತೂಹಲ ಮೂಡಿಸಿತು. ಈ ಅಪರೂಪದ ಬಿಳಿ ಕಾಗೆಯನ್ನು ಶಿಕ್ಷಕರು ತಮ್ಮ ಮೊಬೈಲ್ ಕ್ಯಾಮೆರಾದಲ್ಲಿ ಸೆರೆ ಹಿಡಿದಿದ್ದಾರೆ. ಕಳೆದ ವರ್ಷವೂ ಒಮ್ಮೆ ಈ ಕಾಗೆ ಕಾಣಿಸಿಕೊಂಡಿತ್ತು ಎಂದು ಅವರು ತಿಳಿಸಿದ್ದಾರೆ. ಮಾಹಿತಿಗಳ ಪ್ರಕಾರ ಈ ರೀತಿಯ ಬಿಳಿ ಕಾಗೆಗಳು ''ಅಲ್ಬಿನಿಸಂ'' ಅಥವಾ ''ಲ್ಯೂಸಿಸಂ'' ಎಂಬ ಅಪರೂಪದ ಜೆನೆಟಿಕಲ್ ವೈಶಿಷ್ಟ್ಯಗಳಿಂದ ಉಂಟಾಗುತ್ತವೆ. ಇವುಗಳ ದೇಹದಲ್ಲಿ ಮೆಲನಿನ್ ಎಂಬ ವರ್ಣದ್ರವ್ಯ ಕಡಿಮೆ ಅಥವಾ ಸಂಪೂರ್ಣವಾಗಿ ಇಲ್ಲದಿರುವುದರಿಂದ ಕಾಗೆಯ ಪುಕ್ಕಗಳು ಬಿಳಿ ಬಣ್ಣದಲ್ಲಿ ಕಾಣಿಸುತ್ತವೆ.

ಸಹೋದರನ ವಿರುದ್ಧ ಜಾರಕಿಹೊಳಿ ವಾಗ್ದಾಳಿ

ಸತೀಶ ಸ್ಥಾನದಲ್ಲಿ ನಾನಿದ್ದಿದ್ದರೆ ರಾಜೀನಾಮೆ ಕೊಡುತ್ತಿದ್ದೆ



ವಿಜಯನಗರ: ಇವತ್ತು ಸಚಿವ ಸತೀಶ ಜಾರಕಿಹೊಳಿ ಇರುವ ಸ್ಥಾನದಲ್ಲಿ ಒಂದು ವೇಳೆ ನಾನೇನಾದರೂ ಇದ್ದಿದ್ದರೆ, ಇಷ್ಟೊತ್ತಿಗಾಗಲೇ ರಾಜೀನಾಮೆ ಕೊಟ್ಟು ಹೊರಗೆ ಬರುತ್ತಿದ್ದೆ. ಆದರೆ, ಅವನಿಗೆ ಆ ಧೈರ್ಯ, ಶಕ್ತಿ ಎರಡೂ ಇಲ್ಲ ಎಂದು ಮಾಜಿ ಸಚಿವ ರಮೇಶ ಜಾರಕಿಹೊಳಿ ತಮ್ಮ ಸಹೋದರನ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಹೊಸಪೇಟೆಯಲ್ಲಿ ಬಿಜೆಪಿ ಎಸ್‌ಟಿ ಮೋರ್ಚಾದಿಂದ ಆಯೋಜಿಸಿದ್ದ ಸಾಮಾಜಿಕ ನ್ಯಾಯಕ್ಕಾಗಿ ಜಾಗೃತಿ ಸಮಾವೇಶ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯಾರಿಗೋ ನಾಲ್ಕು ಸೈಕಲ್ ಕೊಟ್ಟ ಎಂದರೆ ಬಡತನ ಹೋಗುವುದಿಲ್ಲ. ಗ್ರಾಮೀಣ ಭಾಗಕ್ಕೆ ನೀರಾವರಿ ಯೋಜನೆಗಳನ್ನು ಜಾರಿಗೆ ತರಬೇಕು. ಶಿಕ್ಷಣ, ಉದ್ಯೋಗ ಕಲ್ಪಿಸಿದಾಗ ಮಾತ್ರ ಬಡತನ ನಿರ್ಮೂಲನೆ ಸಾಧ್ಯ ಎಂದು ಪರೋಕ್ಷವಾಗಿ ರಾಜ್ಯ ಸರ್ಕಾರದ ಗ್ಯಾರಂಟಿಗಳನ್ನು ಟೀಕಿಸಿದರು.

ಚುನಾವಣೆಗೆ ಇನ್ನು ಕೇವಲ 22 ತಿಂಗಳು ಮಾತ್ರ ಬಾಕಿ ಇವೆ. ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಮತ್ತೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲಿದೆ. ಯಾವುದೇ ಪಕ್ಷವಿದ್ದರೂ ಅದನ್ನು ಅಧಿಕಾರಕ್ಕೆ ತರುವಂತಹ ಶಕ್ತಿಯನ್ನು ದೇವರು ನಮಗೆ ಕೊಟ್ಟಿದ್ದಾನೆ. ನಾನೂ, ಬಂಗಾರು ಹನುಮಂತು ಸೇರಿದಂತೆ ವೇದಿಕೆ ಮೇಲೆ ಇರುವ ಹಲವರು ಶಾಸಕರಾಗಿ, ಸಚಿವರಾಗುತ್ತೇವೆ. ಮುಂದೆ ನಮ್ಮದೇ ಸರ್ಕಾರ ಬಂದಾಗ ನಮ್ಮ ಸಮಾಜಕ್ಕೆ ಶೇ 7.5ರಷ್ಟು ಮೀಸಲಾತಿ ಕೊಡದೇ ಇದ್ದರೆ, ಆಗ ನಾನೇ ನನ್ನ ಸ್ಥಾನಕ್ಕೆ ರಾಜೀನಾಮೆ ನೀಡಿ ಹೊರಗೆ ಬರುತ್ತೇನೆ ಎಂದು ವಾಗ್ದಾನ ಮಾಡಿದರು.

ನಾವು ಸಂಘಟಿತರಾಗಬೇಕು ಮತ್ತು ಮೀಸಲಾತಿಗಾಗಿ ಹೋರಾಟ ಮಾಡಬೇಕು. ಸಣ್ಣಪುಟ್ಟ ಸಮಾಜಗಳನ್ನು ನಮ್ಮ ಜೊತೆಗೆ ಕರೆದುಕೊಂಡು ಹೋದಾಗ ಮಾತ್ರ ನಮಗೆ ನಿಜವಾದ ಶಕ್ತಿ ಬರುತ್ತದೆ. 1970ರ ದಶಕದಲ್ಲಿ ನಾವು ಕೇವಲ ಮೂರನಾಲ್ಕು ಸೀಟುಗಳನ್ನು ಗೆಲ್ಲುತ್ತಿದ್ದೆವು. ಆದರೆ, ಈಗ ಕಾಲ ಬದಲಾಗಿದೆ. ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯುವ ಕೆಲಸವಾಗಬೇಕಿದೆ ಎಂದು ಸಲಹೆ ನೀಡಿದರು.

ಎಂ.ನಾಗರಾಜ, ಲಿಂಗರಾಜ ಪಾಟೀಲಗೆ ಅದ್ದೂರಿ ಸ್ವಾಗತ



ಹುಬ್ಬಳ್ಳಿ: ರಾಜ್ಯಸಭೆಗೆ ಎಂ. ನಾಗರಾಜ ಹಾಗೂ ವಿಧಾನ ಪರಿಷತ್‌ಗೆ ಲಿಂಗರಾಜ ಪಾಟೀಲ ಅವರು ಆಯ್ಕೆಯಾದ ಬಳಿಕ ನಗರಕ್ಕೆ ಮೊದಲ ಬಾರಿಗೆ ಆಗಮಿಸಿದಕ್ಕಾಗಿ ಬಿಜೆಪಿಯಿಂದ ಅದ್ದೂರಿಯಾಗಿ ಸ್ವಾಗತಿಸಲಾಯಿತು.

ತೆರೆದ ವಾಹನದಲ್ಲಿ ಮೆರವಣಿಗೆ ಮೂಲಕ ಅರವಿಂದ ನಗರದ ಬಿಜೆಪಿ ಕಾರ್ಯಾಲಯಕ್ಕೆ ಕರೆತರಲಾಯಿತು. ಕ್ರೇನ್ ಮೂಲಕ ಬೃಹದಾಕಾರದ ಮಾಲೆ ಹಾಕಿ ಸನ್ಮಾನಿಸಲಾಯಿತು. ಮಹಿಳಾ ಕಾರ್ಯಕರ್ತೆಯರು ಆರತಿ ಮಾಡಿ, ಹಣೆಗೆ ತಿಲಕವಿಟ್ಟು ಸ್ವಾಗತಿಸಿದರು.

ಬಳಿಕ ಬಿಜೆಪಿ ಕಚೇರಿಯಲ್ಲಿ ನಡೆದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಬಿಜೆಪಿಯು ನಿಷ್ಠಾವಂತ ಕಾರ್ಯಕರ್ತರನ್ನು ಗುರುತಿಸಿ ಸೂಕ್ತ ಸಂದರ್ಭದಲ್ಲಿ ಉನ್ನತ ಸ್ಥಾನಮಾನ ನೀಡುತ್ತದೆ ಎಂಬುದಕ್ಕೆ ನೂತನವಾಗಿ ರಾಜ್ಯಸಭೆಗೆ ಆಯ್ಕೆಯಾದ ಮಾ.ನಾಗರಾಜ ಹಾಗೂ ವಿಧಾನ ಪರಿಷತ್‌ಗೆ ಆಯ್ಕೆಯಾದ ಲಿಂಗರಾಜ ಪಾಟೀಲ ಅವರೇ ಉದಾಹರಣೆ ಎಂದರು.

ಪಕ್ಷಕ್ಕಾಗಿ ದುಡಿದವರು ವಿಶ್ವಾಸ ಕಳೆದುಕೊಳ್ಳದೆ, ತಾಳ್ಮೆಯಿಂದ ಇದ್ದರೆ ಎಂತಹ ಸ್ಥಾನ ಬೇಕಾದರೂ ಪಕ್ಷದಲ್ಲಿ ದೊರೆಯುತ್ತದೆ. ಪಕ್ಷದಲ್ಲಿ ಸ್ಥಾನಮಾನ ಬೇಕು ಎಂದು ದೆಹಲಿಗೆ ಸಾಕಷ್ಟು ಜನ ಅಲೆದಾಡಿದ್ದಾರೆ. ಆದರೆ, ಲಿಂಗರಾಜ ಪಾಟೀಲ ಹಾಗೂ ಮಾ.ನಾಗರಾಜ ಅವರು ತಮ್ಮ ಕೆಲಸದಿಂದಲೇ ಸ್ಥಾನ ಗಿಟ್ಟಿಸಿಕೊಂಡಿದ್ದಾರೆ ಎಂದರು.

ಶಾಸಕ ಅರವಿಂದ ಬೆಲ್ಲದ ಮಾತನಾಡಿ, ಪಕ್ಷವು ನಿಷ್ಠಾವಂತ ಕಾರ್ಯಕರ್ತರನ್ನು ಗುರುತಿಸಿ ಸೂಕ್ತ ಸ್ಥಾನಮಾನ ನೀಡುತ್ತಿರುವುದು ಖುಷಿಯ ಸಂಗತಿ ಎಂದರು.

ಶಾಸಕ ಮಹೇಶ ಟೆಂಗಿನಕಾಯಿ, ವಿಧಾನ ಪರಿಷತ್ ಸದಸ್ಯರಾದ ಎಸ್.ವಿ.ಸಂಕನೂರ, ಪ್ರದೀಪ ಶೆಟ್ಟರ್ ಮಾತನಾಡಿದರು. ಮಾಜಿ ಶಾಸಕ ಅಶೋಕ ಕಾಟವೆ, ಹು-ಧಾ ಮಹಾನಗರ ಪಾಲಿಕೆ ಮೇಯರ್ ಜ್ಯೋತಿ ಪಾಟೀಲ, ಉಪ ಮೇಯರ್ ಸಂತೋಷ ಚವ್ಹಾಣ, ಹು-ಧಾ ಮಹಾನಗರ ಜಿಲ್ಲಾ ಬಿಜೆಪಿ ಅಧ್ಯಕ್ಷ ತಿಪ್ಪಣ್ಣ ಮಜ್ಜಗಿ, ಜಿಲ್ಲಾ ಬಿಜೆಪಿ ಗ್ರಾಮೀಣ ಅಧ್ಯಕ್ಷ ನಿಂಗಪ್ಪ ಸುತಗಟ್ಟಿ ಇದ್ದರು.

ಟಿಬಿ ಡ್ಯಾಂ ಹೊಸ ಗೇಟ್ ಉದ್ಘಾಟನಾ ಕಾರ್ಯಕ್ರಮ

ಆಂಧ್ರ ಪ್ರದೇಶದ ಸಚಿವರಿಗೆ ಕರ್ನಾಟಕ ನಿಯೋಗದಿಂದ ಆಮಂತ್ರಣ



ಸಿಂಧನೂರು: ತುಂಗಭದ್ರಾ ಡ್ಯಾಂನ 33 ಹೊಸ ಗೇಟ್‌ಗಳ ಉದ್ಘಾಟನಾ ಕಾರ್ಯಕ್ರಮ ಕೊಪ್ಪಳ ಜಿಲ್ಲೆಯ ಮುನಿರಾಬಾದ್‌ನಲ್ಲಿ ಜೂನ್ 25ರಂದು ಆಯೋಜಿಸಲಾಗಿದ್ದು, ಕರ್ನಾಟಕದ ನಿಯೋಗ ಆಂಧ್ರಪ್ರದೇಶಕ್ಕೆ ತೆರಳಿ, ಅಲ್ಲಿನ ಸರ್ಕಾರದ ನೀರಾವರಿ ಸಚಿವ ನಿಮ್ಮಲ ರಾಮನಾಯ್ಡು ಅವರನ್ನು ಸೋಮವಾರ ಭೇಟಿಯಾಗಿ ಆಮಂತ್ರಿಸಿತು.

ಯಲಬುರ್ಗಾ ಶಾಸಕ ಹಾಗೂ ಮಾಜಿ ಸಚಿವ ಬಸವರಾಜ ರಾಯರೆಡ್ಡಿ, ವಿಧಾನ ಪರಿಷತ್ ಸದಸ್ಯ ಹಾಗೂ ಮಾಜಿ ಸಚಿವ ಎನ್.ಎಸ್.ಭೋಸರಾಜು ಹಾಗೂ ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ಅವರ ನಿಯೋಗವು ಸಿಎಂ ಡಿ.ಕೆ.ಶಿವಕುಮಾರ ಅವರ ಸೂಚನೆಯ ಹಿನ್ನೆಲೆಯಲ್ಲಿ ಅಲ್ಲಿನ ಸಚಿವರನ್ನು ಭೇಟಿ ಮಾಡಿ ಕಾರ್ಯಕ್ರಮಕ್ಕೆ ಸ್ವಾಗತಿಸುವ ಜೊತೆಗೆ ಕೆಲ ಕಾಲಕಾಲ ಚರ್ಚಿಸಿತು. ಈ ಸಂದರ್ಭದಲ್ಲಿ ರಾಜ್ಯ ನೀರಾವರಿ ಇಲಾಖೆಯ ಅಧಿಕಾರಿಗಳು ಸೇರಿದಂತೆ ಇನ್ನಿತರರು ಇದ್ದರು.

381ರೌಡಿಗಳ ಮನೆ ಮೇಲೆ ಪೊಲೀಸರ ದಾಳಿ

ಏರ್‌ಗನ್, ಸ್ಟ್ಯಾಂಪ್ ಪೇಪರ್ ಪತ್ತೆ: ಐಜಿಪಿ ಡಾ.ಹರ್ಷ



ಬಳ್ಳಾರಿ: ಬಳ್ಳಾರಿ ವಲಯದ ಕೊಪ್ಪಳ, ರಾಯಚೂರು, ವಿಜಯನಗರ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಸೋಮವಾರ ಏಕಕಾಲಕ್ಕೆ 381 ರೌಡಿಗಳ ಮನೆಗಳ ಮೇಲೆ ದಾಳಿ ನಡೆಸಿ ಪರಿಶೀಲನೆ ನಡೆಸಲಾಗಿದೆ. ಈ ವೇಳೆ ಬಳ್ಳಾರಿ ನಗರದ ಎಪಿಎಂಸಿ ಪೊಲೀಸ್ ಠಾಣೆ ವ್ಯಾಪ್ತಿಯ ಅಂದ್ರಾಳ ಸೀತಾರಾಮ ಎನ್ನುವವರ ಮನೆಯಲ್ಲಿ ಏರ್‌ಗನ್ ದೊರೆತಿದ್ದು, ಇದರ ಜೊತೆಗೆ ಸ್ಟ್ಯಾಂಪ್ ಪೇಪರ್ ಹಾಗೂ ವಿವಿಧ ಮಹತ್ವದ ದಾಖಲೆಗಳು ದೊರೆತಿವೆ ಎಂದು ಬಳ್ಳಾರಿ ವಲಯದ ಐಜಿಪಿ ಡಾ.ಹರ್ಷ ಹೇಳಿದರು.

ನಗರದ ಎಸ್ಪಿ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಿ.ಎಂ. ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಖಡಕ್ ಸೂಚನೆ ನೀಡಲಾಗಿದ್ದು, ಇದರ ಜೊತೆಗೆ ಅನೇಕ ಸಲಹೆ, ಸೂಚನೆಗಳನ್ನು ನೀಡಿದ್ದಾರೆ. ಈ ವೇಳೆ ರೌಡಿ ನಿಗ್ರಹ ದಳ ಹೊಸ ರೂಪದಲ್ಲಿ ರಚಿಸುವುದು, ಪರಿಣಾಮಕಾರಿಯಾಗಿ ಕಾರ್ಯಾಚರಣೆ ನಡೆಸುವ ಕುರಿತು ಚರ್ಚೆ ನಡೆದಿದೆ. ನಮ್ಮ ರಾಜ್ಯ ಡಿಜಿ, ಐಜಿ ಅವರು ಈ ಕುರಿತು ಕೆಲ ನಿರ್ಧಾರಗಳನ್ನು ಕೈಗೊಂಡಿದ್ದು, ಎಲ್ಲ ವಲಯದಲ್ಲೂ ಹದ್ದಿನ ಕಣ್ಣಿಡಲಾಗಿದೆ ಎಂದರು.

ರೌಡಿಗಳ ನಿಗ್ರಹಕ್ಕಾಗಿ ಎಸ್‌ಎಚ್‌ಒ, ಸಿಪಿಐ ಅವರನ್ನೊಳಗೊಂಡ 22 ತಂಡಗಳನ್ನು ರಚಿಸಲಾಗಿದೆ. ಬಳ್ಳಾರಿ ಜಿಲ್ಲೆಯ 104, ಕೊಪ್ಪಳ ಜಿಲ್ಲೆಯ 68, ರಾಯಚೂರು 103 ಹಾಗೂ ವಿಜಯನಗರ ಜಿಲ್ಲೆಯ 106 ಸೇರಿ ಒಟ್ಟು 381 ರೌಡಿಗಳ ಮನೆ ಮೇಲೆ ಏಕಕಾಲಕ್ಕೆ ದಾಳಿ ನಡೆಸಿ ನಮ್ಮ ತಂಡದ ಸದಸ್ಯರು ಶೋಧ ಕಾರ್ಯ ನಡೆಸಿದ್ದಾರೆ.

ಈ ವೇಳೆ ಕೆಲ ರೌಡಿಗಳ ಮನೆಯಲ್ಲಿ ತಪಾಸಣೆ ಮಾಡುವುದು, ಸಹಚರರ ಬಗ್ಗೆ ಮಾಹಿತಿ, ಬಳಸುವ ವಾಹನ, ಯಾವುದಾದರೂ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರಾ, ಯಾರಿಗಾದರೂ ಬೆದರಿಕೆ ಹಾಕಿರುವ ಪ್ರಕರಣಗಳು ಬಂದಿವೆಯಾ, ಮನೆಯಲ್ಲಿ ಗನ್‌ಗಳು ಇವೆಯಾ ಎನ್ನುವ ಕುರಿತು ಜನರ ಹಿತದೃಷ್ಟಿಯಿಂದ ತಪಾಸಣೆ ನಡೆಸಲಾಗಿದೆ.

ಇದರಲ್ಲಿ 16 ರೌಡಿಗಳು ಮನೆಯಲ್ಲಿ ವಾಸವಾಗಿರಲಿಲ್ಲ. ಅವರೆಲ್ಲರಿಗೂ ನೋಟಿಸ್ ನೀಡಲಾಗಿದೆ. ಇದರಲ್ಲಿ 13ಕ್ಕೂ ಹೆಚ್ಚು ಜನರು ಮೃತಪಟ್ಟಿರುವ ಕುರಿತು ಮಾಹಿತಿ ಇದೆ. ಈ ಕುರಿತು ಮಾಹಿತಿ ಕಲೆ ಹಾಕಲಾಗುತ್ತಿದೆ ಎಂದರು.

ಬಳ್ಳಾರಿ ವಲಯದಲ್ಲಿ 53 ಜನರನ್ನು ಗಡಿಪಾರು ಮಾಡಲು ಪ್ರಸ್ತಾವನೆ ಬಂದಿದೆ. ಇದರಲ್ಲಿ 19 ಜನರನ್ನು ಗಡಿಪಾರು ಮಾಡುವ ಪ್ರಕ್ರಿಯೆ ನಡೆದಿದೆ. ಕೊಲೆ ಆರೋಪದಲ್ಲಿ ರೌಡಿ ಶೀಟರ್‌ಗಳು ಬಳ್ಳಾರಿ ವಲಯದಲ್ಲಿ ಒಟ್ಟು 377 ಜನರಿದ್ದು, ಅದರಲ್ಲಿ ವಿಜಯನಗರ 71, ಬಳ್ಳಾರಿ 126, ರಾಯಚೂರು 100 ಹಾಗೂ ಕೊಪ್ಪಳದಲ್ಲಿ 80 ಜನರಿದ್ದಾರೆ. ಎಲ್ಲರ ಮೇಲು ಹದ್ದಿನ ಕಣ್ಣಿಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಎಸ್ಪಿ ಡಾ.ಸುಮನ್ ಡಿ.ಪೆನ್ನೇಕರ್, ಎಎಸ್ಪಿ ನವೀನ್ ಕುಮಾರ್ ಇತರರಿದ್ದರು.

ಆನ್‌ಲೈನ್ ಗೇಮ್ ವ್ಯಸನ | ನಿರುದ್ಯೋಗದ ಖಿನ್ನತೆ

ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿ ಪುತ್ರ ಆತ್ಮಹತ್ಯೆ



ಕಲಬುರಗಿ: ಆನ್‌ಲೈನ್ ಗೇಮ್‌ಗಳ ವ್ಯಸನ ಹಾಗೂ ಉದ್ಯೋಗ ಸಿಗದ ಆತಂಕಕ್ಕೆ ಬೇಸತ್ತು ಎಂಜಿನಿಯರಿಂಗ್ ಪದವೀಧರ ಯುವಕನೊಬ್ಬ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಸೇಡಂ ರಸ್ತೆಯ ಮಾನಸ ರೆಸಿಡೆನ್ಸಿಯಲ್ಲಿ ತಡವಾಗಿ ಬೆಳಕಿಗೆ ಬಂದಿದೆ.

ಮೃತರನ್ನು ಕೃಷ್ಣ ಅಪ್ಪಾರಾವ್ ಮಾಲಿಪಾಟೀಲ್ (25) ಎಂದು ಗುರುತಿಸಲಾಗಿದೆ. ಇವರು ಅಥಣಿಯಲ್ಲಿ ವಾಣಿಜ್ಯ ತೆರಿಗೆ ಇಲಾಖೆಯ ಜಿಎಸ್‌ಟಿ ವಿಭಾಗದಲ್ಲಿ ನಿರೀಕ್ಷಕರಾಗಿ (ಸಿಟಿಓ) ಕರ್ತವ್ಯ ನಿರ್ವಹಿಸುತ್ತಿರುವ ಭಾರತಿ ಮಾಲಿಪಾಟೀಲ್ ಅವರ ಪುತ್ರರಾಗಿದ್ದಾರೆ. ಎಂಜಿನಿಯರಿಂಗ್ ಶಿಕ್ಷಣ ಪೂರೈಸಿದ್ದ ಮೃತ ಕೃಷ್ಣ, ಉನ್ನತ ವ್ಯಾಸಂಗಕ್ಕಾಗಿ ಗೇಟ್ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿದ್ದರು ಎನ್ನಲಾಗಿದೆ.

ಪ್ರಕರಣದ ವಿವರ: ಮೃತನ ತಂದೆ ಅಪ್ಪಾರಾವ್ ಕಳೆದ 23 ವರ್ಷಗಳಿಂದ ಕುಟುಂಬದಿಂದ ಪ್ರತ್ಯೇಕವಾಗಿ ವಾಸಿಸುತ್ತಿದ್ದರು. ತಾಯಿ ಭಾರತಿ ಅವರು ಕರ್ತವ್ಯದ ನಿಮಿತ್ತ ವಿಜಯಪುರದಲ್ಲಿದ್ದು, ಕೃಷ್ಣ ಕಲಬುರಗಿಯ ಮಾನಸ ರೆಸಿಡೆನ್ಸಿಯ ಫ್ಲಾಟ್ ಸಂಖ್ಯೆ 201ರಲ್ಲಿ ಒಬ್ಬನೇ ವಾಸವಾಗಿದ್ದ. ಜೂನ್ 18ರಂದು ಬೆಳಗ್ಗೆ 10 ಗಂಟೆ ಸುಮಾರಿಗೆ ತಾಯಿ ವಿಜಯಪುರದಿಂದ ಮಗನಿಗೆ ಕರೆ ಮಾಡಿ ಮಾತನಾಡಿದಾಗ, ಕೃಷ್ಣ ಅಸಮಾಧಾನದಿಂದಲೇ ಮಾತನಾಡಿ ಉದಾಸೀನವಾಗಿ ಫೋನ್ ಕಟ್ ಮಾಡಿದ್ದ ಎನ್ನಲಾಗಿದೆ. ಆ ಬಳಿಕ ತಾಯಿ ಜೂನ್ 20ರಂದು ಸಂಜೆ 6:30ರ ಸುಮಾರಿಗೆ ಕಲಬುರಗಿಯ ಮನೆಗೆ ಧಾವಿಸಿದ್ದಾರೆ. ಸಾರ್ವಜನಿಕರ ಸಹಾಯದಿಂದ ಬಾಗಿಲು ಒಡೆದರೂ ಯಾವುದೇ ಸ್ಪಂದನೆ ಸಿಗದಿದ್ದಾಗ, ತಾಯಿ ತಕ್ಷಣವೇ ತುರ್ತು ಸಹಾಯವಾಣಿ '112' ಗೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ.

ಸ್ಥಳಕ್ಕೆ ಧಾವಿಸಿದ ಪೊಲೀಸರು ಸಾರ್ವಜನಿಕರ ಸಮ್ಮುಖದಲ್ಲಿ ಬಾಗಿಲಿನ ಕೊಂಡಿ ಮುರಿದು ಒಳಪ್ರವೇಶಿಸಿದಾಗ ದುರಂತ ಬೆಳಕಿಗೆ ಬಂದಿದೆ.

ಕೃಷ್ಣ ಕೊಠಡಿಯ ಛತ್ತಿನ ಜೋಕಾಲಿ ಹುಕ್ಕಿಗೆ ಹಗ್ಗದಿಂದ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾನೆ. ಜೂನ್ 18ರಂದೇ ಆತ್ಮಹತ್ಯೆ ಸಂಭವಿಸಿರಬಹುದು ಎಂದು ಶಂಕಿಸಲಾಗಿದ್ದು, ಸದ್ಯ ಮೃತದೇಹವು ಸಂಪೂರ್ಣ ಕೊಳೆತ ಸ್ಥಿತಿಯಲ್ಲಿದ್ದ ಹಿನ್ನೆಲೆ ಸ್ಥಳದಲ್ಲೇ ಇನ್‌ಕ್ವೆಸ್ಟ್ ನಡಾವಳಿ ಜರುಗಿಸಲಾಗಿದೆ.

ಮಗನ ಸಾವಿನ ಕುರಿತು ಯಾರ ಮೇಲೂ ಯಾವುದೇ ಅನುಮಾನವಿಲ್ಲ ಎಂದು ತಾಯಿ ಪೊಲೀಸರಿಗೆ ನೀಡಿದ ದೂರಿನಲ್ಲಿ ಸ್ಪಷ್ಟಪಡಿಸಿದ್ದಾರೆ. ಈ ಕುರಿತು ಮೃತನ ತಾಯಿ ಭಾರತಿ ಮಾಲಿಪಾಟೀಲ್ ನೀಡಿದ ದೂರಿನನ್ವಯ ಕಲಬುರಗಿಯ ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಜರುಗಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಜೂ.24ರಂದು ಅಭಿನಂದನಾ ಕಾರ್ಯಕ್ರಮ

ಶಿರಸಿ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಉತ್ತರ ಕನ್ನಡ ತಾಲೂಕಾ ಘಟಕ ಶಿರಸಿ ಆಶ್ರಯದಲ್ಲಿ 2025–26ನೇ ಶೈಕ್ಷಣಿಕ ವರ್ಷದ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಕನ್ನಡ ಭಾಷಾ ವಿಷಯದಲ್ಲಿ ಶೇಕಡಾ 100 ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಅಭಿನಂದನಾ ಕಾರ್ಯಕ್ರಮವು ಜೂ.24 ರಂದು ಮಧ್ಯಾಹ್ನ 3.30ಕ್ಕೆ ನಗರದ ನೆಮ್ಮದಿ ರಂಗಧಾಮದಲ್ಲಿ ಹಮ್ಮಿಕೊಳ್ಳಲಾಗಿದೆ.
ಶಾಸಕ ಭೀಮಣ್ಣ ನಾಯ್ಕ ಉದ್ಘಾಟಿಸಲಿದ್ದು, ಕಸಾಪ ಜಿಲ್ಲಾಧ್ಯಕ್ಷ ಬಿ.ಎನ್ ವಾಸರೆ ಅಧ್ಯಕ್ಷತೆ ವಹಿಸಲಿದ್ದಾರೆ. ಶಿರಸಿ ಶೈಕ್ಷಣಿಕ ಜಿಲ್ಲೆಯ ಉಪನಿರ್ದೇಶಕರ ಡಿ.ಆರ್ ನಾಯ್ಕ ಹಾಗೂ ಶಿರಸಿ ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಚ್ ನಾಯ್ಕ ಅಭಿನಂದನಾ ಪತ್ರವನ್ನು ವಿತರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾ ಜಾನಪದ ಪರಿಷತ್ ಅಧ್ಯಕ್ಷ ಡಾ.ವೇಂಕಟೇಶ ನಾಯ್ಕ, ಸಾಹಿತಿ ಡಿ.ಎಸ್ ನಾಯ್ಕ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಕೀರಣ ನಾಯ್ಕ, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಎಸ್.ಜಿ ಹೆಗಡೆ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಮಾರುತಿ ಉಪ್ಪಾರ ಉಪಸ್ಥಿತರಿರಲಿದ್ದಾರೆ. ಕಸಾಪ ಶಿರಸಿ ಘಟಕದ ಅಧ್ಯಕ್ಷ ಜಿ ಸುಬ್ರಾಯ ಭಟ್ ಬಕ್ಕಳ ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದಾರೆ ಎಂದು ಕಸಾಪ ಶಿರಸಿ ಘಟಕ ಪ್ರಕಟಣೆಯಲ್ಲಿ ತಿಳಿಸಿದೆ.

ಲೋಡ್ ಲಾರಿ ಪಲ್ಟಿ: ತಪ್ಪಿದ ಅನಾಹುತ

ಹೊನ್ನಾವರ: ತಾಲೂಕಿನ ಕಾಸರಕೋಡ ಟೊಂಕಾ ಕಡಲ ಮರಳು ತೀರದ ಕಚ್ಚಾ ಕಾಲು ದಾರಿಯಲ್ಲಿ ಎಚ್ ಪಿ ಪಿಎಲ್ ಕಂಪನಿ ಖಾಸಗಿ ಬಂದರಿನ ಜೆಟ್ಟಿ ನಿರ್ಮಾಣಕ್ಕೆ ಸಾಗಿಸುವ ಬಾರಿ ಗಾತ್ರದ ಶಿಲೆ ಕಲ್ಲಿನ ಲೋಡ್ ಲಾರಿಯು ಮರಳಿನಲ್ಲಿ ಸಿಲುಕಿ ಪರಿಣಾಮ ಬಾರಿ ಶಿಲೆ ಕಲ್ಲು ತಂಬಿದ ಲಾರಿ ಮುಗುಚಿ ಬಿದ್ದ ವರದಿಯಾಗಿದೆ. ಬಾರಿ ಅನಾಹುತ ತಪ್ಪಿದೆ. ಯಾವುದೇ ಜೀವಹಾನಿ ಸಂಭವಿಸಿಲ್ಲ. ಬಾರಿ ವಾಹನಗಳಿಗೆ ಕಚ್ಚಾರಸ್ತೆಯಲ್ಲಿ ತಿರುಗಾಡಲು ಆರ್‌ಟಿಓ ಹಾಗೂ ಹೊನ್ನಾವರ ಹೊರ ಠಾಣೆ ರಕ್ಷಣೆ ನೀಡುವುದು ನಿಲ್ಲಿಸಬೇಕು ಎಂದು ಸ್ಥಳೀಯ ನಿವಾಸಿಗಳು ಸಾರ್ವಜನಿಕರು ಮತ್ತು ಮೀನುಗಾರರು ಒತ್ತಾಯಿಸಿದ್ದಾರೆ.

ಚಾಕು ಇರಿತ: ಚಿಕಿತ್ಸೆ ಫಲಿಸದೆ ವ್ಯಕ್ತಿ ಸಾವು

ಕಾರವಾರ: ನಗರದ ನದಿವಾಡದ ಬಳಿ ನಡೆದ ಗಲಾಟೆಯಲ್ಲಿ ಚಾಕು ಇರಿತಕ್ಕೆ ಒಳಗಾದ ರೋಷನ್ ಹುಲಸ್ವಾರ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟ ಘಟನೆ ನಡೆದಿದೆ. ಜೂ. 7ರಂದು ರಾತ್ರಿ 9.30 ರ ಸಮಯದಲ್ಲಿ ಆಟದ ಮೈದಾನದಲ್ಲಿ ಅಂಬೇಡ್ಕರ್ ಕಾಲನಿಯ ಸಂಜಯ ಮಾಂಗ್ರೇಕರ ಎಂಬಾತ ರೋಷನ್ ಹುಲಸ್ವಾರ ಮೇಲೆ ಹಲ್ಲೆ ನಡೆಸಿ ಚಾಕುವಿನಿಂದ ಸೊಂಟ ಮತ್ತು ಹೊಟ್ಟೆ ಭಾಗಕ್ಕೆ ತಿವಿದಿದ್ದು, ಇದರಿಂದ ತೀವ್ರ ಗಾಯಗೊಂಡ ರೋಷನ್ ನನ್ನು ಜಿಲ್ಲಾ ಆಸ್ಪತ್ರೆಗೆ ಸಾಗಿಸಲಾಗಿತ್ತು. ಈ ಕುರಿತು ಕಾರವಾರ ಪೊಲೀಸರು ಸಂಜಯ ನನ್ನು ಬಂಧಿಸಿದ್ದರು. ರೋಷನ್ ಗೆ ಮಂಗಳೂರಿನ ಎ.ಜೆ. ಆಸ್ಪತ್ರೆಗೆ ದಾಖಲಿಸಲಾಗಿತ್ತು. ನಂತರ ಅಲ್ಲಿಂದ ವೆನಲಾಕ್ ಆಸ್ಪತ್ರೆಗೆ ಸಾಗಿಸಲಾಗಿತ್ತು. ಆದರೆ ಅಲ್ಲಿ ಚಿಕಿತ್ಸೆ ಫಲಕಾರಿಯಾಗದೇ ರೋಷನ್ ಹುಲಸ್ವಾರ ಮೃತಪಟ್ಟಿದ್ದಾನೆ. ರೋಷನ್ ವೆಲ್ಡಿಂಗ್ ಕೆಲಸ ಮಾಡಿಕೊಂಡು ತನ್ನ ಕುಟುಂಬದ ಜೀವನ ನಿರ್ವಹಣೆ ಮಾಡಿಕೊಂಡಿದ್ದ. ಹಳೆಯ ದ್ವೇಷದಿಂದ ಇಬ್ಬರ ಮಧ್ಯೆ ಜಗಳ ನಡೆದಿತ್ತು ಎನ್ನಲಾಗಿದೆ. ಪ್ರಕರಣ ಪೊಲೀಸ್ ಠಾಣೆಯಲ್ಲಿ ವಿಚಾರಣೆಯಲ್ಲಿದೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	62799	68500
ಬಿಳಿಗೋಟು	26011	34699
ಕೆಂಪುಗೋಟು	28158	34699
ಬೆಟ್ಟೆ	40000	49899
ರಾಶಿ	49259	51600
ಚಾಲಿ	44100	48315

ಯಲ್ಲಾಪುರ	ಕನಿಷ್ಠ	ಗರಿಷ್ಠ
ಆಪಿ	53379	53379
ರಾಶಿ	48899	51199
ಬೆಟ್ಟೆ	40620	46699
ಕೆಂಪುಗೋಟು	21600	33709
ಬಿಳಿಗೋಟು	20000	33199
ಚಾಲಿ	36899	47229
ಕೋಕಾ	14909	26900
ಕಾಳುಮೆಣಸು	65099	65099



ಗೋಕರ್ಣ: ಬಿಜೆಪಿ ಗೋಕರ್ಣ ಮಂಡಲದ ವತಿಯಿಂದ ಪಕ್ಷದ ಕಚೇರಿಯಲ್ಲಿ ಭಾನುವಾರ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಯಿತು. ಗೋಕರ್ಣ ಮಂಡಲಾಧ್ಯಕ್ಷ ಗಣೇಶ ಪಂಡಿತ್, ಗ್ರಾಪಂ ಮಾಜಿ ಅಧ್ಯಕ್ಷ ಮಂಜುನಾಥ ಜನ್ನು, ವಿನಾಯಕ ಕೊಡ್ಕಣಿ, ಜಗದೀಶ ಅಂಬಿಗ, ಜಯರಾಮ ಹೆಗಡೆ, ಕುಮಾರ ದೀವಟಿಗೆ, ಮಾಜಿ ಗ್ರಾಪಂ ಸದಸ್ಯರಾದ ರಮೇಶ ಪ್ರಸಾದ, ಗಣಪತಿ ನಾಯ್ಕ, ಮೋಹನ ಮೂಡಂಗಿ, ಶೇಖರ ನಾಯ್ಕ, ಮತ್ತಿತರರು ಉಪಸ್ಥಿತರಿದ್ದರು.

ಬಾವಿ ನೀರಿನಲ್ಲಿ ಪೆಟ್ರೋಲ್, ಡೀಸೆಲ್ ವಾಸನೆ: ಕ್ರಮಕ್ಕೆ ಆಗ್ರಹ

ಹೊನ್ನಾವರ: ಪಟ್ಟಣದ ತಹಶೀಲ್ದಾರ್ ಕಚೇರಿ ಸಮೀಪದ ಪ್ರಿಯದರ್ಶಿನಿ ಪೆಟ್ರೋಲ್ ಬಂಕ್‌ನಿಂದಾಗಿ ಕೆಳಗಿನ ಪಾಳ್ಯದ ಸುತ್ತಮುತ್ತಲಿನ 7 ಮನೆಗಳ ಬಾವಿಗಳಲ್ಲಿ ನೀರು ಪೆಟ್ರೋಲ್ ಮತ್ತು ಡೀಸೆಲ್ ವಾಸನೆಯ ಜೊತೆ, ನೀರಿನ ಬಣ್ಣವು ಕೂಡಾ ಬದಲಾಗಿದೆ. ಸಂಬಂಧ ಪಟ್ಟವರು ಕೂಡಲೇ ಸರಿಪಡಿಸಬೇಕು ಎಂದು ಸ್ಥಳೀಯ ಸಾರ್ವಜನಿಕರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.
ಕಳೆದ ಕೆಲ ದಿನದಿಂದ ಪೆಟ್ರೋಲ್ ಬಂಕ್ ನವೀಕರಣ ಮಾಡುತ್ತಿದ್ದು, ಅಂದಿನಿಂದ ಕೆಳಗಿನಪಾಳ್ಯದ 7ಕ್ಕೂ ಅಧಿಕ ಮನೆಯ ಬಾವಿಯಲ್ಲಿ ನೀರು ಪೆಟ್ರೋಲ್ ಮತ್ತು ಡೀಸೆಲ್ ವಾಸನೆ ಬರುತ್ತಿದೆ. ಬಾವಿಯ ನೀರಿನ ಬಣ್ಣವು ಬದಲಾಗಿದೆ. ನಮಗೆ ಬಳಸಲು ಕುಡಿಯಲು ಯಾವುದೇ ನೀರಿನ ಪರ್ಯಾಯ ವ್ಯವಸ್ಥೆ ಸಹ ಇರದೇ ಅಂತಾಗಿದ್ದರಿಂದ ಸಮಸ್ಯೆ ಉಂಟಾಗಿದೆ. ಕೆಲ ದಿನದ ಹಿಂದೆ ಘಟನೆ ಕುರಿತಾಗಿ ಮಾಲಕರ ಗಮನಕ್ಕೆ ತಂದಾಗ ಒಮ್ಮೆ ಬಾವಿ ಸ್ವಚ್ಛಗೊಳಿಸಿದರೂ, ಯಾವುದೇ ಪ್ರಯೋಜನವಾಗಿಲ್ಲ, ನಂತರ ಒಂದು ವಾರದ ಸಮಯಾವಕಾಶ ಪಡೆದರೂ ಸಮಸ್ಯೆ ಬಗೆಹರಿದಿಲ್ಲ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಕುಡಿಯುವ ನೀರಿನ ಜೊತೆ ದಿನನಿತ್ಯದ ಪೂರೈಕೆಗೆ ಬಾವಿ ನೀರನ್ನು ಬಳಸುತ್ತಿದ್ದು, ನಮ್ಮ ಸಮಸ್ಯೆಗೆ ಸ್ಪಂದಿಸಿ ಬದಲಿ ವ್ಯವಸ್ಥೆ ಮಾಡಿಕೊಡುವ ಮೂಲಕ ನಮಗೆ ನ್ಯಾಯ ಒದಗಿಸುವಂತೆ ಹರೀಶ ಪಾಂಡುರಂಗ ಶೇಟ್, ಗಣೇಶ, ಶ್ರೀಕಾಂತ ನಾಯಕ, ಕಲ್ಪನಾ ಡಿ.ಮೇಸ್ತ, ಶೈಲಾ ಮೇಸ್ತ, ಕಿಶೋರ ಕೃಷ್ಣ ಮೇಸ್ತ, ಪವಿತ್ರಾ ಲಕ್ಷ್ಮಣ. ಮೇಸ್ತ ಹಾಗೂ ಕೆಳಗಿನಪಾಳ್ಯದ ಸಾರ್ವಜನಿಕರು ಆಗ್ರಹಿಸಿದ್ದಾರೆ.



ಹೊನ್ನಾವರ: ಕೆಳಗಿನ ಪಾಳ್ಯದ ಸುತ್ತಮುತ್ತಲಿನ 7 ಮನೆಗಳ ಬಾವಿಗಳಲ್ಲಿ ನೀರು ಪೆಟ್ರೋಲ್ ಮತ್ತು ಡೀಸೆಲ್ ವಾಸನೆಯ ಜೊತೆ, ನೀರಿನ ಬಣ್ಣವು ಕೂಡಾ ಬದಲಾಗಿದೆ. ಸಂಬಂಧ ಪಟ್ಟವರು ಕೂಡಲೇ ಸರಿಪಡಿಸಬೇಕು ಎಂದು ಸ್ಥಳೀಯ ಸಾರ್ವಜನಿಕರಿಂದ ಪೊಲೀಸ್ ಠಾಣೆಗೆ ದೂರು ನೀಡಲಾಯಿತು.

ಮಂಕಾದ ಮುಂಗಾರು: ರೈತರಲ್ಲಿ ಆತಂಕ

ಸುಧೀರ ನಾಯರ್

ಬನವಾಸಿ: ಜೂನ್ ಎರಡನೇ ವಾರ ಕಳೆದರೂ ಸಹ ನಿಗದಿತ ಪ್ರಮಾಣಕ್ಕಿಂತ ಕಡಿಮೆ ಮಳೆಯಾಗಿದ್ದು ಮುಂಗಾರು ಮಂಕಾದ ಹಿನ್ನೆಲೆಯಲ್ಲಿ ರೈತರು ಚಿಂತಾಕ್ರಾಂತರಾಗಿದ್ದಾರೆ.

ಸಾಮಾನ್ಯವಾಗಿ ಮೇ ತಿಂಗಳ ಕೊನೆಯ ವಾರ ಅಥವಾ ಜೂನ್ ಮೊದಲ ವಾರದಲ್ಲಿ ಆರಂಭವಾಗಬೇಕಿದ್ದ ಭತ್ತದ ಬಿತ್ತನೆ ಮತ್ತು ನಾಟಿ ಕಾರ್ಯಗಳು ಮಳೆಯಿಲ್ಲದೇ ನೆನೆಗುದಿಗೆ ಬಿದ್ದಿವೆ. ಕೆಲವು ಕಡೆಗಳಲ್ಲಿ ರೈತರು ಧೈರ್ಯ ಮಾಡಿ ಬಿತ್ತನೆ ಮಾಡಿದ್ದರೂ, ಮಳೆಯ ಕೊರತೆಯಿಂದಾಗಿ ಮೊಳಕೆಗಳು ಒಣಗುವ ಭೀತಿ ಎದುರಾಗಿದೆ. ಕರಾವಳಿ ಮತ್ತು ಮಲೆನಾಡು ಭಾಗದ ಪ್ರಮುಖ ಬೆಳೆಯಾದ ಅಡಿಕೆ ತೋಟ ಮತ್ತು ಭತ್ತದ ಗದ್ದೆಗೆ ನೀರಿನ ಅಭಾವ ಎದುರಾಗತೊಡಗಿದೆ.

ಈ ಭಾಗದ ಪ್ರಮುಖ ಜಲಮೂಲಗಳಾದ ಕೆರೆಗಳು, ಬಾವಿಗಳು ಹಾಗೂ ಸಣ್ಣಮಟ್ಟ ಹಳ್ಳಗಳು ಜೂನ್ ತಿಂಗಳಿನಲ್ಲೂ ಕಡು ಬೇಸಿಗೆಯಂತೆ ಭಾಸವಾಗುತ್ತಿವೆ. ಅಂತರ್ಜಲ ಮಟ್ಟ ಕುಸಿದಿರುವುದರಿಂದ ಬೋರ್‌ವೆಲ್ ನಂಬಿಕೊಂಡಿದ್ದ ರೈತರಿಗೂ ಆತಂಕ ತಪ್ಪಿಲ್ಲ. ಅಡಿಕೆ ತೋಟಗಳಿಗೆ ಸಕಾಲದಲ್ಲಿ ನೀರು ಹರಿಸದಿದ್ದರೆ ಮುಂದಿನ ಇಳುವರಿಯ ಮೇಲೆ ತೀವ್ರ ಪರಿಣಾಮ ಬೀರಲಿದೆ ಎಂದು ತೋಟಗಾರಿಕಾ ಬೆಳೆಗಾರರು ಅಳಲು ತೋಡಿಕೊಳ್ಳುತ್ತಿದ್ದಾರೆ.

ಪ್ರತಿ ವರ್ಷ ಜೂನ್ ಆರಂಭಕ್ಕೇ ಮಲೆನಾಡಿನಲ್ಲಿ ಮಳೆ ಅಬ್ಬರಿಸುತ್ತಿತ್ತು. ಆದರೆ, ಈ ಬಾರಿ ಮುಗಿಲ ಕಡೆ ಮುಖ ಮಾಡಿ ಕೂರುವ ಪರಿಸ್ಥಿತಿ ಬಂದಿದೆ. ಸಾಲ ಸೂಲ ಮಾಡಿ ಗೊಬ್ಬರ, ಬಿತ್ತನೆ ಬೀಜ ತಂದಿಟ್ಟುಕೊಂಡಿದ್ದೇವೆ, ಮಳೆ ಬಾರದೇ ಹೋದರೆ ಬದುಕು ಕಷ್ಟ ಎಂಬ ಆತಂಕ ರೈತರಲ್ಲಿ ಮನೆಮಾಡಿದೆ.

ಈ ವರ್ಷ ಬೇಸಿಗೆಯಲ್ಲೂ ಸಹ ಹೇಳಿಕೊಳ್ಳುವ ರೀತಿಯಲ್ಲಿ ಮಳೆಯಾಗದಿದ್ದರೂ ಸಹ ನೀರಿನ ಸಮಸ್ಯೆ ಅಷ್ಟೊಂದು ಎದುರಾಗಿರಲಿಲ್ಲ, ಆದರೆ ಇದೀಗ ಮಳೆ ಬಾರದೆ ಇರುವುದರಿಂದ ನೀರಿನ ಸಮಸ್ಯೆ ಎದುರಾಗುವ ಸಾಧ್ಯತೆ ಹೆಚ್ಚಿವೆ ಎನ್ನಲಾಗಿದೆ.


ಬಿತ್ತನೆ ಮಾಡಿದ ರೈತರಿಗೆ ಭಾರಿ ಹೊಡೆತ: ಮೇ ತಿಂಗಳಿನಲ್ಲಿ ಬಂದ ಮಳೆಯನ್ನು ನಂಬಿಕೊಂಡು ಇನ್ನೇನು ಮಳೆಗಾಲ ಆರಂಭವಾಗಿತೆಂದು ತಾಲೂಕಿನ ಪೂರ್ವ ಭಾಗದ ಹಲವು ರೈತರು ಗದ್ದೆಗಳಲ್ಲಿ ರೂಟರ್ ಹೊಡೆದು ಮಣ್ಣನ್ನು ಸಡಿಲಗೊಳಿಸಿ ಬೀಜ ಬಿತ್ತನೆ ಕಾರ್ಯ ನಡೆಸಿದ್ದರು. ಇದೀಗ ಮಳೆ ಕೈ ಕೊಟ್ಟ ಹಿನ್ನೆಲೆಯಲ್ಲಿ ಬಿತ್ತನೆ ಮಾಡಿದ ಬೀಜಗಳು ಒಣಗಲು ಆರಂಭವಾಗಿದ್ದು ರೈತರಲ್ಲಿ ಆತಂಕ ಎದುರಾಗಿದೆ.

ಕಳೆದ ನಾಲ್ಕೈದು ದಿನಗಳಿಂದ ಹೇಳಿಕೊಳ್ಳುವ ರೀತಿಯಲ್ಲಿ ಮಳೆಯಾಗಿಲ್ಲ. ತುಂತುರು ಹನಿಗಳು ಬಿದ್ದು ನಾಪತ್ತೆ ಯಾಗುತ್ತಿದೆಯೇ ಹೊರತು ಭೂಮಿ ತಣಿಸುವಂತಹ ಭಾರಿ ಮಳೆಯಾಗುತ್ತಿಲ್ಲ. ಮುಂಬರುವ ದಿನಗಳಲ್ಲಾದರೂ ವರುಣದೇವ ಕೃಪೆ ತೋರಿ ಸಕಾಲದಲ್ಲಿ ಮಳೆ ಸುರಿಸದಿದ್ದರೆ, ಶಿರಸಿ ತಾಲೂಕಿನ ಕೃಷಿ ವಲಯದ ಆರ್ಥಿಕತೆಗೆ ಭಾರಿ ಹೊಡೆತ ಬೀಳುವುದರಲ್ಲಿ ಯಾವುದೇ ಸಂಶಯವಿಲ್ಲ. ರೈತರು ಸದ್ಯಕ್ಕಂತೂ ಮಳೆಗಾಗಿ ದೇವರ ಮೊರೆ ಹೋಗುತ್ತಿದ್ದಾರೆ.

ಕಾದು ನೋಡಿ ಬಿತ್ತನೆ ಮಾಡಲು ಸಲಹೆ

ಕನಿಷ್ಠ ಒಂದು ವಾರವಾದರೂ ಮಳೆಯಾದ ನಂತರ ರೈತರು ಬಿತ್ತನೆ ಕಾರ್ಯ ನಡೆಸಿದರೆ ಉತ್ತಮ ವಾಗಿರುತ್ತದೆ. ಇಲ್ಲವಾದಲ್ಲಿ ನಷ್ಟ ಅನುಭವಿಸಬೇಕಾಗುತ್ತದೆ ಎಂದು ಅಧಿಕಾರಿಗಳು ರೈತರಿಗೆ ಸಲಹೆ ನೀಡಿದ್ದಾರೆ.

ದಿಗಂತ ವಿಶೇಷ



ಈ ವರ್ಷ ಜೂನ್ ಎರಡನೇ ವಾರ ಕಳೆದರೂ ಇನ್ನೂ ಸಹ ಮಳೆಗಾಲ ಆರಂಭವಾಗಿಲ್ಲ. ಈಗಾಗಲೇ ಬಿತ್ತನೆ ಕಾರ್ಯ ಆರಂಭವಾಗಬೇಕಿತ್ತು. ಮುಂಗಾರು ಕೈ ಕೊಟ್ಟಿರುವುದು ರೈತರಿಗೆ ಸಾಕಷ್ಟು ತೊಂದರೆಗಳಾಗುವ ಸಾಧ್ಯತೆಗಳಿವೆ. ಮಳೆ ಬಂದರೆ ಮಾತ್ರ ನಮ್ಮ ಬದುಕು ಹಸನಾಗುತ್ತದೆ.
■ ಗಜಾನನ ಗೌಡ. ಅಧ್ಯಕ್ಷರು. ವ್ಯವಸಾಯ ಸೇವಾ ಸಹಕಾರಿ ಸಂಘ. ಬನವಾಸಿ

ಈ ವರ್ಷ ಮಳೆಯ ಕೊರತೆ ಸಾಧ್ಯತೆ

ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಮಳೆಯ ಪ್ರಮಾಣ ಕಡಿಮೆಯಾಗುವ ಸಾಧ್ಯತೆಗಳಿವೆ ಎಂಬ ವರದಿ ಹವಾಮಾನ ಇಲಾಖೆಯಿಂದ ಲಭ್ಯವಾಗಿದೆ. ಮೊದಲೇ ಸಂಕಷ್ಟಕ್ಕೆ ಸಿಲುಕಿದ ರೈತರಿಗೆ ಈ ವರ್ಷ ಮಳೆಯೂ ಕೈ ಕೊಟ್ಟರೆ ಇನ್ನಷ್ಟು ಸಮಸ್ಯೆಗಳು ಎದುರಾಗುವ ಸಾಧ್ಯತೆಗಳು ಹೆಚ್ಚಿವೆ ಎನ್ನಲಾಗುತ್ತಿದೆ.

ಖಾಯಂ ಶಿಕ್ಷಕರ ನೇಮಕಕ್ಕೆ ಆಗ್ರಹಿಸಿ ಪ್ರತಿಭಟನೆ

ಮುಂಡಗೋಡ: ತಾಲೂಕಿನ ಕೆಂದಲಗೇರಿ ಕಿರಿಯ ಪ್ರಾಥಮಿಕ ಶಾಲೆಗೆ ಖಾಯಂ ಶಿಕ್ಷಕರನ್ನು ನೇಮಿಸಬೇಕೆಂದು ಸ್ಥಳೀಯರು ಮತ್ತು ಪಾಲಕರು ಶಾಲೆಯ ಎದುರು ಪ್ರತಿಭಟನೆ ನಡೆಸಿದ ಘಟನೆ ಸೋಮವಾರ ನಡೆದಿದೆ.

ಕಳೆದ ಏಳು ವರ್ಷದಿಂದ ಈ ಗ್ರಾಮದ ಶಾಲೆಗೆ ಖಾಯಂ ಶಿಕ್ಷಕರಿಲ್ಲ, ಇದರಿಂದ ಮಕ್ಕಳ ವ್ಯಾಸಂಗಕ್ಕೆ ಹಿನ್ನಡೆಯಾಗಿದೆ. ಶಿಕ್ಷಣ ಇಲಾಖೆಯೂ ಇಬ್ಬರು ಅತಿಥಿ ಶಿಕ್ಷಕರು ನೇಮಿಸಿ ಕೈ ತೊಳೆದುಕೊಳ್ಳುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿ ಪಾಲಕರರು,ಶಾಲೆಯ ಎಸ್‌ಡಿಎಂಸಿ ಹಾಗೂ ತಾಲೂಕಾ ಎಸ್‌ಡಿಎಂಸಿಯ ಸಮನ್ವಯ ಅಧ್ಯಕ್ಷರ ನೇತೃತ್ವದಲ್ಲಿ ಪ್ರತಿಭಟನೆಗೆ ಮುಂದಾದರು. ಕಿರಿಯ ಪ್ರಾಥಮಿಕ ಶಾಲೆಯಲ್ಲಿ 45 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಅಲ್ಲ ಸಂಖ್ಯಾತ ಹಿಂದುಳಿದ ವರ್ಗ, ಸಿದ್ದಿ ಸಮುದಾಯ ಮತ್ತು ಪರಿಶಿಷ್ಟ ಸಮುದಾಯದ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಒಂದು ವರ್ಷದ ಹಿಂದೆ ಗ್ರಾಮ ಸಭೆಯಲ್ಲಿ ಈ ಬಗ್ಗೆ ಠರಾವು ಮಾಡಲಾಗಿದೆ. ಏಳು ವರ್ಷದಿಂದ ಖಾಯಂ ಶಿಕ್ಷಕರನ್ನು ನೀಡುವಂತೆ ಬಿಇಓ ಅವರಿಗೆ ಜನಪ್ರತಿನಿಧಿಗಳ ಮನವಿ ಸಲ್ಲಿಸುತ್ತಾ ಬರುತ್ತಿದ್ದೇವೆ. ಆದರೆ ಬೇಡಿಕೆಗೆ ಶಿಕ್ಷಣ ಇಲಾಖೆ ಸ್ಪಂದಿಸುತ್ತಿಲ್ಲ. ಮಕ್ಕಳು ಸಹ ಶಾಲೆಯಲ್ಲಿ ಜವಾಬ್ದಾರಿ ಇರುವ ಮುಖ್ಯ ಶಿಕ್ಷಕರು ಇಲ್ಲದ ಕಾರಣ ಶಾಲೆಯ ಅವಧಿಯಲ್ಲಿ ಹೊರಗಡೆ ಓಡಾಡುತ್ತಾರೆ. ಸರಿಯಾದ ಶಿಕ್ಷಣ ಸಿಗದೆ ವಂಚಿತರಾಗುತ್ತಿದ್ದಾರೆ. ಕಾಟಾಚಾರಕ್ಕೆ ಇಂದೂರಿನ ದೈಹಿಕ ಶಿಕ್ಷಕರಿಗೆ ಪ್ರಭಾರವಾಗಿ ಬಿಸಿಯೂಟ ಜವಾಬ್ದಾರಿ ನೀಡಿದ್ದಾರೆ. ಇಷ್ಟೆಲ್ಲಾ ಖಾಯಂ ಶಿಕ್ಷಕರು ನೀಡುವಂತೆ ಕೇಳಿಕೊಂಡರು ಪ್ರಸ್ತುತ ವರ್ಷವು ಇಬ್ಬರು ಅತಿಥಿ ಶಿಕ್ಷಕರನ್ನು ನೀಡಿದ್ದಾರೆ ಎಂದು ಶಿಕ್ಷಣ ಇಲಾಖೆಯ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ತಾಲೂಕಾ ಎಸ್ ಡಿಎಂಸಿ ಸಮನ್ವಯ ಸಮಿತಿಯ ಅಧ್ಯಕ್ಷ ನಾಗರಾಜ ಮಾಡಳ್ಳಿ ಮಾತನಾಡಿ, ಖಾಯಂ ಶಿಕ್ಷಕರನ್ನು ನೀಡುವಂತೆ ಏಳು ವರ್ಷದಿಂದ ಮನವಿ ಸಲ್ಲಿಸಲಾಗುತ್ತಿದೆ.ಈವರೆಗೂ ನೇಮಿಸಿಲ್ಲ. ಇಂದು ಪ್ರತಿಭಟನೆಯ ವಿಷಯ ತಿಳಿದು ಸಿಆರ್ ಪಿ ಎಸ್ ಕೊಟಗೋಣಸಿ ಅವರು ಸ್ಥಳಕ್ಕೆ ಎರಡ್ಮೂರು ದಿನದಲ್ಲಿ ಖಾಯಂ ಶಿಕ್ಷಕರನ್ನು ನೆಮಿಸಲಾಗುವುದು ಎಂದು ಭರವಸೆ ನೀಡಿದರಿ ಆದರೆ ನಾವು ಎಂಟು ದಿನಗಳ ಕಾಲ ಸಮಯ ನೀಡುತ್ತೇವೆ. ಖಾಯಂ ಶಿಕ್ಷಕರನ್ನು ನೀಡದಿದ್ದರೆ ಗ್ರಾಮದ ಯಾವೊಬ್ಬ ವಿದ್ಯಾರ್ಥಿಯನ್ನು ಶಾಲೆಗೆ ಕಳುಹಿಸುವುದಿಲ್ಲ ಎಂದು ತಿಳಿಸಿ ಮನವಿ ನೀಡಲಾಗಿದೆ.



ಪೋಲಿಯೋ ಲಸಿಕೆ ಅಭಿಯಾನ ಯಶಸ್ವಿಗೊಳಿಸಿ

ಭಟ್ಕಳ: ಇಲ್ಲಿಯ ತಾಲೂಕು ಆಡಳಿತ ಸೌಧದಲ್ಲಿ ಸೋಮವಾರ ಪ್ರಭಾರ ತಹಶೀಲ್ದಾರ ಪ್ರವೀಣ್ ಕಾರಂಡೆ ಅಧ್ಯಕ್ಷತೆಯಲ್ಲಿ 2026ನೇ ಸಾಲಿನ ಪಲ್ಸ್ ಪೋಲಿಯೋ ಕಾರ್ಯಕ್ರಮದ ಪೂರ್ವಭಾವಿ ಸಭೆ ನಡೆಯಿತು.

ಸಭೆಯಲ್ಲಿ ಅಧಿಕಾರಿಗಳನ್ನುದ್ದೇಶಿಸಿ ಮಾತನಾಡಿದ ಅವರು, ಮಕ್ಕಳನ್ನು ಪೋಲಿಯೋ ರೋಗದಿಂದ ಸಂಪೂರ್ಣ ರಕ್ಷಿಸುವ ಉದ್ದೇಶದಿಂದ ಜಾರಿಗೊಳಿಸಲಾಗುತ್ತಿರುವ ಪಲ್ಸ್ ಪೋಲಿಯೋ ಕಾರ್ಯಕ್ರಮದ ಯಶಸ್ಸಿಗೆ ಸರ್ವ ಇಲಾಖೆಗಳ ಸಮನ್ವಯ ಮತ್ತು ಸಹಕಾರ ಅಗತ್ಯವಾಗಿದೆ. ಯಾವುದೇ ಮಗು ಲಸಿಕೆಯಿಂದ ವಂಚಿತವಾಗದಂತೆ ಆರೋಗ್ಯ ಇಲಾಖೆ ಸೇರಿದಂತೆ ಎಲ್ಲ ಸಂಬಂಧಿತ ಇಲಾಖೆಗಳು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು. ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಜನಜಾಗೃತಿ ಮೂಡಿಸಿ, ಪೋಷಕರಲ್ಲಿ ಅರಿವು ಹೆಚ್ಚಿಸುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಅವರು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮದ ಅಧ್ಯಕ್ಷರು ಹಾಗೂ ಸದಸ್ಯರನ್ನು ಒಳಗೊಂಡ ಚಾಲನಾ ಸಮಿತಿಯ ಎರಡನೇ ಸುತ್ತಿನ ಸಭೆಯಲ್ಲಿ ಕಾರ್ಯಕ್ರಮದ ಸಿದ್ಧತೆಗಳು, ಗುರಿ ಹಾಗೂ ಕಾರ್ಯಯೋಜನೆ ಕುರಿತು ಸವಿಸ್ತಾರವಾಗಿ ಚರ್ಚಿಸಲಾಯಿತು. ತಾಲೂಕು ಆರೋಗ್ಯಾಧಿಕಾರಿ ಡಾ. ಸನಾ ಪಟೇಲ್ ಅವರು ಪವರ್‌ಪಾಯಿಂಟ್ ಪ್ರಸ್ತುತಿಯ ಮೂಲಕ ಕಾರ್ಯಕ್ರಮದ ವಿವರಗಳನ್ನು ಮಂಡಿಸಿದರು. ಭಟ್ಕಳ ತಾಲೂಕಿನಲ್ಲಿ 0ರಿಂದ 5 ವರ್ಷದೊಳಗಿನ ಒಟ್ಟು 13,549 ಮಕ್ಕಳಿಗೆ ಪಲ್ಸ್ ಪೋಲಿಯೋ ಹನಿ ನೀಡುವ ಗುರಿ ಹೊಂದಲಾಗಿದೆ. ಈ ಕಾರ್ಯಕ್ಕಾಗಿ ತಾಲೂಕಿನಲ್ಲಿ 95 ಲಸಿಕಾ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, 388 ವ್ಯಾಕ್ಸಿನೇಟರ್ ಗಳು ಹಾಗೂ 19 ಮೇಲ್ವಿಚಾರಕರನ್ನು ನಿಯೋಜಿಸಲಾಗಿದೆ ಎಂದರು. ಶೇ.100ರಷ್ಟು ಗುರಿ ಸಾಧಿಸಲು ಶಾಲೆಗಳು,ಅಂಗನವಾಡಿ ಕೇಂದ್ರಗಳು, ಆಶಾ ಕಾರ್ಯಕರ್ತೆಯರು, ಸ್ಥಳೀಯ ಸಂಸ್ಥೆಗಳು ಹಾಗೂ ವಿವಿಧ ಇಲಾಖೆಗಳ ಸಹಕಾರದೊಂದಿಗೆ ವ್ಯಾಪಕ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು. ವಿಶೇಷವಾಗಿ ದೂರದ ಗ್ರಾಮಗಳು ಹಾಗೂ ವಲಸೆ ಕಾರ್ಮಿಕರ ಮಕ್ಕಳಿಗೂ ಲಸಿಕೆ ತಲುಪುವಂತೆ ಅಗತ್ಯ ಕ್ರಮ ಕೈಗೊಳ್ಳುವ ಕುರಿತು ಚರ್ಚೆ ನಡೆಯಿತು.

ಸಭೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಚಾಲನಾ ಸಮಿತಿಯ ಸದಸ್ಯರು ಭಾಗವಹಿಸಿದ್ದರು. ಹಿರಿಯ ಆರೋಗ್ಯ ನಿರೀಕ್ಷಕ ಶ್ರೀನಿವಾಸ ಆರ್. ಅವರು ಸ್ವಾಗತಿಸಿದರು.



ಒತ್ತಡ ನಿವಾರಣೆಗೆ ಯೋಗ ಅವಶ್ಯ



ಅಂಕೋಲಾ: ಕಾನೂನು ಸೇವಾ ಸಮಿತಿ ಅಂಕೋಲಾ, ವಕೀಲರ ಸಂಘ ಅಂಕೋಲಾ, ಪತಂಜಲಿ ಯೋಗ ಸಮಿತಿ ಮತ್ತು ನ್ಯಾಯಾಂಗ ಇಲಾಖೆಯ ಸಹಯೋಗದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ವಿಶೇಷ ಯೋಗ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿದ ಕಾನೂನು ಸೇವಾ ಸಮಿತಿಯ ಅಧ್ಯಕ್ಷೆ ಹಿರಿಯ ಸಿವಿಲ್ ನ್ಯಾಯಾಧೀಶೆ ಪ್ರಿಯಾ ಜೋಗಳೇಕರ್ ಮಾತನಾಡಿ, ಒತ್ತಡದ ಜೀವನ ಶೈಲಿಯಲ್ಲಿ ಮಾನಸಿಕ ಮತ್ತು ದೈಹಿಕ ಆರೋಗ್ಯ ಕಾಪಾಡಲು ಯೋಗ ಅತ್ಯಂತ ಪರಿಣಾಮಕಾರಿ ಮಾರ್ಗವಾಗಿದೆ. ಯೋಗ ಸಾಧನೆಯಿಂದ ಸಂಸ್ಕಾರಯುತ ಬದುಕು ಸಾಧ್ಯವಿದ್ದು ಪ್ರತಿಯೊಬ್ಬರು ತಮ್ಮ ದೈನಂದಿನ ಜೀವನದಲ್ಲಿ ಯೋಗಕ್ಕೆ ಮಹತ್ವ ನೀಡಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ವಕೀಲರ ಸಂಘದಅಧ್ಯಕ್ಷವಿನಾಯಕನಾಯ್ಕ ಮಾತನಾಡಿ ಯೋಗ ಭಾರತದ ಪ್ರಾಚೀನ ಪರಂಪರೆಯಾಗಿದ್ದು ವಿಶ್ವಕ್ಕೆ ದೇಶದ ಅತ್ಯಮೂಲ್ಯ ಕೊಡುಗೆಯಾಗಿದೆ

ಸಮಾಜದಲ್ಲಿ ಶಾಂತಿಯನ್ನು ಪ್ರತಿಪಾದಿಸುವ ಯೋಗದ ತತ್ವಗಳು ಇಂದು ಅಗತ್ಯ ಎಂದರು.

ಪತಂಜಲಿ ಯೋಗ ಸಮಿತಿಯ ಸಾಧಕರುಗಳಾದ ಶ್ರೀನಿವಾಸ ಶೆಟ್ಟಿ ಮತ್ತು ಅಭಯ ಮರಬಳ್ಳಿ ಅವರನ್ನು ಕಾರ್ಯಕ್ರಮದಲ್ಲಿ ಗೌರವಿಸಲಾಯಿತು.

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶೆ ಸಮ್ಯಕ್ತ ಮುಪ್ಪಾನೆ,ಸಹಾಯಕ ಸರ್ಕಾರಿ ಅಭಿಯೋಜಕರುಗಳಾದ ಶಿಲ್ಪಾ ನಾಯ್ಕ, ವಕೀಲ ನಿತ್ಯಾನಂದ ಕವರಿ, ತೇಜಾ ಬಂಟ, ನ್ಯಾಯಾಲಯದ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಬಡತನದ ಮಧ್ಯೆಯೂ ಸಾಧನೆಗೈದ ಶಶಾಂಕ

ಯಲ್ಲಾಪುರ: ಸಾಧಿಸಬೇಕೆಂಬ ಛಲ ಇದ್ದರೆ, ಬದುಕು ಆಗಾಗ ನೀಡುವ ಕಷ್ಟಗಳು, ಬಡತನ ಯಾವುದೂ ಅಡ್ಡಿಯಾಗಲಾರದು. ಈ ಮಾತಿಗೆ ತಾಲೂಕಿನ ನಂದೊಳ್ಳಿಯ ಯುವಕ ಶಶಾಂಕ ಶಾಂತಾರಾಮ ಗೌಡ ಉತ್ತಮ ಉದಾಹರಣೆ. ತೀರಾ ಬಡ ಕುಟುಂಬದಿಂದ ಬಂದು, ಅನೇಕ ಸಂಕಷ್ಟಗಳ ನಡುವೆಯೂ ಎಂಬಿಬಿಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಮೂಲಕ ವೈದ್ಯರಾಗಿ ಸಾಧನೆ ಮಾಡಿದ್ದಾರೆ.



ಶಶಾಂಕ ಅವರು ನಂದೊಳ್ಳಿಯ ಜನತಾ ಕಾಲೋನಿಯ ಶಾಂತಾರಾಮ ಗೌಡ ಹಾಗೂ ಸವಿತಾ ಗೌಡ ದಂಪತಿಯ ಪುತ್ರ. ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಓದಿದ್ದು ನಂದೊಳ್ಳಿಯಲ್ಲಿ. ಅದೂ ಕನ್ನಡ ಮಾಧ್ಯಮದಲ್ಲಿ. ಪ್ರಾಥಮಿಕ ಶಿಕ್ಷಣದಿಂದಲೇ ಆಂಗ್ಲಮಾಧ್ಯಮದಲ್ಲಿ ಓದದಿದ್ದರೆ ಸಾಧನೆ ಕಷ್ಟ ಎಂಬ ಮಾತು ಕೇವಲ ಭ್ರಮೆಯಷ್ಟೇ ಎನ್ನುವುದನ್ನು ಶಶಾಂಕ ಸಾಧನೆಯ ಮೂಲಕ ತೋರಿಸಿದ್ದಾರೆ.

ತಂದೆ ಶಾಂತಾರಾಮ ಗೌಡ ಆಟೊ ಓಡಿಸುತ್ತ, ಬರುವ ಆದಾಯದಲ್ಲಿ ಕಷ್ಟದ ನಡುವೆಯೂ ಮಕ್ಕಳ ಓದಿಗೆ ಯಾವ ಕೊರತೆಯಾಗದಂತೆ ನೋಡಿಕೊಂಡು ಬಂದಿದ್ದರು. ಮಗನನ್ನು ಡಾಕ್ಟರ್ ಮಾಡಬೇಕು ಎಂಬುದು ತಂದೆಯ ಹಂಬಲವಾಗಿತ್ತು. ಆದರೆ ಮಗ ಎಂ.ಬಿ.ಬಿ.ಎಸ್ ಕಾಲೇಜು ಸೇರಿ ಉತ್ತಮವಾಗಿ ಓದುತ್ತಿದ್ದ ಹಂತದಲ್ಲೇ ಶಾಂತಾರಾಮ ಗೌಡ ಅವರು ಹೃದಯಾಘಾತದಿಂದ ನಿಧನರಾದರು.

ಕುಟುಂಬಕ್ಕೆ ಆಧಾರವಾಗಿದ್ದ ತಂದೆಯ ಸಾವು ಇಡೀ ಕುಟುಂಬಕ್ಕೆ ಆಘಾತವಾಗಿತ್ತು. ತಂದೆಯ ಅಗಲು ವಿಕೆಯ ನೋವಿನ ನಡುವೆಯೂ ತಂದೆಯ ಕನಸನ್ನು ನನಸಾಗಿಸುವ ಛಲವನ್ನು ಶಶಾಂಕ ತೊಟ್ಟರು. ಒಂದೆಡೆ ಕುಟುಂಬದವರ ಕಣ್ಣೀರು ಒರೆಸುವುದು, ಇನ್ನೊಂದೆಡೆ ತಾನು ಗಟ್ಟಿಗನಾಗಿ ತಂದೆಯ ಕನಸು ನನಸಾಗಿಸುವ ಹೊಣೆ ಹೊತ್ತರು. ಕುಟುಂಬದವರ, ಹಿತೈಷಿಗಳ ಪ್ರೋತ್ಸಾಹದೊಂದಿಗೆ ಎಬಿಬಿಎಸ್ ಉತ್ತೀರ್ಣರಾಗಿದ್ದಾರೆ.

ಬೆಂಗಳೂರು ವೈದೇಹಿ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಆ್ಯಂಡ್ ರಿಸರ್ಚ್ ಸೆಂಟರ್ ನಲ್ಲಿ ಎಂಬಿಬಿಎಸ್ ಪೂರೈಸಿದ ಶಶಾಂಕ, ನಂದೊಳ್ಳಿಯಲ್ಲಿ ವೈದ್ಯರಾದ ಮೊದಲಿಗರೆನಿಸಿದ್ದಾರೆ. ಬಡತನ, ಕಷ್ಟದನಡುವೆಸಾಧನೆಮಾಡುವವರಿಗೆ ಪ್ರೇರಣೆಯಾಗಿದ್ದಾರೆ.

ಆರೋಪಿ ಮಂಜ ಕೊನೆಗೂ ಪೊಲೀಸ್ ಬಲೆಗೆ

ಹಳಿಯಾಳ: ಪಟ್ಟಣದ ಮೌರ್ಯ ಕ್ಲಬ್ ನಲ್ಲಿ ಮದ್ಯ ಸೇವಿಸಿ ನಂತರ ಬಿಲ್ ಸಂದಾಯದ ವೇಳೆ ಮತ್ತೊಬ್ಬ ಗ್ರಾಹಕನ ಕುಹಕ ನಡೆಯಿಂದ ಕುಪಿತಗೊಂಡ ಮಂಜುನಾಥ ಬೇಕಣಿ ಎಂಬಾತನಿಂದ ನಡೆದ ಅವಾಂತರದಿಂದ ಜೂ. 14ರ ರಾತ್ರಿ ಹಳಿಯಾಳ ರಾಜ್ಯದೆಲ್ಲೆಡೆ ಕುಖ್ಯಾತವಾಗಿತ್ತು.

ಮಚ್ಚ ಮಂಜ ಎಂದೇ ಹೆಸರಾಗಿದ್ದ ಮಂಜುನಾಥ ಬೇಕಣಿ ತನ್ನೆಲ್ಲಾ ಹಳೆಯ ಅಪರಾಧಿಕ ಕೃತ್ಯಗಳನ್ನು ಬಿಟ್ಟು ಕಳೆದ ಐದಾರು ವರ್ಷಗಳಿಂದ ಸೀದಾ ಸಾದಾ ಜೀವನ ಸಾಗಿಸುತ್ತಿದ್ದವನು ಅಂದು ಅಷ್ಟೊಂದು ಉದ್ವೇಗಕ್ಕೊಳಗಾಗಿದ್ದರ ಹಿಂದಿನ ಮರ್ಮ ಸಾರ್ವಜನಿಕರಿಗೆ ತಿಳಿಯಲೇ ಬೇಕಾಗಿದೆ. ಗಲಾಟೆ ವೇಳೆ ಪೊಲೀಸರ ಮೇಲೆ ಮುಗಿಬೀಳಲು ಕಾರಣ ತಿಳಿಯ ಬೇಕಾಗಿದ್ದು ಕೂಡ ಅವಶ್ಯಕವಾಗಿದೆ.

ಗಲಾಟೆ ಸಮಯದಲ್ಲಿ ವಾಹನದೊಂದಿಗೆ ಘಟನಾಸ್ಥಳಕ್ಕೆ ಬಂದರೂ ನಿಯಂತ್ರಿಸದೇ ವಾಪಾಸು ಹೋಗಿದ್ದರಿಂದ ಹಾಗೂ ಎಂಟು ಪೊಲೀಸ್ ಸಿಬ್ಬಂದಿ ಘಟನಾಸ್ಥಳದಲ್ಲಿ ಇದ್ದರೂ ನಿಯಂತ್ರಿಸಲಾಗದೇ ಅಸಹಾಯಕರಂತೆ ಇದ್ದದ್ದು ಭಾರೀ ಟೀಕೆಗೆ ಒಳಗಾಗಿ ನಂತರ ಉತ್ತರ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್. ರಿಂದ ಪಿಎಸ್‌ಐ ಬಸವರಾಜ್ ಮಬನೂರ್ ರನ್ನು ಅಮಾನತುಗೊಳಿಸಿ ಎಂಟು ಇತರ ಪೊಲೀಸ್ ಸಿಬ್ಬಂದಿಗಳನ್ನು ವರ್ಗಾವಣೆಗೊಳಿಸಿದ್ದರು.

ತಕ್ಷಣದಲ್ಲೇ ಆರೋಪಿಯನ್ನು ಬಂಧಿಸಲು ತಂಡವನ್ನು ರಚಿಸಿದ ಎಸ್ಪಿ ದೀಪನ್ ಎಂ.ಎನ್. ಹಾಗೂ ಡಿವೈಎಸ್ಪಿ ಶಿವಾನಂದ ಮದರಖಂಡಿ, ಸಿಪಿಐ ಜೈಪಾಲ್ ಪಾಟೀಲ ನೇತೃತ್ವದಲ್ಲಿ ಪಿಎಸ್‌ಐ ಗಳಾದ ಕೃಷ್ಣಗೌಡ ಅರಕೇರಿ, ಕಿರಣ ಪಾಟೀಲ, ಮಹಾಂತೇಶ ನಾಯಕ ಹಾಗೂ ಸಿಬ್ಬಂಧಿಗಳ ತಂಡ ಹಗಲಿರುಳು ಡಿಜಿಟಲ್ ಫೂಟ್ ಪ್ರಿಂಟ್ ಶೈಲಿಯನ್ನು ಬಿಟ್ಟು ಸಾಂಪ್ರದಾಯಿಕ ಹಳೆಯ ಶೈಲಿಯಿಂದಲೇ ಆರೋಪಿಯನ್ನು ಲಾಕ್ ಮಾಡಿದ್ದು ತಮ್ಮ ಸಾಮರ್ಥ್ಯವನ್ನು ಮತ್ತೊಮ್ಮೆ ಸಾಬೀತು ಪಡಿಸುವಲ್ಲಿ ಯಶಸ್ವಿಯಾಗಿದ್ದು ಆರೋಪಿ ಮಂಜುನಾಥ ಬೇಕಣಿಯನ್ನು ನ್ಯಾಯಾಧೀಶರ ಸಮ್ಮುಖದಲ್ಲಿ ಹಾಜರುಪಡಿಸಿ ನ್ಯಾಯಾಂಗವಂಶಕ್ಕೆ ಒಳಪಡಿಸಿದ್ದಾರೆ.



ಆರೋಪಿಯು ಸತತ ಒಂದು ವಾರದಿಂದ ಯಾವುದೇ ಬಗೆಯ ಮೊಬೈಲ್ ಬಳಸದೇ ಕರ್ನಾಟಕ, ಗೋವಾ, ಮಹಾರಾಷ್ಟ್ರ ರಾಜ್ಯಗಳ ನಡುವೆ ಸತತವಾಗಿ ತಿರುಗುತ್ತಾ ಒಂದೇ ಕಡೆ ಇರದೆ ತನ್ನ ವಾಸ್ತವ್ಯ ಬದಲಿಸುತ್ತಾ ಪೊಲೀಸರಿಗೆ ತಲೆನೋವಾಗಿದ್ದ. ಈ ಸಮಯದಲ್ಲಿ ಯಾವುದೇ ರೀತಿಯ ಡಿಜಿಟಲ್ ಸಂಪರ್ಕದಲ್ಲಿರದೇ ಇದ್ದರಿಂದ ಪೊಲೀಸರಿಗೆ ಆತನನ್ನು ಹುಡುಕುವುದು ಕಷ್ಟ ಸಾಧ್ಯವಾಗಿತ್ತು.

ವಿದ್ಯಾರ್ಥಿಗಳು ಸಂಸ್ಕೃತಿ ಉಳಿಸಿ, ಬೆಳೆಸಲಿ

ಭಟ್ಕಳ: ಇಲ್ಲಿಯ ಆಸರಕೇರಿಯ ತಿರುಮಲ ವೆಂಕಟ್ರಮಣ ದೇವಸ್ಥಾನದ ಸಭಾಭವನದಲ್ಲಿ ಶ್ರೀ ವೆಂಕಟೇಶ್ವರ ವಿದ್ಯಾವರ್ಧಕ ಸಂಘದಿಂದ ಪಿಯು ವಿದ್ಯಾರ್ಥಿಗಳಿಗೆ ನೀಡುವ ಪಠ್ಯ ಪುಸ್ತಕ ವಿತರಣಾ ಸಮಾರಂಭವನ್ನು ಭಟ್ಕಳ ನಾಮಧಾರಿ ಅಭಿವೃದ್ಧಿ ಸಂಘ ಮತ್ತು ಶ್ರೀ ಗುರುಮಠದ ಅಧ್ಯಕ್ಷ ಅರುಣ ನಾಯ್ಕ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು ವಿದ್ಯಾರ್ಥಿಗಳು ಉತ್ತಮವಾಗಿ ಕಲಿಯುವುದಲ್ಲದೆ ನಮ್ಮ ಸಂಸ್ಕೃತಿ, ಆಚಾರ- ವಿಚಾರವನ್ನು ಉಳಿಸಿ ಬೆಳೆಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು. ವೆಂಕಟೇಶ್ವರ ವಿದ್ಯಾವರ್ಧಕ ಸಂಘವು ಕಳೆದ 13 ವರ್ಷಗಳಿಂದ ಸಮಾಜದ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಪಿ.ಯು. ಪಠ್ಯಪುಸ್ತಕವನ್ನು ನೀಡುತ್ತ ಬಂದಿದೆ.ಇದರಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದರು. ಉಪಸ್ಥಿತರಿದ್ದ ಗುರುಮಠ ದೇವಸ್ಥಾನದ ಉಪಾಧ್ಯಕ್ಷ ಹಾಗೂ ನಿವೃತ್ತ ಮುಖ್ಯಶಿಕ್ಷಕ ಎಂ.ಕೆ. ನಾಯ್ಕ, ಶ್ರೀ ವೆಂಕಟೇಶ್ವರ ವಿದ್ಯಾವರ್ಧಕ ಸಂಘದ ಗೌರವಾಧ್ಯಕ್ಷ ಕೆ.ಆರ್. ನಾಯ್ಕ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಮನಮೋಹನ ನಾಯ್ಕ ಮಾತನಾಡಿದರು. ವೇದಿಕೆಯಲ್ಲಿ ಗುರುಮಠದ ಸದಸ್ಯರಾದ ವಾಸು ನಾಯ್ಕ, ಶ್ರೀಧರ ನಾಯ್ಕ ಉಪಸ್ಥಿತರಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಜಗದೀಶ ನಾಯ್ಕ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಚಂದ್ರಶೇಖರ ನಾಯ್ಕ ಕಾರ್ಯಕ್ರಮ ನಿರೂಪಿಸಿದರು. ರವಿ ನಾಯ್ಕ ವಂದಿಸಿದರು. ವಿವಿಧ ಕ್ಷೇತ್ರದಲ್ಲಿ ಮಾಡಿದ ಸಾಧನೆಯನ್ನು ಪರಿಗಣಿಸಿ ಶ್ರೀ ವೆಂಕಟೇಶ್ವರ ವಿದ್ಯಾವರ್ಧಕ ಸಂಘದ ಗೌರವಾಧ್ಯಕ್ಷ ಕೆ.ಆರ್. ನಾಯ್ಕರನ್ನು ಗೌರವಿಸಿ ಸನ್ಮಾನಿಸಲಾಯಿತು.

ಕಾಳಗಿನಕೊಪ್ಪದಲ್ಲಿ ನಾಡಬಾಂಬ್ ಸ್ಫೋಟ: ದೂರು ದಾಖಲು

ಹಳಿಯಾಳ: ತಾಲೂಕಿನ ಕಾಳಗಿನಕೊಪ್ಪ ಗ್ರಾಮದಲ್ಲಿ ಅಕ್ರಮವಾಗಿ ಶೇಖರಿಸಿಟ್ಟಿದ್ದ ನಾಡುಬಾಂಬ್ ಸ್ಫೋಟದಿಂದಾಗಿ ಮನೆಯ ಗೋಡೆಗಳಿಗೆ ಹಾನಿಯಾಗಿದ್ದಲ್ಲದೇ ಅಕ್ಕಪಕ್ಕದ ಮನೆಗಳ ಕಿಡಕಿ ಗಾಜು ಒಡೆದು ಹಾನಿಗೊಳಗಾಗಿದೆ.

ಕಾಡುಪ್ರಾಣಿಗಳ ಬೇಟೆಗಾಗಿ ನಾಡ ಬಾಂಬುಗಳನ್ನು ಅಕ್ರಮವಾಗಿ ಸಂಗ್ರಹಿಸಿಡಲಾಗಿತ್ತು ಎನ್ನುವುದು ಇದುವರೆಗಿನ ತನಿಖೆಯ ವರದಿಯಾಗಿದ್ದು, ಇನ್ನೂ ಹೆಚ್ಚಿನ ತನಿಖೆಯ ಅವಶ್ಯವಿದ್ದು ಹಳಿಯಾಳ ಪೊಲೀಸರು ಪಕ್ಕದ ಮನೆಯ ಮಾರುತಿ ಅಪ್ಪಯ್ಯ ಬಿಡಡೋಳಕರ ನೀಡಿದ ದೂರಿನನ್ವಯ ವಸಂತ ರಾಯಪ್ಪ ಕೊರವರ ಹಾಗೂ ಆತನ ಮಗ ಮುನೇಶ್ವರ ವಸಂತ ಕೊರವರ ಮೇಲೆ ದೂರು ದಾಖಲಿಸಿಕೊಂಡಿದ್ದು ತನಿಖೆ ನಡೆಸುತ್ತಿದ್ದಾರೆ.

ಘಟನಾ ಸ್ಥಳಕ್ಕೆ ಉತ್ತರಕನ್ನಡ ಎಸ್ಪಿ ದೀಪನ್ ಎಂ.ಎನ್. ಹಾಗೂ ಬಾಂಬ್ ಸ್ಕ್ವಾಡ್ ನವರು ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ ಮುಂದಿನ ತನಿಖೆಗೆ ಮಾರ್ಗದರ್ಶನ ನೀಡಿದ್ದಾರೆ.



ಇತ್ತೀಚೆಗೆ ಸ್ಫೋಟಕಗಳ ಅಕ್ರಮ ಸಂಗ್ರಹ ಹಾಗೂ ಸಾಗಾಟದ ಪ್ರಕರಣಗಳು ಹೆಚ್ಚುತ್ತಿದ್ದು ಕಳೆದ ಒಂದು ತಿಂಗಳ ಹಿಂದೆ ಜಿಲೆಟಿನ್ ಕಡ್ಡಿ ಹಾಗೂ ಡೆಟೋನೇಟರ್ ಗಳ ಅಕ್ರಮ ಸಾಗಾಟದ ದೂರು ದಾಖಲಾದರೂ ಸರಿಯಾದ ತನಿಖಾ ವರದಿ ಇದುವರೆಗೆ ದೊರೆಯದೇ ಇರುವುದು ಕೂಡ ಸಾರ್ವಜನಿಕರಲ್ಲಿ ಹಲವಾರು ಅನುಮಾನಗಳಿಗೆ ಎಡೆ ಮಾಡಿ ಕೊಟ್ಟಿದೆ.

ತನಿಖೆಯಲ್ಲಿ ಪೊಲೀಸರು ಎಲ್ಲಿ ಎಡವಿದರು? ಅಥವಾ ಜಾಣತನದ ಎಡವಿಕೆಯನ್ನು ತೋರಿಸಿಕೊಟ್ಟಿದ್ದರೆ? ಎನ್ನುವುದು ಪ್ರಮುಖ ಪ್ರಶ್ನೆಯಾಗಿದ್ದು ಸ್ಫೋಟಕಗಳನ್ನು ಅಕ್ರಮ ಸಂಗ್ರಹ ಕೂಡ ಅಕ್ಷಮ್ಯ ಅಪರಾಧವಾಗಿದ್ದು ಅದೃಷ್ಟವಶಾತ್ ಯಾವುದೇ ಸಾವು ನೋವಿನ ವರದಿಯಾಗದೇ ಇದ್ದುದಕ್ಕೆ ಹಳಿಯಾಳಿಗರು ನಿಟ್ಟುಸಿರು ಬಿಟ್ಟು ಈ ಕೇಸನ್ನಾದರೂ ಸರಿಯಾದ ತನಿಖೆಗೆ ಒಳಪಡಿಸಲು ಒತ್ತಾಯಿಸಿದ್ದಾರೆ.

ಕಿರುಸುದ್ದಿ

ರಾಜಕುಮಾರ ಶಿರಪಂತಿ ನೇಮಕ



ಹಾನಗಲ್ಲ: ಹಾವೇರಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಹಾನಗಲ್ಲನ ರಾಜಕುಮಾರ ಶಿರಪಂತಿ ಅವರನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾ ಸಮಿತಿಯ ಅಧ್ಯಕ್ಷ ಸಂಜೀವಕುಮಾರ ನೀರಲಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿವೈಡರ್‌ಗೆ ಬೈಕ್ ಡಿಕ್ಕಿ : ವ್ಯಕ್ತಿ ಸಾವು

ಹಾವೇರಿ: ಡಿವೈಡರ್‌ಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ವ್ಯಕ್ತಿಯೊಬ್ಬರು ಸ್ಥಳದಲ್ಲೇ ಮೃತಪಟ್ಟಿರುವ ದುರ್ಘಟನೆ ಸೋಮವಾರ ನಗರದ ರಾಣೇಬೆನ್ನೂರು ರಸ್ತೆಯ ಶಿವಲಿಂಗನಗರ ಬಳಿ ನಡೆದಿದೆ.ಹಾವೇರಿ ತಾಲೂಕು ಕನವಳ್ಳಿ ಗ್ರಾಮದ ಅಬ್ದುಲ್‌ರಹೀಂ ಹಜರತ್ ಅಲಿ ಸಕ್ಕರಖಾನವರ (40) ಮೃತ ದುರ್ದೈವಿ ಎಂದು ಗುರುತಿಸಲಾಗಿದೆ. ಮೃತ ಬೈಕ್ ಸವಾರ ಹಾವೇರಿಯಿಂದ ಬ್ಯಾಡಗಿ ಕಡೆಗೆ ಅತೀ ವೇಗವಾಗಿ ಹಾಗೂ ನಿರ್ಲಕ್ಷ್ಯದಿಂದ ಬೈಕ್ ಚಲಾಯಿಸಿಕೊಂಡು ಹೋಗುತ್ತಿರುವಾಗ ರಸ್ತೆ ಮಧ್ಯೆ ಇರುವ ಡಿವೈಡರ್ ಹಾಗೂ ಬೀದಿ ದೀಪದ ಕಂಬಕ್ಕೆ ಡಿಕ್ಕಿ ಹೊಡೆದು ಅಪಘಾತಕ್ಕೀಡಾಗಿದ್ದಾನೆ. ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾನೆ ಎಂದು ಮೃತನ ಸಹೋದರ ಇಸ್ಮಾಯಿಲ್‌ಸಾಬ್ ಸಕ್ಕರಖಾನವರ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಹಾವೇರಿ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಲು ಜಾರಿ ಬಿದ್ದು ಯುವಕ ಸಾವು

ಹಾವೇರಿ: ಶಿಗ್ಗಾವಿ ಪಟ್ಟಣದ ನಾಗನೂರು ಕೆರೆಯಲ್ಲಿ ಮುಖ ತೊಳೆಯಲೆಂದು ಕೆರೆಗೆ ಇಳಿದಿದ್ದ ಯುವಕರೊಬ್ಬರು ಆಕಸ್ಮಿಕ ಕಾಲು ಜಾರಿ ಬಿದ್ದು ಅಸ್ವಸ್ಥಗೊಂಡಿದ್ದಲ್ಲದೇ, ಚಿಕಿತ್ಸೆಗೆಂದು ಆಸ್ಪತ್ರೆಗೆ ದಾಖಲಿಸಿದ್ದಾಗ ಉಪಚಾರ ಫಲಿಸದೆ ಮೃತಪಟ್ಟಿರುವ ಘಟನೆ ನಡೆದಿದೆ.ಶಿಗ್ಗಾವಿ ಪಟ್ಟಣದ ಮಾರುತಿನಗರ ನಿವಾಸಿ ಪವನ್ ಚಂದ್ರಶೇಖರ ಹಡಪದ (18) ಮೃತ ದುರ್ದೈವಿ. ಈತ ಮುಖ ತೊಳೆದುಕೊಳ್ಳಲು ಕೆರೆಗೆ ಇಳಿಯುವಾಗ ಆಕಸ್ಮಿಕವಾಗಿ ಕಾಲು ಜಾರಿ ಕಲ್ಲು ಪಿಚ್ಚಿಂಗ್ ಮೇಲೆ ಬಿದ್ದಿದ್ದಾನೆ. ಪರಿಣಾಮ ತಲೆಗೆ ಗಂಭೀರ ಪೆಟ್ಟು ಬಿದ್ದಿದ್ದರಿಂದ ತಾಲೂಕು ಆಸ್ಪತ್ರೆಗೆ ದಾಖಲಿಸಿ, ಹೆಚ್ಚಿನ ಚಿಕಿತ್ಸೆಗೆಂದು ಹುಬ್ಬಳ್ಳಿ ಕಿಮ್ಸ್‌ಗೆ ದಾಖಲಿಸಿದ್ದಾಗ ಉಪಚಾರ ಫಲಿಸದೆ ಮೃತಪಟ್ಟಿದ್ದಾರೆ ಎಂದು ಯುವಕನ ತಾಯಿ ಲಕ್ಷ್ಮೀ ಹಡಪದ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಶಿಗ್ಗಾವಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಾವು ಕಚ್ಚಿ ಮಹಿಳೆ ಸಾವು

ಹಾವೇರಿ: ಕಟ್ಟಿಗೆ ತರಲು ಹೋಗಿದ್ದ ಮಹಿಳೆಯೊಬ್ಬರಿಗೆ ಹಾವು ಕಚ್ಚಿದ್ದರಿಂದ ತೀವ್ರ ಅಸ್ವಸ್ಥಗೊಂಡಿದ್ದ ಮಹಿಳೆಯನ್ನು ಆಸ್ಪತ್ರೆಗೆ ದಾಖಲಿಸಿದ್ದಾಗ ಚಿಕಿತ್ಸೆ ಫಲಿಸದೆ ಮೃತಪಟ್ಟಿರುವ ಘಟನೆ ರಾಣೇಬೆನ್ನೂರ ತಾಲೂಕು ಹೊಸ ಚಂದಾಪುರ ಗ್ರಾಮದಲ್ಲಿ ನಡೆದಿದೆ.

ಹೊಸ ಚಂದಾಪುರದಲ್ಲಿ ವಾಸವಿರುವ ಹಾವೇರಿ ತಾಲೂಕು ಕನವಳ್ಳಿಯ ಪುಟ್ಟವ್ವ ಕೋಂ.ಈರಪ್ಪ ಹರವಿ (38) ಹಾವು ಕಡಿತಕ್ಕೆ ಒಳಗಾದ ಮೃತ ಮಹಿಳೆ. ಇವರು ಹೊಸ ಚಂದಾಪುರದ ಜಮೀನೊಂದರಲ್ಲಿ ಬಿದ್ದಿದ್ದ ಜಾಲಿ ಗಿಡದ ಕಟ್ಟಿಗೆ ಹರಿಗಳನ್ನು ಒಲೆ ಉರಿ ಮಾಡುವುದಕ್ಕೋಸ್ಕರ ಕಡಿದುಕೊಂಡು ಬರಲು ಹೋದಾಗ ದುರ್ಘಟನೆ ಸಂಭವಿಸಿದೆ. ಮಹಿಳೆಗೆ ಉಪಚಾರಕ್ಕೆಂದು ಗುತ್ತಲ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಹಾವೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದಾಗ ಉಪಚಾರ ಫಲಿಸದೆ ಸಾವನ್ನಪ್ಪಿದ್ದಾರೆ. ರಾಣೇಬೆನ್ನೂರು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮದ್ಯವ್ಯಸನಿ ಆತ್ಮಹತ್ಯೆ

ಹಾವೇರಿ: ವ್ಯಕ್ತಿಯೊಬ್ಬರು ಮನೆಯಲ್ಲಿ ಯಾರೂ ಇಲ್ಲದಿರುವಾಗ ತನ್ನಷ್ಟಕ್ಕೆ ತಾನೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಹಿರೇಕೆರೂರು ಪಟ್ಟಣದ ಬಸವೇಶ್ವರನಗರದ ಬಾಡಿಗೆ ಮನೆಯೊಂದರಲ್ಲಿ ನಡೆದಿದೆ. ಹಿರೇಕೆರೂರ ತಾಲೂಕು ಬುರಡಿಕಟ್ಟಿ ಗ್ರಾಮದ ಪ್ರವೀಣ ಚಿಕ್ಕಪ್ಪ ಛಲವಾದಿ (28) ಮೃತ ದುರ್ದೈವಿಯಾಗಿದ್ದಾರೆ. ಇವರು ಕಳೆದ ಹಲವು ದಿನಗಳಿಂದ ವಿಪರೀತ ಮದ್ಯ ವ್ಯಸನಕ್ಕೆ ತುತ್ತಾಗಿದ್ದರಿಂದ ಕುಟುಂಬಸ್ಥರು ಎಷ್ಟೇ ಬುದ್ಧಿವಾದ ಹೇಳಿದರೂ ಮದ್ಯ ಸೇವನೆ ಮಾಡುವುದನ್ನು ಬಿಟ್ಟಿರಲಿಲ್ಲ. ಈ ಹಿನ್ನೆಲೆ ಮದ್ಯ ಸೇವನೆಯ ನಶೆಯಲ್ಲಿ ಹಿರೇಕೆರೂರು ಪಟ್ಟಣದ ಬಸವೇಶ್ವರ ನಗರದಲ್ಲಿ ವಾಸವಿರುವ ಬಾಡಿಗೆ ಮನೆಯಲ್ಲಿ ತನ್ನಷ್ಟಕ್ಕೆ ತಾನೇ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಮೃತರ ತಾಯಿ ನೀಲಮ್ಮ ಚಲವಾದಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಹಿರೇಕೆರೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ರಾಣೇಬೆನ್ನೂರ: ನಗರದ ಖನ್ನೂರ ವಿದ್ಯಾನಿಕೇತನ ಶಾಲೆಯಲ್ಲಿ 15ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಸಂಸ್ಥೆಯ ಅಧ್ಯಕ್ಷರಾದ ಡಾ. ಪ್ರವೀಣ ಎಂ. ಖನ್ನೂರ, ಸಿಇಒ ಡಾ.ಶೈಲಶ್ರೀ ಖನ್ನೂರ, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಜೂ. 24ಕ್ಕೆ ಶಿವಾನುಭವ ಗೋಷ್ಠಿ ಕಾರ್ಯಕ್ರಮ

ರಾಣೇಬೆನ್ನೂರ: ಶ್ರೀ ಗುರುಬಸವ ಲಿಂಗಾಯತ ಸೇವಾ ಟ್ರಸ್ಟ್, ಗ್ರಾಮೀಣ ಜ್ಞಾನೋದಯ ಟ್ರಸ್ಟ್ ಅನುಭವ ಮಂಟಪ ಹಾಗೂ ವಿದ್ಯಾಶಂಕರ ಸೇವಾ ಟ್ರಸ್ಟ್ (ರಿ.) ರಾಣೆಬೆನ್ನೂರು ಇವರ ಸಹಯೋಗದಲ್ಲಿ ಶಿವಾನುಭವ ಗೋಷ್ಠಿ-01 ಕಾರ್ಯಕ್ರಮವು ಜೂ. 24 ರಂದು ಸಂಜೆ 6 ಗಂಟೆಗೆ ಈಶ್ವರ ನಗರದ ಅನುಭವ ಮಂಟಪದಲ್ಲಿ ಜರುಗಲಿದೆ ಎಂದು ವಿಶ್ವಗುರು ಬಸವ ಬಳಗ ಅಧ್ಯಕ್ಷ ಯು.ಎಂ.ಗುರುಲಿಂಗಪ್ಪಗೌಡ್ರ ಹೇಳಿದರು.

ಸೋಮವಾರದಂದು ಸ್ಥಳೀಯ ಈಶ್ವರ ನಗರದ ಅನುಭವ ಮಂಟಪದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಸಾಣೇಹಳ್ಳಿ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಕಾರ್ಯಕ್ರಮದ ದಿವ್ಯಸಾನಿಧ್ಯ ವಹಿಸುವರು. ಲಿಂಗನಾಯಕನಹಳ್ಳಿ ಚನ್ನವೀರ ಮಹಾಸ್ವಾಮಿಗಳು ಸಮ್ಮುಖವಹಿಸುವರು. ಮಹೇಶಪ್ಪ ಕುಸಗೂರ, ಅರವಿಂದ ಪಾಟೀಲ, ಪ್ರಭುಲಿಂಗಪ್ಪ ಹಲಗೇರಿ, ಮಹಾಲಿಂಗಪ್ಪ ಕೆಂಪಣ್ಣನವರ ಸೇರಿದಂತೆ ಮತ್ತಿತರರು ಪಾಲ್ಗೊಳ್ಳುವರು ಎಂದರು. ಶಿವಶರಣರ ವಚನಗಳು ಹಾಗೂ ಬಸವ ತತ್ವಗಳ ಪ್ರಚಾರ-ಪ್ರಸಾರ, ಸಮಾಜದಲ್ಲಿ ಮಾನವೀಯ ಮೌಲ್ಯಗಳ ಬಲವರ್ಧನೆ ಮತ್ತು ಯುವಜನರಲ್ಲಿ ಆಧ್ಯಾತ್ಮಿಕ ಚಿಂತನೆ ಬೆಳೆಸುವ ಉದ್ದೇಶದಿಂದ ಈ ಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿದ್ದು, ಸಾರ್ವಜನಿಕರು, ಭಕ್ತಾದಿಗಳು ಹಾಗೂ ಬಸವಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸುವಂತೆ ಮನವಿ ಮಾಡಿದರು. ಎಂ.ಎಫ್.ಕೂಸಗೂರು, ಎಂ.ಎನ್.ಬೆನಕಣ್ಣನವರ, ರುದ್ರಪ್ಪ ಬಾಳಿಕಾಯಿ, ಪ್ರಭುಲಿಂಗಪ್ಪ ಹಲಗೇರಿ, ಎಸ್.ಹೆಚ್.ಪಾಟೀಲ ಇತರರು ಪತ್ರಿಕಾಗೋಷ್ಠಿಯಲ್ಲಿ ಇದ್ದರು.



ರಾಣೇಬೆನ್ನೂರ: ಸ್ಥಳೀಯ ಈಶ್ವರ ನಗರದ ಅನುಭವ ಮಂಟಪದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ವಿಶ್ವಗುರು ಬಸವ ಬಳಗ ಅಧ್ಯಕ್ಷ ಯು.ಎಂ.ಗುರುಲಿಂಗಪ್ಪಗೌಡ್ರ, ಮಾತನಾಡಿದರು. ಎಂ.ಎಫ್.ಕೂಸಗೂರು, ಎಂ.ಎನ್.ಬೆನಕಣ್ಣನವರ, ರುದ್ರಪ್ಪ ಬಾಳಿಕಾಯಿ, ಪ್ರಭುಲಿಂಗಪ್ಪ ಹಲಗೇರಿ, ಎಸ್.ಹೆಚ್.ಪಾಟೀಲ ಇತರರು ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ಹಾವೇರಿ ಗ್ರಾಮೀಣ ಮಂಡಲದ ಸಮನ್ವಯ ಜಾಗೃತಿ ಮಹತ್ವದ ಸಭೆ

ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಿ

ಹಾವೇರಿ: ಸಮಗ್ರ ಮತದಾರರ ಪಟ್ಟಿಯು (ಎಸ್‌ಐಆರ್) ಅತ್ಯಂತ ನಿಖರ ಹಾಗೂ ಸಮಗ್ರವಾಗಿರಲು ನಾವೆಲ್ಲರೂ ಜವಾಬ್ದಾರಿಯಿಂದ ಕೆಲಸ ಮಾಡಬೇಕಿದೆ. ಪಕ್ಷದ ಬಿಎಲ್‌ಓ ಹಾಗೂ ಬಿಎಲ್‌ಎ-2 ಕಾರ್ಯಕರ್ತರು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಬೇಕೆಂದು ಹಾವೇರಿ ವಿಧಾನಸಭಾ ಕ್ಷೇತ್ರದ ಎಸ್‌ಐಆರ್ ಉಸ್ತುವಾರಿ ಪಾಲಾಕ್ಷಗೌಡ ಪಾಟೀಲ ಹೇಳಿದರು.



ನಗರದ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಮತಪಟ್ಟಿ ಪರಿಷ್ಕರಣೆ ಕುರಿತು ನಡೆದ ಹಾವೇರಿ ಗ್ರಾಮೀಣ ಮಂಡಲದ ಸಮನ್ವಯ ಜಾಗೃತಿ ಮಹತ್ವದ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿ, ಪ್ರತಿಯೊಬ್ಬ ಅರ್ಹ ಮತದಾರರ ಹೆಸರುಗಳನ್ನು ಸೇರ್ಪಡೆಗೊಳಿಸುವುದು ಹಾಗೂ ತಿದ್ದುಪಡಿಗಳನ್ನು ಸಮರ್ಪಕವಾಗಿ ಮಾಡಿಸುವ ನಿಟ್ಟಿನಲ್ಲಿ ಬಿಎಲ್‌ಓ ಹಾಗೂ ಬಿಎಲ್‌ಎ-2 ಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಮುಂಬರುವ ಈ ಒಂದು ತಿಂಗಳ ಅಮೂಲ್ಯವಾದ ಸಮಯವನ್ನು ಸಂಪೂರ್ಣವಾಗಿ ಈ ಎಸ್‌ಐಆರ್ ಪ್ರಕ್ರಿಯೆಗೆ ಮೀಸಲಿಟ್ಟು ಯಶಸ್ವಿಗೊಳಿಸಲು ಪಕ್ಷದ ಸಾರಥಿಗಳಿಗೆ ಸಲಹೆ ನೀಡಿದರು.

ಬಿಜೆಪಿ ಜಿಲ್ಲಾಧ್ಯಕ್ಷ ವಿರೂಪಾಕ್ಷಪ್ಪ ಬಳ್ಳಾರಿ ಅವರು, ಪ್ರಧಾನಿ ನರೇಂದ್ರ ಮೋದಿ ನಾಯಕತ್ವದಲ್ಲಿ ದೇಶದಲ್ಲಿ ಬಿಜೆಪಿ ಪಕ್ಷ ಸದೃಢವಾಗಿದೆ. ಪ್ರತಿಯೊಬ್ಬ ಬಿಎಲ್‌ಓ ಹಾಗೂ ಬಿಎಲ್‌ಎ-2 ಕಾರ್ಯಕರ್ತರು ಯಾವುದೇ ಮತದಾರರಿಗೆ ಅನ್ಯಾಯವಾಗದಂತೆ ತಿದ್ದುಪಡಿ, ಹೆಸರು ಸೇರ್ಪಡೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು. ಈ ಮೂಲಕ ಜಿಲ್ಲೆಯಲ್ಲಿ ಎಸ್‌ಐಆರ್‌ನ್ನು ಯಶಸ್ವಿಗೊಳಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಬಿಜೆಪಿ ಗ್ರಾಮೀಣ ಮಂಡಲದ ಅಧ್ಯಕ್ಷ ಮಾರುತಿ ಗೊರವರ ಅಧ್ಯಕ್ಷತೆ ವಹಿಸಿದ್ದರು. ಮುಖಂಡ ಗವಿಸಿದ್ದಪ್ಪ ದ್ಯಾಮಣ್ಣವರ, ಪ್ರಧಾನ ಕಾರ್ಯದರ್ಶಿ ನೀಲಪ್ಪ ಚಾವಡಿ, ಹತ್ತಿಮತ್ತೂರ ಮಂಡಲದ ಅಧ್ಯಕ್ಷ ಬಸವರಾಜ ಕೋಳಿವಾಡ, ಬಸವರಾಜ ಕಳಸೂರ ಸೇರಿದಂತೆ ಪಕ್ಷದ ಮುಖಂಡರು, ಕಾರ್ಯಕರ್ತರು, ಬಿಎಲ್‌ಓಗಳು ಹಾಗೂ ಬಿಎಲ್‌ಎ-2 ಕಾರ್ಯಕರ್ತರು ಹಾಜರಿದ್ದರು.

ಯೋಗದಿಂದ ಆರೋಗ್ಯದಲ್ಲಿ ಸುಧಾರಣೆ

ಹಾವೇರಿ: ಪ್ರತಿದಿನ ಯೋಗ ಮಾಡುವುದರಿಂದ ನಮ್ಮ ಆರೋಗ್ಯದಲ್ಲಿ ಗಣನೀಯವಾಗಿ ಸುಧಾರಣೆಯಾಗುತ್ತದೆ. ಯೋಗ ನಮಗೆ ವರದಾನವಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಬಿರಾದಾರ ದೇವಿಂದ್ರಪ್ಪಾ ಅವರು ಹೇಳಿದರು.

ನಗರದ ಜಿಲ್ಲಾ ನ್ಯಾಯವಾದಿಗಳ ಸಂಘದ ಸಭಾಭವನದಲ್ಲಿ ರವಿವಾರ ಜಿಲ್ಲಾ ನ್ಯಾಯಾಂಗ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯವಾದಿಗಳ ಸಂಘ, ಅಭಿಯೋಜನಾ ಇಲಾಖೆ ಮತ್ತು ಜಿಲ್ಲಾ ಆಯುಷ್ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾದ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿ, ಇಂದು ಜಗತ್ತಿನ ಬಹುತೇಕ ದೇಶಗಳು ತಮ್ಮ ಆರೋಗ್ಯ ವೃದ್ಧಿಗೆ ಯೋಗವನ್ನು ಅನುಸರಿಸುತ್ತಿವೆ. ಪ್ರತಿಯೊಬ್ಬರೂ ಪ್ರತಿದಿನ ಯೋಗ ಮಾಡುವುದರಿಂದ ಮಾನಸಿಕ ಆರೋಗ್ಯ ಕಾಯ್ದುಕೊಳ್ಳಬಹುದು. ಇಂದು ನಾವೆಲ್ಲರೂ ಒತ್ತಡದ ಜೀವನದಲ್ಲಿದ್ದೇವೆ. ಒತ್ತಡ ನಿವಾರಣೆಗೆ ಯೋಗ ಅತೀ ಮುಖ್ಯವಾಗಿದೆ ಎಂದು ಹೇಳಿದರು.

ಕೌಟುಂಬಿಕ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರಾದ ಎಂ.ಜಿ. ಶಿವಳ್ಳಿ, ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿ.ಜೆ.ಎಂ. ಮಹ್ಮದ ಅನ್ವರ್ ಹುಸೇನ ಮೊಗಲಾನಿ, ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಶೋಭಾ ಬಿ.ಜಿ., ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಶ್ರೀಶೈಲಜಾ ಎಚ್.ವಿ., ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಆಕರ್ಷ ಎಂ., ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರಾಹುಲ್ ಆದಿನಾಥ ನ್ಯಾಮಗೌಡ, ಜಿಲ್ಲಾ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಎಚ್.ಸಿ. ಸಿದ್ದನಗೌಡ್ರ, ಕಾರ್ಯದರ್ಶಿ ಪಿ.ಎಸ್. ಹೆಬ್ಬಾಳ, ಸರ್ಕಾರಿ ವಕೀಲ ಎಸ್.ಎಫ್. ವಾರ್ತಿ ಇತರರು ಉಪಸ್ಥಿತರಿದ್ದರು.





'ಕಲಾ ನಡಿಗೆ ನಿಮ್ಮ ಬಳಿಗೆ' ಕಾರ್ಯಕ್ರಮ

ಹಾವೇರಿ: ಕಲಾ ನಡಿಗೆ ನಿಮ್ಮ ಬಳಿಗೆ ಎಂಬ ವಿನೂತ ಕಾರ್ಯಕ್ರಮ ರವಿವಾರ ರಾಣೇಬೆನ್ನೂರು ತಾಲೂಕು ದೇವರಗುಡ್ಡ ಪ್ರವಾಸಿತಾಣ ಶ್ರೀ ಮಾಲತೇಶ ಮಾಲಸಾಂಭಾ ವೇದಿಕೆಯಲ್ಲಿ ಜರುಗಿತು. ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಶೇಖರ ಹಂಚಿನಮನಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶ್ರೀ ಮಾಲತೇಶ ಮೈಲಾರಲಿಂಗ ದೇವಸ್ಥಾನ ಆಡಳಿತ ಸಮಿತಿ ಅಧ್ಯಕ್ಷ ಗವಿಸಿದ್ದಪ್ಪ ದ್ಯಾಮಣ್ಣವರ, ದೇವರಗುಡ್ಡ ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ಮಂಜುನಾಥ ವೇ?ಗಾರ, ಉಪಸ್ಥಿತರಿದ್ದರು. ಪರಶುರಾಮ ಬಣಕಾರ ಹಾಗೂ ಸಂಗಡಿಗರಿಂದ ಜಾನಪದ ಸಂಗೀತ ಕಾರ್ಯಕ್ರಮ, ಶಿವನಗೌಡ ಪಾಟೀಲ ಹಾಗೂ ಸಂಗಡಿಗರಿಂದ ಡೊಳ್ಳು ಕುಣಿತ ಕಾರ್ಯಕ್ರಮ ನಡೆಸಿಕೊಟ್ಟರು.

ಆರ್ಥಿಕ ಸಬಲತೆಗೆ ಹೊಲಿಗೆ ತರಬೇತಿ ಪೂರಕ

ಹಾನಗಲ್ಲ: ಮಹಿಳೆ ಅಬಲೆ ಎಂದು ಆಡಿದ ಮಾತುಗಳು ಈಗ ಮರೆಯಾಗಿ, ಸಬಲ ಸಾರ್ಥಕ ಜೀವನದ ಶಕ್ತಿಯುತ ಸಾಧಕಿ ಎಂದು ಸಾಬೀತಾಗಿರುವಾಗ ಇನ್ನಷ್ಟು ತನ್ನ ಸಾಮರ್ಥ್ಯ ಒರೆಗೆ ಹಚ್ಚುವಲ್ಲಿ ಗಟ್ಟಿ ಹೆಜ್ಜೆ ಇಡಬೇಕಿದೆ ಎಂದು ಲೋಯಲಾ ವಿಕಾಸ ಕೇಂದ್ರದ ನಿರ್ದೇಶಕ ಜಾನ್ಸನ್ ಪಾಯ್ಸ್ ಹೇಳಿದರು.

ತಾಲೂಕಿನ ಆರೆಗೊಪ್ಪ ಗ್ರಾಮದಲ್ಲಿ ಹ್ಯುಮ್ಯಾನಿಟಿ ಫೌಂಡೇಶನ್‌ನ ಪರಿವರ್ತನ ಕಲಿಕಾ ಕೇಂದ್ರ ಹಾಗೂ ಲೋಯಲಾ ವಿಕಾಸ ಕೇಂದ್ರ ಆಯೋಜಿಸಿದ್ದ ಉಚಿತ 3ನೇ ಹೊಲಿಗೆ ತರಬೇತಿ ಕೇಂದ್ರ ಉದ್ಘಾಟಿಸಿ ಅವರು ಮಾತನಾಡಿದರು. ಬದಲಾದ ಕಾಲಕ್ಕೆ ಮಹಿಳೆ ಕೂಡ ತಮ್ಮ ಸಾಮರ್ಥ್ಯವನ್ನು ಇನ್ನಷ್ಟು ಗಟ್ಟಿಗೊಳಿಸಿಕೊಂಡು ಕುಟುಂಬದ ಆರ್ಥಿಕ ಸೌಖ್ಯಕ್ಕೆ ಹೆಜ್ಜೆ ಹಾಕುತ್ತಿದ್ದಾರೆ. ಕಾಲಹರಣಕ್ಕೆ ಇದು ಸಕಾಲವಲ್ಲ, ದುಡಿದು ಬದುಕುವುದೇ ನಿಜವಾದ ಜೀವನ. ಅಂತಹ ಬದುಕಿಗೆ ಬೇಕಾಗುವ ಆರ್ಥಿಕ ಸಬಲತೆಗೆ ಬೇಕಾಗುವ ತರಬೇತಿಗಳನ್ನು ತಾಲೂಕಿನಾದ್ಯಂತ ನಡೆಸುತ್ತಿರುವ ಶಾಸಕ ಶ್ರೀನಿವಾಸ ಮಾನೆ ವಿಶೇಷವಾಗಿ ಯುವಕ, ಯುವತಿಯರಿಗೆ ಉದ್ಯೋಗಾವಕಾಶಕ್ಕೆ ಮೊದಲಾದ್ಯತೆ ನೀಡುತ್ತಿದ್ದಾರೆ. ಇದಕ್ಕೆ ನಮ್ಮ ಲೋಯಲಾ ಸಂಸ್ಥೆ ಸಹಕಾರ ನೀಡುತ್ತಿದೆ. ಆರೆಗೊಪ್ಪದಲ್ಲಿ ಮನೆಗೆಲಸಗಳನ್ನು ಪೂರೈಸಿ ಹೊಲಿಗೆ ತರಬೇತಿಗೆ ಆಸಕ್ತಿ ತೋರಿರುವುದು ನಿಜಕ್ಕೂ ಮೆಚ್ಚುವಂತಹದ್ದು ಎಂದರು.

ಅಧ್ಯಕ್ಷತೆ ವಹಿಸಿದ್ದ ಪರಿವರ್ತನ ಕಲಿಕಾ ಕೇಂದ್ರದ ಆಡಳಿತಾಧಿಕಾರಿ ಮಾರುತಿ ಶಿಡ್ಲಾಪೂರ ಮಾತನಾಡಿ, ಪರಿವರ್ತನ ಕಲಿಕಾ ಕೇಂದ್ರದ ಮೂಲ ಉದ್ದೇಶವೇ ಶೈಕ್ಷಣಿಕ ಅವಕಾಶಗಳನ್ನು ತೆರೆಯುವುದಾಗಿದೆ. ನಿರೋದ್ಯೋಗ ಎಂಬ ಭೂತವನ್ನು ಹತ್ತಿರಕ್ಕೆ ತಂದುಕೊಳ್ಳದೇ ಉತ್ತಮ ಉದ್ಯೋಗಾವಕಾಶಕ್ಕೆ ಮಾರ್ಗದರ್ಶನ ಮಾಡುವುದೇ ನಮ್ಮ ಸಂಸ್ಥೆಯ ಆಸಕ್ತಿ. ಇದಕ್ಕಾಗಿ ಶಾಲೆ ಕಾಲೇಜು ಮಕ್ಕಳಿಗೆ ಉತ್ತಮ ಶೈಕ್ಷಣಿಕ ಸೌಲಭ್ಯ ನೀಡುವುದು ಇಲ್ಲಿನ ಕಾಳಜಿಯೂ ಆಗಿದೆ. ಇದಕ್ಕಾಗಿ ಶಾಸಕ ಶ್ರೀನಿವಾಸ ಮಾನೆ ಅವರ ಮಾರ್ಗದರ್ಶನ, ಆರ್ಥಿಕ ಸಂಪನ್ಮೂಲದ ಸಹಕಾರ ಬಹಳ ಮುಖ್ಯವಾಗಿದೆ. ಇದರಿಂದ ಸಾಕಷ್ಟು ಮಹಿಳೆಯರು ಸ್ವಯಂ ಉದ್ಯೋಗದತ್ತ ದಾಪುಗಾಲು ಹಾಕಿರುವುದು ಇದರ ಯಶಸ್ಸು ಎಂದರು. ಗ್ರಾಪಂ ಮಾಜಿ ಅಧ್ಯಕ್ಷೆ ಪ್ರೇಮಾ ಪೂಜಾರ, ಸಾವಕ್ಕ ಪವಾರ, ಪರಶುರಾಮ ಪೂಜಾರ, ತರಬೇತಿ ಶಿಕ್ಷಕಿ ಚಿಂತನಾ ಗೊಲ್ಲರ, ಲಕ್ಷ್ಮೀ ಪವಾರ, ರೂಪಾ ಕಾಶಿಬಾಯಿ, ಗಿರೀಶ ಅಂಬಿಗೇರ, ಲೋಹಿತ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಮಕ್ಕಳ ಹೊಸ ಶಾಲಾ ಸಂಸತ್ ರಚನೆ



ರಾಣೇಬೆನ್ನೂರ: ತಾಲೂಕಿನ ಕೋಡಿಯಾಲ ಗ್ರಾಮದ ಅಮೃತ ವರ್ಷಿಣಿ ವಿದ್ಯಾಲಯದಲ್ಲಿ ಕಾರ್ಯದರ್ಶಿ ವಿನಯ್ ಪಿ. ರಾವ್ ಹಾಗೂ ಪ್ರಾಂಶುಪಾಲರಾದ ಚೇತನಾ ವಿ. ರಾವ್‌ರವರ ನೇತೃತ್ವದಲ್ಲಿ ಮಕ್ಕಳ ಹೊಸ ಸಂಸತ್ ರಚಿಸಲಾಯಿತು.

ಶಾಲಾ ಹಂತದಿಂದಲೇ ಮಕ್ಕಳಲ್ಲಿ ನಾಯಕತ್ವದ ಗುಣಗಳನ್ನು ಬಿತ್ತಿ ಅವರಲ್ಲಿ ಆತ್ಮವಿಶ್ವಾಸ ಬೆಳೆಸುವುದು ಇದರ ಮುಖ್ಯ ಉದ್ದೇಶವಾಗಿದೆ. ಮಕ್ಕಳಿಗೆ ಪ್ರಜಾಪ್ರಭುತ್ವ ವ್ಯವಸ್ಥೆ, ನಾಗರೀಕರ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಅರಿವು ಮೂಡಿಸಿ ಅದನ್ನು ಪಾಲಿಸುವಂತೆ ಪ್ರತಿಜ್ಞಾವಿಧಿಕೈಗೊಳ್ಳಲಾಯಿತು. ವಿದ್ಯಾರ್ಥಿ ನಾಯಕರಾಗಿ 9ನೇ ತರಗತಿಯ ಕೆ.ವಿ. ಅಭಯ್ ಹಾಗೂ ಉಪನಾಯಕನಾಗಿ ಅಮಲ್‌ರಾಜ್ ಪಿ. ಆಯ್ಕೆಯಾದರು.

ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

ಹಾವೇರಿ: ಪ್ರಸಕ್ತ 2026-27ನೇ ಸಾಲಿನ ಎಸ್.ಎಫ್.ಸಿ. ಯೋಜನೆ ಮತ್ತು ಪುರಸಭೆ ಸಾಮಾನ್ಯ ನಿಧಿ ಅನುದಾನದಲ್ಲಿ ಸಹಾಯಧನ ಹಾಗೂ ಕಾನೂನು ಪುಸ್ತಕ ಸೌಲಭ್ಯಕ್ಕೆ ಶಿಗ್ಗಾಂವ ಪುರಸಭೆ ವ್ಯಾಪ್ತಿಯ ಪರಿಶಿಷ್ಟ ಜಾತಿ ಹಾಗೂ ಬಡತನ ರೇಖೆಗಿಂತ ಕೆಳಗಿರುವ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಎಂ.ಬಿ.ಎ.ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ಹಾಗೂ ಹಿಂದುಳಿದ ವರ್ಗದ ಕ್ರೀಡಾಪಟುಗಳು ಸಹಾಯಧನ ಸೌಲಭ್ಯಕ್ಕೆ ಹಾಗೂ ಕಾನೂನು ಪದವಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಅರಿವು ಪುಸ್ತಕ ಸೌಲಭ್ಯಕ್ಕೆ ಜಾತಿ, ಆದಾಯ ಪ್ರಮಾಣಪತ್ರ ಹಾಗೂ ರಹವಾಸಿ ಪ್ರಮಾಣಪತ್ರ ಸೇರಿದಂತೆ ಅಗತ್ಯ ದಾಖಲೆಗಳೊಂದಿಗೆ ಜೂ.30ರೊಳಗಾಗಿ ಅರ್ಜಿ ಸಲ್ಲಿಸಬೇಕು ಎಂದು ಶಿಗ್ಗಾಂವ ಪುರಸಭೆ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಶಿಗ್ಗಾಂವ ಪುರಸಭೆ ಕಚೇರಿ (08378-255250) ಸಂಪರ್ಕಿಸಲು ಕೋರಲಾಗಿದೆ.

ಮಹಿಳೆಯರಿಗೆ ಹಣ್ಣು ಹಂಪಲು ವಿತರಣೆ

ಬ್ಯಾಡಗಿ: ಮಹಿಳೆಯರು ಗರ್ಭಿಣಿ ಆದಾಗ ಹೆರಿಗೆಯ ನಂತರ ಸೂಕ್ತವಾದ ಆಹಾರ ಹಾಗೂ ಹಣ್ಣುಗಳನ್ನು ಸೇವಿಸುವುದರ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ತಾಲೂಕು ಸರ್ಕಾರಿ ಆಸ್ಪತ್ರೆಯ ಚಿಕ್ಕ ಮಕ್ಕಳ ತಜ್ಞ ಡಾ. ಸುರೇಶ ಗುಂಡಪಲ್ಲಿ ಹೇಳಿದರು.

ಪಟ್ಟಣದ ಇನ್ನರ್ ವ್ಹೀಲ್ ಕ್ಲಬ್ ವತಿಯಿಂದ ಹೆರಿಗೆ ಆದ ಮಹಿಳೆಯರಿಗೆ ಹಣ್ಣುಗಳನ್ನು ವಿತರಣೆ ಮಾಡುವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸರ್ಕಾರಿ ಆಸ್ಪತ್ರೆಗೆ ಕೋವಿಡ್ ಸಮಯದಲ್ಲಿ ರೋಟರಿ. ಇನ್ನರ್ ವ್ಹೀಲ್ ಹಾಗೂ ಅನೇಕ ಸಂಘ ಸಂಸ್ಥೆಗಳು ಮತ್ತು ವ್ಯಕ್ತಿಗಳು ವಿವಿಧ ರೀತಿಯಲ್ಲಿ ಸಹಾಯ ಸಲ್ಲಿಸಿದ್ದಾರೆ. ಈ ಸಹಾಯದ ಕಾರ್ಯವು ಈಗಲೂ ಮುಂದುವರೆದಿದೆ ಎಂದರು.

ಕಾರ್ಯಕ್ರಮದಲ್ಲಿ ಇನ್ನರ್ ವ್ಹೀಲ್ ಕ್ಲಬ್ ಅಧ್ಯಕ್ಷೆ ಪ್ರತಿಭಾ ಮೇಲಗಿರಿ, ಸದಸ್ಯರಾದ ಪುಷ್ಪಾ ಇಂದಿಮಠ, ಮಹೇಶ್ವರಿ ಪಸಾರದ ಹಾಗೂ ಇತರರು ಉಪಸ್ಥಿತರಿದ್ದರು.



ವಿವಿಧ ಜಯಂತಿ: ಪೂರ್ವಭಾವಿ ಸಭೆ

ಹಾವೇರಿ: ಜಿಲ್ಲಾಡಳಿತದಿಂದ ನಾಡಪ್ರಭು ಕೆಂಪಗೌಡ ಜಯಂತಿ ಹಾಗೂ ಹಾಗೂ ಡಾ.ಪ.ಗು. ಹಳಕಟ್ಟಿಯವರ ಜನ್ಮದಿನ-ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಕುರಿತು ಪೂರ್ವಭಾವಿ ಸಭೆ ಜೂನ್ 23 ರಂದು ಸಾಯಂಕಾಲ 4 ಗಂಟೆಗೆ ಜಿಲ್ಲಾಧಿಕಾರಿಗಳ ಕೋರ್ಟ್‌ಹಾಲ್‌ನಲ್ಲಿ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿರೋಗಿ ಜೀವನ ನಡೆಸಲು ಯೋಗ ಸಹಕಾರಿ: ಪಾಟೀಲ

ಹಾವೇರಿ: ಇಲ್ಲಿಯ ದೇವಿಹೊಸೂರು ರಸ್ತೆಯಲ್ಲಿರುವ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಲ್ಲಿ ಸೋಮವಾರ12ನೇಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು.



ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಎಸ್.ಎಸ್. ಆಯುರ್ವೇದ ಮೆಡಿಕಲ್ ಕಾಲೇಜಿನ ಪ್ರಾಧ್ಯಾಪಕ ಡಾ. ಗುಹೇಶ್ವರ ಪಾಟೀಲ, ''ಸ್ಥಿರತೆ ಯೋಗದ ಒಂದು ಪ್ರಮುಖ ಭಾಗವಾಗಿದೆ. ಈ ವರ್ಷದ ಯೋಗ ದಿನಾಚರಣೆಯ ಧ್ಯೇಯ ವಾಕ್ಯ 'ಹೆಲ್ದಿ ಏಜಿಂಗ್' ಆಗಿದ್ದು, 2030ರಿಂದ 2050ರ ವೇಳೆಗೆ ವೃದ್ಧರ ಸಂಖ್ಯೆ ಶೇ.20ರಷ್ಟು ಹೆಚ್ಚಾಗುವ ನಿರೀಕ್ಷೆಯಿದೆ. ವೃದ್ಧಾಪ್ಯವನ್ನು ಆರೋಗ್ಯಕರವಾಗಿ ಕಾಪಾಡಿಕೊಳ್ಳುವ ಉದ್ದೇಶದಿಂದ ಈ ಪರಿಕಲ್ಪನೆಯನ್ನು ರೂಪಿಸಲಾಗಿದೆ'' ಎಂದರು.

ಯೋಗವು ಆಯುಷ್ಯವನ್ನು ಹೆಚ್ಚಿಸುವುದರ ಜೊತೆಗೆ ನಿರೋಗಿ ಜೀವನವನ್ನು ನಡೆಸಲು ಸಹಕಾರಿಯಾಗುತ್ತದೆ. ದೈಹಿಕ ಹಾಗೂ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಯೋಗ ಅತ್ಯಂತ ಪರಿಣಾಮಕಾರಿ ಸಾಧನವಾಗಿದೆ. ಯೋಗದ ಆಸನಗಳಷ್ಟೇ ಅದರ ಅಷ್ಟಾಂಗಗಳಿಗೂ ಮಹತ್ವ ನೀಡಬೇಕು ಎಂದು ಅವರು ಹೇಳಿದರು.

ಮಕ್ಕಳ ವಯಸ್ಸಿನಲ್ಲಿಯೇ ಯೋಗಾಭ್ಯಾಸ ಆರಂಭಿಸಿದರೆ ವೃದ್ಧಾಪ್ಯದಲ್ಲಿಯೂ ಆರೋಗ್ಯ ಮತ್ತು ಶಕ್ತಿಯನ್ನು ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಹಾವೇರಿ ಜಿಲ್ಲಾ ಯೋಗ ಸಂಸ್ಥೆಯ ಕಾರ್ಯದರ್ಶಿ ಪ್ರೇಮಕುಮಾರ ಮುದ್ದಿ ಮಾತನಾಡಿ, ಯೋಗಾಭ್ಯಾಸ ಆರಂಭಿಸುವ ಮುನ್ನ ಯಮ, ನಿಯಮ ಸೇರಿದಂತೆ ಯೋಗದ ಮೂಲ ತತ್ವಗಳನ್ನು ಅನುಸರಿಸಬೇಕು. ಯೋಗಾಭ್ಯಾಸದಿಂದ ದೇಹದಲ್ಲಿ ಸಕಾರಾತ್ಮಕ ಶಕ್ತಿ ಉತ್ಪತ್ತಿಯಾಗುತ್ತದೆ. ಸಾಧನೆ ಮಾಡುವಾಗ ಆಸನವನ್ನು ಬಳಸುವ ಮಹತ್ವವನ್ನು ವಿವರಿಸಿದರು.

ಜೂನ್ 21ರಂದು ವಿಶ್ವದ 195ಕ್ಕೂ ಹೆಚ್ಚು ದೇಶಗಳಲ್ಲಿ ಅಂತಾರಾಷ್ಟ್ರೀಯ ಯೋಗದಿನವನ್ನು ಆಚರಿಸಲಾಗುತ್ತದೆ. ಮೊಬೈಲ್ ಬಳಕೆಯನ್ನು ಕಡಿಮೆ ಮಾಡಬೇಕಾದ ಅಗತ್ಯವಿದ್ದು, ಮೊಬೈಲ್ ನಮ್ಮ ಬದುಕನ್ನು ನಿರ್ವಹಿಸುವ ಹಂತಕ್ಕೆ ಬಂದಿರುವುದು ಕಳವಳಕಾರಿ ಸಂಗತಿಯಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಯೋಗ ತರಬೇತುದಾರ ಅಭಿಷೇಕ ಅವರು ಸೂರ್ಯ ನಮಸ್ಕಾರ, ಪಾದಹಸ್ತ ಆಸನ, ತ್ರಿಕೋನಾಸನ, ವಕ್ರಾಸನ, ಪದ್ಮಾಸನ, ಪ್ರಾಣಾಯಾಮ, ಧ್ಯಾನ ಸೇರಿದಂತೆ ವಿವಿಧ ಯೋಗಾಸನಗಳ ಪ್ರಾತ್ಯಕ್ಷಿಕೆ ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಪ್ರಾಚಾರ್ಯೆ ಶ್ಯಾಮಲಾ ವಿ.ಮಾತಾಜಿ ಅಧ್ಯಕ್ಷತೆ ವಹಿಸಿದ್ದರು. ವಾಸುದೇವ ಗುರೂಜಿ ಸ್ವಾಗತಿಸಿದರು. ಮಮತಾ ಮಾತಾಜಿ ವಂದಿಸಿದರು. ವಿನಾಯಕ ಭಟ್, ರಂಗನಾಥ, ವಿನೋದ, ಶಂಭು ಸೇರಿದಂತೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದರು.

ನಿರಂತರ ಅಧ್ಯಯನದಿಂದ ಸಾಧನೆ ಸಾಧ್ಯ: ಪ್ರೊ.ಕೆಳಗಿನಮನಿ

ರಾಣೇಬೆನ್ನೂರ: ವಿದ್ಯಾರ್ಥಿಗಳು ನಿರಂತರ ಅಧ್ಯಯನದಲ್ಲಿ ತೊಡಗಿಕೊಳ್ಳುವ ಮೂಲಕ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕೆಂದು ಆದಿಕವಿ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶಿವಾನಂದ ಕೆಳಗಿನಮನಿ ಹೇಳಿದರು.



ತಾಲೂಕಿನ ಸುಣಕಲ್ಲಬಿದರಿ ಗ್ರಾಮದ ಅರಳಿ ಶಿದ್ಲಿಂಗಪ್ಪ ಬಸಪ್ಪ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಸಕ್ತ ಸಾಲಿನ ಪಠ್ಯೇತರ ಚಟುವಟಿಕೆಗಳ ಸಮಾರೋಪ ಹಾಗೂ ಅಂತಿಮ ಪದವಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬದುಕು ತುಂಬಾ ವೇಗವಾಗಿ ಹೋಗುತ್ತಿದೆ ಅದಕ್ಕೆ ತಕ್ಕನಾಗಿ ನಾವು ನಮ್ಮನ್ನು ಅಣಿಗೊಳಿಸಿಕೊಳ್ಳಬೇಕಾದ ಅಗತ್ಯವಿದೆ ಎಂದರು.

ವಿದ್ಯಾರ್ಥಿಗಳು ಅಧ್ಯಯನದಲ್ಲಿ ಇಚ್ಛಾಶಕ್ತಿ ಮತ್ತು ಕ್ರಿಯಾಶಕ್ತಿಯನ್ನು ರೂಢಿಸಿಕೊಂಡಲ್ಲಿ ಮಾತ್ರ ಅಂದುಕೊಂಡಿದ್ದನ್ನು ಸಾಧಿಸಲು ಸಾಧ್ಯ. ಪದವಿಯ ನಂತರ ಉದ್ಯೋಗದಲ್ಲಿ ಕೀಳರಿಮೆ ಬೆಳೆಸಿಕೊಳ್ಳಬೇಡಿ, ವೃತ್ತಿಗೆ ಗೌರವ ಕೊಡುವುದರೊಂದಿಗೆ ಉದ್ಯೋಗದಲ್ಲಿ ತೊಡಗಿಕೊಳ್ಳಿ ಎಂದು ಸಲಹೆ ನೀಡಿದರು.

ಹಲಗೇರಿ ಹಾಲಸಿದ್ದೇಶ್ವರ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಬಿ.ಎಚ್. ಪಾಟೀಲ ಮಾತನಾಡಿ, ವಿದ್ಯಾರ್ಥಿಗಳು ಜೀವನದಲ್ಲಿ ಕನಸು ಕಾಣಬೇಕು ಹಾಗೂ ಗುರಿ ಇರಿಸಿಕೊಳ್ಳಬೇಕು. ಉತ್ತಮ ವಿದ್ಯಾರ್ಥಿ ಆಗುವ ಮೂಲಕ ಮನೆಗೆ ಹಾಗೂ ಸಮಾಜಕ್ಕೆ ಒಳ್ಳೆಯ ಮಗನಾಗಿ ಎಲ್ಲರ ಪ್ರೀತಿಯನ್ನು ಗಳಿಸಿ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಪ್ರಾಚಾರ್ಯ ಪ್ರೊ. ಎಸ್.ಪಿ. ಗೌಡರ ಮಾತನಾಡಿ, ವಿದ್ಯಾರ್ಥಿಗಳು ಪಠ್ಯೇದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಮೂಲಕ ಪರಿಪೂರ್ಣ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು .ಇಂದು ಗ್ರಾಮೀಣ ಭಾಗದ ಕಾಲೇಜು ಗಳಲ್ಲಿಯೇ ಗುಣಮಟ್ಟದ ಶಿಕ್ಷಣ ದೊರೆಯುತ್ತಿದೆ, ವಿದ್ಯಾರ್ಥಿಗಳು ಕ್ರೀಡೆ, ಯೋಗಾಸನ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಉತ್ತಮವಾಗಿ ತೊಡಗಿಕೊಳ್ಳುವ ಮೂಲಕ ಅಂತರ್ ವಿಶ್ವವಿದ್ಯಾಲಯ ಸ್ಪರ್ಧೆಗಳಲ್ಲಿ ಭಾಗವಹಿಸಿ, ಬಹು ಮಾನ ಪಡೆದುಕೊಂಡಿದ್ದಾರೆ ಎಂದರು.

ಗ್ರಾಪಂ ಮಾಜಿ ಅಧ್ಯಕ್ಷೆ ಸುನಂದಾ ವಗ್ಗರಣೆ, ಸಾಂಸ್ಕೃತಿಕ ವೇದಿಕೆ ಸಂಚಾಲಕ ರವಿ.ಎಂ, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರಾದ ಶಂಕರಗೌಡ ಕುಸಗೂರ, ಮಾದೇವಪ್ಪ ನಾರಜ್ಜಿ, ಚನ್ನಬಸಪ್ಪ ನಾಡಿಗೇರ, ಸೋಮಪ್ಪ ಕೊಟ್ಟದ ಶಿವಾನಂದ ವಗ್ಗರಣೆ, ಬಸವರಾಜ ಹುಗ್ಗಿ, ಪ್ರಾಧ್ಯಾಪಕರಾದ ಬಿ.ಕೆ ಮಂಜುನಾಥ, ಅಂಬಿಕಾ ಹೊಸಮನಿ, ನಾಗರಾಜ ಗೋಡಿಹಾಳ, ಅಧೀಕ್ಷಕ ಸತೀಶ ಎಂ, ಉಪನ್ಯಾಸಕರಾದ ಗಂಗವ್ವ ದಾನಪ್ಪನವರ, ಶೋಭಾ ನಂದಿಹಳ್ಳಿ, ಶಂಕರ ಹರಿಜನ, ವೀರೇಶ ಷಡಕ್ಷರಿಮಠ, ಮೀನಾಕ್ಷಿ ಪೂಜಾರ, ಚಂದ್ರನಾಯಕ, ಕುಮಾರಕರಿಯಜ್ಜಿ, ಸಾವಿತ್ರಮ್ಮ, ಮೇಘನಾ ಎಂ, ಸಿಬ್ಬಂದಿ ಶಿವಾನಂದ ಕೆ, ಶಿವಶಂಕರ ಅಂಗಡಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಕೆ.ಬಿ ರೇವಣಸಿದ್ದಪ್ಪ ಸ್ವಾಗತಿಸಿದರು, ಸತೀಶ್ ನಾಯಕ್ ನಿರೂಪಿಸಿದರು, ರವಿಕುಮಾರ ಎಸ್. ಯು ವಂದಿಸಿದರು.

ಕಿರುಸುದ್ದಿ

ರೋಹಿಣಿ ಪಾಟೀಲರಿಗೆ ಮಹಿಳಾ ರತ್ನ ಪ್ರಶಸ್ತಿ



ನೇಸರಗಿ: ಕೆಪಿಸಿಸಿ ಸದಸ್ಯೆ, ಲಿಂಗಾಯತ ಸಂಘಟನೆಯ ಹೋರಾಟಗಾರ್ತಿ, ಚನ್ನಮ್ಮನ ಕಿತ್ತೂರು ಕ್ಷೇತ್ರದ ಶಾಸಕರಾದ ಬಾಬಾಸಾಹೇಬ ಪಾಟೀಲ ಅವರ ಪತ್ನಿ ರೋಹಿಣಿತಾಯಿ ಬಾಬಾಸಾಹೇಬ ಪಾಟೀಲರಿಗೆ ನಾಡಿನ ಪ್ರಖ್ಯಾತ ಮಠವಾದ ನಾಗನೂರ ರುದ್ರಾಕ್ಷಿ ಮಠದಿಂದ ಕೊಡಮಾಡುವ ಶ್ರೀಮತಿ ಪದ್ಮಾವತಿ ಷಣ್ಮುಖಪ್ಪ ಅಂಗಡಿ ಅವರ ಸ್ಮರಣೆಯ ಮಹಿಳಾ ರತ್ನ ಪ್ರಶಸ್ತಿ-2026 ಗೆ ಆಯ್ಕೆ ಮಾಡಲಾಗಿದೆ.

ಕಾಂಗ್ರೆಸ್ ಕಾರ್ಯಕ್ರಮದಿಂದ ವಿದ್ಯಾರ್ಥಿಗಳಿಗೆ ತೊಂದರೆ

ಬೈಲಹೊಂಗಲ: ಕೆಪಿಸಿಸಿ ಅಧ್ಯಕ್ಷರ ಪದಗ್ರಹಣ ಸಮಾರಂಭದ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಉಂಟಾದ ಭಾರಿ ಟ್ರಾಫಿಕ್ ಜಾಮ್‌ನಿಂದಾಗಿ ಹಲವು ವಿದ್ಯಾರ್ಥಿಗಳು ನೀಟ್ ಮರುಪರೀಕ್ಷೆಗೆ ಸಮಯಕ್ಕೆ ಸರಿಯಾಗಿ ತಲುಪಲು ಸಾಧ್ಯವಾಗದೇ ಅಮೂಲ್ಯ ಅವಕಾಶ ಕಳೆದುಕೊಂಡಿರುವುದು ಅತ್ಯಂತ ಖಂಡನೀಯ ಎಂದು ಬಿಜೆಪಿ ರಾಜ್ಯ ಸಮಿತಿ ಸದಸ್ಯ ಎಫ್.ಎಸ್. ಸಿದ್ದನಗೌಡರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸೋಮವಾರ ಪತ್ರಿಕಾ ಪ್ರಕಟಣೆ ಮೂಲಕ ಮಾತನಾಡಿದ ಅವರು, ವರ್ಷವಿಡೀ ಕಷ್ಟಪಟ್ಟು ಓದಿದ ಬಡ ಹಾಗೂ ಮಧ್ಯಮ ವರ್ಗದ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಗಳಿಗೆ ಸಮಯಕ್ಕೆ ತಲುಪಲಾಗದೆ ಕಣ್ಣೀರು ಹಾಕುವಂತಾಗಿರುವುದು ಸರ್ಕಾರದ ಬೇಜವಾಬ್ದಾರಿತನದ ಪರಿಣಾಮವಾಗಿದೆ ಎಂದು ಆರೋಪಿಸಿದರು.

ಬೆಂಗಳೂರಿನ ಆರ್.ಸಿ. ಕಾಲೇಜು ಪರೀಕ್ಷಾ ಕೇಂದ್ರ ಸೇರಿದಂತೆ ಹಲವು ಕಡೆಗಳಲ್ಲಿ ವಿದ್ಯಾರ್ಥಿಗಳು ಗೇಟ್ ಮುಚ್ಚಿದ ಬಳಿಕ ತಲುಪಿದ್ದರಿಂದ ಪರೀಕ್ಷೆ ಬರೆಯಲು ಅವಕಾಶ ಕಳೆದುಕೊಂಡಿದ್ದಾರೆ ಎಂದು ಹೇಳಿದರು.

ಸಾವಿರಾರು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲಿರುವ ಮಾಹಿತಿ ಇದ್ದರೂ ಕಾಂಗ್ರೆಸ್ ನಾಯಕರು ಅದ್ದೂರಿ ಸಮಾರಂಭ ಮತ್ತು ರ್ಯಾಲಿ ಆಯೋಜಿಸಿ ನಗರದ ಸಂಚಾರ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸಿದ್ದಾರೆ. ವಿದ್ಯಾರ್ಥಿಗಳ ಭವಿಷ್ಯದ ಪ್ರಶ್ನೆಯಲ್ಲಿ ಸರ್ಕಾರ ನಿರ್ಲಕ್ಷ್ಯ ತೋರಿರುವುದು ವಿಷಾದನೀಯ. ನೊಂದ ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಸರ್ಕಾರ ಕ್ಷಮೆಯಾಚಿಸಿ, ಅವರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು.

ಯುವಶಕ್ತಿಯ ಕನಸುಗಳಿಗೆ ಧಕ್ಕೆ ಉಂಟುಮಾಡುವ ಇಂತಹ ನಿರ್ಲಕ್ಷ್ಯವನ್ನು ರಾಜ್ಯದ ಜನತೆ ಕ್ಷಮಿಸುವುದಿಲ್ಲ. ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ಕಡೆಗಣಿಸಿರುವ ಕಾಂಗ್ರೆಸ್ ಸರ್ಕಾರದ ವಿರುದ್ಧ ಯುವಜನತೆ ತಕ್ಕ ಉತ್ತರ ನೀಡಲಿದ್ದಾರೆ ಎಂದು ಎಫ್.ಎಸ್. ಸಿದ್ದನಗೌಡರ ಎಚ್ಚರಿಸಿದರು.

ಅಪರಿಚಿತ ವ್ಯಕ್ತಿ ಆತ್ಮಹತ್ಯೆ

ಬೆಳಗಾವಿ: ನಗರದ ಎಪಿಎಂಸಿ ತರಕಾರಿ ಮಾರುಕಟ್ಟೆಯಲ್ಲಿ ಭಾನುವಾರ ಬೆಳಿಗ್ಗೆ ಅಪರಿಚಿತ ವ್ಯಕ್ತಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ. ಆತ್ಮಹತ್ಯೆಗೆ ಶರಣಾದ ಮೃತ ವ್ಯಕ್ತಿ ಕಳೆದ ಕೆಲವು ದಿನಗಳಿಂದ ಮಾರುಕಟ್ಟೆ ಪ್ರದೇಶದಲ್ಲೇ ಖಾಲಿ ಬಾಟಲಿಗಳನ್ನು ಸಂಗ್ರಹಿಸಿ ಜೀವನ ಸಾಗಿಸುತ್ತಿದ್ದರು. ರಾತ್ರಿ ವೇಳೆಯಲ್ಲೂ ಇದೇ ಪ್ರದೇಶದಲ್ಲಿ ವಾಸ್ತವ್ಯ ಹೂಡುತ್ತಿದ್ದರು ಎಂದು ಸ್ಥಳೀಯರು ತಿಳಿಸಿದ್ದಾರೆ.

ಮಾರುಕಟ್ಟೆಯ ಮುಚ್ಚಿದ ಅಂಗಡಿಯೊಂದರ ಮುಂಭಾಗದಲ್ಲಿ ವ್ಯಕ್ತಿಯ ಶವ ನೇಣು ಬಿಗಿದ ಸ್ಥಿತಿಯಲ್ಲಿದ್ದ ವ್ಯಕ್ತಿಯನ್ನು ಗಮನಿಸಿದ ಸ್ಥಳೀಯರು ಕೂಡಲೇ ಪೊಲೀಸರಿಗೆ ತಿಳಿಸಿದ್ದಾರೆ. ಮಾಹಿತಿ ನೀಡುತ್ತಿದ್ದಂತೆಯೇ ಘಟನಾ ಸ್ಥಳಕ್ಕೆ ಆಗಮಿಸಿದ ಎಪಿಎಂಸಿ ಠಾಣೆಯ ಪೊಲೀಸರು ಬೇಟಿ ನೀಡಿ ಪರಿಶೀಲನೆ ನಡೆಸಿ, ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ರವಾನಿಸಿ. ಪ್ರಕರಣ ದಾಖಲಿಸಿಕೊಂಡಿರುವ ಈ ವ್ಯಕ್ತಿಯು ಆತ್ಮಹತ್ಯೆಗೆ ಕಾರಣವೇನು ಎಂಬುದರ ಕುರಿತು ತನಿಖೆ ಕೈಗೊಂಡಿದ್ದಾರೆ. ಮೃತ ವ್ಯಕ್ತಿಯ ಗುರುತು ಪತ್ತೆಯಾಗಿಲ್ಲ. ಅವರ ಗುರುತು ಹಾಗೂ ಹಿನ್ನೆಲೆಯ ಕುರಿತು ಮಾಹಿತಿ ಸಂಗ್ರಹಿಸುವ ಕಾರ್ಯವನ್ನು ಪೊಲೀಸರು ಕೈಗೊಂಡಿದ್ದಾರೆ.

ನಿಧನ ಸುದ್ದಿ

ಸುಮಿತ್ರಾ ಹನ್ನೂರ



ಬೆಳಗಾವಿ: ಮಾರಿಹಾಳ ಗ್ರಾಮದ ಸುಮಿತ್ರಾ ಬಸಪ್ಪ ಹನ್ನೂರ(56) ಭಾನುವಾರ ನಿಧನರಾಗಿದ್ದಾರೆ. ಮೃತರು ಇಬ್ಬರು ಪುತ್ರರು ಸೇರಿದಂತೆ ಅಪಾರ ಬಳಗವನ್ನು ಅವರು ಅಗಲಿದ್ದಾರೆ.



ಗೋಕಾಕ: ಇಲ್ಲಿಯ ಪತಂಜಲಿ ಯೋಗ ಸಮಿತಿಯಿಂದ ಭಾನುವಾರ ನಗರದ ಮಯೂರ ಶಾಲೆಯ ಆವರಣದಲ್ಲಿ ವಿಶ್ವಯೋಗ ದಿನಾಚರಣೆಗೆ ಹಿರಿಯ ದಿವಾಣಿ ನ್ಯಾಯಾಧೀಶ ಉಮೇಶ ಆತನೂರೆ ಚಾಲನೆ ನೀಡಿದರು. ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶ ಮಹಾದೇವ ಖಾನಟ್ಟಿ, ತಹಶೀಲದಾರ ಡಾ.ಮೋಹನ ಭಸ್ಮೆ, ಬಿಇಓ ಜಿ ಬಿ ಬಳಗಾರ, ನಿಜಲಿಂಗ ದಡ್ಡಿಮನಿ. ಯಲ್ಲಪ್ಪ ಕುರಬಗಟ್ಟಿ, ಪರಮೇಶ ಗುಲ್ಲ, ಸೇರಿದಂತೆ ಅನೇಕರು ಇದ್ದರು.

ವಿಶಿಷ್ಟಚೇತನರಿಗೆ ಅವಕಾಶ ನೀಡಿ

ನೇರಲಿ: ತಾಲೂಕಿನ ನೇರಲಿ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯ ಸಭಾಂಗಣದಲ್ಲಿ ಶನಿವಾರ ಸಂಭ್ರಮ ಶನಿವಾರ ಎಂಬ ವಿನೂತನ ಕಾರ್ಯಕ್ರಮ ನಡೆಯಿತು. ಗ್ರಾಮದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಹಾಗೂ ಸಮಾಜದ ಮುಖ್ಯವಾಹಿನಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ವಿಶಿಷ್ಟಚೇತನರನ್ನು ಕಾರ್ಯಕ್ರಮದಲ್ಲಿ ಅಭಿನಂದಿಸಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯಾಧ್ಯಾಪಕ ಎಸ್. ಎಸ್. ಹಿರೇಮಠ ಮಾತನಾಡಿ, ವಿಶಿಷ್ಟಚೇತನರು ಸಮಾಜದ ಅವಿಭಾಜ್ಯ ಅಂಗವಾಗಿದ್ದು, ಅವರ ಪ್ರತಿಭೆ ಮತ್ತು ಸಾಧನೆಗಳಿಗೆ ಪ್ರೋತ್ಸಾಹ ನೀಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಇವರಿಗೆ ಅನುಕಂಪ ತೋರದೆ ಅವಕಾಶ ನೀಡಬೇಕು ಎಂದು ತಿಳಿಸಿದರು. ನೀಡಸೋಸಿ ಗ್ರಾಮೀಣ ವಿಕಾಸ ಬ್ಯಾಂಕ ಮುಖ್ಯ ವ್ಯವಸ್ಥಾಪಕ ವಿಜಯ ಮೋಸಿ ಮಾತನಾಡಿ, ಶಿಕ್ಷಣದ ಮೊದಲ ಮೆಟ್ಟಿಲೇ ವಿನಯ ಮತ್ತು ಉತ್ತಮ ನಡವಳಿಕೆ. ಒಬ್ಬ ವ್ಯಕ್ತಿ ಎಷ್ಟು ಓದಿದ್ದಾನೆ ಎನ್ನುವುದಕ್ಕಿಂತ ಸಮಾಜದಲ್ಲಿ ಹೇಗೆ ಬದುಕುತ್ತಿದ್ದಾನೆ ಎಂಬುದು ಮುಖ್ಯವಾಗುತ್ತದೆ ಎಂದರು. ಸ್ವಾಗತ ಮತ್ತು ಪ್ರಾಸ್ತವಿಕ ರಾಜೇಂದ್ರ ನಡುಮನಿ ಹೇಳಿದರು. ನಿರೂಪಣೆ ಕೆ ಬಿ ಬಡಿಗೇರ ಮಾಡಿದರೆ ಪ್ರೀತಮ ನಿಡಸೋಸಿ ವಂದಿಸಿದರು. ವೇದಿಕೆ ಮೇಲೆ ಗ್ರಾಮಪಂಚಾಯತಿ ಪಿಡಿಒ, ಸಂಜಯ ಹೊಸಮನಿ,ಎಸ್ ಡಿ ಎಂ ಸಿ ಅಧ್ಯಕ್ಷ ಚಿದಾನಂದ ದೇಸಾಯಿ ಶಿಕ್ಷಕರಾದ ಎಸ್ ಎಂ ಮನಗುತ್ತಿ, ರಾಜಶ್ರೀ ಬಿ ಎಸ್, ಆರ್ ಬಿ ನಾಯ್ಕ, ಅಶ್ವಿನಿ ಪಾಟೀಲ, ಗಂಗಾಧರ ವಣ್ಣೂರ,ಪೂಜಾ ಹೊಸಮನಿ,ಶಾಲಾ ಸಿಬ್ಬಂದಿ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.



ನೇರಲಿ: ತಾಲೂಕಿನ ನೇರಲಿ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯ ಸಭಾಂಗಣದಲ್ಲಿ ಶನಿವಾರ ಸಂಭ್ರಮ ಶನಿವಾರ ಎಂಬ ವಿನೂತನ ಕಾರ್ಯಕ್ರಮ ನಡೆಯಿತು. ಗ್ರಾಮದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಹಾಗೂ ಸಮಾಜದ ಮುಖ್ಯವಾಹಿನಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ವಿಶಿಷ್ಟಚೇತನರನ್ನು ಕಾರ್ಯಕ್ರಮದಲ್ಲಿ ಅಭಿನಂದಿಸಿ ಸನ್ಮಾನಿಸಲಾಯಿತು.

ನಾಡದ್ರೋಹಿ ಚಟುವಟಿಕೆ ಆರೋಪ | ಕರವೇ ಒತ್ತಾಯ

ಎಂಇಎಸ್ ಸಂಘಟನೆ ನಿಷೇಧಿಸಿ

ಬೆಳಗಾವಿ: ಇಲ್ಲಿನ ಮಹಾನಗರದಲ್ಲಿ ಕನ್ನಡ ಕಡ್ಡಾಯ ನೀತಿಯನ್ನು ವಿರೋಧಿಸಿ ಎಂಇಎಸ್ ಸಂಘಟನೆಯು ಮಹಾಮೋರ್ಚಾ ನಡೆಸುತ್ತಿರುವ ಹಿನ್ನೆಲೆಯಲ್ಲಿ, ಸಂಘಟನೆಯ ವಿರುದ್ಧ ಕಠಿಣ ಕ್ರಮ ಕೈಗೊಂಡು ಶಾಶ್ವತವಾಗಿ ನಿಷೇಧಿಸಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆಯ (ಕರವೇ) ಕಾರ್ಯಕರ್ತರು ಸರ್ಕಾರಕ್ಕೆ ಒತ್ತಾಯಿಸಿದರು.

ಸೋಮವಾರ ನಗರದ ಎಸ್ಪಿ ಕಚೇರಿಯಿಂದ ಜಿಲ್ಲಾಧಿಕಾರಿಗಳ ಕಚೇರಿಯವರೆಗೆ ನಾಡದ್ರೋಹಿ ಎಂಇಎಸ್ ಪುಂಡರ ವಿರುದ್ಧ ಆಕ್ರೋಶವನ್ನು ಹೊರ ಹಾಕಿ ಪ್ರತಿಭಟನಾ ರ್ಯಾಲಿಯನ್ನು ಕರವೇ ಕಾರ್ಯಕರ್ತರು ನಡೆಸಿದರು.

ಬಳಿಕ ಬೃಹತ್ ಪ್ರತಿಭಟನೆಯಲ್ಲಿ ಕರವೇ ಜಿಲ್ಲಾ ಅಧ್ಯಕ್ಷ ದೀಪಕ್ ಗುಡಗನಟ್ಟಿ ಮಾತನಾಡಿ, ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಭಾಷೆಯಾಗಿದ್ದು, ರಾಜ್ಯದ ನೆಲದಲ್ಲಿ ಕನ್ನಡ ಭಾಷೆಯನ್ನು ಕಡ್ಡಾಯಗೊಳಿಸುವುದು ಸರ್ಕಾರದ ಅಧಿಕೃತ ನೀತಿ ಹಾಗೂ ಕನ್ನಡಿಗರ ಬಹುದಿನಗಳ ಆಶಯವಾಗಿದೆ. ಕನ್ನಡದ ನೆಲದಲ್ಲಿ ವಾಸಿಸುವ ಪ್ರತಿಯೊಬ್ಬರೂ ಕನ್ನಡ ಭಾಷೆ, ಸಂಸ್ಕೃತಿ ಹಾಗೂ ಪರಂಪರೆಗೆ ಗೌರವ ನೀಡಬೇಕು. ಕನ್ನಡ ಕಡ್ಡಾಯಕ್ಕೆ ವಿರೋಧ ವ್ಯಕ್ತಪಡಿಸುವ ಯಾವುದೇ ಸಂಘಟನೆ ಅಥವಾ ವ್ಯಕ್ತಿಗಳ ನಡೆ ಕನ್ನಡಿಗರ ಭಾವನೆಗಳಿಗೆ ಧಕ್ಕೆ ತರುವಂತದ್ದು ಎಂದು ಜಿಲ್ಲಾಧಿಕಾರಿಗಳಿಗೆ ಮನವಿ ಮೂಲಕ ಆಗ್ರಹಿಸಿದರು.

ಕನ್ನಡ ಭಾಷೆಯ ಕಡ್ಡಾಯ ಅನುಷ್ಠಾನವನ್ನು ವಿರೋಧಿಸುತ್ತಿರುವ ಎಂಇಎಸ್ ಸಂಘಟನೆಯ ನಾಯಕರ ವಿರುದ್ಧ ನಾಡದ್ರೋಹದ ಆರೋಪದಡಿ ಕ್ರಮ ಕೈಗೊಂಡು, ಅವರನ್ನು ಬೆಳಗಾವಿಯಿಂದ ಗಡಿಪಾರು ಮಾಡಬೇಕು ಎಂದು ಕರವೇ ಪ್ರತಿಭಟನೆಯ ವೇಳೆ ಆಗ್ರಹಿಸಿದೆ.

ಮಹಾರಾಷ್ಟ್ರ ಸೇರಿದಂತೆ ಇತರ ರಾಜ್ಯಗಳಲ್ಲಿ ವಾಸಿಸುವ ಕನ್ನಡಿಗರು ಅಲ್ಲಿನ ಭಾಷೆ ಹಾಗೂ ಸಂಸ್ಕೃತಿಗೆ ಗೌರವ ನೀಡಿ ಬದುಕುತ್ತಿರುವುದನ್ನು ಉಲ್ಲೇಖಿಸಿದ ಮನವಿದಾರರು, ಕರ್ನಾಟಕದಲ್ಲಿ ವಾಸಿಸುವ ಎಲ್ಲ ಭಾಷಿಕರೂ ಕನ್ನಡಕ್ಕೆ ಗೌರವ ನೀಡುವುದು ತಮ್ಮ ಕರ್ತವ್ಯವೆಂದು ಹೇಳಿದ್ದಾರೆ.

ಈ ವಿಚಾರವನ್ನು ರಾಜ್ಯ ಸಚಿವ ಸಂಪುಟದ ಗಮನಕ್ಕೆ ತಂದು, ಕನ್ನಡಿಗರ ಹಲವು ದಶಕಗಳ ಬೇಡಿಕೆಗೆ ಸರ್ಕಾರ ಶೀಘ್ರ ಸ್ಪಂದಿಸಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಕರವೇ ಜಿಲ್ಲಾಧ್ಯಕ್ಷ ದೀಪಕ್ ಗುಡಗನಟ್ಟಿ, ಸೇರಿದಂತೆ ಹಲವಾರು ಕನ್ನರಪರ ಸಂಘಟನೆಗಳ ಕಾರ್ಯಕರ್ತರು ಪಾಲ್ಗೊಂಡಿದ್ದರು.



» ಕರ್ನಾಟಕದಲ್ಲಿ ಕನ್ನಡಿಗನೇ ಸಾರ್ವಭೌಮ, ಕನ್ನಡ ಭಾಷೆ ಮತ್ತು ಸಂಸ್ಕೃತಿಯ ರಕ್ಷಣೆಗೆ ಸರ್ಕಾರ ದೃಢ ನಿಲುವು ತಾಳಬೇಕು ಎಂದು ಕರವೇ ಮುಖಂಡರು ಆಗ್ರಹಿಸಿದ್ದಾರೆ.

> ರಾಜ್ಯದ ಏಕತೆ, ಅಖಂಡತೆ ಮತ್ತು ಕನ್ನಡದ ಹಿತದೃಷ್ಟಿಯಿಂದ ಎಂಇಎಸ್ ಸಂಘಟನೆಯನ್ನು ಶಾಶ್ವತವಾಗಿ ನಿಷೇಧಿಸುವ ಕುರಿತು ಸರ್ಕಾರ ಐತಿಹಾಸಿಕ ನಿರ್ಧಾರ ಕೈಗೊಳ್ಳಬೇಕು.
> ■ ದೀಪಕ್ ಗುಡಗನಟ್ಟಿ, ಕರವೇ ಜಿಲ್ಲಾ ಅಧ್ಯಕ್ಷ

ರುದ್ರಪ್ಪ ಲಮಾಣಿಯವರಿಗೆ ಸಚಿವ ಸ್ಥಾನ ನೀಡಿ

ಬೆಳಗಾವಿ: ಹಾವೇರಿ ಶಾಸಕರು ಮತ್ತು ವಿಧಾನಸಭೆಯ ಮಾಜಿ ಉಪಾಧ್ಯಕ್ಷರು ಆಗಿರುವ ರುದ್ರಪ್ಪ ಮಾನಪ್ಪ ಲಮಾಣಿ ಅವರಿಗೆ ಸಚಿವ ಸಂಪುಟದಲ್ಲಿ ಕ್ಯಾಬಿನೇಟ್ ದರ್ಜೆ ಸಚಿವರನ್ನಾಗಿ ಮಾಡುವಂತೆ ಬೆಳಗಾವಿ ಜಿಲ್ಲಾ ಬಂಜಾರ ಸಂಘ ಹಕ್ಕೋತ್ತಾಯ ಮಂಡಿಸಿದೆ.

ಬೆಳಗಾವಿ ಕನ್ನಡ ಸಾಹಿತ್ಯ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕರ್ನಾಟಕ ಪ್ರದೇಶ ಬಂಜಾರ ಸೇವಾ ಸಂಘದ ಜಿಲ್ಲಾಧ್ಯಕ್ಷ ಮಾನಪ್ಪ ರಾಠೋಡ ಅವರು, ಬಂಜಾರ ಸಮಾಜ ಕರ್ನಾಟಕ ರಾಜ್ಯದಲ್ಲಿ ಸುಮಾರು 60 ಲಕ್ಷಕ್ಕೂ ಹೆಚ್ಚು ಜನ ಪಟ್ಟಣ, ನಗರ ಪ್ರದೇಶ ಹಾಗೂ ತಾಂಡಾಗಳಲ್ಲಿ ನೆಲೆಸಿದೆ.

ಕರ್ನಾಟಕ ಕಾಂಗ್ರೆಸ್ ಪಕ್ಷದ ಸರ್ಕಾರ ಅಸ್ತಿತ್ವಕ್ಕೆ ಬರಲು ಬಂಜಾರ (ಲಂಬಾಣಿ) ಸಮುದಾಯವು ನೀಡಿರುವ ಬೆಂಬಲವನ್ನು ಯಾರೂ ಅಲ್ಲಗಳೆಯಲೂ ಸಾಧ್ಯವಿಲ್ಲ. ನೂತನ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ ಅವರ ಮಂತ್ರಿ ಮಂಡಳದಲ್ಲಿ ಈಗ ರಚನೆ ಮಾಡುವ ಮಂತ್ರಿಮಂಡಲದಲ್ಲಿ ರುದ್ರಪ್ಪ ಲಮಾಣಿ ಅವರಿಗೆ ಕ್ಯಾಬಿನೇಟ್ ದರ್ಜೆ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿದರು.

ಲಂಬಾಣಿ ಸಮುದಾಯದ ಈ ಕೋರಿಕೆ ಈಡೇರದಿದ್ದಲ್ಲಿ ಮುಂದೆ ಬರುವ ಎಲ್ಲ ಮಾದರಿ ಚುನಾವಣೆಯಲ್ಲಿ ಕಾಂಗ್ರೆಸ್ ಇದರ ಪರಿಣಾಮವನ್ನು ಎದುರಿಸಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನು ಸಹ ಈ ಮೂಲಕ ನೀಡುತ್ತಿದ್ದೇವೆ ಎಂದರು ಈ ವೇಳೆ ಪಾಂಡು ನಾಯಕ, ದೇವೇಂದ್ರ ನಾಯ್ಕ್, ರಾಜು ರಾಠೋಡ್ ಸೇರಿದಂತೆ ಮತ್ತಿತರರು ಇದ್ದರು.



» ಬಂಜಾರ ಸಂಘ ಹಕ್ಕೋತ್ತಾಯ

ಮಾಹಿತಿ ನೀಡದವರಿಗೆ ದಂಡ

ಬೆಳಗಾವಿ: ಕರ್ನಾಟಕ ಮಾಹಿತಿ ಆಯೋಗ ಬೆಳಗಾವಿ ಪೀಠದಲ್ಲಿ ಪ್ರತಿದಿನ ಸುಮಾರು 60-100 ಅರ್ಜಿಗಳ ವಿಚಾರಣೆ ಆಫ್ಲೈನ್ ಮತ್ತು ಆನ್ಲೈನನಲ್ಲಿ ನಡೆಯುತ್ತಿವೆ. ಮಾಹಿತಿ ಹಕ್ಕು ಅಧಿನಿಯಮ ಮಾಹಿತಿಯನ್ನು ಸಾಮಾನ್ಯ ಜನರಿಗೆ ನೀಡದಿರುವುದು. ವಿಚಾರಣೆಗೆ ಗೈರು ಹಾಜರಾಗಿರುವುದು ಹಾಗೂ ಆಯೋಗದ ನೋಟಿಸ್ ಗಳಿಗೆ ಸ್ಪಂದಿಸದಿರುವ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಶಿಸ್ತು ಕ್ರಮ ಜರುಗಿಸಿ ರೂ 25,000ವರೆಗೆ ದಂಡ ಮತ್ತು ಅರ್ಜಿದಾರರಿಗೆ ಪರಿಹಾರದ ಆದೇಶಗಳನ್ನು ಮಾಡಲಾಗಿದೆ ಎಂದು ಕರ್ನಾಟಕ ಮಾಹಿತಿ ಆಯೋಗದ ಬೆಳಗಾವಿ ಪೀಠದ ರಾಜ್ಯ ಮಾಹಿತಿ ಆಯುಕ್ತರಾದ ಪ್ರಕಾಶ ನಾರಾಯಣ ಚನ್ನಾಳರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗಾಣಿಗ ಸಮಾಜಕ್ಕೆ ಸಚಿವ ಸ್ಥಾನ ನೀಡುವಂತೆ ಒತ್ತಾಯ

ಬೆಳಗಾವಿ : ಮುಂಬರುವ ಸಚಿವ ಸಂಪುಟ ವಿಸ್ತರಣೆಯಲ್ಲಿ ಗಾಣಿಗ ಸಮಾಜಕ್ಕೆ ಸೂಕ್ತ ಪ್ರಾತಿನಿಧ್ಯ ನೀಡಿ ಸಚಿವ ಸ್ಥಾನ ಕಲ್ಪಿಸಬೇಕೆಂದು ಬೆಳಗಾವಿ ಜಿಲ್ಲಾ ಗಾಣಿಗ ಸಂಘವು ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದೆ.

ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿ ಹಾಗೂ ರಾಜ್ಯ ಸರ್ಕಾರದ ಗಮನಕ್ಕೆ ಮನವಿ ಸಲ್ಲಿಸಿರುವ ಸಂಘದ ಪದಾಧಿಕಾರಿಗಳು, ಗಾಣಿಗ ಸಮಾಜವು ರಾಜ್ಯದ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಮಹತ್ವದ ಕೊಡುಗೆ ನೀಡುತ್ತಿದ್ದರೂ ಸಚಿವ ಸಂಪುಟದಲ್ಲಿ ಸಮರ್ಪಕ ಪ್ರಾತಿನಿಧ್ಯ ಸಿಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಮಾಜದ ಜನಸಂಖ್ಯೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ನೀಡುತ್ತಿರುವ ಸೇವೆಯನ್ನು ಪರಿಗಣಿಸಿ, ಈ ಬಾರಿ ಸಚಿವ ಸಂಪುಟ ವಿಸ್ತರಣೆಯಲ್ಲಿ ಗಾಣಿಗ ಸಮಾಜದ ಅರ್ಹ ನಾಯಕರಿಗೆ ಸಚಿವ ಸ್ಥಾನ ನೀಡಬೇಕು ಎಂದು ಅವರು ಒತ್ತಾಯಿಸಿದರು. ಸಮಾಜದ ಹಿತಾಸಕ್ತಿಗಳನ್ನು ರಕ್ಷಿಸಲು ಮತ್ತು ಸಮುದಾಯದ ಅಭಿವೃದ್ಧಿಗೆ ಸರ್ಕಾರ ವಿಶೇಷ ಗಮನ ಹರಿಸಬೇಕೆಂದು ಆಗ್ರಹಿಸಿದರು.

ಗಾಣಿಗ ಸಮಾಜಕ್ಕೆ ಸಚಿವ ಸ್ಥಾನ ನೀಡದಿದ್ದಲ್ಲಿ ಸಮಾಜದಲ್ಲಿ ಅಸಮಾಧಾನ ಹೆಚ್ಚಾಗುವ ಸಾಧ್ಯತೆ ಇದ್ದು, ಸರ್ಕಾರ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಸಂಘದ ಮುಖಂಡರು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಗಾಣಿಗ ಸಂಘದ ಅಧ್ಯಕ್ಷ ರಾಮಪ್ಪ ಕರೆಪ್ಪ ಉಟಗಿ, ಪ್ರಕಾಶ ಮಲ್ಲಪ್ಪ ಬಾಳೇಕುಂದ್ರಿ, ಚಂದ್ರಪ್ಪ ಅದ್ಭುತಪ್ಪ ಗಾಣಿಗೇರ, ಮಹಾದೇವ ಸಿದ್ದಣ್ಣವರ, ತಿಪ್ಪಣ್ಣ ಗ್ಯಾಣಿಗೇರ, ರಾಜೀವ್ ಗಾಣಿಗಿ, ಕಲ್ಲಪ್ಪ ಗಾದಗೇರ, ಬಸವರಾಜ ಕೋಣಿನವರ ಸೇರಿದಂತೆ ಸಮಾಜದ ಅನೇಕ ಮುಖಂಡರು ಉಪಸ್ಥಿತರಿದ್ದರು.



ವಿದ್ಯುತ್ ಖಾಸಗೀಕರಣಕ್ಕೆ ವಿರೋಧ



ರಾಮದುರ್ಗ : ರಾಜ್ಯದಲ್ಲಿ ವಿದ್ಯುತ್ ವ್ಯವಸ್ಥೆ ನಿರ್ವಹಣೆಯನ್ನು ಖಾಸಗಿ ಕಂಪನಿಗಳಿಗೆ ನೀಡಲು ಮುಂದಾಗಿರುವ ರಾಜ್ಯ ಸರ್ಕಾರ ತನ್ನ ನಿರ್ಧಾರವನ್ನು ಕೈ ಬಿಡಲು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಕಾರ್ಯಕರ್ತರು ತಹಶೀಲ್ದಾರ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಸೋಮವಾರ ತಹಶೀಲ್ದಾರ ಕಚೇರಿ ಎದುರು ಪ್ರತಿಭಟನೆ ನಡೆಸಿ ತಹಶೀಲ್ದಾರ್ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದ ರೈತ ಸಂಘದ ಪದಾಧಿಕಾರಿಗಳು ಸರ್ಕಾರ ವಿದ್ಯುತ್ ವಿತರಣೆ ಸೇರಿದಂತೆ ಎಲ್ಲ ವ್ಯವಸ್ಥೆಯನ್ನು ಖಾಸಗಿ ಕಂಪನಿಗಳಿಗೆ ನೀಡಲು ನಿರ್ಧಾರ ಮಾಡಿರುವದು ರೈತರಿಗೆ , ಕೆಲಸ ಮಾಡುವ ಕಾರ್ಮಿಕರಿಗೆ, ಗ್ರಾಹಕರು ತೀವ್ರ ಆತಂಕಕ್ಕೆ ಒಳಗಾಗಿದ್ದಾರೆ . ವಿದ್ಯುತ್ ಪ್ರತಿಯೊಬ್ಬರಿಗೂ ಮೂಲಭೂತ ಅವಶ್ಯಕತೆ ಉಂಟಾಗಿದ್ದು ಸರ್ಕಾರ ತಕ್ಷಣ ಖಾಸಗೀಕರಣ ಮಾಡುವದನ್ನು ಹಿಂದಕ್ಕೆ ಪಡೆಯಬೇಕೆಂದು ಒತ್ತಾಯಿಸಿದರು. ಸರ್ಕಾರ ಒಂದು ವೇಳೆ ಖಾಸಗೀಕರಣ ನಿರ್ಧಾರದಿಂದ ಹಿಂದಕ್ಕೆ ಸರಿಯದಿದ್ದರೆ ರಾಜ್ಯಾದ್ಯಂತ ರೈತರು ಮತ್ತು ಕಾರ್ಮಿಕರೊಂದಿಗೆ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ತಾಲೂಕಾ ಅಧ್ಯಕ್ಷ ಜಗದೀಶ ದೇವರಡ್ಡಿ, ಸತ್ಯಪ್ಪ ಮಲ್ಲಾಪೂರ, ಕುಮಾರ ಮರ್ಡಿ, ಪಾಂಡುರಂಗ ಬೀರನಗಡ್ಡಿ, ವಾಸು ಪಾತ್ರೋಟ, ಪ್ರಕಾಶ ಪಾಟೀಲ, ಶಿವಾನಂದ ದೊಡವಾಡ, ಹನಮಂತ ಬೇವೂರ, ಶಂಕರಗೌಡ ಪಾಟೀಲ, ರಾಜೇಶ ಅಣ್ಣೆಗೇರಿ ಸೇರಿದಂತೆ ಹಲವರು ನೇತೃತ್ವವಹಿಸಿದ್ದರು.

ವಿದ್ಯುತ್ ಖಾಸಗೀಕರಣ ಖಂಡಿಸಿ ಪ್ರತಿಭಟನೆ

ಯರಗಟ್ಟಿ: ವಿದ್ಯುತ್ ಇಲಾಖೆ ಖಾಸಗೀಕರಣಕ್ಕೆ ವಿರೋಧಿಸಿ ಸ್ಥಳಿಯ ಸಂಗೋಳಿ ರಾಯಣ್ಣ ವೃತ್ತದಲ್ಲಿ ಹೆಸ್ಕಾಂ ನೌಕರರು ಸೋಮವಾರ ಪ್ರತಿಭಟನೆ ನಡೆಸಿದರು.

ಹೆಸ್ಕಾಂ ನೌಕರರ ಸಂಘದ ನೇತೃತ್ವದಲ್ಲಿ ಸಿಬ್ಬಂದಿ ಪ್ರತಿಭಟನೆ ನಡೆಸಿ, ವಿದ್ಯುತ್ ಇಲಾಖೆ ಖಾಸಗೀಕರಣ ವಿರೋಧಿಸಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಮತ್ತು ಸರಕಾರಕ್ಕೆ ತಹಶೀಲ್ದಾರ ಎಂ. ವ್ಹಿ. ಗುಂಡಪ್ಪಗೋಳ ಮೂಲಕ ಸಾಮೂಹಿಕವಾಗಿ ಆಕ್ಷೇಪಣೆ ಪತ್ರ ಸಲ್ಲಿಸಿದರು.

ಹೆಸ್ಕಾಂ ಎಸ್.ಓ ಮಹಾಂತೇಶ ಯರಗಟ್ಟಿ ಮಾತನಾಡಿ, ಸಾರ್ವಜನಿಕ ಸೇವೆಯ ಭಾಗವಾಗಿರುವ ವಿದ್ಯುತ್‌ನ್ನು ಸರ್ಕಾರಗಳು ವ್ಯವಹಾರಿಕವಾಗಿ ಪರಿಗಣಿಸಬಾರದು. ವಿದ್ಯುತ್ ವಿತರಣಾ ಚಟುವಟಿಕೆಯನ್ನು ಟಾಟಾ ಪವರ್ ಕಂಪನಿಗೆ ವಹಿಸುವುದನ್ನು ಹೆಸ್ಕಾಂ ಎಲ್ಲ ನೌಕರರು ಒಕ್ಕೊರಲಿನಿಂದ ಆಕ್ಷೇಪಿಸುತ್ತೇವೆ ಎಂದು ಹೇಳಿದರು.

ಶಾಖಾಧಿಕಾರಿ ಆಶೀಫ ನಧಾಪ, ದಲಿತ ಮುಖಂಡ ಬಾಸ್ಕರ ಹಿರೇಮೆತ್ರಿ, ರೈತ ಮುಖಂಡರಾದ ಸೋಮು ರೈನಾಪೂರ, ಯಲ್ಲನಾಯ್ಕ ನಾಯ್ಕರ, ಸಿಬ್ಬಂದಿಗಳಾದ ಮಾರುತಿ ನಾಯ್ಕರ, ಶಿವಕುಮಾರ ರಕ್ಕಸಗಿ, ಮಹಾಂತೇಶ ಅಂಗಡಿ, ಬಸವರಾಜ ಗಾಣಿಗೇರ, ಪ್ರವೀಣ ಹಾರುಗೊಪ, ಮಹಾಂತೇಶ ಚಂದರಗಿ, ಪುಂಡಲೀಕ ಸಾವಂತ, ಕರಿಯಪ್ಪ ಸೂರಣ್ಣವರ, ಆದರ್ಶ ಬಡಿಗೇರ, ದುರ್ಗಪ್ಪ ಬೆಳ್ಳಿರಿ, ವಿಠ್ಠಲ ಭಜಂತ್ರಿ, ಸಚಿನ್ ಸಿಳ್ಳವರ, ಚಿದಾನಂದ ಪಾಟೀಲ, ನಿಂಗಪ್ಪ ಹೊಸಮನಿ, ನಿಂಗಪ್ಪ ಕಮತಗಿ, ಮಲ್ಲಪ್ಪ ಸಣ್ಣಕ್ಕಿ, ಬಾಳೇಶ ಕೋಟಿ, ಕಲ್ಮೇಶ ನಂದಿ, ಪುಂಡಲೀಕ ಮುರಗೋಡ, ಸಂಜು ಬಂಡೊಳ್ಳಿ ಇದ್ದರು.



ಮದ್ಯದ ಅಂಗಡಿ ಸ್ಥಳಾಂತರಕ್ಕೆ ಒತ್ತಾಯ



ಸವದತ್ತಿ: ತಾಲೂಕಿನ ಅಸುಂಡಿ ಗ್ರಾಮದಲ್ಲಿರವ ಮದ್ಯದ ಅಂಗಡಿ ಸ್ಥಳಾಂತರಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿ ಪ್ರತಿಭಟನೆ ಮಾಡಿದರು. ಸಾರ್ವಜನಿಕ ದಟ್ಟಣೆ ಪ್ರದೇಶದಲ್ಲಿಯೇ ಮದ್ಯದ ಅಂಗಡಿ ಇರುವುದರಿಂದ ಜನರಿಗೆ ತೊಂದರೆ ಉಂಟಾಗುತ್ತಿದೆ. ಇದೇ ಮಾರ್ಗದಲ್ಲಿ ಶಾಲಾ ಕಾಲೇಜು ವಿದ್ಯಾರ್ಥಿನಿಯರು ಸಂಚರಿಸುವ ರಸ್ತೆ ಮಾರ್ಗದಲ್ಲಿ ಈ ಮದ್ಯದ ಅಂಗಡಿ ಇರುವುದರಿಂದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ತೊಂದರೆಯಾಗುತ್ತಿದೆ. ಗ್ರಾಮದ ವತಿಯಿಂದ ಅಬಕಾರಿ ಇಲಾಖೆಗೆ ಹಾಗೂ ತಹಶೀಲ್ದಾರ್ ಅವರಿಗೆ ಸಾಕಷ್ಟು ಬಾರಿ ಮನವಿ ಮಾಡಲಾಗಿದೆ. ಈ ಬಗ್ಗೆ ಯಾರೊಬ್ಬರೂ ಸೂಕ್ತವಾಗಿ ಸ್ಪಂದಿಸುತ್ತಿಲ್ಲ. ಹೀಗೆ ಮುಂದುವರಿದರೆ ಜೂ.24ರಂದು ಅಂಗಡಿಗೆ ಬೀಗ ಹಾಕಿ ಬಂದ್ ಮಾಡಿ ಪ್ರತಿಭಟನೆ ಮಾಡಲಾಗುವುದು ಎಂದು ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಅಸುಂಡಿ ಗ್ರಾಮಸ್ಥರು ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು.

ಬಿಜೆಪಿಯಿಂದ ವಿಶ್ವ ಯೋಗ ದಿನ ಆಚರಣೆ

ಬೆಳಗಾವಿ : 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಭಾರತೀಯ ಜನತಾ ಪಕ್ಷ ವತಿಯಿಂದ ಬೆಳಗಾವಿಯ ಗೋಮಟೇಶ ವಿದ್ಯಾಪೀಠದಲ್ಲಿ ಯೋಗ ಶಿಬಿರ ನಡೆಯಿತು.

ಶಿಬಿರದಲ್ಲಿ ಬಿಜೆಪಿ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉತ್ಸಾಹದಿಂದ ಭಾಗವಹಿಸಿ ಯೋಗಾಭ್ಯಾಸ ನಡೆಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಸುಭಾಷ್ ಪಾಟೀಲ, ಮಾಜಿ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ, ವಿಭಾಗ ಪ್ರಭಾರಿ ಸಂಜಯ ಪಾಟೀಲ, ವಿಧಾನ ಪರಿಷತ್ ಮುಖ್ಯ ಸಚೇತಕ ಎನ್. ರವಿಕುಮಾರ್, ವಿಧಾನ ಪರಿಷತ್ ಸದಸ್ಯ ಹಣಮಂತ ನಿರಾಣಿ, ರಾಜ್ಯಸಭಾ ಸದಸ್ಯ ಎಂ. ನಾಗರಾಜ, ಶಾಸಕ ವಿಠ್ಠಲ ಹಲಗೇಕರ, ಮಾಜಿ ಶಾಸಕ ಅರವಿಂದ ಪಾಟೀಲ, ಮುಖಂಡರಾದ ಎಂ.ಬಿ. ಜಿರ್ಲಿ, ಆರ್.ಎಸ್. ಮುತಾಲಿಕ, ರಮೇಶ್ ದೇಶಪಾಂಡೆ ಸೇರಿದಂತೆ ಪಕ್ಷದ ಪದಾಧಿಕಾರಿಗಳು, ಪ್ರಮುಖರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.



ವಿಶ್ವ ಯೋಗ ದಿನಾಚರಣೆ



ಮೂಡಲಗಿ : ಕೆ.ಎಚ್.ಸೋನವಾಲ್ಕರ್ ಸರ್ಕಾರಿ ಪ್ರೌಢಶಾಲೆಯಲ್ಲಿ ವಿಶ್ವ ಯೋಗ ದಿನಾಚರಣೆಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಕಾಶ್ ಹಿರೇಮಠ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಯೋಗದಿಂದ ಮಾನಸಿಕ ಮತ್ತು ದೈಹಿಕ ಆರೋಗ್ಯ ಬೆಳವಣಿಗೆ ಆಗುತ್ತದೆ ಎಂದು ಮಕ್ಕಳಿಗೆ ತಿಳಿಸಿದರು.

ಮುಖ್ಯೋಪಾಧ್ಯಾಯರಾದ ಭೀಮಪ್ಪ ಕಸಾಳೆ ಮಾತನಾಡಿ,ಯೋಗ ಭಾರತೀಯ ಸಂಸ್ಕೃತಿಯ ಒಂದು ಭಾಗವಾಗಿದ್ದು ವಿಶ್ವಕ್ಕೆ ಮಾದರಿಯಾಗಿದೆ ಎಂದು ತಿಳಿಸಿದರು.ತಾಲೂಕ ದೈಹಿಕ ಶಿಕ್ಷಣ ಪರಿವೀಕ್ಷಕರಾದ ಎಸ್ ಬಿ ಹಳಿಗೌಡ ಮಾತನಾಡಿ ಯೋಗ ಮಾಡುವುದರಿಂದ ಎಲ್ಲಾ ರೀತಿಯ ರೋಗಗಳಿಗೆ ಪರಿಹಾರ ಕಂಡುಕೊಳ್ಳಬಹುದು ಎಂದು ತಿಳಿಸಿದರು. ದೈಹಿಕ ಶಿಕ್ಷಣ ಶಿಕ್ಷಕ ಶೇಖರ್ ಕುದುರಿ ಮಕ್ಕಳಿಗೆ ಯುಗಾಭ್ಯಾಸ ಮಾಡಿಸಿದರು ಮತ್ತು ಪ್ರತಿಯೊಂದು ಆಸನದ ಉಪಯೋಗವನ್ನು ತಿಳಿಸಿದರು.ಶಿಕ್ಷಕರಾದ ಪ್ರಕಾಶ್ ಪಾಟೀಲ್, ಲಲಿತಾ ಪಾಟೀಲ್, ಕರಿಬಸವರಾಜು ಇವರು ಹಾಜರಿದ್ದರು.

ಪ್ರಪಂಚಕ್ಕೆ ಯೋಗ ಕೊಡುಗೆ ನೀಡಿದ ಭಾರತ

ಚನ್ನಮ್ಮನ ಕಿತ್ತೂರು: ನಮ್ಮ ಪ್ರಾಚೀನ ಭಾರತದ ಸಂಸ್ಕೃತಿಯ ಕೊಡುಗೆಯಾಗಿರುವ ಯೋಗವು, ಇಂದು ಪ್ರಪಂಚದ ಎಲ್ಲ ದೇಶಗಳಲ್ಲಿ ಆಚರಣೆ ಮಾಡಲಾಗುತ್ತಿದೆ. ಯೋಗದಿಂದ ಮಾನವನ ದೇಹ ಸದೃಢಗೊಳ್ಳುವ ಜೊತೆಗೆ ಮನಸ್ಸು ಹಗುರಗೊಳ್ಳುತ್ತದೆ ಎಂದು ಉತ್ತರ ಕನ್ನಡ ಲೋಕಸಭಾ ಕ್ಷೇತ್ರದ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.ಸಮೀಪದ ಎಂ ಕೆ ಹುಬ್ಬಳ್ಳಿಯ ಮಲಪ್ರಭಾ ನದಿ ತೀರದ ಶ್ರೀ ಅಶ್ವತ್ಥ ಲಕ್ಷ್ಮೀ ನರಸಿಂಹ ದೇವಸ್ಥಾನದ ಆವರಣದಲ್ಲಿ ವಿಶ್ವ ಯೋಗ ದಿನಾಚರಣೆ ಅಂಗವಾಗಿ ಕಿತ್ತೂರು ಬಿಜೆಪಿ ಹಾಗೂ ಯುವ ಮೋರ್ಚಾ ವತಿಯಿಂದ ಆಯೋಜಿಸಿದ್ದ ಯೋಗಾಸನದಲ್ಲಿ ಪಾಲ್ಗೊಂಡು ಮಾತನಾಡಿದರು.

ಮಾಜಿ ಶಾಸಕ, ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಮಹಾಂತೇಶ ದೊಡಗೌಡರ ಮಾತನಾಡಿ, ಮನು?ನು ದೈಹಿಕವಾಗಿ, ಮಾನಸಿಕವಾಗಿ ಸದೃಢವಾಗಿ ಇರಲು ನಾವು ನೀವೆಲ್ಲರೂ ಪ್ರತಿದಿನ ಯೋಗಾಸನ ಮಾಡುವದು ಅಗತ್ಯವಾಗಿದೆ. ವಿದ್ಯಾರ್ಥಿಗಳು ಯೋಗ ಅಭ್ಯಾಸದಲ್ಲಿ ಪ್ರತಿನಿತ್ಯ ಪಾಲ್ಗೊಳ್ಳಿ ಎಂದರು. ಬಿಜೆಪಿ ಕಿತ್ತೂರು ಮಂಡಳ ಅಧ್ಯಕ್ಷ ಶ್ರೀಕರ ಕುಲಕರ್ಣಿ, ಶ್ರೀಶೈಲ ತಿಗಡಿ, ರಾಜು ಬೆಂಡಿಗೇರಿ, ಯುವಮೋರ್ಚಾ ಅಧ್ಯಕ್ಷ ನಾಗರಾಜ ದುರಗದ, ಉಳವಪ್ಪ ಉಳಾಗಡ್ಡಿ, ದೇಮಪ್ಪ ಬಸರಗಿ, ಬಿಜೆಪಿ ಪದಾಧಿಕಾರಿಗಳು, ಶಿಕ್ಷಕರು, ಯುವಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಕಿರುಸುದ್ದಿ

ಪೈಪ್ ಒಡೆದು ಸಾವಿರಾರು ಲೀಟರ್ ನೀರು ಪೋಲು!



ಕುಡಚಿ: ಪಟ್ಟಣದಲ್ಲಿ ಕಳೆದ ನಾಲ್ಕು ತಿಂಗಳಿಂದ ನೀರಿನ ಭಾರೀ ಸಮಸ್ಯೆ ಉಂಟಾಗಿದ್ದು, ಜನರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ. ಈ ನಡುವೆಯೇ ಪೈಪ್ ಲೀಕೇಜ್‌ನಿಂದ ಸಾವಿರಾರು ಲೀಟರ್ ನೀರು ವ್ಯರ್ಥವಾಗುತ್ತಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.ಬೇಸಿಗೆ ಕಾಲದಲ್ಲಿ ನೀರಿನ ತೊಂದರೆ ತಪ್ಪಿಸಲು 3.11 ಕೋಟಿ ವೆಚ್ಚದಲ್ಲಿ ಪರ್ಯಾಯ ಪೈಪ್ಲೈನ್ ನಿರ್ಮಿಸಲಾಗಿದೆ. ಆದರೆ ಅವೈಜ್ಞಾನಿಕ ಯೋಜನೆ ಹಾಗೂ ತಾಂತ್ರಿಕ ದೋಷಗಳಿಂದ ಈ ಯೋಜನೆ ನಿರೀಕ್ಷಿತ ಫಲಿತಾಂಶ ನೀಡುತ್ತಿಲ್ಲ.ಪ್ರಸ್ತುತ ಹಳೆಯ ಪೈಪ್ಲೈನ್ ಮೂಲಕವೇ ನೀರು ಸರಬರಾಜು ಮಾಡಲಾಗುತ್ತಿದ್ದು, ಅದು ಕೂಡ ಐದು-ಆರು ದಿನಕ್ಕೊಮ್ಮೆ ಮಾತ್ರ ನೀರು ಬಿಡಲಾಗುತ್ತಿದೆ. ಇದರಿಂದ ಪಟ್ಟಣದ ಜನತೆ ಸಂಕಷ್ಟದ ಸುಳಿಯಲ್ಲಿ ಸಿಲುಕಿದ್ದಾರೆ. ಇದರ ನಡುವೆ ಜಮಖಂಡಿ ರಸ್ತೆ ಮೇಲ್ಸೇತುವೆ ಬಳಿ, ಪೊಲೀಸ್ ಠಾಣೆ ಎದುರು ಸೇರಿದಂತೆ ಹಲವೆಡೆ ಪೈಪ್ ಲೀಕೇಜ್ ಉಂಟಾಗಿ ನೀರು ನಿರಂತರವಾಗಿ ಹರಿದು ಪೋಲಾಗುತ್ತಿದೆ. ಆದರೆ ಪುರಸಭೆ ಅಧಿಕಾರಿಗಳು ಈ ಬಗ್ಗೆ ನಿರ್ಲಕ್ಷ್ಯ ತೋರಿಸುತ್ತಿದ್ದಾರೆ ಎಂಬ ಆರೋಪಗಳು ಕೇಳಿಬರುತ್ತಿವೆ.

ಕುಡಚಿ ಪಟ್ಟಣವು ತೀವ್ರ ನೀರಿನ ಕೊರತೆಯನ್ನು ಎದುರಿಸುತ್ತಿದೆ. ಇದರ ಹೊರತಾಗಿಯೂ, ಪೈಪ್ ಲೈನಗಳು ಒಡೆದು ಸಾವಿರಾರು ಲೀಟರ್ ನೀರು ವ್ಯರ್ಥವಾಗುತ್ತಿದೆ.
ಬಾಬಾಜಾನ ಜಿನಾಬಡೆ, ಸಮಾಜ ಸೇವಕ, ಕುಡಚಿ

ಸಿಎಸ್ಸಿ ಕೇಂದ್ರಗಳಿಂದ ಯೋಗ ದಿನಾಚರಣೆ

ಬೆಳಗಾವಿ : ಭಾರತ ಸರ್ಕಾರದ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾಮನ್ ಸರ್ವಿಸ್ ಸೆಂಟರ್ ವತಿಯಿಂದ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಬೆಳಗಾವಿ ಜಿಲ್ಲೆಯ ವಿವಿಧ ಗ್ರಾಮ ಹಾಗೂ ನಗರ ಪ್ರದೇಶಗಳಲ್ಲಿ ಯಶಸ್ವಿಯಾಗಿ ಆಚರಿಸಲಾಯಿತು ಎಂದು ಸಿಎಸ್ಸಿ ಬೆಳಗಾವಿ ಜಿಲ್ಲಾ ವ್ಯವಸ್ಥಾಪಕರಾದ ಮಲ್ಲಿಕಾರ್ಜುನ ಕರೆರುದ್ರನ್ನವರ ತಿಳಿಸಿದ್ದಾರೆ.ಜಿಲ್ಲೆಯ ವಿವಿಧ ತಾಲೂಕುಗಳ ಸಿಎಸ್ಸಿ ವಿಲೇಜ್ ಲೆವೆಲ್ ಎಂಟರ್‌ಪ್ರಿನರ್ಸ್ ತಮ್ಮ ಕೇಂದ್ರಗಳಲ್ಲಿ ಯೋಗಾಭ್ಯಾಸ ಕಾರ್ಯಕ್ರಮಗಳನ್ನು ಆಯೋಜಿಸಿ ಸಾರ್ವಜನಿಕರು, ವಿದ್ಯಾರ್ಥಿಗಳು, ಮಹಿಳೆಯರು, ರೈತರು ಹಾಗೂ ಯುವಜನರಿಗೆ ಯೋಗದ ಮಹತ್ವದ ಕುರಿತು ಜಾಗೃತಿ ಮೂಡಿಸಿದರು. ಸಿಎಸ್ಸಿ ಕೇವಲ ಡಿಜಿಟಲ್ ಸೇವಾ ಕೇಂದ್ರವಾಗಿರದೆ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಕಲ್ಯಾಣಕಾರಿ ಯೋಜನೆಗಳನ್ನು ಗ್ರಾಮೀಣ ಜನತೆಗೆ ತಲುಪಿಸುವ ಪ್ರಮುಖ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತಿದೆ. ಯೋಗ ದಿನಾಚರಣೆಯಂತಹ ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಆರೋಗ್ಯಕರ, ಸದೃಢ ಹಾಗೂ ಜಾಗೃತ ಸಮಾಜ ನಿರ್ಮಾಣಕ್ಕೆ ಸಿಎಸ್ಸಿ ತನ್ನ ಬದ್ಧತೆಯನ್ನು ಮತ್ತೊಮ್ಮೆ ಪ್ರದರ್ಶಿಸಿದೆ.

ಜುಲೈ 16ರಿಂದ ರಾಷ್ಟ್ರೀಯ ಸಮ್ಮೇಳನ

ಬೆಳಗಾವಿ : ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು Exploring Nature's Pharmacy: Potentials of Medicinal and Aromatic Plants for Health, Livelihoods, Bioeconomy and Conservation" ವಿಷಯದ ಮೇಲೆ ಜುಲೈ 16 ರಿಂದ ಜುಲೈ 18ರ ವರೆಗೆ ರಾಷ್ಟ್ರೀಯ ಸಮ್ಮೇಳನವನ್ನು ಅಕಾಡೆಮಿಯ ಕಚೇರಿಯಲ್ಲಿ ಆಯೋಜಿಸಿದೆ.ಸಮ್ಮೇಳನದಲ್ಲಿ ವಿವಿಧ ಪ್ರತಿಷ್ಠಿತ ಸಂಸ್ಥೆಗಳ ಹೆಸರಾಂತ ವಿಜ್ಞಾನಿಗಳು ತಾಂತ್ರಿಕ ಉಪನ್ಯಾಸಗಳನ್ನು ನೀಡಲಿದ್ದಾರೆ. ಈ ಸಮ್ಮೇಳನದಲ್ಲಿ ಸ್ನಾತಕೋತ್ತರ ವಿಜ್ಞಾನ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಯುವ ವಿಜ್ಞಾನಿಗಳು, ಯುವ ಉದ್ಯಮದಾರರು ಭಾಗವಹಿಸಬಹುದಾಗಿದೆ. ಅಲ್ಲದೇ, ಯುವ ವಿಜ್ಞಾನಿಗಳು ಮತ್ತು ಸಂಶೋಧನಾ ವಿದ್ಯಾರ್ಥಿಗಳು ತಮ್ಮ ಸಂಶೋಧನಾ ಪ್ರಬಂಧವನ್ನು ಸಹ ಮಂಡಿಸಲು ಅವಕಾಶ ಕಲ್ಪಿಸಲಾಗಿದ್ದು, ಆಯ್ಕೆಯಾದ ಸಂಶೋಧನಾ ಪ್ರಬಂಧಕ್ಕೆ ನಗದು ಬಹುಮಾನವನ್ನು ನೀಡಲಾಗುವುದು. ಆಸಕ್ತರು ಜುಲೈ 10 ರ ಒಳಗಾಗಿ https://forms.gle/xn1ek2pwuBTXmNyz7 ಮೂಲಕ ನೋಂದಾಯಿಸಿಕೊಳ್ಳಬಹುದಾಗಿದೆ ಎಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೂಡಲಗಿ : ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಖಾನಟ್ಟಿಯಲ್ಲಿ ವಿಶ್ವಯೋಗ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಗ್ರಾಮಸ್ಥರು ಒಟ್ಟಾಗಿ ಭಾಗವಹಿಸಿ ವಿವಿಧ ಯೋಗಾಸನಗಳನ್ನು ಅಭ್ಯಾಸ ಮಾಡಿದರು.ಪ್ರಧಾನ ಗುರು ಚಂದ್ರಕಾಂತ ಕ. ಕೊಡತೆ ಸೇರಿದಂತೆ ಇತರರು ಇದ್ದರು.

ರೈತರಿಗೆ ಗೋಡಂಬಿ ಸಸಿ ವಿತರಣೆ

ಖಾನಾಪುರ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಭಿವೃದ್ಧಿ ಯೋಜನೆಯ ಮೂಲಕ ತಾಲೂಕಿನ ರೈತರಿಗೆ ಉತ್ತಮ ಗುಣಮಟ್ಟದ ಮತ್ತು ಕಸಿ ಮಾಡಿದ ಗೋಡಂಬಿ ಸಸಿಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ ಎಂದು ಯೋಜನೆಯ ಜಿಲ್ಲಾ ನಿರ್ದೇಶಕ ಸತೀಶ ನಾಯ್ಕ ಹೇಳಿದರು. ಪಟ್ಟಣದಲ್ಲಿ ಭಾನುವಾರ ರೈತರಿಗೆ ಗೋಡಂಬಿ ಸಸಿ ವಿತರಿಸಿ ಮಾತನಾಡಿದ ಅವರು, ''ಮೂಡುಬಿದ್ರೆಯ ಶ್ರೀವಿಜಯಲಕ್ಷ್ಮೀ ಪ್ರತಿಷ್ಠಾನ ಕಳೆದ ಹತ್ತು ವರ್ಷಗಳಿಂದ ಧರ್ಮಸ್ಥಳ ಯೋಜನೆಯ ಮೂಲಕ ರೈತರಿಗೆ ಉಚಿತವಾಗಿ ಗೋಡಂಬಿ ಗಿಡಗಳನ್ನು ಸರಬರಾಜು ಮಾಡುತ್ತಿದ್ದು, ಈ ವರ್ಷ ತಾಲೂಕಿನ ರೈತರಿಗೆ ವಿತರಿಸಲು ಒಟ್ಟು 6725 ಗಿಡಗಳನ್ನು ಕಳಿಸಿಕೊಟ್ಟಿದೆ. ಗೋಂಡಂಬಿ ಸಸಿಗಳನ್ನು ಪಡೆದ ರೈತರು ಅವುಗಳನ್ನು ಕಾಳಜಿಯಿಂದ ಬೆಳೆಸಿ ಆರ್ಥಿಕ ಲಾಭ ಗಳಿಸಬೇಕು'' ಎಂದು ಕರೆ ನೀಡಿದರು. ತಾಲೂಕು ಯೋಜನಾಧಿಕಾರಿ ಗಣಪತಿ ನಾಯ್ಕ ಮಾತನಾಡಿ ರೈತರಿಗೆ ಗೋಡಂಬಿ ಗಿಡಗಳ ನಾಟಿ ವಿಧಾನ, ಸಂರಕ್ಷಣಾ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಜನಜಾಗೃತಿ ವೇದಿಕೆಯ ಸದಸ್ಯೆ ರೂಪಾ ಕುಲಕರ್ಣಿ, ನಿವೃತ್ತ ಸೈನಿಕ ಮಹಾಬಳೇಶ್ವರ ಪಾಟೀಲ, ಒಕ್ಕೂಟದ ಪದಾಧಿಕಾರಿ ವಿಶಾಲ ಗುರವ, ಕೃಷಿ ಮೇಲ್ವಿಚಾರಕ ಪ್ರಕಾಶ ಹೊಂಡದಕಟ್ಟಿ ಸೇರಿದಂತೆ ಯೋಜನೆಯ ಸಿಬ್ಬಂದಿ, ರೈತರು ಉಪಸ್ಥಿತರಿದ್ದರು.



ಖಾನಾಪುರ: ಖಾನಾಪುರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಭಿವೃದ್ಧಿ ಯೋಜನೆಯ ಮೂಲಕ ಮಂಜೂರಾದ ಗೋಡಂಬಿ ಸಸಿಗಳನ್ನು ರೈತರಿಗೆ ವಿತರಿಸಲಾಯಿತು.

ಕಾಂಗ್ರೆಸ್ ಸೇರ್ಪಡೆ | ಶಾಸಕ ವಿಶ್ವಾಸ ವೈದ್ಯ ಭರವಸೆ

ಜನರ ಸೇವೆಗೆ ಸದಾ ಬದ್ಧ

ಯರಗಟ್ಟಿ: ಸವದತ್ತಿ ಮತಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿರುವ ನಿರಂತರ ಅಭಿವೃದ್ಧಿ ಕಾರ್ಯಗಳು ಹಾಗೂ ರಾಜ್ಯ ಕಾಂಗ್ರೆಸ್ ಸರ್ಕಾರದ ಜನಪರ ಗ್ಯಾರಂಟಿ ಯೋಜನೆಗಳನ್ನು ಮೆಚ್ಚಿ ವಿವಿಧ ಪಕ್ಷಗಳ ಕಾರ್ಯಕರ್ತರು ನಮ್ಮ ಪಕ್ಷಕ್ಕೆ ಆಗಮಿಸುತ್ತಿರುವುದು ಶ್ಲಾಘನೀಯ ಎಂದು ಶಾಸಕ ವಿಶ್ವಾಸ ವೈದ್ಯ ಹೇಳಿದರು.

ಸಮೀಪದ ಬೂದಿಗೊಪ್ಪ ಗ್ರಾಮದ ಕರೇಮ್ಮದೇವಿ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಂಡಿದ್ದ ಬಿಜೆಪಿ ಮತ್ತು ಜೆಡಿಎಸ್ ಪಕ್ಷದ 100ಕ್ಕೂ ಅಧಿಕ ಕಾರ್ಯಕರ್ತರನ್ನು ಕಾಂಗ್ರೆಸ ಪಕ್ಷಕ್ಕೆ ಬರಮಾಡಿಕೊಂಡು ಅವರು ಮಾತನಾಡಿ, ಗ್ರಾಮೀಣ ಪ್ರದೇಶದ ಜನತೆಗೆ ಕಲ್ಯಾಣ ಮಂಟಪ, ಸಮುದಾಯ ಭವನ ನಿರ್ಮಾಣಕ್ಕೆ ಒತ್ತು ನೀಡಿ ಕ್ಷೇತ್ರದ ಜನರ ಸೇವೆಗೆ ನಾನು ಸದಾ ಬದ್ಧ ಎಂದರು.

ಯರಗಟ್ಟಿ ಎಪಿಎಂಸಿ ಅಧ್ಯಕ್ಷ ನೀಲಕಂಠ ಸಿದ್ದಬಸನ್ನರ, ಸವದತ್ತಿ ಎಪಿಎಂಸಿ ಅಧ್ಯಕ್ಷ ಚಂದ್ರು ಜಂಬ್ರಿ ಮಾತನಾಡಿ, ಕ್ಷೇತ್ರದ ಇನ್ನೂ ಹೆಚ್ಚಿನ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಜನತೆ ಸಹಕಾರ ಅತೀಮುಖ್ಯ ಎಂದರು.

ಪಕ್ಷಕ್ಕೆ ಹೊಸದಾಗಿ ಸೇರಿದ ಮಾರುತಿ ಕೊಪ್ಪದ, ಹನಮಂತ ಆಲದಕಟ್ಟಿ, ಯಲ್ಲಪ್ಪ ಪುಲ್ಲಿ, ಮಲಕಯ್ಯ ಹಿರೇಮಠ, ಮಹಾಂತೇಶ ಕೊಪ್ಪದ, ಮಲ್ಲಿಕಾರ್ಜುನ ಕೃಷ್ಣಪ್ಪನವರ, ಶಿವಾನಂದ ಕೊಪ್ಪದ ಸೇರಿದಂತೆ 100ಕ್ಕೂ ಹೆಚ್ಚು ಮುಖಂಡರಿಗೂ, ಕಾರ್ಯಕರ್ತರಿಗೂ ಕಾಂಗ್ರೆಸ್ ಪಕ್ಷದ ಶಲ್ಯವನ್ನು ಹೊದಿಸಿ, ಪಕ್ಷದ ಧ್ವಜವನ್ನು ಹಸ್ತಾಂತರಿಸುವ ಮೂಲಕ ಪಕ್ಷಕ್ಕೆ ಬರಮಾಡಿಕೊಳ್ಳಲಾಯಿತು.



ಬೂದಿಗೊಪ್ಪ ಗ್ರಾಮದ ಕರೇಮ್ಮದೇವಿ ದೇವಸ್ಥಾನದ ಆವರಣದಲ್ಲಿ ಕಾಂಗ್ರೆಸ್ ಸೇರ್ಪಡೆ.

ಪ್ರಾಮಾಣಿಕವಾಗಿ ಶ್ರಮಿಸೋಣ

ಮುಂಬರುವ ದಿನಗಳಲ್ಲಿ ನಾವೆಲ್ಲರೂ ಒಗ್ಗಟ್ಟಾಗಿ, ಹೆಗಲಿಗೆ ಹೆಗಲು ಕೊಟ್ಟು ಕ್ಷೇತ್ರದ ಸರ್ವತೋಮುಖ ಪ್ರಗತಿಗಾಗಿ ಹಾಗೂ ಕಾಂಗ್ರೆಸ್ ಪಕ್ಷದ ಬಲವರ್ಧನೆಗಾಗಿ ಪ್ರಾಮಾಣಿಕವಾಗಿ ಶ್ರಮಿಸೋಣ ಎಂದು ತಾಲೂಕು ಕಾಂಗ್ರೆಸ್ ಮುಖಂಡ ಸಂತೋಷ ಹಾದಿಮನಿ ಹೇಳಿದರು.

ಬೆಮುಲ ನಿರ್ದೇಶಕ ಶಂಕರ ಇಟ್ನಾಳ, ಜಿಪಂ ಮಾಜಿ ಸದಸ್ಯ ಫಕ್ಕೀರಪ್ಪ ಹದ್ದನ್ನವರ, ತಾಪಂ ಮಜಿ ಸದಸ್ಯ ಮಲಿಕಸಾಬ ಬಗವಾನ, ರೈನಾಪೂರ ಪಿಕೆಪಿಎಸ್ ಅಧ್ಯಕ್ಷ ವಿಠ್ಠಲ ಬಂಟನೂರ, ಯಲ್ಲಮ್ಮ ದೇವಸ್ಥಾನ ವ್ಯವಸ್ಥಾಪನ ಸಮಿತಿ ಸದಸ್ಯ ಪುಂಡಲೀಕ ಮೇಟಿ, ಮುಖಂಡರು ಪ್ರಕಾಶ ವಾಲಿ, ಆರ್.ಕೆ.ಪಟಾತ, ಉಮೇಶ ಮಾಗುಂಡನವರ, ಈರಣ್ಣ ಗೌಡರ, ಮಹಾಂತೇಶ ಉರಬೀನ್ನವರ, ರಾಘವೇಂದ್ರ ಗಿಡ್ಡಮಲ್ಲಪ್ಪಗೋಳ, ಚಾಯಪ್ಪ ಹುಂಡೇಕರ, ಡಾ.ಎ.ಎಂ. ಶಂಕರಲಿಂಗಪ್ಪ ಸೇರಿದಂತೆ ಕಾರ್ಯಕರ್ತರು, ಮುಖಂಡರು ಮತ್ತಿತರಿದ್ದರು.

ಮಾನಸಿಕ ಖಿನ್ನತೆಗೆ ಯೋಗವೇ ಪರಿಹಾರ

ಚನ್ನಮ್ಮನ ಕಿತ್ತೂರು: ಇಂದಿನ ಯಾಂತ್ರಿಕ ಬದುಕಿನಲ್ಲಿ ನಾವೆಲ್ಲರೂ ಮಾನಸಿಕ ಖಿತನ್ನತೆಯಿಂದ ಬಳಲುತ್ತಿದ್ದೇವೆ. ಕೆಲವರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಆದ್ದರಿಂದ ಪ್ರತಿ ದಿನ ಯೋಗಾಭ್ಯಾಸವನ್ನು ಮಾಡುವುದರಿಂದ ಮಾನಸಿಕ ಖಿನ್ನತೆಯನ್ನು ದೂರಗೊಳಿಸಬಹುದೆಂದು ಯೋಗ ಶಿಕ್ಷಕಿ ಸೌಮ್ಯಾ ರಾಘವೇಂದ್ರ ಹೇಳಿದರು.

ಪಟ್ಟಣದ ಕಿನಾವಿವ ಸಂಘದ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಮಾತನಾಡಿ ಇಂದಿನ ಆಹಾರ ಪದ್ಧತಿಯು ಮಾನಸಿಕ ಖಿನ್ನತೆಗೆ ಕಾರಣವಾಗಿದೆ ಆದ್ದರಿಂದ ನಾವು ನಮಗಾಗಿ ಒಂದಿಷ್ಟು ಸಮಯವನ್ನು ಮೀಸಲಿಟ್ಟು ತಪ್ಪದೇ ಯೋಗಾಭ್ಯಾಸವನ್ನು ಮಾಡುವುದರಿಂದ ನಮ್ಮ ಆರೋಗ್ಯವನ್ನು ರಕ್ಷಿಸಿಕೊಳ್ಳಬಹುದು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕಿನಾವಿವ ಸಂಘದ ಮಾಜಿ ಚೇರಮನ್ ಜಗದೀಶ ವಸ್ತ್ರದ ಮಾತನಾಡಿದರು.

ಪ್ರಾಚಾರ್ಯ ನಾಗರಾಜ ಎಚ್.ಕೆ ಮಾತನಾಡಿದರು.

ಪಟ್ಟಣ ಪಂಚಾಯತಿಯ ಶಕಿಲಾ ಕಿಲ್ಲೇದಾರ ವಿದ್ಯಾರ್ಥಿಗಳಿಗೆ ನಾಶಾ ಮುಕ್ತ ರಾಷ್ಟ್ರ ನಿರ್ಮಾಣಕ್ಕೆ ಪ್ರಮಾಣ ವಚನ ಬೋಧಿಸಿದರು.

ವಿದ್ಯಾರ್ಥಿಗಳಿಗೆ ಯೋಗ ತರಬೇತಿ ನೀಡಿದ ಯೋಗ ಶಿಕ್ಷಕಿ ಸೌಮ್ಯಾ ರಾಘವೇಂದ್ರ ಇವರನ್ನು ಸನ್ಮಾನಿಸಿದರು.

ಧಾರವಾಡ ಎನ್ ಸಿ ಸಿ ಬಟಾಲಿಯನ್ ಅಧಿಕಾರಿ ಕ್ಯಾಪಟನ್ ರಾಮಬಾವು, ಎನ್.ಎಸ್.ಎಸ್ ಅಧಿಕಾರಿ ಹೊನ್ನರಾಜು ಎಸ್. ವ್ಹಿ ರೇಖಾ ಗಾಣಿಗೇರ, ಜಗದೀಶ ಮಲಶೆಟ್ಟಿ, ಎಮ್ ಎಮ್ ಕೆರಾಳಿ ಇತರರು ಉಪಸ್ಥಿತರಿದ್ದರು.

ಉಪನ್ಯಾಸಕ ಪ್ರಕಾಶ ಶಿವನವ್ವನವರ ಸ್ವಾಗತಿಸಿದರು, ಎನ್.ಸಿ.ಸಿ ಅಧಿಕಾರಿ ಎಮ್.ಜಿ.ಹಿರೇಮಠ ಅತಿಥಿಗಳನ್ನು ಪರಿಚಯಿಸಿದರು, ಪ್ರಕಾಶ ಹೊನ್ನಪ್ಪನವರ ವಂದಿಸಿದರು ರೋವರ್ ಲೀಡರ್ ಆನಂದ ಕರೆಪ್ಪನವರ ಕಾರ್ಯಕ್ರಮ ನಿರೂಪಿಸಿದರು.



ತಾಯಿಯ ಹೆಸರಲ್ಲಿ ಒಂದು ಸಸಿ ನೆಟ್ಟು ಪೋಷಿಸಿ: ಸಂಸದ ಕಾಗೇರಿ

ಖಾನಾಪುರ: ಪಟ್ಟಣದ ಸ್ಟೇಶನ್ ರಸ್ತೆ ಆಂಜನೇಯ ದೇವಾಲಯ ಆವರಣದಲ್ಲಿ ಭಾನುವಾರ ಭಾರತೀಯ ಜನತಾ ಪಕ್ಷ ಖಾನಾಪುರ ಘಟಕ, ಸ್ಥಳೀಯ ಪಟ್ಟಣ ಪಂಚಾಯತಿ ಮತ್ತು ಸಾಮಾಜಿಕ ಅರಣ್ಯ ಇಲಾಖೆಗಳಸಹಯೋಗದಲ್ಲಿವೃಕ್ಷಾರೋಪಣ ಕಾರ್ಯಕ್ರಮ ಜರುಗಿತು.

ದೇವಾಲಯದ ಆವರಣದಲ್ಲಿ ಸಂಪಿಗೆ ಸಸಿ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ''ಹೆತ್ತ ತಾಯಿಯನ್ನು ಗೌರವಿಸುವ ಪ್ರತಿಯೊಬ್ಬರೂ ತಾಯಿಯ ಹೆಸರಲ್ಲಿ ಕನಿಷ್ಠ ಒಂದು ಸಸಿಯನ್ನು ನೆಟ್ಟು ಪೋಷಿಸಬೇಕು'' ಎಂದರು.

ಶಾಸಕ ವಿಠ್ಠಲ ಹಲಗೇಕರ ಮಾತನಾಡಿ, ''ಪರಿಸರ ಸಂರಕ್ಷಣೆಯ ನಿಟ್ಟಿನಲ್ಲಿ ವೃಕ್ಷಾರೋಪಣ ಬಹಳಷ್ಟು ಮಹತ್ವದ ಕಾರ್ಯವಾಗಿದೆ. ನರೇಂದ್ರ ಮೋದಿಯವರೂ ಸಹ ತಾಯಿಯ ಹೆಸರಲ್ಲಿ ಒಂದು ಸಸಿ ನೆಡಲು ಕರೆ ನೀಡಿದ್ದಾರೆ. ಎಲ್ಲರೂ ಸೇರಿ ಮರಗಿಡಗಳನ್ನು ಹೆಚ್ಚು-ಹೆಚ್ಚು ಬೆಳೆಸುವ ಮೂಲಕ ಪರಿಸರ ಸಂರಕ್ಷಣೆಗಾಗಿ ಪಣ ತೊಡಬೇಕು'' ಎಂದರು.

ಇದೇ ಸಂದರ್ಭದಲ್ಲಿ ಸಂಸದರು ಪಟ್ಟಣದ ವಿವಿಧ ಹಿರಿಯ ನಾಗರಿಕರನ್ನು ಗೌರವಿಸಿ ಸತ್ಕರಿಸಿದರು. ಕಾರ್ಯಕ್ರಮದಲ್ಲಿ ಪಕ್ಷದ ಬ್ಲಾಕ್ ಅಧ್ಯಕ್ಷ ಬಸವರಾಜ ಸಾಣಿಕೊಪ್ಪ, ಉಪವಲಯ ಅರಣ್ಯಾಧಿಕಾರಿ ಎಂ.ಬಿ ಮುರಗೋಡ, ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಸಂತೋಷ ಕುರಬೇಟ್, ಬಿಜೆಪಿ ಮುಖಂಡರಾದ ಅಪ್ಪಯ್ಯ ಕೋಡೊಳಿ, ಜ್ಯೋತಿಬಾ ರೇಮಾಣಿ, ಮಲ್ಲಪ್ಪ ಮಾರಿಹಾಳ, ಧನಶ್ರೀ ದೇಸಾಯಿ, ಸದಾನಂದ ಪಾಟೀಲ, ಶ್ರೀಕಾಂತ ಇಟಗಿ, ಸಂಜಯ ಕುಬಲ, ಪ್ರಮೋದ ಕೊಚೇರಿ, ಮಹಾಂತೇಶ ಬಾಳೆಕುಂದ್ರಿ, ಚೇತನ ಮನೇರಿಕರ ಇದ್ದರು.



ಈಶ್ವರೀಯ ವಿವಿಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಕುಡಚಿ: ಪಟ್ಟಣದಲ್ಲಿರುವ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಅತ್ಯಂತ ಭಕ್ತಿಪೂರ್ವಕವಾಗಿ ಹಾಗೂ ಉತ್ಸಾಹದಿಂದ ಆಚರಿಸಲಾಯಿತು.

ಆಶ್ರಮದ ಹಿಂದಿನ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜಯೋಗಿನಿ ಬ್ರಹ್ಮಕುಮಾರಿ ವಿದ್ಯಾ ಅಕ್ಕನವರ ಸಾನ್ನಿಧ್ಯದಲ್ಲಿ ಬಿ.ಕೆ. ಬಾಬು ಚಿಂಚಲೆ ಅವರು ಯೋಗಾಸನ, ಓಂಕಾರ ಧ್ಯಾನ ಹಾಗೂ ವಿವಿಧ ಯೋಗ ಕ್ರಿಯೆಗಳನ್ನೊಳಗೊಂಡ ತರಬೇತಿಯನ್ನು ನೀಡಿದರು. ಭಾಗವಹಿಸಿದ್ದ ಎಲ್ಲರಿಗೂ ಯೋಗದ ಮಹತ್ವ ಮತ್ತು ಆರೋಗ್ಯದ ಮೇಲಿನ ಅದರ ಪರಿಣಾಮ ಕುರಿತು ವಿವರವಾದ ತಿಳಿವಳಿಕೆ ನೀಡಿದರು.

ಈ ಯೋಗ ಕಾರ್ಯಕ್ರಮದಲ್ಲಿ ನೂರಾರು ಸಹೋದರರು ಹಾಗೂ ಸಹೋದರಿಯರು ಭಾಗವಹಿಸಿ, ಸಮೂಹ ಯೋಗಾಭ್ಯಾಸದ ಮೂಲಕ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಉತ್ತೇಜಿಸಿದರು.

ಸಂಜೆ 5 ಗಂಟೆಗೆ ಪತಂಜಲಿ ಯೋಗ ಸಮಿತಿ ರಾಜ್ಯ ಕಿಸಾನ್ ಪ್ರಭಾರಿ ಸಂಜಯ ಕುಸ್ತಿಗಾರ ಅವರು ಆಸನ, ಮುದ್ರೆಗಳು, ಪ್ರಾಣಾಯಾಮ ಹಾಗೂ ಆಧುನಿಕ ಜೀವನದಲ್ಲಿ ಯೋಗದ ಅಗತ್ಯತೆ ಕುರಿತು ಮಾರ್ಗದರ್ಶನ ನೀಡಿದರು.



ಕಾರ್ಯಕ್ರಮದಲ್ಲಿ ಕುಡಚಿ ಹಾಗೂ ಸುತ್ತಮುತ್ತಲಿನ ನೂರಾರು ಸಹೋದರ ಸಹೋದರಿಯರು ಭಾಗಿಯಾಗಿದ್ದರು.

ಆರೋಗ್ಯಕರ ಜೀವನಕ್ಕೆ ಯೋಗ ಅವಶ್ಯ: ಡಾ.ಬ್ರಹ್ಮಾನಂದ ಶ್ರೀ

ಅಥಣಿ: ಪತಂಜಲಿ ಮಹರ್ಷಿಗಳು ಪುರಾತನ ಕಾಲದಿಂದ ರೂಢಿಸಿಕೊಂಡ ಬಂದ ಯೋಗಶಾಸ್ತ್ರ ಇಂದು ಜಗತ್ಪಸಿದ್ಧವಾಗಿದ್ದು, ಈ ಯೋಗ ಸಂದೇಶವನ್ನು ದೇಶ ವಿದೇಶಗಳಿಗೆ ತಲುಪಿಸುವ ಮೂಲಕ ಪ್ರತಿಯೊಬ್ಬರೂ ಆರೋಗ್ಯಕರ ಜೀವನಕ್ಕೆ ನಿತ್ಯ ಯೋಗ ಅಭ್ಯಾಸಗಳನ್ನು ರೂಢಿಸಿಕೊಳ್ಳಬೇಕು ಎಂದು ಪರಮಾನಂದವಾಡಿಯ ಡಾ. ಅಭಿನವ ಬ್ರಹ್ಮಾನಂದ ಸ್ವಾಮೀಜಿ ನುಡಿದರು.

ಅವರು ಇಲ್ಲಿನ ಭೋಜರಾಜ ಕ್ರೀಡಾಂಗಣದಲ್ಲಿ ಜಾದವಜಿ ಶಿಕ್ಷಣ ಸಂಸ್ಥೆಯ ವಿವಿಧ ಅಂಗ ಸಂಸ್ಥೆಗಳ ಆಶ್ರಯದಲ್ಲಿ ನಡೆದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು. ಯೋಗ, ಪ್ರಾಣಾಯಾಮ ಮತ್ತು ಧ್ಯಾನ ಕೇವಲ ಯೋಗ ದಿನಾಚರಣೆಗೆ ಸೀಮಿತವಾಗಬಾರದು. ನಿತ್ಯ ಬದುಕಿನಲ್ಲಿ ಯೋಗವನ್ನು ರೂಢಿಸಿಕೊಳ್ಳಬೇಕು. ಪ್ರತಿಯೊಬ್ಬರ ಜೀವನದಲ್ಲಿ ಆರೋಗ್ಯ ಸಂಪತ್ತನ್ನು ಚೆನ್ನಾಗಿ ಕಾಪಾಡಿಕೊಳ್ಳಬೇಕು. ಶಾಲಾ ಮಕ್ಕಳಲ್ಲಿ ಏಕಾಗ್ರತೆ ಮತ್ತು ಉತ್ಸಾಹದಿಂದ ಆಟ ಮತ್ತು ಪಾಠದಲ್ಲಿ ಪಾಲ್ಗೊಳ್ಳಲು ಯೋಗ ಸಹಕಾರಿಯಾಗಿದೆ ಎಂದು ಹೇಳಿದರು. ಸಮಾರಂಭದ ಅಧ್ಯಕ್ಷತೆಯನ್ನು ಸಂಸ್ಥೆಯ ಆಡಳಿತ ಮಂಡಳಿಯ ಸಂಚಾಲಕ ಅನಿಲರಾವ ದೇಶಪಾಂಡೆ ವಹಿಸಿ ಮಾತನಾಡಿದರು. ಗೋಕಾಕದ ಖ್ಯಾತ ಯೋಗ ಗುರು ಸಂಜೀವ ಗೋಡಗೇರಿ ಅದ್ಭುತ ಯೋಗ ಬಂಗಿಗಳನ್ನು ಪ್ರದರ್ಶನ ಮಾಡುವ ಮೂಲಕ ಮಕ್ಕಳನ್ನು ದಿಗ್ಭ್ರಮೆಗೊಳಿಸಿದರು. ಸಂಸ್ಥೆಯ ಪ್ರೌಢಶಾಲೆಯ ವಿದ್ಯಾರ್ಥಿಗಳು ಸಂಗೀತ ಮತ್ತು ಯೋಗ ನೃತ್ಯಗಳನ್ನು ಪ್ರದರ್ಶಿಸಿದರು.



ಸಮಾರಂಭದಲ್ಲಿ ಸಂಸ್ಥೆಯ ಅಧ್ಯಕ್ಷ ಡಾ.ರಾಮ ಕುಲಕರ್ಣಿ, ನಿರ್ದೇಶಕರಾದ ಆರ್ ಎ ಜೋಶಿ, ಆನಂದ ಟೋನಪಿ, ಅಥರ್ವ ದೇಶಪಾಂಡೆ, ಶ್ರೀರಂಗ ಜೋಶಿ, ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಮಹಾಲಿಂಗ ಮೇತ್ರಿ ಸೇರಿದಂತೆ ಅಂಗ ಸಂಸ್ಥೆಗಳ ಮುಖ್ಯಸ್ಥರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಬೆಂಕಿ, ಅಡುಗೆ ಎಣ್ಣೆ ರಹಿತ ಅಡುಗೆ ಆರೋಗ್ಯಕ್ಕೆ ಸಹಕಾರಿ

ಚಿಕ್ಕೋಡಿ: ಬೆಂಕಿ ಹಾಗೂ ಅಡುಗೆ ಎಣ್ಣೆ ರಹಿತ ಅಡುಗೆ ಮಾಡುವುದರಿಂದ ಆರೋಗ್ಯಕ್ಕೂ ಸಹಕಾರಿ. ಆರ್ಥಿಕ ಹೊರೆಯನ್ನು ಕಡಿಮೆ ಮಾಡಿಕೊಳ್ಳಬಹುದಾಗಿದೆ. ಪ್ರಸ್ತುತ ದಿನಗಳಲ್ಲಿ ಗೃಹಿಣಿಯರು ಇಂತಹ ಪದ್ಧತಿಯನ್ನು ರೂಢಿಸಿಕೊಳ್ಳಬೇಕು ಎಂದು ಚಿಕ್ಕೋಡಿ ಪುರಸಭೆ ಮಾಜಿ ಅಧ್ಯಕ್ಷೆ ವೀಣಾ ಕವಟಗಿಮಠ ಹೇಳಿದರು.

ಪಟ್ಟಣದ ರಾಜೀವ ನಗರ ಬಡಾವಣೆಯಲ್ಲಿ ಕದಳಿ ಮಹಿಳಾ ವೇದಿಕೆ ಹಾಗೂ ಮಹಾಲಕ್ಷ್ಮೀ ದೇವಸ್ಥಾನ ಸಮಿತಿ ಸಹಯೋಗದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಬೆಂಕಿ ಹಾಗೂ ಅಡುಗೆ ಎಣ್ಣೆ ರಹಿತ ಅಡುಗೆ ತಯಾರಿಕೆ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿ, ಇಂದಿನ ದಿನಗಳಲ್ಲಿ ಮಕ್ಕಳು ಮನೆಯಲ್ಲಿ ತಯಾರಿಸಿದ ಅಡುಗೆಯನ್ನು ಇಷ್ಟಪಡದೇ ಇರುವುದಕ್ಕೆ ಪಾಲಕರ ನಿರ್ಲಕ್ಷ್ಯವೇ ಕಾರಣವಾಗಿದೆ. ಮನೆಯಲ್ಲಿ ಇಂತಹ ವಿಶಿಷ್ಠ ಅಡುಗೆ ತಯಾರಿ ಮಾಡಿ ಪತಿ, ಮಕ್ಕಳು ಸೇರಿದಂತೆ ಒಟ್ಟಾಗಿ ಊಟ ಸವಿಯಬೇಕು ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಸಾಮಾಜಿಕ ಕಾರ್ಯಕರ್ತೆ ಶಾಂಭವಿ ಅಶ್ವತ್ಥಪೂರ ಮಾತನಾಡಿ, ಕಾಲಕ್ಕೆ ತಕ್ಕಂತೆ ನಡೆಯುವ ಮನೋಭಾವ ಮಹಿಳೆಯರಲ್ಲಿ ಇದೆ ಎಂಬುವುದಕ್ಕೆ ಬೆಂಕಿ ಇಲ್ಲದೇ, ಅಡುಗೆ ಎಣ್ಣೆ ಬಳಸದೇ ಅಡುಗೆ ಮಾಡುವ ವಿಧಾನ ಅಳವಡಿಸಿಕೊಂಡಿದ್ದೇ ನಿದರ್ಶನವಾಗಿದೆ. ಮಹಿಳೆಯರ ಕ್ರಿಯಾಶೀಲತೆಗೆ ಇದು ಸಾಕ್ಷಿಯಾಗಿದೆ. ಕುಟುಂಬ ರಕ್ಷಣೆ ಮಾಡುವ ಹೊಣೆಗಾರಿಕೆ ಹೊತ್ತ ಮಹಿಳೆಯರು ವಾರದಲ್ಲಿ ಒಮ್ಮೆಯಾದರೂ ಇಂತಹ ಪದ್ಧತಿ ಅನುಸರಿಸಿ ಅಡುಗೆ ಮಾಡಬೇಕೆಂದು ಕರೆ ನೀಡಿದರು.



ಅಡುಗೆ ತಯಾರಿ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ನಮ್ರತಾ ಅವಟೆ, ದ್ವಿತೀಯ ಸ್ಥಾನ ಪಡೆದ ರತ್ನಾ ಬಿಡೇಕರ, ತೃತೀಯ ಸ್ಥಾನ ಪಡೆದ ರಾಖಿ ಕಾಂಬಳೆ ಅವರಿಗೆ ಬಹುಮಾನ ವಿತರಣೆ ಮಾಡಲಾಯಿತು. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಾಂಸ್ಕೃತಿಕ ಮತ್ತು ಸಾಹಿತ್ಯಕ ಪರಿಷತ್ತಿನ ಜಿಲ್ಲಾ ಘಟಕದ ಕಾರ್ಯಾಧ್ಯಕ್ಷೆಯಾಗಿ ಆಯ್ಕೆಯಾದ ಜ್ಯೋತಿ ಅಥಣಿಯವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಚಿಕ್ಕೋಡಿ ಜಿಲ್ಲಾ ಬಿಜೆಪಿ ಮಹಿಳಾ ಘಟಕದ ಅಧ್ಯಕ್ಷೆ ಶಕುಂತಲಾ ಡೋಣವಾಡೆ, ರತ್ನಾ ಬಿಡೇಕರ, ಚಿದಾನಂದ ಅಥಣಿ, ಲೀಲಾವತಿ ಅಥಣಿ, ಮಹಾನಂದಾ ಮಠಪತಿ, ಹರೀಶ ಚೌಗಲಾ, ಸುಮಾ ಕಾಂಬಳೆ ಇತರರು ಇದ್ದರು.

ವಿದ್ಯುತ್ ಖಾಸಗೀಕರಣ ವಿರೋಧಿಸಿ ರೈತ ಸಂಘದಿಂದ ಪ್ರತಿಭಟನೆ

ರಾಯಬಾಗ: ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದವರು ರಾಜ್ಯದ 19 ಜಿಲ್ಲೆಗಳ ವಿದ್ಯುತ್ ಸರಬರಾಜನ್ನು ಖಾಸಗೀಕರಣಗೊಳಿಸುವುದನ್ನು ವಿರೋಧಿಸಿ ಪ್ರೊ.ಎಂ.ಡಿ.ನಂಜುಡಸ್ವಾಮಿ ರೈತ ಸಂಘ ತಾಲೂಕು ಘಟಕ ಹಾಗೂ ಪದಾಧಿಕಾರಿಗಳು ತಹಶೀಲ್ದಾರ್ ಮಹಾದೇವ ಸನ್ಮೂರಿಯವರಿಗೆ ಮನವಿ ಪತ್ರ ಸಲ್ಲಿಸಿದರು.

ಟಾಟಾ ಪವರ ಕಂಪನಿ ಲಿ., ಅವರು ಕೆ.ಇ.ಆರ್.ಸಿ ಗೆ ಅರ್ಜಿ ಸಲ್ಲಿಸಿ ರಾಜ್ಯದ 5 ಹೆಸ್ಕಾಂಗಳ 19 ಜಿಲ್ಲೆಗಳಲ್ಲಿ ಸಮಾನಾಂತರ ವಿದ್ಯುತ ವಿತರಣಾ ಪರವಾಣಿಗೆ ಕೇಳಿದೆ. 60 ವರ್ಷಗಳಿಂದ ಗ್ರಾಹಕರಿಂದ, ರೈತರಿಂದ, ಕೈಗಾರಿಕೆಗಳಿಂದ, ತೆರಿಗೆಯಲ್ಲಿ ಲಕ್ಷಾಂತರ ಕೋಟಿ ಹಣ ಸಂಗ್ರಹಿಸಿ ಸ್ಥಾಪಿಸಿದ ಸಂಸ್ಥೆಗಳನ್ನು ಮಾರಲು ಹೊರಟಿರುವುದು ತುಂಬಾ ಅನ್ಯಾಯ. ಖಾಸಗೀಕರಣದಿಂದಾಗುವ ತೊಂದರೆಗಳನ್ನು ಜನ ಸಾಮಾನ್ಯರು, ರೈತರು, ಕೈಗಾರಿಕೆಗಳು ಇಷ್ಟೇ ಅಲ್ಲದೇ ಇಂದೇ ದುಡಿದು ಇಂದೇ ತಿನ್ನುವ ಬಡವರಿಗೂ ಹೊರೆಯಾಗುತ್ತದೆ. ಇವರೆಲ್ಲರೂ ಭಾರಿ ನಷ್ಟ ಅನುಭವಿಸಬೇಕಾಗುತ್ತದೆ.

ರೈತರು ಮಾತ್ರವಲ್ಲದೇ ನೇಕಾರರು, ಸಣ್ಣ ಸಣ್ಣ ಕೈಗಾರಿಕೆದಾರರು, ಬೆಲ್ಲ ತಯಾರಿಸುವ ಆಲೆಮನೆಗಳು ವಿದ್ಯುತ ಖಾಸಗಿಕರಣದಿಂದ ಇವುಗಳಿಗೆ ಬಾರಿ ಪ್ರಮಾಣದ ನಷ್ಟ ಉಂಟಾಗಿ, ಗ್ರಾಮೀಣ ಭಾಗದಲ್ಲಿಯೂ ನಿರುದ್ಯೋಗ ಹೆಚ್ಚಾಗಿ ಅರಾಜಕತೆ ಉಂಟಾಗುವುದಲ್ಲದೇ ಆಹಾರ ಭದ್ರತೆಗೆ ಹೊಡೆತ ಬೀಳುತ್ತದೆ. ಸಾರ್ವಜನಿಕ ಹಿತಾಶಕ್ತಿ, ರೈತರ ಬದಕು ಮತ್ತು ರಾಜ್ಯ ವಿದ್ಯುತ ಕ್ಷೇತ್ರದ ಸಮಗ್ರತೆಯನ್ನು ಕಾಪಾಡುವ ದೃಷ್ಟಿಯಿಂದ ಟಾಟಾ ಪವರ ಕಂಪನಿಯಾಗಲಿ ಅಥವಾ ಬೇರೆ ಯಾವದೆ ಕಂಪನಿಗಳ ಇಂತಹ ಬೇಡಿಕೆ ಅರ್ಜಿಗಳನ್ನು ತಿರಸ್ಕರಿಸಬೇಕು. ಒಂದು ವೇಳೆ ರೈತರ ವಿಚಾರದಲ್ಲಿ ವಿದ್ಯುತ ಖಾಸಗಿಕರಣವಾದರೆ ರಾಜ್ಯಾದ್ಯಂತ ಕರ್ನಾಟಕ ರಾಜ್ಯರೈತ ಸಂಘ ಹಸಿರು ಸೇನೆ ವತಿಯಿಂದ ನ್ಯಾಯ ಸಿಗುವವರೆಗೆ ಉಗ್ರ ಹೋರಾಟ ಮಾಡುತ್ತೇವೆ ಯಾರದೋ ಆಸ್ತಿಯನ್ನು ಮಾರಲು ಇವರು ಯಾರು? ತಮ್ಮ ಅನೂಕೂಲಕ್ಕೆ ತಕ್ಕಂತೆ ದೇಶದ ಆಸ್ತಿಯನ್ನು ಬಳಸಿಕೊಳ್ಳಲು ಇದು ಏಕಚಕ್ರಾಧಿಪತಿಯ ಆಡಳಿತವಲ್ಲ, ಇದು ಪ್ರಜಾಪ್ರಭುತ್ವವಾದ ದೇಶ ಎಚ್ಚರವಿರಲಿ ಎಂದು ಮನವಿ ಪತ್ರದಲ್ಲಿ ಸರಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.



ಸದರಿ ಮನವಿಯನ್ನು ಜಿಲ್ಲಾಧಿಕಾರಿಯವರಿಗೆ ಕಳುಹಿಸುವುದಾಗಿತಹಶೀಲ್ದಾರಮಹಾದೇವಸನಮುರಿ ಹೇಳಿದರು.ಈ ಸಂದರ್ಭದಲ್ಲಿ ತಾಲೂಕಾ ಘಟಕದ ಅಧ್ಯಕ್ಷ ವಿಜಯ ಶ್ರೇಷ್ಠಿ, ಉಪಾಧ್ಯಕ್ಷ ನಿಜಗುಣಿ ನಾವಿ, ಕಾರ್ಯದರ್ಶಿ ಮಾಯಗೌಡ ಪಾಟೀಲ, ರಾಯಗೌಡ ಪಾಟೀಲ, ದೀಲಿಪ ಮಾನೆ, ಅಪ್ಪಾಸಾಬ ಮಾನೆ, ಸಾವಂತ ಕೋಚೇರಿ, ಮಹಾದೇವ ಪಾಟೀಲ, ಶ್ರೀಶೈಲ ಕರಿಗಾರ, ಬಸವರಾಜ ಹಿರೇಮಠ, ಸುಲ್ತಾನ ಪೂಜೇರಿ, ಶ್ರೀಶೈಲಕ ಸಾಬನೆ, ಬಮ್ಮಗೌಡ ಪಾಟೀಲ, ದಸ್ತಗೀರ ಮುಲ್ತಾನಿ ಹಾಗೂ ರೈತ ಮುಖಂಡರು ಪ್ರಗತಿಪರ ರೈತರು ಉಪಸ್ಥಿತರಿಸಿದ್ದರು.

ಕಿರುಸುದ್ದಿ



ಗಲಗಲಿ: ಗ್ರಾಮದ ಕೆಂಚಿಬಿ ಮೈದಾನದಲ್ಲಿ ವಿಶ್ವ ಯೋಗ ದಿನಾಚರಣೆ ಆಚರಿಸಲಾಯಿತು. ಹೊಳಬಸು ಬಾಳ ಶೆಟ್ಟಿ, ಪ್ರಕಾಶ ಪಾಟೀಲ, ರಮೇಶ ಕತ್ತಿ, ರವಿ ಗೋಕಾವಿ, ಪ್ರದೀಪ್ ಗುತ್ತಿ ಗೌಡರ, ಕುಮಾರ ಉಳ್ಳಾಗಡ್ಡಿ, ಹರೀಶ ದೇಶಪಾಂಡೆ, ಅರವಿಂದ ಕಟ್ಟಿ ಪಾಲ್ಗೊಂಡಿದ್ದರು.



ಕಮತಗಿ: ಪಟ್ಟಣದ ಹುಚ್ಚೇಶ್ವರ ವಿದ್ಯಾವರ್ಧಕ ಸಂಘದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಯಿತು. ಹುಚ್ಚೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಹುಚ್ಚೇಶ್ವರ ಶ್ರೀಗಳು ಹುಚ್ಚೇಶ್ವರ ವಿದ್ಯಾವರ್ಧಕ ಸಂಘದ ಸಹಕಾರ್ಯದರ್ಶಿ ವಿದ್ಯಾಧರ ಮಳ್ಳಿ ಆಡಳಿತ ಅಧಿಕಾರಿ ಅನಿಲ್ ಕುಮಾರ್ ಕಲ್ಯಾಣಶೆಟ್ಟಿ, ಡಾ.ಪ್ರಭುಲಿಂಗಯ್ಯ ಗುರುವಿನಮಠ, ಅಂಗ ಸಂಸ್ಥೆಯ ಪ್ರಾಚಾರ್ಯರು, ಸಿಬ್ಬಂದಿ, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



ಬಾದಾಮಿ: ತಾಲೂಕಿನ ಯಂಕಂಚಿ ಮಣಿನಾಗರ ಗ್ರಾಮದ ಕಸ್ತೂರಬಾ ಗಾಂಧಿ ಬಾಲಕಿಯರ ವಸತಿ ಶಾಲೆಯಲ್ಲಿ ಯೋಗ ದಿನಾಚರಣೆ ನಡೆಯಿತು. ಮುಖ್ಯ ಶಿಕ್ಷಕಿ ಬಸಮ್ಮಾ ನರಸಾಪೂರ, ಸಹಶಿಕ್ಷಕಿ ಅನಿತಾ ಜಲಗೇರಿ, ಸಹಶಿಕ್ಷಕರು, ಸಿಬ್ಬಂದಿ, ಬಾಲಕಿಯರು ಉಪಸ್ಥಿತರಿದ್ದರು.

ಅಂತಾರಾಷ್ಟ್ರೀಯ ಯೋಗ ದಿನಾಚರಣೆ



ಬಾದಾಮಿ: ತಾಲೂಕಿನ ಯಂಕಂಚಿ ಮಣಿನಾಗರ ಗ್ರಾಮದ ಟಿ.ಎಸ್.ಗಂಗಲ್ ಸರಕಾರಿ ಪ್ರೌಢಶಾಲೆಯಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ ದೈಹಿಕ ಶಿಕ್ಷಕ ಗುರುನಾಥ ಕೊಂಡಕರ ಅವರ ನೇತೃತ್ವದಲ್ಲಿ ನಡೆದ ಯೋಗಾಸನ ಕಾರ್ಯಕ್ರಮ ನಡೆಯಿತು. ಪೂರ್ವಭಾವಿಯಾಗಿ ಒಂದು ವಾರಗಳ ಕಾಲ ಮಕ್ಕಳಿಗೆ ತರಗತಿವಾರು ತರಬೇತಿಗೊಳಿಸಿ ಇವತ್ತು ಉತ್ತಮ ಪ್ರದರ್ಶನ ನೀಡಿ ಕಾರ್ಯಕ್ರಮ ಯಶಸ್ವಿಗೊಳಿಸಲಾಯಿತು. ಶಾಲೆಯ ಮುಖ್ಯ ಶಿಕ್ಷಕಿ ಡಾ.ಆರ್.ಆರ್.ಕುಲಕರ್ಣಿ ಸ್ವತಃ ಪ್ರಾಣಾಯಾಮದ ವಿವಿಧ ಆಸನಗಳನ್ನು ಮಾಡಿಸಿದ್ದು ಮಕ್ಕಳಲ್ಲಿ ಆಸಕ್ತಿ ಹೆಚ್ಚಿಸಿತು. ಈ ಕುರಿತು ಮಾತನಾಡಿದ ಅವರು ಎಲ್ಲರಿಗೂ ಅಭಿನಂದನೆಯ ಧನ್ಯವಾದಗಳೊಂದಿಗೆ ಯೋಗ ದಿನ ಶುಭವನ್ನು ತರಲಿ ಈ ಶುಭ ಸಂದರ್ಭದಲ್ಲಿ ಇವತ್ತಿನಿಂದ ಪ್ರಾರಂಭಿಸಿದ ಯೋಗ ನಿರಂತರವಾಗಿ ನಡಿತಾ ಇರಲಿ ಎಂದು ಸಂದೇಶ ನೀಡಿದರು. ಶಾಲಾ ಸಹಶಿಕ್ಷಕರು, ಸಿಬ್ಬಂದಿ, ಮಕ್ಕಳು ಉಪಸ್ಥಿತರಿದ್ದರು.

ಶಶಿಕಲಾ ಹೂಗಾರ ನಿಧನ



ಬಾದಾಮಿ: ತಾಲೂಕಿನ ಜಮ್ಮನಕಟ್ಟಿ ಗ್ರಾಮದ ನಿವಾಸಿ ಶಶಿಕಲಾ ಪ್ರಕಾಶ ಹೂಗಾರ (58) ಭಾನುವಾರ ನಿಧನರಾದರು. (ಹಾಲಿವಸ್ತಿ ಹೊಸಪೇಟೆ). ಅವರು ಪತಿ, ಪುತ್ರ, ಪುತ್ರಿ, ಸೊಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗ ಇದ್ದಾರೆ.



ಬಾದಾಮಿ: ತಾಲೂಕಿನ ಚಿಕ್ಕಮುಚ್ಚಳಗುಡ್ಡ ಗ್ರಾಮದ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ಯೋಗ ಹಾಗೂ ವಿಶ್ವ ಸಂಗೀತ ದಿನ ಆಚರಿಸಲಾಯಿತು. ಯೋಗ ತರಬೇತುದಾರ ಅಶೋಕ ಪೂಜಾರಿ ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ವಿವಿಧ ಯೋಗಾಸನ ಪ್ರದರ್ಶಿಸಿದರು. ಪ್ರಭಾರಿ ಪ್ರಾಚಾರ್ಯ ಶಂಕರರಾವ ಕುಲಕರ್ಣಿ, ರಮೇಶ ಹಂಜಿ, ಶ್ರೀನಿವಾಸ ಈಳಗೇರ, ಪ್ರಭು ನಾಯ್ಕರ, ಸಿದ್ದು ಕೊರವರ, ರಂಗನಾಥ ಈಳಗೇರ, ರಮೇಶ ಕತ್ತಿ ಕೈ, ಕೇಶವ ರಘುವೀರ ಹಾಗೂ ಶಿಕ್ಷಕ ಸಿಬ್ಬಂದಿ ಇದ್ದರು.

ಬಾಲ್ಯದ ನೆನಪು ಮರುಕಳಿಸದ ದಿನಗಳು

ಅಮೀನಗಡ: ಬಾಲ್ಯದ ದಿನಗಳು ಎಂದಿಗೂ ಮರುಕಳಿಸದ ಸುಂದರ ಕ್ಷಣಗಳು. ವಯಸ್ಸು ಅರವತ್ತರ ಆಸುಪಾಸಿಗೆ ತಲುಪಿದರೂ, ಅಂದಿನ ಶಾಲಾ ದಿನಗಳ ನೆನಪುಗಳು ಮಾತ್ರ ಎಂದಿಗೂ ಹಸಿರಾಗಿರುತ್ತವೆ ಎಂದು ಹಳೆಯ ವಿದ್ಯಾರ್ಥಿ ಮುರುಗೇಶ ಹುಕ್ಕುಮನಾಳ (ಗಚ್ಚಿನಮಠ) ಹೇಳಿದರು. ಇಲ್ಲಿನ ಸಂಗಮೇಶ್ವರ ಪದವಿ ಪೂರ್ವ ಮಹಾವಿದ್ಯಾಲಯದ ಪ್ರೌಢಶಾಲಾ ವಿಭಾಗದ 1981-82ನೇ ಸಾಲಿನ ಹಳೆಯ ವಿದ್ಯಾರ್ಥಿಗಳ 'ಸ್ನೇಹ ಸಮ್ಮೇಳನ ಹಾಗೂ ಗುರುವಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಅಮೀನಗಡ-ಯರಿಗೋನಾಳದ ಪ್ರಭುಶಂಕರೇಶ್ವರ ಗಚ್ಚಿನಮಠದ ಶಂಕರರಾಜೇಂದ್ರ ಶ್ರೀಗಳು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಸಂಗಮೇಶ್ವರ ವಿದ್ಯಾವರ್ಧಕ ಸಂಘದ ಚೇರಮನ್ ಐ.ಎಸ್.ಅಂಗಡಾಳ ಕಾರ್ಯಕ್ರಮ ಉದ್ಘಾಟಿಸಿದರು. ಸಂಗಮೇಶ್ವರ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಚೇರಮನ್ ಸಿ.ಡಿ.ಇಲಕಲ್ಲ ಜ್ಯೋತಿ ಬೆಳಗಿಸಿದರು. ಸಂ.ಪ.ಪೂ ಕಾಲೇಜು ಪ್ರೌಢಶಾಲಾ ವಿಭಾಗದ ಉಪಪ್ರಾಚಾರ್ಯ ಆರ್.ಜಿ.ಸನ್ನಿ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಉಪನ್ಯಾಸಕರಾದ ಪಿ.ಡಿ.ಸಜ್ಜನ, ಎಸ್.ಎಸ್.ಶಿರೋಳ ಸೇರಿದಂತೆ ಹಲವು ಗುರುಗಳಿಗೆ 'ಗುರುವಂದನೆ' ಸಲ್ಲಿಸಿ ಆಶೀರ್ವಾದ ಪಡೆದರು. ಸಂಗಮೇಶ್ವರ ಹಿರಿಯ ಪ್ರಾಥಮಿಕ ಶಾಲೆಯ ಚೇರಮನ್ ಡಾ.ಎಂ.ವಿ.ಹಾದಿಮನಿ ಹಾಗೂ ಸಂಗಮೇಶ್ವರ ಇಂಗ್ಲಿಷ್ ಮೀಡಿಯಂ ಸ್ಕೂಲ್ ಮತ್ತು ಐಟಿಐ ಕಾಲೇಜಿನ ಚೇರಮನ್ ಆರ್.ಕೆ.ಗೌಡರ, ಅಶೋಕ ಎಸ್. ತೊಗಲಪತ್ನಿ, ಈರಣ್ಣ ಎಸ್.ಮುದಾಪೂರ, ವೈ.ಎಚ್.ದಳವಾಯಿ (ಹಾಲು ತೊಟ್ಟಿಲು), ವಾಸುದೇವ ದೊಡ್ಡಮನಿ, ಶಣ್ಣಪ್ಪ ಕಾಟನಿ ಹಾಗೂ ಯಮನೂರ ಸ. ಬಂಡಿವಡ್ಡರ ಇದ್ದರು.



ಅಮೀನಗಡ: ಇಲ್ಲಿನ ಸಂಗಮೇಶ್ವರ ಪದವಿ ಪೂರ್ವ ಮಹಾವಿದ್ಯಾಲಯದ ಪ್ರೌಢಶಾಲಾ ವಿಭಾಗದ 1981-82ನೇ ಸಾಲಿನ ಹಳೆಯ ವಿದ್ಯಾರ್ಥಿಗಳ 'ಸ್ನೇಹ ಸಮ್ಮೇಳನ ಹಾಗೂ ಗುರುವಂದನಾ ಕಾರ್ಯಕ್ರಮ ನಡೆಯಿತು.

ಭಾರತೀಯ ಕಿಸಾನ್ ಸಂಘ ಪ್ರದೇಶ ಉತ್ತರ ಪ್ರಾಂತ ಜಿಲ್ಲಾ ಘಟಕ ಮನವಿ
ಸಂತ್ರಸ್ತರಿಗೆ ಏಕರೂಪದ ಪರಿಹಾರ ನೀಡಿ

ಬೀಳಗಿ: ರಾಜ್ಯದಲ್ಲಿ ಸರ್ಕಾರದ ವಿವಿಧ ಯೋಜನೆಗಳಿಗೆ ಜಮೀನು ಕಳೆದುಕೊಂಡ ಸಂತ್ರಸ್ಥರಿಗೆ ಏಕರೂಪದ ಪರಿಹಾರ ನೀಡುವುದು, ರೈತರ ವಿವಿಧ ಬೇಡಿಕೆ ಈಡೇರಿಸಬೇಕೆಂದು ಭಾರತೀಯ ಕಿಸಾನ ಸಂಘ ಪ್ರದೇಶ ಉತ್ತರ ಪ್ರಾಂತ ಜಿಲ್ಲಾ ಘಟಕ ಬಾಗಲಕೋಟೆಯ ಪದಾಧಿಕಾರಿಗಳು ರಾಜ್ಯ ಸಂಘಟನಾ ಕಾರ್ಯದರ್ಶಿ ಪುಟ್ಟಸ್ವಾಮಿ ನೇತೃತ್ವದಲ್ಲಿ ತಹಶಿಲ್ದಾರ್ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ಭಾರತೀಯ ಕಿಸಾನ ಸಂಘ ಪ್ರದೇಶ ಉತ್ತರ ಪ್ರಾಂತ ಜಿಲ್ಲಾ ಘಟಕದ ಅಧ್ಯಕ್ಷ ವಿರುಪಾಕ್ಷಯ್ಯ ಹಿರೇಮಠ ಮಾತನಾಡಿ, ಕೃಷ್ಣಾ ಮೇಲ್ದಂಡೆ ಯೋಜನೆಯ ಸಂತ್ರಸ್ಥರಿಗೆ ಪ್ರತಿ ಎಕರೆ ಒಣಬೇಸಾಯಕ್ಕೆ 30 ಲಕ್ಷ, ನೀರಾವರಿಗೆ 40 ಲಕ್ಷ ರೂ. ನಿಗದಿಪಡಿಸಿದ್ದು, ಆದರೆ ಬಿಡದಿ ಟೌನಶಿಪ್‌ಗೆ ಪ್ರತಿ ಎಕರೆಗೆ ರೂ. 2.30 ಕೋಟಿಯಿಂದ 4 ಕೋಟಿಯವರೆಗೆ ಪರಿಹಾರ ನೀಡುತ್ತಿದ್ದು, ದಕ್ಷಿಣ ಕರ್ನಾಟಕದ ರೈತರ ಕಣ್ಣಿಗೆ ಬೆಣ್ಣೆ, ಉತ್ತರ ಕರ್ನಾಟಕದ ರೈತರ ಕಣ್ಣಿಗೆ ಸುಣ್ಣ ಈ ರೀತಿ ತಾರತಮ್ಯ ಏಕೆ ಎಂದು ಪ್ರಶ್ನಿಸಿದರು.

ಉತ್ತರ ಕರ್ನಾಟಕದ ಬಗ್ಗೆ ಸಿಎಂ ಡಿ.ಕೆ. ಶಿವಕುಮಾರ ಅವರು ತಾರತಮ್ಯ ಧೋರಣೆ ಅನುಸರಿಸುತ್ತಿರುವುದು ಸರಿ ಅಲ್ಲ. ರಾಜ್ಯದ ಎಲ್ಲ ರೈತರಿಗೂ ಏಕರೂಪದ ಪರಿಹಾರ ಒದಗಿಸಬೇಕು ಎಂದು ಆಗ್ರಹಿಸಿದರು. ರೈತರ ಬಿತ್ತನೆಗೆ ಉತ್ತಮ ಬೀಜ, ರಸಗೊಬ್ಬರ, ವಿದ್ಯುತ್, ನೀರನ್ನು ಸಮರ್ಪಕವಾಗಿ ಒದಗಿಸಬೇಕು. ರೈತರಿಗೆ ಲಿಂಕ್ ರಹಿತ ರಸಗೊಬ್ಬರ ಪೂರೈಸಬೇಕು ಎಂದು ಒತ್ತಾಯಿಸಿದರು.

ಕಳೆದ ಕೆಲವು ದಿನಗಳ ಹಿಂದೆ ಮಳೆ, ಗಾಳಿಗೆ ಅಪಾರಪ್ರಮಾಣದತೋಟಗಾರಿಕೆ, ಕೃಷಿ, ಬೆಳೆಗಳು, ದನ-ಕರಗಳು, ಆಸ್ತಿ-ಪಾಸ್ತಿ ಹಾನಿಯಾಗಿದ್ದು ತಕ್ಷಣ ಪರಿಹಾರ ಒದಗಿಸಬೇಕು. ಅತಿವೃಷ್ಟಿ ಅನಾವೃಷ್ಟಿಯಿಂದ ಹಾನಿಯಾದ ಬೆಳೆಗಳಿಗೆ ಸರಿಯಾದ ವಿಮಾಕ್ಲೇಮ ನೀಡಿರುವುದಿಲ್ಲ, ಮರು ಪರಿಶೀಲಿಸಬೇಕು ಎಂದು ಆಗ್ರಹಿಸಿದರು.

ಪಂಪಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಹೆಸ್ಕಾಂದವರು ಲಕ್ಷಾಂತರ ಹಣ ಪಡೆಯುತ್ತಿದ್ದು, ಇದರಿಂದಾಗಿ ಸಾಮಾನ್ಯ ರೈತರಿಗೆ ಆರ್ಥಿಕ ಹೊರೆಯಾಗಿದ್ದು, ಹಿಂದಿನ ಸರ್ಕಾರದ ನಿಯಮಾವಳಿಗಳನ್ನೇ ಮುಂದುವರೆಸಿಕೊಂಡು ಹೋಗಬೇಕು. ಈ ಎಲ್ಲ ಬೇಡಿಕೆಗಳನ್ನು ಶೀಘ್ರದಲ್ಲಿ ಈಡೇರಿಸಬೇಕು. ಭಾರತೀಯ ಕಿಸಾನ ಸಂಘ ಪ್ರದೇಶ ಉತ್ತರ ಪ್ರಾಂತ ವತಿಯಿಂದ ಹೋರಾಟ ಮಾಡಲಾಗುತ್ತದೆ ಎಂದು ಎಚ್ಚರಿಸಿದರು.

ಶಿರಸ್ಥೆದಾರ ಐ.ಎಸ್.ಗಡ್ಡಿ ಮನವಿ ಸ್ವೀಕರಿಸಿ ಮಾತನಾಡಿ, ಜಿಲ್ಲಾಧಿಕಾರಿಗಳ ಮೂಲಕ ತಮ್ಮ ಮನವಿಯನ್ನು ರಾಜ್ಯಪಾಲರಿಗೆ ರವಾನಿಸಲಾಗುತ್ತದೆ ಎಂದು ಹೇಳಿದರು.

ತಾಲೂಕಾಧ್ಯಕ್ಷ ಮಲ್ಲಪ್ಪ ಗಾಣಗೇರ, ಜಿಲ್ಲಾ ಕಾರ್ಯದರ್ಶಿ ಕುಮಾರ ಯಡಹಳ್ಳಿ, ತಾಲೂಕು ಕಾರ್ಯದರ್ಶಿ ಗುರಪ್ಪ ಅನಗವಾಡಿ, ರಮೇಶ ಸಾರವಾಡ, ಗುರುನಾಥ ಹಿರೇಮಠ, ಗುರು ಕಾಖಂಡಕಿ, ಹನುಮಂತ ಬೀಳಂಡಿ, ಎಚ್.ಟಿ.ಮೊಖಾಶಿ, ವೆಂಕಟೇಶ ಸಂಶಿ ಮತ್ತಿತರಿದ್ದರು.



2 ಟಿಎಂಸಿ ನೀರು ಹರಿಸಿ

ಕೃಷ್ಣಾ, ಘಟಪ್ರಭೆ, ಮಲಪ್ರಭೆ ನದಿಯಲ್ಲಿ ನೀರು ಖಾಲಿಯಾಗಿರುವುದರಿಂದ ಜನ ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆಯಾಗಿದ್ದು, ಸಂಬಂಧಪಟ್ಟ ನೀರಾವರಿ ಇಲಾಖೆಯವರು ಪ್ರತಿ ನದಿಗೆ 2 ಟಿಎಂಸಿ ನೀರು ಹರಿಸಬೇಕು. ಬರಗಾಲ ಆವರಿಸುವುದರಿಂದ ಈಗಾಗಲೇ ಬಿತ್ತನೆ ಮಾಡಿದ ಬೆಳೆಗಳು ನಾಟದೆ ಇರುವುದರಿಂದ ಪರಿಹಾರ ಒದಗಿಸಬೇಕು.

ನಾಡಿಗೆ ಹೆಸರಾಂತ ಕಲಾವಿದರನ್ನು ನೀಡಿದ ಬಸವೇಶ್ವರ ಕಾಲೇಜು

ಬಾಗಲಕೋಟೆ: ಬಸವೇಶ್ವರ ಕಲಾ ಮಹಾವಿದ್ಯಾಲಯದ ಸಂಗೀತ ವಿಭಾಗವು ಈ ಭಾಗದ ಸಂಗೀತ ವಿದ್ಯಾರ್ಥಿಗಳಿಗೆ ಕಾಶಿಯಿದ್ದಂತೆ, ಹೆಸರಾಂತ ಸಂಗೀತ ಕಲಾವಿದರನ್ನು ನಾಡಿಗೆ ನೀಡಿದ ಕೀರ್ತಿ ಬಸವೇಶ್ವರ ಕಲಾ ಮಹಾವಿದ್ಯಾಲಯಕ್ಕೆ ಸಲ್ಲುತ್ತದೆ ಎಂದು ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ. ಎಸ್.ಆರ್.ಮುಗನೂರಮಠ ಹೇಳಿದರು.

ಬಿವಿವಿಎಸ್‌ನ ಬಸವೇಶ್ವರ ಕಲಾ ಮಹಾವಿದ್ಯಾಲಯದ ಐಕ್ಯೂಎಸಿ, ಹಿಂದೂಸ್ತಾನಿ ಸಂಗೀತ ವಿಭಾಗ, ಸಾಂಸ್ಕೃತಿಕ ಸಮಿತಿ ಹಾಗೂ ಎನ್‌ಎಸ್‌ಎಸ್ ಘಟಕದ ಸಂಯುಕ್ತ ಆಶ್ರಯದಲ್ಲಿ ಮಹಾವಿದ್ಯಾಲಯದ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ಯೋಗ ದಿನ ಹಾಗೂ ವಿಶ್ವ ಸಂಗೀತ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಗಾಯನ, ತಬಲಾ ಹಾಗೂ ಸಿತಾರ್ ವಿಭಾಗಗಳನ್ನು ಒಳಗೊಂಡಂತೆ ಹಿಂದೂಸ್ತಾನಿ ಸಂಗೀತವನ್ನು ಶಾಸ್ತ್ರೋಕ್ತವಾಗಿ ಬೋಧಿಸುವ ಏಕೈಕ ಮಹಾವಿದ್ಯಾಲಯ ಇದಾಗಿದ್ದು, ಇಲ್ಲಿ ಕಲಿತ ಅನೇಕ ವಿದ್ಯಾರ್ಥಿಗಳು ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿ ಶಿಕ್ಷಕರಾಗಿ ಹಾಗೂ ಕಲಾವಿದರಾಗಿ ತಮ್ಮ ಬದುಕನ್ನು ರೂಪಿಸಿಕೊಂಡಿದ್ದಾರೆ. ರಾಜ್ಯ ಹಾಗೂ ರಾಷ್ಟ್ರಮಟ್ಟಕ್ಕೆ ಸಾವಿರಾರು ಸಂಗೀತ ಕಲಾವಿದರನ್ನು ನೀಡಿದ ಹೆಗ್ಗಳಿಕೆ ಈ ಮಹಾವಿದ್ಯಾಲಯಕ್ಕೆ ಸಲ್ಲುತ್ತದೆ ಎಂದು ತಿಳಿಸಿದರು.

ಹಿಂದೂಸ್ತಾನಿ ಸಂಗೀತ ವಿಭಾಗದ ಮುಖ್ಯಸ್ಥ ಡಾ.ಕೆ.ವಿ.ಮಠ ಮಾತನಾಡಿ, ಯೋಗ ಮತ್ತು ಸಂಗೀತ ಎರಡೂ ಮನಸ್ಸು ಹಾಗೂ ದೇಹದ ಸಮತೋಲನಕ್ಕೆ ಪೂರಕವಾಗಿದ್ದು, ಇಂದಿನ ಯುವಜನತೆ ಈ ಎರಡನ್ನೂ ಜೀವನದ ಭಾಗವಾಗಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಡಾ.ಆರ್.ಎಂ.ಬೆನ್ನೂರ, ಡಾ.ವಿರುಪಾಕ್ಷಿ ಎನ್.ಬಿ., ಡಾ. ಆರ್.ಆರ್. ಅರಶಿನಗೋಡಿ ಹಾಗೂ ಕುಮಾರಿ ಎಸ್.ಎಸ್. ಜೋರಾಪುರ ಉಪಸ್ಥಿತರಿದ್ದರು.

ಯೋಗದ ಮಹತ್ವ ಹಾಗೂ ಸಂಗೀತದ ಸಾಂಸ್ಕೃತಿಕ ಮೌಲ್ಯಗಳನ್ನು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗೆ ಪರಿಚಯಿಸುವ ಉದ್ದೇಶದಿಂದ ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಪೋಷಕರು, ಹಳೆಯ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದರು.



ಶಾಸಕ ವಿಜಯಾನಂದ ಕಾಶಪ್ಪನವರಿಗೆ ಸಚಿವ ಸ್ಥಾನ ನೀಡಲು ಆಗ್ರಹ

ಬಾಗಲಕೋಟೆ: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ನೇತೃತ್ವದ ಸಂಪುಟ ವಿಸ್ತರಣೆಯಲ್ಲಿ ಹುನಗುಂದ ಮತಕ್ಷೇತ್ರದ ಶಾಸಕ ವಿಜಯಾನಂದ ಕಾಶಪ್ಪನವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿ ಕಾಶಪ್ಪನವರ ಅಭಿಮಾನಿ ಬಳಗ ಹಾಗೂ ಬೆಂಬಲಿಗರು ಪ್ರತಿಭಟನೆ ನಡೆಸಿದರು.

ನಗರದ ಪ್ರಮುಖ ಬೀದಿಗಳಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು, ಕಾಶಪ್ಪನವರ ಬೆಂಬಲಿಗರು, ಅಭಿಮಾನಿ ಬಳಗದವರು ಕಾಶಪ್ಪನವರಿಗೆ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಹಾಗೂ ಮುಖ್ಯಮಂತ್ರಿಗಳು ಕಾಶಪ್ಪನವರಿಗೆ ಸಚಿವ ಸ್ಥಾನ ಕೊಡಬೇಕು ಎಂದು ಘೋಷಣೆಗಳನ್ನು ಕೂಗಿದರು.

ಇನ್ನೂ ಕೆಲವೊಂದು ಕಾರ್ಯಕರ್ತರು ರಸ್ತೆಯಲ್ಲಿ ಉರುಳು ಸೇವೆ ಕೂಡ ಮಾಡಿ ಪಕ್ಷದ ನಾಯಕರ ಗಮನಸೆಳೆಯಲು ಪ್ರಯತ್ನಿಸಿದರು. ಕಾಶಪ್ಪನವರ ಅಭಿಮಾನಿಗಳು ಅರೆಬೆತ್ತಲೆ ಮೆರವಣಿಗೆ ನಡೆಸಿ ಸಚಿವ ಸ್ಥಾನ ಕಾಶಪ್ಪನವರಿಗೆ ನೀಡಲೇಬೇಕು ಎಂದು ಆಕ್ರೋಶ ಹೊರಹಾಕಿದರು.

ಪ್ರತಿಭಟನೆಯಲ್ಲಿ ಮಲ್ಲಿಕಾರ್ಜುನ ಚರಂತಿಮಠ, ಸಂತೋಷ ಹೊಕ್ರಾಣಿ, ಚಂದ್ರಶೇಖರ ರಾಠೋಡ, ಅಮರೇಶ ನಾಗೂರ, ಗೋವಿಂದ ಬಳ್ಳಾರಿ, ದಯಾನಂದ ಕಾಶಪ್ಪನವರ್, ಅಮರೇಶ ನಾಗೂರ, ಸೇರಿದಂತೆ ಅನೇಕ ಬೆಂಬಲಿಗರು, ಕಾರ್ಯಕರ್ತರು ಭಾಗವಹಿಸಿದ್ದರು.



ಬಡವರ ಪರ ಧ್ವನಿ ಎತ್ತುವ ನಾಯಕ

ಕಾಶಪ್ಪನವರ ಬೆಂಬಲಿಗರು ಅರಬೆತ್ತಲೆ ಆಗಿ ಆಕ್ರೋಶ ವ್ಯಕ್ತಪಡಿಸಿದರು. ವಿಜಯಾನಂದ ಕಾಶಪ್ಪನವರ ಎರಡು ಬಾರಿ ಶಾಸಕರಾಗಿದ್ದಾರೆ. ಪಕ್ಷದ ನಿಷ್ಠಾವಂತ ಕಾರ್ಯಕರ್ತರು. ಬಾಗಲಕೋಟೆ ಜಿಲ್ಲೆ, ನಾಡಿನ ಅಭಿವೃದ್ಧಿ ಚಿಂತನೆ ಹೊಂದಿದ್ದಾರೆ. ಸಚಿವ ಸ್ಥಾನ ಸಮರ್ಥವಾಗಿ ನಿಭಾಯಿಸುವ ಶಕ್ತಿ ಹೊಂದಿದ್ದಾರೆ. ಯುವ ನಾಯಕರಾಗಿದ್ದಾರೆ. ಹೀಗಾಗಿ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿದರು. ಅಂಬೇಡ್ಕರ್, ಬುದ್ಧ, ಬಸವ ತತ್ವ ಮೈಗೂಡಿಸಿಕೊಂಡಿರುವ ವಿಜಯಾನಂದ ಕಾಶಪ್ಪನವರ ಸರ್ವ ಸಮಾ ಯಶಸ್ವಿಯಾಗಿ ಮುನ್ನಡೆಸುವಲ್ಲಿ ಮುಖ್ಯಪಾತ್ರ ವಹಿಸಿದ್ದಾರೆ. ಬಡವರ, ದಿನ ದಲಿತರ ಪರ ಧ್ವನಿ ಎತ್ತುವ ನಾಯಕರಾಗಿದ್ದು, ಈ ಸಾರಿ ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು.

ಮತಪಟ್ಟಿಯಲ್ಲಿ ಹೆಸರು ಬಿಟ್ಟು ಹೋಗದಂತೆ ಜಾಗೃತಿ ವಹಿಸಿ

ಕಲಾದಗಿ: ಮತದಾರರ ಪರಿಷ್ಕರಣೆ ಬಗ್ಗೆ ಜನರಲ್ಲಿ ತಿಳುವಳಿಕೆ ಮೂಡಿಸುವುದು ಹಾಗೂ ಮತಪಟ್ಟಿಯಲ್ಲಿ ಮತದಾರರ ಹೆಸರು ಬಿಟ್ಟು ಹೋಗದಂತೆ ಜಾಗೃತಿ ವಹಿಸುವುದು ಬಿಎಲ್‌ಎಗಳ ಜವಾಬ್ದಾರಿಯಾಗಿದ್ದು ಶೀಘ್ರವೇ ಬೂತ ಮಟ್ಟದಲ್ಲಿ ಜಾಗ್ರತಿ ಮೂಡಿಸಿ ಎಂದು ಶಾಸಕ ಜೆ.ಟಿ.ಪಾಟೀಲ ಹೇಳಿದರು.

ಬಾಗಲಕೋಟೆ ಜಿಲ್ಲಾ ಕಾಂಗ್ರೆಸ್ ಕಾರ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಬೀಳಗಿ ಮತಕ್ಷೇತ್ರದ ಕಲಾದಗಿ ಬ್ಲಾಕ್‌ಮಟ್ಟದ ಮತಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಕುರಿತು ಮತಗಟ್ಟೆ ಮಟ್ಟದ ಮುಖಂಡರು ಹಾಗೂ ಕಾರ್ಯಕರ್ತರಿಗೆ ವಿಶೇಷ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಮತಕ್ಷೇತ್ರದ ಪ್ರತಿಯೊಂದು ಗ್ರಾಮದಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆ ಬಗ್ಗೆ ವಾರ್ಡ್ ಸಭೆಗಳ ಮೂಲಕ ಕಾರ್ಯಕರ್ತರಲ್ಲಿ ಜಾಗೃತಿ ಮೂಡಿಸಿ. ಮನೆಮನೆಗೆ ತೆರಳಿ ಪ್ರತಿಯೊಬ್ಬ ಅರ್ಹ ಮತದಾರರ ಹೆಸರು ಮತಪಟ್ಟಿಯಿಂದ ಬಿಟ್ಟು ಹೋಗದಿರುವ ಬಗ್ಗೆ ಮಾಹಿತಿ ಪಡೆದು ತಕ್ಷಣವೇ ಬಿಎಲ್‌ಎಗಳ ಗಮನಕ್ಕೆ ತರಬೇಕು. ನಮ್ಮ ಪ್ರತಿಯೊಂದು ಮತವನ್ನು ಉಳಿಸುವ ಉದ್ದೇಶದಿಂದ ಹಮ್ಮಿಕೊಂಡಿರುವ ಈ ಅಭಿಯಾನವನ್ನು ಕಾರ್ಯಕರ್ತರು ಯಶಸ್ವಿಗೊಳಿಸಬೇಕೆಂದು ಹೇಳಿದರು.

ಕಲಾದಗಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಡಾ.ಬಸವರಾಜ ಸಂಶಿ, ಕೆಪಿಸಿಸಿ ಉಪಾಧ್ಯಕ್ಷ ಎಂ.ಬಿ.ಸೌದಾಗರ, ಕೆಪಿಸಿಸಿ ಮಾಜಿ ಉಪಾಧ್ಯಕ್ಷ ಬಸವಪ್ರಭು ಸರನಾಡಗೌಡ, ತಾಪಂ ಮಾಜಿ ಉಪಾಧ್ಯಕ್ಷ ಸಂಗಣ್ಣ ಮುಧೋಳ, ಪಾಂಡಪ್ಪ ಪೊಲೀಸ್ ನಾರಾಯಣ ಹಾದಿಮನಿ, ಹನಮಂತ ಡೋಣಿ, ರಾಮಚಂದ್ರ ಯಡಹಳ್ಳಿ, ಪ್ರವೀಣ ಚಿಕ್ಕೂರ, ಹಣಮಂತ ನಾಗನೂರ, ನಿಂಗಪ್ಪ ಗಸ್ತಿ, ಪ್ರಭು ಹಳ್ಳೂರ, ಗಿರೀಶ ನಾಡಗೌಡ್ರ, ಅಶೋಕ ಕೊಪ್ಪದ, ಶ್ರೀನಿವಾಸ ಕಲಾದಗಿ ಸೇರಿದಂತೆ ಇತರರಿದ್ದರು.



ಆರೋಗ್ಯಕರ ಜೀವನಕ್ಕೆ ನಿತ್ಯ ಯೋಗ ಮಾಡಿ: ನೀಲಣ್ಣವರ

ರನ್ನಬೆಳಗಲಿ: ಲಯನ್ಸ್ ಕ್ಲಬ್ ಮಹಾಲಿಂಗಪುರ, ಗ್ರೀನ್ ಬೇಸಿನ್ ಹಾಗೂ ಅಲ್ಟ್ರಾಟೆಕ್ ಸಿಮೆಂಟ್ ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಯೋಗ ದಿನಾಚರಣೆಯನ್ನು ಪಟ್ಟಣದ ಸುಕೂನ್ ಹೋಟೆಲ್ ಆವರಣದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಬೆಂಗಳೂರು ನಗರದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲ ದಿಂದ ಎಂ ಎಸ್ ಸಿ ಯೋಗಾ ಥೆರಪಿ ಅಂಡ್ ಕೌನ್ಸಿಲಿಂಗ್ ಪದವಿ ಪಡೆದ ಯೋಗ ಗುರು ರಾಘವೇಂದ್ರ ನೀಲಣ್ಣವರ ಅವರ ನೇತೃತ್ವದಲ್ಲಿ ನಡೆದ ಯೋಗಾಭ್ಯಾಸ ಕಾರ್ಯಕ್ರಮದಲ್ಲಿ ವಿವಿಧ ಯೋಗಾಸನಗಳು ಹಾಗೂ ಪ್ರಾಣಾಯಾಮಗಳ ಮೂಲಕ ಯೋಗದ ಮಹತ್ವವನ್ನು ತಿಳಿಸಿ ಯೋಗ ತರಬೇತಿಯನ್ನು ನೀಡಿದ ಅವರು ನಿತ್ಯ ಜೀವನದಲ್ಲಿ ಯೋಗಕ್ಕೆ ಸಮಯವನ್ನು ನೀಡಿ ಯೋಗವನ್ನು ಮೈಗೂಡಿಸಿಕೊಳ್ಳಿ ಎಂದು ತಿಳಿಸಿದರು.

ಸರ್ಕಲ್ ಇನ್ಸ್ಪೆಕ್ಟರ್ ಆರ್.ಆರ್. ಪಾಟೀಲ ಅವರು ಮಾತನಾಡಿ, ಇಂದಿನ ಒತ್ತಡದ ಜೀವನಶೈಲಿಯಲ್ಲಿ ದೈಹಿಕ ಹಾಗೂ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಯೋಗ ಅತ್ಯಂತ ಅವಶ್ಯಕವಾಗಿದೆ. ಪ್ರತಿಯೊಬ್ಬರೂ ಯೋಗವನ್ನು ತಮ್ಮ ದಿನನಿತ್ಯದ ಜೀವನದ ಭಾಗವನ್ನಾಗಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಲಯನ್ಸ್ ಕ್ಲಬ್ ಅಧ್ಯಕ್ಷ ಸಿದ್ದು ನಕಾತಿ ಅಧ್ಯಕ್ಷತೆ ವಹಿಸಿದ್ದರು. ಕ್ಲಬ್‌ನ ಖಜಾಂಚಿ ಪ್ರಶಾಂತ ಅಂಗಡಿ, ರಮೇಶ ಶೆಟ್ಟರ, ಪ್ರಕಾಶ ತಾಳಿಕೋಟಿ, ಹುಚ್ಚೇಶ ವಡ್ಡರ, ಕಿರಣ ಸಣ್ಣಕ್ಕಿ, ಮಹಾಲಿಂಗ ನರಗಟ್ಟಿ, ರವಿ ಬಗನಾಳ, ಶಶಿಧರ ಉಳ್ಳೆಗಡ್ಡಿ, ಶೈಲಾ ಶೆಟ್ಟರ, ಮಂಗಲಾ ತಾಳಿಕೋಟಿ, ಮಹಾನಂದಾ ತಾಳಿಕೋಟಿ, ರಾಜು ಡಾಂಗೆ, ಸಂತೋಷ ತಾಳಿಕೋಟಿ, ವಿಕಾಸ ಕೆರೂರ, ಅಲ್ಟ್ರಾಟೆಕ್ ಸಂಸ್ಥೆಯ ಚೌಗಲೇ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು. ರನ್ನಬೆಳಗಲಿ ಯೋಗ ಬಳಗದ ಸದಸ್ಯರು ಹಾಗೂ ಪಟ್ಟಣದ ವಿವಿಧ ಶಾಲೆಯ ವಿದ್ಯಾರ್ಥಿನಿಯರು ಉತ್ಸಾಹದಿಂದ ಭಾಗವಹಿಸಿ ಯೋಗ ಪ್ರದರ್ಶನ ನೀಡಿದರು. ಯೋಗದ ಮೂಲಕ ಆರೋಗ್ಯ ಜಾಗೃತಿ ಮೂಡಿಸುವ ಉದ್ದೇಶದಿಂದ ಆಯೋಜಿಸಲಾದ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.



ಅಗ್ನಿವೀರರಾಗಿ ಆಯ್ಕೆಯಾದ ಯುವಕರಿಗೆ ಸನ್ಮಾನ



ಹುನಗುಂದ: ಅಗ್ನಿಪಥ ಯೋಜನೆಯಡಿ ಭಾರತೀಯ ಸಶಸ್ತ್ರ ಪಡೆಗೆ ಅಗ್ನಿವೀರರಾಗಿ ಆಯ್ಕೆಯಾದ ಹುನಗುಂದ ತಾಲೂಕಿನ 9 ಜನ ಯುವಕರನ್ನು ಹುನಗುಂದ ಕಬ್ಬಡ್ಡಿ ತಂಡದಿಂದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಕಬ್ಬಡ್ಡಿ ಪ್ರೋತ್ಸಾಹಕರಾದ ಮಲ್ಲಣ್ಣ ಕಮರಿ ಮಾತನಾಡಿ, ಭಾರತ ದೇಶದ ಯೋಧರಾಗಿ ದೇಶ ಸೇವೆ ಮಾಡುವುದು ಬಹಳ ಮಹತ್ವ ಮತ್ತು ಅದ್ಭುತ ಕಾರ್ಯವಾಗಿದೆ. ದೇಶ ಸೇವೆ ಮಾಡುವುದರ ಜೊತಗೆ ನಿಮ್ಮ ಬಿಡುವಿನ ಸಮಯದಲ್ಲಿ ನಿಮ್ಮೂರಿಗೆ ಬಂದಾಗ ಹುನಗುಂದ ತಾಲೂಕಿನ ನೂರಾರು ಯುವಕರಿಗೆ ದೇಶ ಸೇವೆ ಮಾಡುವ ಅಭಿರುಚಿ ಮೂಡಿಸಿ ನೂರಾರು ಯುವ ಶಕ್ತಿಯನ್ನು ದೇಶ ಸೇವೆಗೆ ಕರೆದೊಯ್ಯುವ ಕೆಲಸ ನಿಮ್ಮಿಂದ ಆಗಬೇಕು ಎಂದರು.

ಪತ್ರಕರ್ತ ಮಲ್ಲಿಕಾರ್ಜುನ ಹೊಸಮನಿ ಮಾತನಾಡಿ, ಈ ದೇಶದಲ್ಲಿ ಗಡಿ ಕಾಯುವ ಸೈನಿಕ, ದೇಶಕ್ಕೆ ಅನ್ನವನ್ನು ನೀಡುವ ರೈತ, ದೇಶದ ಪ್ರತಿಯೊಬ್ಬರಿಗೂ ಅಕ್ಷರ ದಾನ ಮಾಡುವ ಶಿಕ್ಷಕರು ಈ ದೇಶದ ಸರ್ವಶ್ರೇಷ್ಠ ಮೂರು ವ್ಯಕ್ತಿಗಳಾಗಿದ್ದು. ಅವರಲ್ಲಿ ಒಬ್ಬರಾಗಿ ದೇಶ ಕಾಯುವ ಕೆಲಸಕ್ಕೆ ತಾವು ಆಯ್ಕೆಯಾಗಿದ್ದು ಸಂತಸದ ವಿಷಯ. ಈ ದೇಶದ ಹೆಮ್ಮೆ ವೀರ ಸೈನಿಕರಾಗಿ ದೇಶ ಕಾಯುವ ಜೊತೆಗೆ ಈ ದೇಶದ ಪ್ರತಿಯೊಬ್ಬ ಯುವಶಕ್ತಿಯನ್ನು ದೇಶ ಸೇವೆಗೆ ಅಣಿಗೊಳಿಸುವ ಕೆಲಸ ನಿಮ್ಮಿಂದಾಗಬೇಕು. ಇಂದು ಕೇವಲ ತಾಲೂಕಿನಿಂದ ಒಂಬತ್ತು ಜನ ಸೈನಿಕರು ಅಗ್ನಿಪಥ ಯೋಜನೆ ಅಡಿಯಲ್ಲಿ ವೀರಯೋಧರಾಗಿ ಆಯ್ಕೆಯಾದ ನೀವುಗಳು ಮುಂದಿನ ದಿನಗಳಲ್ಲಿ ನಿಮ್ಮಗಳ ಪ್ರೇರಣೆಯಿಂದ ಸಾವಿರಾರು ಯುವಶಕ್ತಿ ದೇಶ ಸೇವೆಗೆ ಆಯ್ಕೆಯಾಗುವಂತಾಗಲಿ ಎಂದರು.

ಬಸವರಾಜ ಅಂಬಿಗೇರ, ಪೀರೋಜಖಾನ ಕಂದಗಲ್ಲ, ವಿನೋಧ ಸಂದಿಮನಿ, ಮಹಾಂತೇಶ ಭಜಂತ್ರಿ, ನಬಿರಹುಸೇನ ಕಂದಗಲ್ಲ, ವಿಶ್ವನಾಥ ಹಿರೇಮಠ ಸೇರಿದಂತೆ ಕಬ್ಬಡ್ಡಿ ಕ್ರೀಡಾಪಟುಗಳು ಹಾಗೂ ಮುಖಂಡರು ಉಪಸ್ಥಿತರಿದ್ದರು.

ವಿದ್ಯುತ್ ಖಾಸಗೀಕರಣಕ್ಕೆ ವಿರೋಧ

ಕೆರೂರ: ರಾಜ್ಯ ಸರ್ಕಾರ ಎಲ್ಲ ಹೆಸ್ಕಾಂಗಳನ್ನು ಖಾಸಗೀಕರಣ ಮಾಡಲು ಹೊರಟಿರುವುದನ್ನು ವಿರೋಧಿಸಿ ಪಟ್ಟಣದ ಹೆಸ್ಕಾಂ ಕಚೇರಿಯಲ್ಲಿ ಸೋಮವಾರ ರೈತರು ಪ್ರತಿಭಟನೆ ನಡೆಸಿದರು.

ಪ್ರತಿಭಟನಾ ನೇತೃತ್ವ ವಹಿಸಿದ ರೈತ ಮುಖಂಡ ಯಲ್ಲಪ್ಪ ಹೆಗಡೆ ಮಾತನಾಡಿ, ವಿದ್ಯುತ್ ಖಾಸಗೀಕರಣ ಮಾಡುವುದರಿಂದ ರೈತರಿಗೆ ಹಾಗೂ ಜನಸಾಮಾನ್ಯರಿಗೆ ತೊಂದರೆಗಳು ಉಂಟಾಗಲಿವೆ. ರೈತರಿಗೆ ಸಿಗುವ ಉಚಿತ್ ವಿದ್ಯುತ್, ಗೃಹಜ್ಯೋತಿ ಸೇರಿದಂತೆ ಇನ್ನಿತರ ಯೋಜನೆಗಳು ನಿಲ್ಲುತ್ತವೆ. ಇದರಿಂದ ರಾಜ್ಯಾದ್ಯಂತ ಸಾವಿರಾರು ಬಡ ರೈತ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಲಿವೆ ಎಂದರು.

ಕೆರೂರ ವಲಯದ ರೈತ ಸಂಘದ ಅಧ್ಯಕ್ಷ ಗೋವಿಂದಪ್ಪ ಬೆಳಗಂಟಿ ಮಾತನಾಡಿ, ಖಾಸಗೀಕರಣದಿಂದ ರೈತರಿಗೆ ಆರ್ಥಿಕವಾಗಿ ಪೆಟ್ಟು ಬೀಳಲಿದೆ. ಸರಿಯಾದ ಮಳೆ ಬೆಳೆ ಇಲ್ಲದೆ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ರಾಜ್ಯ ಸರ್ಕಾರವು ಈ ನಿರ್ಧಾರವನ್ನು ಕೂಡಲೆ ಕೈಬಿಡಬೇಕೆಂದು ಒತ್ತಾಯಿಸಿದರು.

ವಿದ್ಯುತ್ ಖಾಸಗೀಕರಣವನ್ನು ಹಿಂಪಡೆಯಬೇಕು. ಒಂದು ವೇಳೆ ಹಿಂಪಡೆಯದೆ ಇದ್ದರೆ ಮುಂದಿನ ದಿನಗಳಲ್ಲಿ ಹೋರಾಟ ಮಾಡುವುದಾಗಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು. ರೈತ ಮುಖಂಡರಾದ ಭೀಮಷಿ ಮಾಲಗಿ, ಸುರೇಶ ಪೂಜೇರಿ, ರಾಮಚಂದ್ರ ಮೈಲಾರಿ, ಹುಸೇನಸಾಬ ಮಾಲದಾರ, ಭರಮಪ್ಪ ಉದಗಟ್ಟಿ, ಬಸವರಾಜ ಬನ್ನಿದಿನ್ನಿ ಹಾಗೂ ಸ್ಥಳೀಯ ಮತ್ತು ಗ್ರಾಮೀಣ ಭಾಗದ ರೈತರು ಭಾಗವಹಿಸಿದ್ದರು.



ಆರೋಗ್ಯ ಕಾಪಾಡಿಕೊಳ್ಳಲು ಯೋಗ ಅವಶ್ಯಕ

ಲೋಕಾಪುರ: ಇಂದಿನ ಒತ್ತಡದ ಜೀವನದಲ್ಲಿ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಯೋಗ ಮನುಷ್ಯನಿಗೆ ಅತ್ಯವಶ್ಯಕ, ಇದು ಕೇವಲ ವ್ಯಾಯಾಮವಲ್ಲ, ಬದಲಿಗೆ ದೇಹ ಮತ್ತು ಮನಸ್ಸನ್ನು ಸಮತೋಲನದಲ್ಲಿಡುವ ಜೀವನಶೈಲಿಯಾಗಿದೆ ಎಂದು ಬೆಂಗಳೂರಿನ ದತ್ತ ಯೋಗ ಕೇಂದ್ರದ ಸಂಸ್ಥಾಪಕಿ ಅಶ್ವಿನಿ ತಾಮ್ರಪಾಣಿ ಹೇಳಿದರು.

ಪಟ್ಟಣದಲ್ಲಿ ಶನಿವಾರ ಹಮ್ಮಿಕೊಂಡ ಯೋಗ ದಿನಾಚರಣೆ ಪ್ರಯುಕ್ತ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಅವರು, ಮನಸ್ಸು ಮತ್ತು ದೇಹವನ್ನು ಶುದ್ಧವಾಗಿಡುವ ಶಕ್ತಿ ಯೋಗಕ್ಕಿದೆ, ಹಾಗಾಗಿ ಪ್ರತಿಯೊಬ್ಬರು ದಿನಕ್ಕೆ ಕನಿಷ್ಠ ಅರ್ಧ ಗಂಟೆಯಾದರೂ ಯೋಗ ಮಾಡಿ ದೇಹದಲ್ಲಿರುವ ಕಾಯಿಲೆ, ನೋವನ್ನು ದೂರಮಾಡಿಕೊಳ್ಳಿ ಯೋಗದಲ್ಲಿ 84 ಆಸನಗಳಿವೆ, ಸ್ವಾಸ್ತಿಕ, ಸಿದ್ಧ, ಪದ್ಮ, ತಪ್ಪಿಸಿನ ಆಸನಗಳು ಬಹಳ ಮುಖ್ಯವಾದುದು ಎಂದು ತಿಳಿಸಿದರು.

ಬಸವೇಶ್ವರ ಅಂತಾರಾಷ್ಟ್ರೀಯ ಪಬ್ಲಿಕ್ ಶಾಲೆಯ ಪ್ರಾಂಶುಪಾಲ ಪರಶುರಾಮ ವನಸಿ ಮಾತನಾಡಿ, ಮನಸ್ಸು ಮತ್ತು ದೇಹವನ್ನು ಏಕಾಗ್ರತೆಯಿಂದ ಇಡಬೇಕಾದರೆ ಎಲ್ಲರೂ ಯೋಗ ಮಾಡಬೇಕು, ಯೋಗದಿಂದ ಆಯುಸ್ಸು ವೃದ್ಧಿಯಾಗುತ್ತದೆ, ಯೋಗದಿಂದ ಮಾತ್ರ ರೋಗಮುಕ್ತ ಭಾರತ ಕಾಣಬಹುದು ಎಂದರು.

ಹಿರೇಮಠದ ಡಾ.ಚಂದ್ರಶೇಖರ ಸ್ವಾಮೀಜಿ ಮಾತನಾಡಿ ಯೋಗದಿಂದ ತುಂಬ ಉಪಯೋಗವಿದೆ, ಊಟ ಬಿಟ್ಟರು ಯೋಗ ಬಿಡಬಾರದು, ಆರೋಗ್ಯ ಭಾಗ್ಯದ ಮುಂದೆ ಮನುಷ್ಯನಿಗೆ ಬೇರೆ ಯಾವ ಭಾಗ್ಯವೂ ಇಲ್ಲ, ಯೋಗ ರೋಗವನ್ನು ಹತ್ತಿರ ಬಿಟ್ಟುಕೊಳ್ಳುವುದಿಲ್ಲ, ಜೀವನ ಶೈಲಿ ಮತ್ತು ಆಹಾರ ಪದ್ಧತಿ ಮೊದಲು ಬದಲಾವಣೆಯಾಗಬೇಕು, ಯೋಗಕ್ಕೆ ರೋಗ ನಿರೋಧಕ ಶಕ್ತಿಯಿದೆ, ಯೋಗದ ಜೊತೆಗೆ ಒಳ್ಳೊಳ್ಳೆ ಆಹಾರ ಸೇವಿಸುವುದನ್ನು ರೂಢಿಸಿಕೊಳ್ಳಬೇಕು ಎಂದು ತಿಳಿಸಿದರು.

ವಿವಿಧ ಬಗೆಯ ನೃತ್ಯ ಹಾಗೂ ಯೋಗಗಳನ್ನು ಪ್ರದರ್ಶಿಸಿದರು. ಎಲ್ಲ ವಿದ್ಯಾರ್ಥಿಗಳು ಹಾಗೂ ಶಿಕ್ಷಕವೃಂದ ಯೋಗವನ್ನು ಮಾಡಿದರು. ಪ್ರಾಚಾರ್ಯ ಎಸ್.ಎಂ.ಹುದ್ದಾರ, ಬಸವೇಶ್ವರ ಬಾಲಕಿಯರ ಪ್ರೌಢಶಾಲೆಯ ಮುಖ್ಯ ಶಿಕ್ಷಕಿ ಶಿವನಗೌಡ ಪಾಟೀಲ, ಬಸವೇಶ್ವರ ಅಂತಾರಾಷ್ಟ್ರೀಯ ಶಾಲೆಯ ಶಿಕ್ಷಕ ವೃಂದ, ವಿದ್ಯಾರ್ಥಿಗಳು ಯೋಗದಲ್ಲಿ ಪಾಲ್ಗೊಂಡಿದ್ದರು.



ಕಿರುಸುದ್ದಿ

ವಿದ್ಯುತ್ ಖಾಸಗೀಕರಣ ಪ್ರಕ್ರಿಯೆ ಕೈಬಿಡಲು ಮನವಿ

ಬಸವನಬಾಗೇವಾಡಿ: ರಾಜ್ಯ ಸರ್ಕಾರ ವಿದ್ಯುತ್ ಸರಬರಾಜು ವ್ಯವಸ್ಥೆಯನ್ನು ಖಾಸಗೀಕರಣ ಮಾಡುತ್ತಿರುವುದನ್ನು ಕೈಬಿಡಬೇಕೆಂದು ಬಿಜೆಪಿ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ರಾಹುಲ ಕಲಗೊಂಡ ಒತ್ತಾಯಿಸಿದ್ದಾರೆ. ವಿದ್ಯುತ್ ನಿಗಮಗಳು ಖಾಸಗೀಕರಣವಾದರೆ ಈಗಾಗಲೇ ರೈತರ ಜಮೀನುಗಳ ಕೃಷಿ ಪಂಪ್ ಸೆಟ್ ಗಳಿಗೆ ಉಚಿತ ವಿದ್ಯುತ್, ಗೃಹಜ್ಯೋತಿ ಸೇರಿ ಒದಗಿಸಲಾಗುತ್ತಿರುವ ಯೋಜನೆಗಳು ಸ್ಥಗಿತಗೊಳ್ಳುತ್ತವೆ, ರಾಜ್ಯ ಸರ್ಕಾರವು ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಖಾಸಗಿ ಕಂಪನಿಗಳಿಗೆ ವಹಿಸಲು ಮುಂದಾಗಿರುವ ವಿಷಯ ಸಾರ್ವಜನಿಕರಲ್ಲಿ, ರೈತರಲ್ಲಿ, ಕಾರ್ಮಿಕರಲ್ಲಿ ಹಾಗೂ ವಿದ್ಯುತ್ ಗ್ರಾಹಕರಲ್ಲಿ ತೀವ್ರ ಆತಂಕ ಮೂಡಿಸಿದೆ. ವಿದ್ಯುತ್ ಎಂಬುದು ಜನಸಾಮಾನ್ಯರ ಮೂಲಭೂತ ಅವಶ್ಯಕತೆಯಾಗಿದ್ದು ಇದನ್ನು ಸಂಪೂರ್ಣವಾಗಿ ಖಾಸಗಿ ಸಂಸ್ಥೆಗಳ ನಿಯಂತ್ರಣಕ್ಕೆ ನೀಡುವುದು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿದೆ. ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಧಾರವನ್ನು ಹಿಂಪಡೆಯಬೇಕೆಂದು ಒತ್ತಾಯಿಸಿದರು.

ರಸ್ತೆ ಕಾಮಗಾರಿ ವಿಳಂಬ: ಸಾರ್ವಜನಿಕರ ಪರದಾಟ

ಝಳಕಿ: ಸಮೀಪದ ಅರ್ಜನಾಳ ಗ್ರಾಮದ ಎನ್ ಎಚ್ 52ರಿಂದ ಅರ್ಜನಾಳ ಗ್ರಾಮದವರೆಗಿನ ಡಾಂಬರೀಕರಣ ರಸ್ತೆಯ ಕಾಮಗಾರಿ ಚಾಲನೆ ನೀಡಿ ವರ್ಷ ಕಳೆದರೂ ರಸ್ತೆ ಕಾಮಗಾರಿ ಇನ್ನೂ ಆಮೆಗತಿಯಲ್ಲಿ ಸಾಗುತ್ತಿದೆ ಎಂದು ರೈತ ಮುಖಂಡ ಚಿದಾನಂದಗೌಡ ರಾಮಗೊಂಡಪ್ಪಗೌಡ ಪಾಟೀಲ ಆರೋಪಿಸಿದರು. ಎನ್ ಎಚ್ 52ರಿಂದ ಅರ್ಜನಾಳ ಗ್ರಾಮದವರೆಗೆ ರಸ್ತೆ ಕಾಮಗಾರಿ ವಿಳಂಬವಾಗಿದ್ದರಿಂದ ಇಲ್ಲಿ ಸಾರ್ವಜನಿಕರು ಹಾಗೂ ಶಾಲಾ ಮಕ್ಕಳು ಬಹಳಷ್ಟು ತೊಂದರೆ ಅನುಭವಿಸುತ್ತಿದ್ದಾರೆ. ಇಲ್ಲಿ ರಸ್ತೆಯ ಮೇಲೆ ಬರೀ ಕಲ್ಲು ಮಣ್ಣು ಹಾಕಿ ಸಮತಟ್ಟು ಮಾಡಿ ಬಿಟ್ಟಿದ್ದಾರೆ. ಉಳಿದ ಕೆಲಸ ಇನ್ನೂ ಅಪೂರ್ಣವಾಗಿದೆ. ಜನಪ್ರತಿನಿಧಿಗಳು, ಅಧಿಕಾರಿಗಳು ಗಮನಹರಿಸಿ ಕಾಮಗಾರಿ ಸಂಪೂರ್ಣಗೊಳಿಸಬೇಕು. ಇಲ್ಲದಿದ್ದರೆ ರಸ್ತೆಗಿಳಿದು ಹೋರಾಟ ಮಾಡಬೇಕಾಗುತ್ತದೆ ಎಂದು ಅರ್ಜನಾಳ ಎಚ್ಚರಿಕೆ ನೀಡಿದ್ದಾರೆ.

ದುಶ್ಚಟಗಳಿಂದ ದೂರವಿರಿ



ಸಿಂದಗಿ: ಇಂದಿನ ಯುವ ಪೀಳಿಗೆ ಮೊಬೈಲ್ ಮತ್ತು ದುಶ್ಚಟಗಳ ಹವ್ಯಾಸಗಳಿಗೆ ಬಲಿಯಾಗುತ್ತಿದ್ದಾರೆ. ಯೋಗ ಮಾಡುವ ಮೂಲಕ ಸದೃಢ ಜೀವನ ಶೈಲಿಯನ್ನು ಅಳವಡಿಸಿಕೊಳ್ಳಬೇಕು ಎಂದು ಸಿಂದಗಿ ವಿಧಾನಸಭಾ ಮತಕ್ಷೇತ್ರದ ಬಿಜೆಪಿ ಪಕ್ಷದ ಮುಖಂಡ ಶ್ರೀಶೈಲಗೌಡ ಬಿರಾದಾರ ಮಾಗಣಗೇರಿ ಹೇಳಿದರು. ನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಆವರಣದಲ್ಲಿನ ಎಪಿಎಂಸಿ ಯೋಗಾ ಗ್ರೂಪ್ ಆಯೋಜಿಸಿರುವ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಅವಿರತ ಶ್ರಮದಿಂದಾಗಿ ಇಂದು ಭಾರತದ ಈ ಪ್ರಾಚೀನ ಕಲೆ ಜಗತ್ತಿನಾದ್ಯಂತ ಪಸರಿಸಿದೆ. ಇಂದು ಇಡೀ ವಿಶ್ವವೇ ಭಾರತದ ಕಡೆ ಮುಖ ಮಾಡಿ ಯೋಗವನ್ನು ಅಪ್ಪಿಕೊಳ್ಳುತ್ತಿದೆ ಎಂದರೆ ಅದಕ್ಕೆ ನಮ್ಮ ಸಂಸ್ಕೃತಿಯಲ್ಲಿರುವ ಶಕ್ತಿಯೇ ಕಾರಣ. ಸಿಂದಗಿ ಮತಕ್ಷೇತ್ರದ ಪ್ರತಿಯೊಂದು ಹಳ್ಳಿಯಲ್ಲೂ ಇಂತಹ ಯೋಗ ಶಿಬಿರಗಳು ನಡೆಯಬೇಕು. ದಿನಕ್ಕೆ ಕೇವಲ ಅರ್ಧ ಗಂಟೆ ಯೋಗ ಮಾಡುವುದರಿಂದ ನಾವು ನಮ್ಮ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದರು. ಅಶೋಕ ವಾರದ, ಮಹಾಂತೇಶ ಪಟ್ಟಣಶೆಟ್ಟಿ, ಮಲ್ಲು ವಾರದ, ಡಾ.ರವಿ ಗೋಲಾ, ಡಾ.ಪ್ರಶಾಂತ ಬಮ್ಮನ್ನಿ ಹಾಗೂ ಶಾಂತು ರಾಣಾಗೋಳ ಸೇರಿದಂತೆ ಎಪಿಎಂಸಿ ಯೋಗಾ ಗ್ರೂಪ್ ಸದಸ್ಯರು ಇದ್ದರು.

ಸರಣಿ ಕಳ್ಳತನಕ್ಕೆ ಯತ್ನ

ಕೊಲ್ಹಾರ: ಪಟ್ಟಣದಲ್ಲಿ ಶುಕ್ರವಾರ ರಾತ್ರಿ ದುಷ್ಕರ್ಮಿಗಳು ಹಲವು ಅಂಗಡಿಗಳ ಶಟರ್‌ಗಳನ್ನು ಮುರಿದು ಕಳ್ಳತನಕ್ಕೆ ಯತ್ನಿಸಿದ ಘಟನೆ ನಡೆದಿದೆ. ಕೆಲ ಅಂಗಡಿಗಳಲ್ಲಿ ನಗದು ಹಣ ಕಳುವಾಗಿದ್ದು, ಇನ್ನು ಕೆಲವು ಅಂಗಡಿಗಳಲ್ಲಿ ಶಟರ್‌ಗಳನ್ನು ಮುರಿದು ಒಳ ಪ್ರವೇಶಿಸಲು ಪ್ರಯತ್ನಿಸಿದರೂ ಯಾವುದೇ ಮೌಲ್ಯಯುತ ವಸ್ತುಗಳು ಕಳುವಾಗಿಲ್ಲ ಎಂದು ತಿಳಿದುಬಂದಿದೆ. ಸಿದ್ರಾಮಯ್ಯ ಗಣಾಚಾರಿ, ಸುನೀಲ ಮಡ್ಡನವರ, ರಾಜು ರೇಷ್ಮಿ ಹಾಗೂ ಸಚಿನ್ ಕಣಬೂರ ಅವರ ಅಂಗಡಿಗಳ ಶಟರ್ ಗಳನ್ನು ಮುರಿದು ಕಳ್ಳತನಕ್ಕೆ ಯತ್ನಿಸಲಾಗಿದೆ. ಘಟನೆಯಿಂದ ವ್ಯಾಪಾರಿಗಳಲ್ಲಿ ಆತಂಕ ಉಂಟಾಗಿದ್ದು, ಪಟ್ಟಣದಲ್ಲಿ ರಾತ್ರಿ ವೇಳೆ ಪೊಲೀಸ್ ಗಸ್ತು ಹೆಚ್ಚಿಸುವಂತೆ ಸಾರ್ವಜನಿಕರು ಒತ್ತಾಯಿಸಿದ್ದಾರೆ. ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿ ಕಳ್ಳರ ಪತ್ತೆಗೆ ತನಿಖೆ ಕೈಗೊಂಡಿದ್ದಾರೆ. ಕಳ್ಳತನದ ಯತ್ನ ನಡೆಸಿದ ಆರೋಪಿಗಳನ್ನು ಶೀಘ್ರ ಬಂಧಿಸುವಂತೆ ವ್ಯಾಪಾರಿಗಳು ಆಗ್ರಹಿಸಿದ್ದಾರೆ.



ಮುದ್ದೇಬಿಹಾಳ: ಅಂಬೇಡ್ಕರ್ ಸಮುದಾಯ ಭವನದ ಪಕ್ಕದಲ್ಲಿ ಇರುವ ಸರಕಾರಿ ಪಿಯು ಕಾಲೇಜು ಕೊಠಡಿಯಲ್ಲಿ ವಿಧಾನಸಭಾ ಮತಕ್ಷೇತ್ರದ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷದ ಪ್ರತಿನಿಧಿಗಳಿಗೆ ಮತದಾರ ಪಟ್ಟಿ ಹಾಗೂ ಮತದಾನ ಗುರುತಿನ ಚೀಟಿ ಕುರಿತು ಅಧಿಕಾರಿ ಸೌದಗರ ಮಾಹಿತಿ ನೀಡಿದರು. ತಹಶೀಲ್ದಾರ್ ಕೀರ್ತಿ ಚಾಲಕ ಸೇರಿದಂತೆ ಅಧಿಕಾರಿಗಳು ಉಪಸ್ಥಿತರಿದ್ದರು.

ಯೋಗದಿಂದ ಆರೋಗ್ಯಕರ ಜೀವನ ಶೈಲಿ ಸಾಧ್ಯ

ವಿಜಯಪುರ: ಯೋಗವು ಎಲ್ಲರನ್ನು ಒಟ್ಟಾಗಿ ಕೂಡಿಸಿಕೊಂಡು ಶಾಂತಿ, ಸಹಬಾಳ್ವೆಯಿಂದ ಜೀವನ ಮಾಡುವ ಆರೋಗ್ಯಕರ ಜೀವನ ಶೈಲಿಯಾಗಿದೆ ಎಂದು ವಿಸಿಜಿ ಗ್ರೂಪಿನ ಅಧ್ಯಕ್ಷ ಡಾ.ಮಹಾಂತೇಶ ಬಿರಾದಾರ ಹೇಳಿದರು. ಇಲ್ಲಿನ ಯೋಗಿ ನಗರದಲ್ಲಿ ಹಮ್ಮಿಕೊಂಡ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಭಾರತದಲ್ಲಿ ಹುಟ್ಟಿಕೊಂಡ ಈ ಪ್ರಾಚೀನ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಅಭ್ಯಾಸವನ್ನು ಜಾಗತಿಕ ಮಟ್ಟದಲ್ಲಿ ಗುರುತಿಸಿ, ವಿಶ್ವಸಂಸ್ಥೆಯು 2015 ರಿಂದ ಈ ದಿನವನ್ನು ಅಧಿಕೃತವಾಗಿ ಜಾರಿಗೆ ತಂದಿರುವುದು ಇತಿಹಾಸ. ಈ ವರ್ಷದ ಅತಿ ಉದ್ದದ ದಿನವಾದ ಜೂ.21ರಂದು ಆಧ್ಯಾತ್ಮಿಕ ಅಭ್ಯಾಸಗಳಿಗೆ ವಿಶೇಷ ಮಹತ್ವ ಹೊಂದಿದೆ. ವ್ಯಕ್ತಿಗಳ ಒಳಗೆ ಮತ್ತು ಪ್ರಪಂಚದಲ್ಲಿ ಆರೋಗ್ಯ, ಸಾಮರಸ್ಯ ಹಾಗೂ ಶಾಂತಿ ಉತ್ತೇಜಿಸುವ ಯೋಗದ ಪಾತ್ರ ಎತ್ತಿ ಹಿಡಿಯುತ್ತದೆ ಎಂದರು. ಸ್ವಾಮಿ ವಿವೇಕಾನಂದ ಸೇನೆಯ ರಾಜ್ಯಾಧ್ಯಕ್ಷ ರಾಘವ ಅಣ್ಣಿಗೇರಿ ಮಾತನಾಡಿ, ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸುವ ಕುರಿತಾಗಿ ಸೆ. 27, 2014ರಂದು ಪ್ರಧಾನಿ ನರೇಂದ್ರ ಮೋದಿಯವರು ಯುನೈಟೆಡ್ ನೇಶನ್ಸ್ ಆರ್ಗನೈಜೇಷನ್ ಸಭೆಯಲ್ಲಿ ಯೋಗದ ಮಹತ್ವ ತಿಳಿಸಿದರು. ಇಲ್ಲಿನ ಯೋಗಿ ನಗರ, ಸುಕುನ ಬಡಾವಣೆ, ಸನ್ ಸಿಟಿ ಪ್ರದೇಶದ ಸಹೋದರ, ಸಹೋದರಿಯರು ಭಾಗಿಯಾಗಿ ಯೋಗ ಶಿಕ್ಷಕಿಯಾದ ಗಿರಿಜಾ ಕೋವಳ್ಳಿಯವರ ಮಾರ್ಗದರ್ಶನದಲ್ಲಿ ಭಾಗಿಯಾದರು. ಆಯೋಜಕ ಸೋಮಶೇಖರ ಮಠ ಗುರೂಜಿ, ಸೋಮಶೇಖರ ಸ್ವಾಮಿ, ವೀರೇಂದ್ರ ಗುಚ್ಚಟ್ಟಿ ಇತರರು ಇದ್ದರು.



ವಿಜಯಪುರ: ಇಲ್ಲಿನ ಯೋಗಿ ನಗರದಲ್ಲಿ ಯೋಗ ದಿನಾಚರಣೆ ಕಾರ್ಯಕ್ರಮ ನಡೆಯಿತು. ವಿಸಿಜಿ ಗ್ರೂಪಿನ ಅಧ್ಯಕ್ಷ ಡಾ.ಮಹಾಂತೇಶ ಬಿರಾದಾರ ಆಯೋಜಕ ಸೋಮಶೇಖರ ಮಠ ಗುರೂಜಿ, ಸೋಮಶೇಖರ ಸ್ವಾಮಿ, ವೀರೇಂದ್ರ ಗುಚ್ಚಟ್ಟಿ ಇತರರು ಇದ್ದರು.

ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಿಷಿ ಆನಂದ ಸೂಚನೆ

ಶುದ್ಧ ಕುಡಿಯುವ ನೀರು ಪೂರೈಕೆಗೆ ಆದ್ಯತೆ

ವಿಜಯಪುರ/ಸಿಂದಗಿ: ಗ್ರಾಮೀಣ ಪ್ರದೇಶಗಳ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಶುದ್ಧ ಕುಡಿಯುವ ನೀರಿನ ನಿರಂತರ ಪೂರೈಕೆಗೆ ಅಗತ್ಯ ಮುಂಜಾಗ್ರತೆ ವಹಿಸಬೇಕು ಎಂದು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಿಷಿ ಆನಂದ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಸಿಂದಗಿತಾಲೂಕು ಪಂಚಾಯತಿ ಸಭಾಂಗಣದಲ್ಲಿ ಸೋಮವಾರ ಸಿಂದಗಿ ಮತ್ತು ಆಲಮೇಲ ತಾಲೂಕುಗಳ ಎಲ್ಲಾ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳೊಂದಿಗೆ ನಡೆದ ಕುಡಿಯುವ ನೀರಿನ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಿಂದಗಿ ಹಾಗೂ ಆಲಮೇಲ ತಾಲೂಕಿನ ಎಲ್ಲಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಕುಡಿಯುವ ನೀರಿನ ಜಲಮೂಲಗಳು, ನೀರಿನ ಲಭ್ಯತೆ ಹಾಗೂ ಪ್ರಸ್ತುತ ಸ್ಥಿತಿ-ಗತಿ ಕುರಿತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಂದ ಮಾಹಿತಿ ಪಡೆದ ಅವರು, ನೀರು ಪ್ರತಿಯೊಂದು ಜೀವಿಗೂ ಮೂಲಭೂತ ಅವಶ್ಯಕತೆಯಾಗಿದ್ದು, ಗ್ರಾಮೀಣ ಭಾಗದ ಜನರಿಗೆ ಶುದ್ಧ ಕುಡಿಯುವ ನೀರು ಪೂರೈಕೆಯಲ್ಲಿ ಯಾವುದೇ ರೀತಿಯ ವ್ಯತ್ಯಯ ಉಂಟಾಗದಂತೆ ಕ್ರಮ ವಹಿಸುವಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಎಲ್ಲಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನೀರಿನ ಮೂಲಗಳ ಎಫ್‌ಟಿಕೆ ಪರೀಕ್ಷೆಯನ್ನು ಬಾಕಿ ಉಳಿದಿರುವ ಕಡೆಗಳಲ್ಲಿ ಎರಡು ದಿನಗಳೊಳಗಾಗಿ ಪೂರ್ಣಗೊಳಿಸಬೇಕು ಎಂದು ಸೂಚಿಸಿದ ಅವರು, ಯಾವುದೇ ಗ್ರಾಮಗಳಲ್ಲಿ ಕಲುಷಿತ ನೀರು ಪೂರೈಕೆಯಾಗದಂತೆ ಎಚ್ಚರಿಕೆ ವಹಿಸಬೇಕು. ಕಲುಷಿತ ನೀರು ಪೂರೈಕೆಯಂತಹ ಪ್ರಕರಣಗಳು ಕಂಡುಬಂದಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಪುನರುಚ್ಚರಿಸಿದರು.

ತಾಲೂಕಿನಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಿತಿ-ಗತಿಗಳನ್ನು ಪರಿಶೀಲಿಸಿದ ಅವರು, ದುರಸ್ತಿಗೆ ಅಗತ್ಯವಿರುವ ಘಟಕಗಳ ಅಂದಾಜು ಮೊತ್ತದ ಪ್ರಸ್ತಾವನೆಗಳನ್ನು ತಕ್ಷಣ ಸಲ್ಲಿಸುವಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಜಲಧಾರೆ ಯೋಜನೆಯು ವರ್ಷಪೂರ್ತಿ ನೀರು ಪೂರೈಕೆಯ ಉದ್ದೇಶ ಹೊಂದಿರುವ ಮಹತ್ವದ ಯೋಜನೆಯಾಗಿದ್ದು, ಬಾಕಿ ಉಳಿದಿರುವ ಕಾಮಗಾರಿಗಳನ್ನು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸುವಂತೆ ತಿಳಿಸಿದರು ಈ ಸಂದರ್ಭದಲ್ಲಿ ನರೇಗಾ ಯೋಜನೆಯ ಪ್ರಗತಿ ಪರಿಶೀಲಿಸಿದರು.

ಸಿಂದಗಿ ಮತ್ತು ಆಲಮೇಲ ತಾಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಮು ಜಿ.ಅಗ್ನಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ತಾರಾನಾಥ ರಾಠೋಡ, ತಾಪಂ ಸಹಾಯಕ ನಿರ್ದೇಶಕರು ಶೋಭಾ ಮುದಗಲ್, ಇಲಾಖೆಯ ಕಿರಿಯ ಅಭಿಯಂತರ ಎಚ್.ಎಂ. ಸಾರವಾಡ, ಎ.ಎ.ದುರ್ಗದ, ಸಿಂದಗಿ ಮತ್ತು ಆಲಮೇಲ ತಾಲೂಕಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.



ಗ್ರಾಮಗಳಲ್ಲಿ ಕಲುಷಿತ ನೀರು ಪೂರೈಕೆಯಾಗದಂತೆ ಎಚ್ಚರಿಕೆ ವಹಿಸಬೇಕು.

ತ್ವರಿತ ಪರಿಹಾರ ಕಂಡುಕೊಳ್ಳಿ

ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ತಮ್ಮ ಕೇಂದ್ರ ಸ್ಥಾನದಲ್ಲಿದ್ದು, ಪ್ರತಿದಿನ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಿಗೆ ಭೇಟಿ ನೀಡಿ ನೀರಿನ ಸಮಸ್ಯೆಗಳ ಕುರಿತು ಮಾಹಿತಿ ಸಂಗ್ರಹಿಸಬೇಕು. ಸಮಸ್ಯೆಗಳಿದ್ದಲ್ಲಿ ಕೂಡಲೇ ಮೇಲಾಧಿಕಾರಿಗಳ ಗಮನಕ್ಕೆ ತಂದು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ತ್ವರಿತವಾಗಿ ಪರಿಹಾರ ಕಂಡುಕೊಳ್ಳಬೇಕು.

ಸ್ಕೇಟಿಂಗ್ ಸೌಲಭ್ಯ ಒದಗಿಸಲು ಮನವಿ

ಮುದ್ದೇಬಿಹಾಳ: ತಾಲೂಕಿನಲ್ಲಿ ಸ್ಕೇಟಿಂಗ್ ತರಬೇತಿ ಮೂಲಕ ಸಂಚಲನ ಮೂಡಿಸಿರುವ ಶಿವು ಶಾರದಳ್ಳಿ ಅವರ ಪ್ರಯತ್ನಕ್ಕೆ ಪೂರಕವಾಗಿ ನಗರದಲ್ಲಿ ಸ್ಕೇಟಿಂಗ್ ರಿಂಕ್ ಸೌಲಭ್ಯವನ್ನು ಒದಗಿಸಿಕೊಡಬೇಕು. ಅಲ್ಲಿಯವರೆಗೂ ಪಟ್ಟಣದ ಪ್ರವಾಸಿ ಮಂದಿರದ ಮುಂದಿನ ಉದ್ಯಾನವನದಲ್ಲಿ ಸ್ಕೇಟಿಂಗ್ ಮಾಡಲು ಅವಕಾಶ ಮಾಡಿ ಕೊಡಬೇಕು ಎಂದು ಪಾಲಕರು ಶಾಸಕ ಸಿ.ಎಸ್.ನಾಡಗೌಡ ಅಪ್ಪಾಜಿ ಅವರಿಗೆ ಪಾಲಕರು ಮನವಿ ಮಾಡಿದರು.

ಕಳೆದ ಮೂರು ವರ್ಷದಿಂದ ಏಕಲವ್ಯ ಸ್ಕೋಲರ್ ಅಕಾಡೆಮಿ ಸ್ಥಾಪಿಸಿ ವಿದ್ಯಾರ್ಥಿಗಳಿಗೆ ಸ್ಕೇಟಿಂಗ್ ತರಬೇತಿಯನ್ನು ಪಡೆದಿರುವ ಸಾವಿರಾರು ವಿದ್ಯಾರ್ಥಿಗಳು ಜಿಲ್ಲಾ, ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಪಂದ್ಯಾವಳಿಯಲ್ಲಿ ಪಾಲ್ಗೊಂಡು ಜಿಲ್ಲೆಯತ್ತ ರಾಜ್ಯವೇ ತಿರುಗಿ ನೋಡುವಂತೆ ಮಾಡಲಾಗಿದೆ. ಇಂತಹ ತರಬೇತಿ ನೀಡುವವರಿಗೆ ಸ್ಕೇಟಿಂಗ್ ತರಬೇತಿ ನೀಡಲು ಸೂಕ್ತ ಅವಕಾಶ ಒದಗಿಸಿದರೆ ಕ್ರೀಡೆಯಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡಲು ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಎಂದು ಶಾಸಕರಿಗೆ ಮನವಿ ಮಾಡಿದರು.

ಪಾಲಕರ ಮನವಿಗೆ ಸ್ಪಂಧನೆ ನೀಡಿದ ಶಾಸಕ ನಾಡಗೌಡ ಅವರು ಕೂಡಲೇ ಸಂಬಂಧಿಸಿದ ಅಧಿಕಾರಿಗಳಿಗೆ ಇದರ ಬಗ್ಗೆ ಕ್ರೀಯಾ ಯೋಜನೆಯನ್ನು ಸಿದ್ಧಪಡಿಸುವಂತೆ ಸೂಚಿಸಿ, ಸರಕಾರದಿಂದ ನಿಮ್ಮ ಬೇಡಿಕೆ ಈಡೇರಿಸುವುದಾಗಿ ಭರವಸೆ ನೀಡಿದರು. ಹೆಚ್ಚಿನ ಅನುಕೂಲಕ್ಕಾಗಿ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸ್ಕೇಟಿಂಗ್ ವಿದ್ಯಾರ್ಥಿಗಳ ತರಬೇತಿ ಅನುಕೂಲಕ್ಕಾಗಿ ಅಲ್ಲಿರುವ ಸ್ಥಳದಲ್ಲಿ ಡಾಂಬರೀಕರಣ ಮಾಡಿಸಿಕೊಡಲಾಗುವುದು. ಇದರಿಂದ ತರಬೇತಿಯಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಎಂದು ಭರವಸೆ ನೀಡಿದರು.

ಏಕಲವ್ಯ ಸ್ಕೋಲರ್ ಅಕಾಡೆಮಿ ಸ್ಥಾಪಕ ಶಿವಕುಮಾರ ಶಾರದಳ್ಳಿ, ವಿದ್ಯಾರ್ಥಿಗಳ ಪಾಲಕರಾದ ಸಂದಪ್ಪ ಅಸ್ಕಿ, ಅರವಿಂದ ಕೊಪ್ಪ, ಈರಣ್ಣ ಬಳಿಗಾರ, ನಾಗರಾಜ ಯರಗಲ್ಲ, ಚೇತನಾ ಹಾಲ್ಯಾಳ, ನಾಗರಾಜ ಕುಲಕರ್ಣಿ, ಬಸವರಾಜ ಪಾಟೀಲ, ಎಂ.ಎ.ಅಕ್ಕಲಕೋಟ, ನಟರಾಜ ಪಾಟೀಲ, ವಸಂತ ಶೇಟ್ಟಿ, ಮಂಜುನಾಥ ಹಿರೇಮಠ, ರವಿ ದೊಡಮನಿ ಇದ್ದರು.




ಜೂ.25ಕ್ಕೆ ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಸಿಂದಗಿ/ಆಲಮೇಲ: ಆಲಮೇಲದಲ್ಲಿ ಜೂ.25ರಂದು ಸಂಜೆ 4 ಗಂಟೆಗೆ ನಡೆಯುವ ಆಲಮೇಲ ತಾಲೂಕಿನ 6 ಅಭಿವೃದ್ಧಿ ಕಾಮಗಾರಿಗಳ ಭೂಮಿಪೂಜೆ ಹಾಗೂ ಉದ್ಘಾಟನಾ ಕಾರ್ಯಕ್ರಮಗಳಿಗೆ ಸಚಿವರಾದ ಸತೀಶ ಜಾರಕಿಹೊಳಿ, ಎಂ.ಬಿ.ಪಾಟೀಲ ಹಾಗೂ ಮಾಜಿ ಸಚಿವ ಶಿವಾನಂದ ಪಾಟೀಲ ಅವರು ರೂ.217ಕೋಟಿ ಮೌಲ್ಯದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಆಗಮಿಸಿ ಚಾಲನೆ ನೀಡಲಿದ್ದಾರೆ ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ಸಿಂದಗಿ ನಗರದ ಶಾಸಕರ ಕಛೇರಿಯಲ್ಲಿ ಹಮ್ಮಿಕೊಂಡ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಆಲಮೇಲ ತಾಲೂಕಿಗೆ 145ಕೋಟಿ 73ಲಕ್ಷ ರೂ. ವೆಚ್ಚದ ತೋಟಗಾರಿಕೆ ಕಾಲೇಜು ಮಂಜೂರಾಗಿದ್ದು, ಅದರ ಮೊದಲ ಹಂತವಾಗಿ ರೂ.39ಕೋಟಿ 90ಲಕ್ಷ, ಕಡಣಿ ಸೇತುವೆ ನಿರ್ಮಾಣಕ್ಕೆ ರೂ.44ಕೋಟಿ 50ಲಕ್ಷ, ಆಲಮೇಲ ಪಟ್ಟಣದಲ್ಲಿ ರೂ.20ಕೋಟಿ ವೆಚ್ಚದ 1.8ಕಿಮೀ ರಸ್ತೆ ಕಾಮಗಾರಿ ಪೂರ್ಣಗೊಂಡ ರಸ್ತೆಯ ಲೋಕಾರ್ಪಣೆ, ಆಲಮೇಲ ಪಟ್ಟಣದ ಬಜಾರ್ ರಸ್ತೆಯ ಅಭಿವೃದ್ಧಿಗೆ ರೂ.1ಕೋಟಿ 53ಲಕ್ಷ, ಕಡಣಿ ಕ್ರಾಸ್‌ನಿಂದ ವಿರಕ್ತಮಠದವರೆಗಿನ ರಸ್ತೆ ಹಾಗೂ ಚರಂಡಿ ನಿರ್ಮಾಣಕ್ಕೆ ರೂ.1ಕೋಟಿ 86ಲಕ್ಷ ಹಾಗೂ ತಾಲೂಕು ಕ್ರೀಡಾಂಗಣ ಅಭಿವೃದ್ಧಿಗೆ ರೂ.2ಕೋಟಿ 94ಲಕ್ಷ ಮಂಜೂರಾಗಿದ್ದು, ಈ ಎಲ್ಲ ಕಾಮಗಾರಿಗಳ ಭೂಮಿಪೂಜೆ ಹಾಗೂ ಉದ್ಘಾಟನಾ ಸಮಾರಂಭ ನಡೆಯಲಿದೆ.

ಆಲಮೇಲ ಪಟ್ಟಣದಲ್ಲಿರುವ ಕೆಬಿಜೆಎನ್ ಎಲ್ 13ಎಕರೆ 6ಗುಂಟೆ ಜಮೀನಿನಲ್ಲಿ 3ಎ ಮಿನಿ ವಿಧಾನಸೌಧಕ್ಕೆ, 3ಎ ಕೋರ್ಟ್‌ಗೆ 1ಎ, ಅಗ್ನಿಶಾಮಕ ದಳಕ್ಕೆ ಮೀಸಲಿಡಲಾಗಿದ್ದು ಉಳಿದ 6ಎ.6 ಗುಂಟೆ ಜಮೀನನ್ನು ತಾಲೂಕು ಕ್ರೀಡಾಂಗಣಕ್ಕೆ ಮೀಸಲಿಡಲಾಗಿದೆ. ಎಲ್ಲ ಅನುದಾನಕ್ಕೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದೆ. ಆಲಮೇಲದಲ್ಲಿ ನಡೆಯುವ ಸಮಾರಂಭದಲ್ಲಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಗ್ಯಾರಂಟಿ ಸಮಿತಿ ಅಧ್ಯಕ್ಷ ಅಶೋಕ ಕೋಳಾರಿ, ಜಿಲ್ಲಾ ಕೆಡಿಪಿ ಸದಸ್ಯ ನೂರಹಮ್ಮದ ಅತ್ತಾರ, ಪುರಸಭೆ ಮಾಜಿ ಉಪಾಧ್ಯಕ್ಷ ಸಂದೀಪ ಚೌರ, ನಗರ ಯೋಜನಾ ಪ್ರಾಧಿಕಾರ ಅಧ್ಯಕ್ಷ ಹಣಮಂತ ಸುಣಗಾರ, ಎಪಿಎಂಸಿ ಅಧ್ಯಕ್ಷ ಕಲ್ಲಪ್ಪ ನಾಯ್ಕೋಡಿ, ಆಲಮೇಲ ಪಪಂ ಅಧ್ಯಕ್ಷ ಸಾದಿಕ್ ಸುಂಬಡ, ಪ್ರಭು ವಾಲಿಕಾರ, ಪ್ರವೀಣ ಕಂಠಿಗೊಂಡ, ಭೀಮು ಬಮ್ಮನಹಳ್ಳಿ, ಕುಮಾರ ದೇಸಾಯಿ, ಬಸವರಾಜ ತೆಲ್ಲೂರ, ಪ್ರಶಾಂತ ನಾಶಿ, ಮುನ್ನಾ ಚೌಧರಿ, ಶಶಿಧರ ಗಣೆಯಾರ, ಸುನಂದಾ ಯಂಪೂರೆ, ಜಯಶ್ರೀ ಹದನೂರ ಸೇರಿದಂತೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಇದ್ದರು.



ಕೆಪಿಸಿಸಿ ನೂತನ ಅಧ್ಯಕ್ಷರಿಗೆ ಸನ್ಮಾನ

ದೇವರಹಿಪ್ಪರಗಿ: ನೂತನ ಕೆಪಿಸಿಸಿ ಅಧ್ಯಕ್ಷರಾಗಿ ಪದಗ್ರಹಣ ಮಾಡಿದ ಬಿ.ಕೆ. ಹರಿಪ್ರಸಾದ ಅವರಿಗೆ ದೇವರಹಿಪ್ಪರಗಿ ಕ್ಷೇತ್ರದ ಉಸ್ತುವಾರಿ ಹಾಗೂ ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ಪ್ರಭುಗೌಡ ಲಿಂಗದಳ್ಳಿ (ಚಬನೂರ) ಅವರು ಸನ್ಮಾನಿಸಿ, ಗೌರವಿಸಿದರು. ಬೆಂಗಳೂರಿನ ಕೆಪಿಸಿಸಿ ಕಚೇರಿಗೆ ದೇವರಹಿಪ್ಪರಗಿ ಹಾಗೂ ಹೂವಿನ ಹಿಪ್ಪರಗಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಜೊತೆ ಭೇಟಿ ನೀಡಿ ಸೋಮವಾರ ಅಭಿನಂದಿಸಿದರು.

ನಂತರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಕೆಪಿಸಿಸಿ ಅಧ್ಯಕ್ಷರಾದ ಬಿ.ಕೆ.ಹರಿಪ್ರಸಾದ, ನೂತನ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ ಹಾಗೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಾರ್ಗದರ್ಶನದಲ್ಲಿ ಕರ್ನಾಟಕ ರಾಜ್ಯವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವುದು ಸಂಕಲ್ಪವಾಗಿದೆ. ಅವರ ಸುದೀರ್ಘ ರಾಜಕೀಯ ಅನುಭವ ಹಾಗೂ ಸಂಘಟನಾ ಸಾಮರ್ಥ್ಯವು ಕಾಂಗ್ರೆಸ್ ಪಕ್ಷವನ್ನು ಮತ್ತಷ್ಟು ಬಲಿಷ್ಠಗೊಳ್ಳುವಲ್ಲಿ ಮಹತ್ವದ ಪಾತ್ರ ವಹಿಸಲಿದೆ ಎಂದರು.

ದೇವರಹಿಪ್ಪರಗಿ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರದಿಂದ ಹಾಗೂ ಪಕ್ಷದಿಂದ ಸಹಕಾರ ಅಗತ್ಯ, ಮುಂಬರುವ ಜಿಪಂ, ತಾಪಂ ಹಾಗೂ ಗ್ರಾಪಂ ಚುನಾವಣೆ ಹಿನ್ನಲೆಯಲ್ಲಿ ಪಕ್ಷದ ಎಲ್ಲಾ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಆಡಳಿತಾರೂಢ ಕಾಂಗ್ರೆಸ್ ಪಕ್ಷ ಗೆಲ್ಲಲಿದೆ. ಪಕ್ಷದ ಸಂಘಟನೆ ಬಗ್ಗೆ ಚರ್ಚೆ ಸೇರಿದಂತೆ ಹಲವಾರು ವಿಚಾರಗಳನ್ನು ರಾಜ್ಯಾಧ್ಯಕ್ಷರ ಜೋತೆ ಚರ್ಚೆ ನಡೆಸಲಾಯಿತು ಎಂದು ಹೇಳಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಸೀರ ಅಹ್ಮದ್ ಬೇಪಾರಿ, ಬಾಳಾಸಾಹೇಬಗೌಡ ಪಾಟೀಲ ಮಹಿಳಾ ಘಟಕದ ಜಿಲ್ಲಾಧ್ಯಕ್ಷ ರಮೀಜಾ ನದಾಫ್, ಮುಖಂಡರುಗಳಾದ ಸಂಗಮೇಶ ಛಾಯಗೋಳ ಸೇರಿದಂತೆ ಹೂ.ಹಿ ಹಾಗೂ ದೇಹಿ ಬ್ಲಾಕ್ ಕಾಂಗ್ರೆಸ್ ಪಕ್ಷದ ಪದಾಧಿಕಾರಿಗಳು, ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.



ಉತ್ತಮ ಆರೋಗ್ಯಕ್ಕೆ ಯೋಗ ಅವಶ್ಯ




ಇಂಡಿ: ಸದೃಢ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಯೋಗ ಅವಶ್ಯಕ. ಯೋಗದಿಂದ ಅಸ್ತಮಾ, ಧಮ್ಮು, ಕೆಮ್ಮು ಅಲ್ಲದೇ ಅನೇಕ ರೋಗಗಳು ದೂರ ಮಾಡುವ ಶಕ್ತಿ ಇದೆ ಎಂದು ಶಿಕ್ಷಣ ಸಂಯೋಜಕ ಆನಂದ ಹುಣಸಗಿ ಹೇಳಿದರು. ಪಟ್ಟಣದ ಎ.ಜಿ.ಗಾಂಧಿ ಪ್ರೌಢ ಶಾಲೆಯಲ್ಲಿ ಹಮ್ಮಿಕೊಂಡ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ಚಾಲನೆ ನೀಡಿ ಅವರು ಮಾತನಾಡಿದರು. ಯೋಗವು ದೇಹ, ಮನಸ್ಸು ಮತ್ತು ಉಸಿರಾಟವನ್ನು ಸಮತೋಲನಗೊಳಿಸುವ ಪ್ರಾಚೀನ ಭಾರತೀಯ ಕಲೆಯಾಗಿದ್ದು, ಅದು ವ್ಯಕ್ತಿಯ ಯೋಗಕ್ಷೇಮಕ್ಕೆ ಅತ್ಯಗತ್ಯವಾಗಿದೆ ಎಂದು ಹೇಳಿದರು.

ಮುಖ್ಯೋಪಾಧ್ಯಾಯ ರಾಘವೇಂದ್ರ ಕುಲಕರ್ಣಿ ಮಾತನಾಡಿ, ಯೋಗದ ನಿರಂತರ ಅಭ್ಯಾಸವು ಸಕಾರಾತ್ಮಕ ಚಿಂತನೆಗಳನ್ನು ಬೆಳೆಸಿಕೊಳ್ಳಲು ಮತ್ತು ಭಾವನೆಗಳನ್ನು ನಿಯಂತ್ರಿಸಲು ಸಹಕಾರಿಯಾಗಿದೆ ಎಂದು ಹೇಳಿದರು. ಸಂಸ್ಥೆಯ ಅಧ್ಯಕ್ಷ, ಶಿಕ್ಷಕ ಸಿಬ್ಬಂದಿ, ಮಕ್ಕಳು ಹಾಜರಿದ್ದರು.

ಆರೋಗ್ಯಯುತ ಬದುಕಿಗೆ ಯೋಗವಿರಲಿ

ಬಸವನಬಾಗೇವಾಡಿ: ಆರೋಗ್ಯಯುತ ಬದುಕಿಗೆ ಯೋಗವು ಅತ್ಯಂತ ಮಹತ್ವಕಾರಿಯಾಗಿದೆ. ವಿಶ್ವದ ಎಲ್ಲೆಡೆ ಯೋಗ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಗುತ್ತಿದೆ ಎಂದು ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರಾದ ಶಶಿಧರ ಗೌಡ ಹೇಳಿದರು. ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ತಾಲೂಕು ಕಾನೂನು ಸೇವೆಗಳ ಸಮಿತಿ, ನ್ಯಾಯವಾದಿಗಳ ಸಂಘ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳ ಸಹಯೋಗದಲ್ಲಿ 12ನೇ ವಿಶ್ವ ಯೋಗ ದಿನಾಚರಣೆ ನಿಮಿತ್ತ ಕಾನೂನು ಅರಿವು-ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಪ್ರಧಾನ ಸಿವಿಲ್ ನ್ಯಾಯಾಧೀಶ ಅಮಿತ ಘಟ್ಟಿ ಅಧ್ಯಕ್ಷತೆ ವಹಿಸಿದರು, 1ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶೆ ಮಂಜುಳಾ ಡಿ, 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶ ಈರಪ್ಪ ಢವಳೇಶ್ವರ, ಹಿರಿಯ ನ್ಯಾಯಾವಾದಿಗಳಾದ ಬಿ.ಆರ್.ಅಡೊಡಗಿ, ವಿ.ಬಿ.ಮರ್ತೂರ, ದೈಹಿಕ ಶಿಕ್ಷಕ ಹಾಗೂ ಯೋಗಾ ತರಬೇತಿದಾರದ ಎಸ್.ಎಸ್.ಆವಟಿ, ನ್ಯಾಯವಾದಿ ಶಿಲ್ಪಾ ಮುಚ್ಚಖಂಡಿ ಇದ್ದರು.



ಏಕಾಗ್ರತೆ, ಆತ್ಮವಿಶ್ವಾಸ ವೃದ್ಧಿಗೆ ಯೋಗ ಸಹಕಾರಿ

ವಿಜಯಪುರ: ಆರೋಗ್ಯವು ಒಂದು ಸರಕು ಅಲ್ಲ, ಅದು ಪ್ರತಿಯೊಬ್ಬರ ಜವಾಬ್ದಾರಿ. ಯೋಗವು ಆರೋಗ್ಯ, ಏಕಾಗ್ರತೆ, ಮನ:ಶಾಂತಿ ಹಾಗೂ ಆತ್ಮವಿಶ್ವಾಸ ವೃದ್ಧಿಗೆ ಸಹಕಾರಿಯಾಗಿದೆ ಎಂದು ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಕುಲಸಚಿವ ಶಂಕರಗೌಡ ಸೋಮನಾಳ ಹೇಳಿದರು.

ಇಲ್ಲಿನ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಯೋಗ ಅಧ್ಯಯನ ವಿಭಾಗ ಹಾಗೂ ದೈಹಿಕ ಶಿಕ್ಷಣ ಅಧ್ಯಯನ ಮತ್ತು ಕ್ರೀಡಾ ವಿಜ್ಞಾನ ವಿಭಾಗಗಳ ಆಶ್ರಯದಲ್ಲಿ ಭಾನುವಾರ ಆಯೋಜಿಸಿದ್ದ 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಪ್ರತಿಯೊಬ್ಬರೂ ನಿಯಮಿತವಾಗಿ ಯೋಗಾಭ್ಯಾಸ ಮಾಡುವುದರಿಂದ ಉತ್ತಮ ಆರೋಗ್ಯ ಹೊಂದಲು ಸಾಧ್ಯ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಆರ್‌ಕೆಎಂ ಆಯುರ್ವೇದ ವೈದ್ಯಕೀಯ ಕಾಲೇಜಿನ ಯೋಗ ವಿಜ್ಞಾನ ವಿಭಾಗದ ಯೋಗ ತರಬೇತಿದಾರ ಕೀರ್ತಿ ಮಠಪತಿ ಮಾತನಾಡಿ, ಯೋಗವು ಕೇವಲ ದೈಹಿಕ ವ್ಯಾಯಾಮವಲ್ಲ; ಅದು ಆರೋಗ್ಯಕರ, ಸಮತೋಲಿತ ಮತ್ತು ಸಂತೋಷದಾಯಕ ಜೀವನದ ಮಾರ್ಗವಾಗಿದೆ. ಪ್ರತಿಯೊಂದು ಮನೆಯೂ ಮೊದಲ ಯೋಗಶಾಲೆಯಾಗಬೇಕು ಹಾಗೂ ಪ್ರತಿಯೊಬ್ಬರೂ ದಿನನಿತ್ಯ ಯೋಗಾಭ್ಯಾಸವನ್ನು ರೂಢಿಸಿಕೊಳ್ಳಬೇಕು ಎಂದು ಹೇಳಿದರು.



ಡಾ.ರಾಜಕುಮಾರ ಮಾಲಿಪಾಟೀಲ ಮಾತನಾಡಿ, ಅಷ್ಟಾಂಗ ಯೋಗವು ವ್ಯಕ್ತಿಯ ಆಂತರಿಕ ಮತ್ತು ಬಾಹ್ಯ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ ಎಂದು ಹೇಳಿದರು.

ಮೌಲ್ಯಮಾಪನ ಕುಲಸಚಿವ ಪ್ರೊ.ಬಿ.ಎಲ್. ಲಕ್ಕಣ್ಣವರ, ಆರ್ಥಿಕ ಅಧಿಕಾರಿ ರಾಮಣ್ಣ ಅಥಣಿ, ಪ್ರೊ. ಜ್ಯೋತಿ ಉಪಾಧ್ಯೆ, ಪ್ರೊ.ಹನುಮಂತಯ್ಯ ಪೂಜಾರಿ, ಡಾ.ಶ್ರೀನಿವಾಸ, ಡಾ.ಕಿರಣ್ ಸೇರಿದಂತೆ ಸಿಬ್ಬಂದಿ, ವಿದ್ಯಾರ್ಥಿನಿಯರು ಇದ್ದರು. ಯೋಗ ಅಧ್ಯಯನ ವಿಭಾಗದ ಪುಷ್ಪ ಮೇತ್ರಿ ಯೋಗಾಸನ ಕಾರ್ಯಕ್ರಮ ನಡೆಸಿಕೊಟ್ಟರು. ದೈಹಿಕ ಶಿಕ್ಷಣ ವಿಭಾಗದ ಅಶ್ವಿನಿ ಆರ್. ಎಸ್.ನಿರೂಪಿಸಿದರು. ಶೀಭಾ ಆರ್.ಪರಿಚಯಿಸಿದರು. ದೀಪಾ ಸಂತಿಪೂರ ವಂದಿಸಿದರು.

ಯೋಗದಿಂದ ಆರೋಗ್ಯ ಸುಧಾರಣೆ

ಬಸವನಬಾಗೇವಾಡಿ: ಯೋಗವು ದೈಹಿಕ ಆರೋಗ್ಯ ಸುಧಾರಿಸುವುದರ ಜೊತೆಗೆ ಮಾನಸಿಕ ಶಾಂತಿ ಮತ್ತು ಏಕಾಗ್ರತೆ ಹೆಚ್ಚಿಸುತ್ತದೆ ಎಂದು ದೈಹಿಕ ನಿರ್ದೇಶಕರಾದ ಶಿವಮೂರ್ತಿ ಚಿಕ್ಕನರ್ತಿ ಹೇಳಿದರು.

ಪಟ್ಟಣದ ಬಿಎಲ್‌ಡಿಇ ಸಂಸ್ಥೆಯ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಐಕ್ಯುಎಸಿ, ಎನ್‌ಎಸ್‌ಎಸ್ ಹಾಗೂ ವೈಆರ್‌ಸಿ ಸಹಯೋಗದಲ್ಲಿ ನಡೆದ ಯೋಗಾಭ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಂತಾರಾಷ್ಟ್ರೀಯ ಯೋಗದಿನವನ್ನು ವಿಶ್ವದ್ಯಾಂತ ಆಚರಿಸಲಾಗುತ್ತದೆ. ಯೋಗದ ಮಹತ್ವ ಮತ್ತು ಅದರ ಆರೋಗ್ಯಕರ ಪ್ರಯೋಜನಗಳ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಈ ದಿನವನ್ನು ಆಚರಿಸಲಾಗುತ್ತದೆ. ಯೋಗ ದಿನದ ಆಚರಣೆಯಿಂದ ಜನರಲ್ಲಿ ಆರೋಗ್ಯಕರ ಜೀವನಶೈಲಿಯ ಬಗ್ಗೆ ಅರಿವು ಹೆಚ್ಚಿದ್ದು, ಯೋಗದ ಮಹತ್ವವನ್ನು ವಿಶ್ವಮಟ್ಟದಲ್ಲಿ ಮತ್ತಷ್ಟು ಪ್ರಸಾರ ಮಾಡಲು ಸಹಕಾರಿಯಾಗಿದೆ ಎಂದರು.

ಅಂತಾರಾಷ್ಟ್ರೀಯ ಯೋಗ ದಿನವು ಆರೋಗ್ಯ, ಶಾಂತಿ ಮತ್ತು ಸೌಹಾರ್ದತೆಯ ಸಂಕೇತವಾಗಿದೆ. ಪ್ರತಿಯೊಬ್ಬರೂ ತಮ್ಮ ದೈನಂದಿನ ಜೀವನದಲ್ಲಿ ಯೋಗ ಅಳವಡಿಸಿಕೊಳ್ಳುವ ಮೂಲಕ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದು ಹೇಳಿದರು. ಎನ್‌ಎಸ್‌ಎಸ್ ಘಟಕದ ಅಧಿಕಾರಿ ಡಾ.ಯಲ್ಲಪ್ಪ ನಾಯಕ, ಸಂತೋಷ ಸೂರ್ಯವಂಶಿ ಸೇರಿ ಸಿಬ್ಬಂದಿ ಇದ್ದರು.



ಸದೃಢ ದೇಹ, ಮನಸ್ಸಿಗೆ ಯೋಗ ಅವಶ್ಯ: ನ್ಯಾ.ಹರೀಶ

ವಿಜಯಪುರ: ಯೋಗ ಮಾಡುವುದರಿಂದ ದೇಹ ಮತ್ತು ಮನಸ್ಸು ಒಗ್ಗೂಡುತ್ತದೆ. ನಿತ್ಯ ಯೋಗ ಮಾಡುವುದರಿಂದ ಆರೋಗ್ಯ ಸುಧಾರಿಸಿಕೊಳ್ಳುವುದಲ್ಲದೆ, ಸದೃಢರಾಗಿ ಇರಬಹುದಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಹರೀಶ ಎ. ಹೇಳಿದರು.

ನಗರದ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಆವರಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯಾಂಗ ಇಲಾಖೆ, ಜಿಲ್ಲಾ ನ್ಯಾಯವಾದಿಗಳ ಸಂಘ, ಆರ್ ಕೆಎಮ್ ಸಮೂಹ ಸಂಸ್ಥೆಗಳು, ಜಿಲ್ಲಾ ನ್ಯಾಯಾಂಗ ಇಲಾಖೆ ನೌಕರರ ಸಂಘದ ಆಶ್ರಯದಲ್ಲಿ ಭಾನುವಾರ ಹಮ್ಮಿಕೊಂಡ ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ಚಾಲನೆ ನೀಡಿ ಅವರು ಮಾತನಾಡಿದರು. ಈ ವರ್ಷ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ಘೋಷವಾಕ್ಯದೊಂದಿಗೆ ಯೋಗ ದಿನ ಆಚರಿಸಲಾಗುತ್ತಿದೆ. ನಿತ್ಯ ಯೋಗ ಮಾಡುವುದರಿಂದ ಯಾವುದೇ ರೋಗ- ರುಜಿನಗಳು ತಡೆಗಟ್ಟಬಹುದಾಗಿದೆ ಎಂದರು.



ಜಿಲ್ಲಾ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಡಿ.ಜಿ.ಬಿರಾದಾರ ಮಾತನಾಡಿ, ನಿತ್ಯ ಯೋಗ ಮಾಡುವುದು ಒಳ್ಳೆಯದು. ದಿನಾಲು ಯೋಗ ಮಾಡುವುದರಿಂದ ಎಲ್ಲರೂ ಆರೋಗ್ಯವಂತರಾಗಿ ಇರಬಹುದು ಎಂದರು.

ಆರ್‌ಕೆಎಂ ಸಮೂಹ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಶಂಭುಲಿಂಗಯ್ಯ ಕರ್ಪೂರಮಠ ಮಾತನಾಡಿ, ನಮ್ಮ ಸಂಸ್ಥೆಯ ವತಿಯಿಂದ ಆರೋಗ್ಯ ತಪಾಸಣೆಗೆ ಸಂಬಂಧಿಸಿದಂತೆ ರಿಯಾಯತಿ ದರದಲ್ಲಿ ಉಚಿತ ಸೇವೆ ಸಲ್ಲಿಸುತ್ತಿದ್ದೇವೆ. ಇದರ ಸದುಪಯೋಗ ಸಾರ್ವಜನಿಕರು ಪಡೆದುಕೊಳ್ಳಬೇಕೆಂದು ತಿಳಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಅರವಿಂದ ಹಾಗರಗಿ ಅಧ್ಯಕ್ಷತೆ ವಹಿಸಿ, ಮಾತನಾಡಿದರು. ಯೋಗ ತರಬೇತುದಾರರಾಗಿ ರಮೇಶ ದಿನ್ನಿ, ಸಾವಿತ್ರಿ ಜಲಗಾರ, ಯೋಗಾ ತರಬೇತುದಾರರು ಮತ್ತು ಶ್ರೀಕಾಂತ ಕುಲಕರ್ಣಿ, ಸ್ವಯಂ ಸೇವಕರು ಯೋಗಾಭ್ಯಾಸ ಹೇಳಿಕೊಟ್ಟರು.

ಜಿಲ್ಲಾ ನ್ಯಾಯಾಧೀಶರು, ಹಿರಿಯ ಸಿವಿಲ್ ನ್ಯಾಯಾಧೀಶರು, ಕಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು, ಸಿಬ್ಬಂದಿ. ವಿದ್ಯಾರ್ಥಿಗಳು ಇದ್ದರು.

ಕಿರುಸುದ್ದಿ

ಪ್ರಭಾರಿ ಮುಖ್ಯ ಶಿಕ್ಷಕರಾಗಿ ಬಸಮ್ಮ ಅಧಿಕಾರ ಸ್ವೀಕಾರ

◆**ಕುಕನೂರು:** ತಾಲೂಕಿನ ತಳಕಲ್ ಗ್ರಾಮದ ಸರ್ಕಾರಿ ಮಾದರಿಯ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಗೋಣೆಪ್ಪ ಹಂದ್ರಾಳ ನಿವೃತ್ತರಾದ ನಂತರ ಪ್ರಭಾರಿ ಮುಖ್ಯೋಪಾಧ್ಯಾಯರಾಗಿ ಬಸಮ್ಮ ಸೋಂಪು ಅಧಿಕಾರವನ್ನು ಸ್ವೀಕರಿಸಿದರು. ಸೋಮವಾರ ನಿವೃತ್ತಿ ಹೊಂದಿರುವ ಮುಖ್ಯ ಗುರುಗಳಿಗೂ ಮತ್ತು ಅಧಿಕಾರ ಸ್ವೀಕಾರ ಮಾಡಿದ ಮುಖ್ಯಗುರುಗಳಿಗೆ ಶಾಲಾ ಅಭಿವೃದ್ಧಿ ಮಂಡಳಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ನಂತರ ಅಧ್ಯಕ್ಷ ಶಿವಣ್ಣ ಕೆಂಚರೆಡ್ಡಿ ಮಾತನಾಡಿ, ಉತ್ತಮವಾದ ಕೆಲಸವನ್ನು ಗೋಣೆಪ್ಪ ಹಂದ್ರಾಳ ಮಾಡಿ ಶಾಲೆ ನಾನಾ ಅಭಿವೃದ್ಧಿಗೆ ಪಾತ್ರ ವಹಿಸಿರುತ್ತಾರೆ ಅದೇ ಮಾದರಿಯಲ್ಲಿ ಬಸಮ್ಮ ಸೋಂಪುರ್ ಕೂಡ ಶಾಲೆಯ ಅಭಿವೃದ್ಧಿಗೆ ಮುಂದಾಗ ಬೇಕೆಂದು ಸಲಹೆ ನೀಡಿದರು.

ಎಸ್‌ಡಿಎಂಸಿ ಸದಸ್ಯರಾದ ನಿಂಗಪ್ಪ ಬಡಿಗೇರ್, ವೀಣಾ ಕೊರಗಲ್ಲರ, ಶಿಕ್ಷಕ ವೃಂದ ಬಳಗ ಅವರ ಸಮ್ಮುಖದಲ್ಲಿ ಸನ್ಮಾನ ಕಾರ್ಯಕ್ರಮ ನಡೆಯಲಾಯಿತು.

ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆಗೆ ಪ್ರತಿಭಟನೆ



◆**ಸಿಂಧನೂರು:** ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆ ಮಾಡುವಂತೆ ಒತ್ತಾಯಿಸಿ, ರಾಯಚೂರು ಜಿಲ್ಲಾ ಏಮ್ಸ್ ಹೋರಾಟ ಸಮಿತಿಯಿಂದ ನಡೆಸುತ್ತಿರುವ ಧರಣಿ ಸತ್ಯಾಗ್ರಹ 1500 ದಿನಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ನಗರದಲ್ಲಿ ಶನಿವಾರ ತಾಲೂಕು ಏಮ್ಸ್ ಹೋರಾಟ ಸಮಿತಿಯ ನೇತೃತ್ವದಲ್ಲಿ ಪ್ರವಾಸಿ ಮಂದಿರದಿಂದ ತಹಶೀಲ್ದಾರ್ ಕಚೇರಿವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ ತಹಶೀಲ್ದಾರ್ ಮೂಲಕ ಪ್ರಧಾನ ಮಂತ್ರಿಗಳಿಗೆ ಮನವಿ ರವಾನಿಸಲಾಯಿತು.

ಬೆಳಿಗ್ಗೆ 11ಗಂಟೆ ಸುಮಾರು ಪ್ರವಾಸಿ ಮಂದಿರದಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆ ರಾಯಚೂರು–ಗಂಗಾವತಿ ಹೆದ್ದಾರಿ ಮೂಲಕ ಗಾಂಧಿ ಸರ್ಕಲ್‌ಗೆ ಸಾಗಿ ಅಲ್ಲಿಂದ ತಹಶೀಲ್ದಾರ್ ಕಾರ್ಯಾಲಯ ತಲುಪಿತು. 'ಬೇಕೆ ಬೇಕು ರಾಯಚೂರು ಜಿಲ್ಲೆಗೆ ಏಮ್ಸ್ ಬೇಕು', 'ಏಮ್ಸ್ ಮಂಜೂರು ಮಾಡದ ಕೇಂದ್ರ ಸರ್ಕಾರಕ್ಕೆ ಧಿಕ್ಕಾರ', 'ಏಮ್ಸ್ ಸ್ಥಾಪನೆಯಾಗುವವರೆಗೂ ಹೋರಾಟ ನಿಲ್ಲದು..ನಿಲ್ಲದು' ಎನ್ನುವ ಘೋಷಣೆಗಳು ನಗರದ ಪ್ರಮುಖ ಬೀದಿಗಳಲ್ಲಿ ಪ್ರತಿಭಟನೆ ನಿರತರಿಂದ ಮೊಳಗಿದವು. ಹೋರಾಟ ಸಮಿತಿಯ ಸಂಚಾಲಕ ಡಿ.ಎಚ್.ಕಂಬಳಿ, ಸಿಪಿಐ(ಎಂಎಲ್) ರೆಡ್‌ಸ್ಟಾರ್ ರಾಜ್ಯ ಸಮಿತಿ ಸದಸ್ಯ ಎಂ.ಗಂಗಾಧರ, ಮಹಿಳಾ ಮುಖಂಡರಾದ ಸರಸ್ವತಿ ಪಾಟೀಲ ಮಾತನಾಡಿದರು.

ಚಂದ್ರಶೇಖರ ಗೊರಬಾಳ, ಹುಸೇನ್‌ಸಾಬ್, ಬಿ.ಲಿಂಗಪ್ಪ, ವೆಂಕನಗೌಡ ಗದ್ರಟಗಿ, ಯದ್ದಲದೊಡ್ಡಿಯ ಮಹಾಲಿಂಗ ಸ್ವಾಮೀಜಿ, ದೇವೇಂದ್ರಗೌಡ, ಡಾ.ಹಾಲಪ್ಪ, ಸುರೇಶ ಗೊಬ್ಬರಕಲ್, ನಾಗರಾಜ್ ಪೂಜಾರ್, ಅಪ್ಪಣ್ಣ ಕಾಂಬ್ಳೆ, ಗಂಗಣ್ಣ ಡಿಶ್, ರಾಮಕೃಷ್ಣ ಭಜಂತ್ರಿ, ದಾವಲ್‌ಸಾಬ್ ದೊಡ್ಡಮನಿ ಹಾಗೂ ಶ್ರೀರೇಣುಕಾ ನರ್ಸಿಂಗ್ ಕಾಲೇಜು, ಸನ್‌ರೈಸ್ ಪ್ಯಾರಾ ಮೆಡಿಕಲ್ ಹಾಗೂ ಬಸವ ಪ್ಯಾರಾ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಕಾಲೇಜಿನ ಉಪನ್ಯಾಸಕರು ಇದ್ದರು.

ಅತಿಥಿ ಶಿಕ್ಷಕರಿಂದ ಅರ್ಜಿ ಆಹ್ವಾನ

◆**ಕೆಂಭಾವಿ:** ಪಟ್ಟಣದ ಸಮಾಜ ಕಲ್ಯಾಣ ಇಲಾಖೆಯ ಅಡೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಖಾಲಿ ಇರುವ ಗಣಿತ ಹಾಗೂ ವಿಜ್ಞಾನ ವಿಷಯಗಳ ಶಿಕ್ಷಕರ ಹುದ್ದೆಗಳಿಗೆ ತಾತ್ಕಾಲಿಕ/ಅತಿಥಿ ಶಿಕ್ಷಕರ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಯಾದಗಿರಿ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರು ಅವರು ಕೆಂಭಾವಿ ಪಟ್ಟಣದ ಮೊರಾರ್ಜಿ ವಸತಿ ಶಾಲೆಯ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಹಾಗೂ ಗುಣಮಟ್ಟದ ಶಿಕ್ಷಣವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ. ವಿದ್ಯಾರ್ಥಿಗಳ ದೈನಂದಿನ ವ್ಯಾಸಂಗಕ್ಕೆ ಯಾವುದೇ ರೀತಿಯ ಅಡಚಣೆ ಉಂಟಾಗದಂತೆ ತಕ್ಷಣವೇ ತಾತ್ಕಾಲಿಕ ಶಿಕ್ಷಕರನ್ನು ನೇಮಿಸಿಕೊಳ್ಳಲಾಗುತ್ತಿದೆ ಎಂದು ಅವರು ಪ್ರಕಟಣೆಯಲ್ಲಿ ವಿವರಿಸಿದ್ದಾರೆ.



ಕುಕನೂರು: ತಾಲೂಕಿನ ತಳಕಲ್ ಗ್ರಾಮದ ಸರ್ಕಾರಿ ಮಾದರಿಯ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಗೋಣೆಪ್ಪ ಹಂದ್ರಾಳ ನಿವೃತ್ತರಾದ ನಂತರ ಪ್ರಭಾರಿ ಮುಖ್ಯೋಪಾಧ್ಯಾಯರಾಗಿ ಬಸಮ್ಮ ಸೋಂಪು ಅಧಿಕಾರವನ್ನು ಸ್ವೀಕರಿಸಿದರು ಸೋಮವಾರ ನಿವೃತ್ತಿ ಹೊಂದಿರುವ ಮುಖ್ಯ ಗುರುಗಳಿಗೂ ಮತ್ತು ಅಧಿಕಾರ ಸ್ವೀಕಾರ ಮಾಡಿದ ಮುಖ್ಯಗುರುಗಳಿಗೆ ಶಾಲಾ ಅಭಿವೃದ್ಧಿ ಮಂಡಳಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ರಾಷ್ಟ್ರೋತ್ಥಾನದಲ್ಲಿ ಯೋಗ ದಿನಾಚರಣೆ

◆**ಕಲಬುರಗಿ:** ನಗರದ ಹೊರವಲಯದಲ್ಲಿರುವ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರ ಶಾಲೆಯಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮವು ಪ್ರಾರ್ಥನಾ ಗೀತೆಯೊಂದಿಗೆ ಆರಂಭಗೊಂಡಿತು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಯೋಗ ತರಬೇತುದಾರ್ತಿ ಸವಿತಾ ಯರಗೋಳ ಮಾತನಾಡಿ, ಯೋಗವು ದೇಹ ಮತ್ತು ಮನಸ್ಸಿನ ಆರೋಗ್ಯವನ್ನು ಕಾಪಾಡುವ ಅತ್ಯುತ್ತಮ ಸಾಧನವಾಗಿದೆ ಎಂದು ಹೇಳಿದರು. ವಯಸ್ಸಾದರೂ ದೇಹಕ್ಕೆ ವಯಸ್ಸಾಗಬಾರದು. ಯೋಗವು ದೈಹಿಕ ಹಾಗೂ ಮಾನಸಿಕ ಸದೃಢತೆಗೆ ನೆರವಾಗುತ್ತದೆ. ಭಾರತೀಯ ಋಷಿಮುನಿಗಳು ಜಗತ್ತಿಗೆ ನೀಡಿರುವ ಅಮೂಲ್ಯ ಕೊಡುಗೆಯೇ ಯೋಗ. ಇಂದು ವಿಶ್ವವೇ ಯೋಗದ ಮಹತ್ವವನ್ನು ಒಪ್ಪಿಕೊಂಡು ಅನುಸರಿಸುತ್ತಿದೆ. ಆದ್ದರಿಂದ ಪ್ರತಿಯೊಬ್ಬರೂ ಪ್ರತಿದಿನ ಯೋಗಾಭ್ಯಾಸ ಮಾಡುವ ಮೂಲಕ ಆರೋಗ್ಯಕರ ಜೀವನ ನಡೆಸಬೇಕು'' ಎಂದು ತಿಳಿಸಿದರು. ಯೋಗ ಶಿಕ್ಷಕರಾದ ಮಂಜುನಾಥ ಮಠ ಹಾಗೂ ನಾಗರಾಜ ದರ್ಗಿ ಅವರ ನೇತೃತ್ವದಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಯೋಗಾಭ್ಯಾಸ ನಡೆಸಿದರು.ಶಾಲೆಯ ಪ್ರಧಾನಾಚಾರ್ಯರಾದ ಲಾಲದೀಪ್ ಶ್ರೀನಿವಾಸನ್ ಯೋಗ ಪ್ರತಿಜ್ಞೆ ಬೋಧಿಸಿದರು. ಕರೆಸ್ಪಾಂಡೆಂಟ್ ಕೃಷ್ಣ ಜೋಷಿ, ಪ್ರಧಾನಾಚಾರ್ಯರು ಉಪಸ್ಥಿತರಿದ್ದರು. ವಿದ್ಯಾರ್ಥಿ ಸುತೀರ್ಥ ಕಾರ್ಯಕ್ರಮ ನಿರೂಪಣೆ ಮಾಡಿದರು. ವೈಭವಿ ಸ್ವಾಗತಿಸಿ, ವೈಷ್ಣವಿ ವಂದನಾರ್ಪಣೆ ಸಲ್ಲಿಸಿದರು. ಯೋಗ ದಿನಾಚರಣೆಯಲ್ಲಿ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿ ಕಾರ್ಯಕ್ರಮಕ್ಕೆ ಮೆರುಗು ತಂದರು.



ಕಲಬುರಗಿ: ನಗರದ ಹೊರವಲಯದಲ್ಲಿರುವ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರ ಶಾಲೆಯಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಜೂ.25ಕ್ಕೆ ಸಿಎಂ ಕಾರ್ಯಕ್ರಮ | ಡಿಸಿ ಡಾ.ಇಟ್ನಾಳ ಸೂಚನೆ

ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಿ

◆**ಕೊಪ್ಪಳ:** ಜೂ.25ರಂದು ಜಿಲ್ಲೆಯಲ್ಲಿ ನಡೆಯುವ ಮಾನ್ಯ ಮುಖ್ಯಮಂತ್ರಿಗಳ ಕಾರ್ಯಕ್ರಮಕ್ಕೆ ಅಚ್ಚುಕಟ್ಟು ವ್ಯವಸ್ಥೆ ಮಾಡಲು ಸಮಿತಿಗಳನ್ನು ರಚಿಸಿ ಕರ್ತವ್ಯ ಹಂಚಿಕೆ ಮಾಡಲಾಗಿದ್ದು, ಅವರವರ ಅಧಿಕಾರಿಗಳು ಜವಾಬ್ದಾರಿ ಹಾಗೂ ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಬೇಕು ಎಂದು ಡಿಸಿ ಡಾ.ಸುರೇಶ ಬಿ.ಇಟ್ನಾಳ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಜೂ.25ರಂದು ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ತುಂಗಭದ್ರಾ ಜಲಾಶಯಕ್ಕೆ ನೂತನವಾಗಿ ಅಳವಡಿಸಿರುವ 33 ಸ್ಟೀಲ್ ಕ್ರೆಸ್ಟ್ ಗೇಟುಗಳ ಲೋಕಾರ್ಪಣೆ ಕಾರ್ಯಕ್ರಮಕ್ಕೆ ರಾಜ್ಯದ ಮುಖ್ಯಮಂತ್ರಿಗಳು ಹಾಗೂ ಬೇರೆ ರಾಜ್ಯಗಳ ಮುಖ್ಯಮಂತ್ರಿಗಳು, ಕೇಂದ್ರ ಸರ್ಕಾರದ ಸಚಿವರುಗಳು ಹಾಗೂ ಮೂರು ರಾಜ್ಯಗಳಿಗೆ ಸಂಬಂಧಪಟ್ಟ ಇಲಾಖೆ ಸಚಿವರುಗಳು ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಅಚ್ಚುಕಟ್ಟು ವ್ಯವಸ್ಥೆ ಹಾಗೂ ಕರ್ತವ್ಯ ನಿರ್ವಹಣೆಗಾಗಿ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಸೋಮವಾರದಂದು ಮುನಿರಾಬಾದ್‌ನ ಇಂಡಿಯಾ ರಿಸರ್ವ್ ಬಟಾಲಿಯನ್‌ನ ಆಡಿಟೋರಿಯಂ ಸಭಾಂಗಣದಲ್ಲಿ ಆಯೋಜಿಸಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅಂದು ಸಿಎಂ ಸೇರಿದಂತೆ ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ ಮುಖ್ಯಮಂತ್ರಿಗಳು, ಸಚಿವರು ಜಿಲ್ಲೆಗೆ ಆಗಮಿಸಲಿದ್ದು, ತುಂಗಭದ್ರಾ ಜಲಾಶಯದ ನೂತನಸ್ಟೀಲ್‌ಗೇಟ್‌ಗಳನ್ನು ಲೋಕಾರ್ಪಣೆಗೊಳಿಸಿ, [illegible] ಪ್ರಮುಖ ಸಮಾನಾಂತರ ಜಲಾಶಯಗಳು ಹಾಗೂ ಪ್ರಮುಖ ನೀರಾವರಿ ಯೋಜನೆಗಳ ಬಗ್ಗೆ ಚರ್ಚೆ ನಡೆಸುವರು. ನಂತರ ಮುನಿರಾಬಾದ್‌ನ ಸರ್ಕಾರಿ ಶಾಲಾ ಆವರಣದಲ್ಲಿ ವೇದಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಆದ್ದರಿಂದ ಈ ಉದ್ದೇಶಕ್ಕಾಗಿ ನಿರ್ಮಿಸಲಾದ ಹೆಲಿಪ್ಯಾಡ್, ವೇದಿಕೆ ಕಾರ್ಯಕ್ರಮ ಸೇರಿದಂತೆ ಪ್ರತಿಯೊಂದು ವಿಷಯಗಳ ಬಗ್ಗೆ ಅಧಿಕಾರಿಗಳು ಹೆಚ್ಚಿನ ಎಚ್ಚರಿಕೆ ವಹಿಸಿ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.



> ವೇದಿಕೆ ಕಾರ್ಯಕ್ರಮದಲ್ಲಿ ಶಿಷ್ಟಾಚಾರ ಪಾಲನೆ ಕಡ್ಡಾಯ. ವೇದಿಕೆ ಮೇಲೆ ಯಾರಿಗೂ ಅಗೌರವ ಉಂಟಾಗದಂತೆ ಹಾಗೂ ಗೊಂದಲಕ್ಕೆ ಆಸ್ಪದವಿಲ್ಲದಂತೆ ಶಿಷ್ಟಾಚಾರದಂತೆ ಆಸನಗಳ ವ್ಯವಸ್ಥೆ ಕಲ್ಪಿಸಬೇಕು. ಸಮಾನಾಂತರ ಜಲಾಶಯ ಹಾಗೂ ಪ್ರಮುಖ ನೀರಾವರಿ ಯೋಜನೆಗಳ ಬಗ್ಗೆ ವಿವರವಾದ ಮಾಹಿತಿಯೊಂದಿಗೆ ಅಧಿಕಾರಿಗಳು ಚರ್ಚೆಯಲ್ಲಿ ಭಾಗವಹಿಸಬೇಕು. ತುಂಗಭದ್ರಾ ನದಿಯು ಮೂರು ರಾಜ್ಯಗಳ ಜೀವನಾಡಿಯಾಗಿದೆ.
> ■ ಶಿವರಾಜ ತಂಗಡಗಿ, ಶಾಸಕ

ಶಾಸಕ ಕೆ.ರಾಘವೇಂದ್ರ ಹಿಟ್ನಾಳ ಮಾತನಾಡಿ, ಮೂರು ರಾಜ್ಯಗಳ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು, ಸಚಿವರು, ಕೇಂದ್ರ ಜಲಶಕ್ತಿ ಸಚಿವರು ಭಾಗವಹಿಸಲಿದ್ದು, ಅವರ ಭದ್ರತೆ ಹಾಗೂ ಶಿಷ್ಟಾಚಾರ ಪಾಲನೆಯಲ್ಲಿ ಯಾವುದೇ ವ್ಯತ್ಯಯವಾಗದಂತೆ ಕರ್ತವ್ಯ ನಿರ್ವಹಿಸಿ ಎಂದರು.

ಸಂಸದ ಕೆ.ರಾಜಶೇಖರ ಹಿಟ್ನಾಳ ಮಾತನಾಡಿ, ತುಂಗಭದ್ರಾ ನದಿ ಮೂರು ರಾಜ್ಯಗಳಿಗೆ ಸಂಬಂಧಿಸಿದ್ದಾದರೂ, ಅದರ ಜಲಾಶಯವಿರುವುದು ನಮ್ಮ ರಾಜ್ಯ ಹಾಗೂ ನಮ್ಮದೇ ಜಿಲ್ಲೆಯಲ್ಲಿ. ಹಾಗಾಗಿ ನಮ್ಮ ಜಿಲ್ಲೆ ಅಂದು ಆಕರ್ಷಣೆಯ ಕೇಂದ್ರ ಬಿಂದುವಾಗಲಿದ್ದು, ಅಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿ ಎಂದರು. ಮಾಜಿ ಸಚಿವ ಅಮರೇಗೌಡ ಪಾಟೀಲ ಬಯ್ಯಾಪೂರ, ಜಿಪಂ ಸಿಇಒ ವರ್ಣಿತ್ ನೇಗಿ, ಎಸ್ಪಿ ಡಾ.ರಾಮ್ ಎಲ್.ಅರಸಿದ್ದಿ, ಕರ್ನಾಟಕ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ರಾಜೇಶ ಅಮ್ಮಿನಬಾವಿ, ಎಡಿಸಿ ಸಿದ್ರಾಮೇಶ್ವರ, ಎಸಿ ಕ್ಯಾ.ಮಹೇಶ ಮಾಲಗಿತ್ತಿ, ಎಎಸ್ಪಿ ಹೇಮಂತ್‌ಕುಮಾರ, ತುಂಗಭದ್ರಾ ಯೋಜನಾ ವೃತ್ತ ಮುನಿರಾಬಾದ್‌ನ ಅಧೀಕ್ಷಕ ಅಭಿಯಂತರರು ಎಸ್.ಬಿ ಮಲ್ಲಿಗೆವಾಡ ಇತರರಿದ್ದರು.

ಮಳೆಗಾಗಿ ರೈತ, ಯುವಕರಿಂದ ಪ್ರಾರ್ಥನೆ

◆**ಹನುಮಸಾಗರ:** ಪಟ್ಟಣದಲ್ಲಿ ಮುಂಗಾರು ಮಳೆ ಕೈಕೊಟ್ಟ ಹಿನ್ನೆಲೆ ಪಟ್ಟಣದಲ್ಲಿ ರೈತರು ಹಾಗೂ ಯುವಕರು ಪ್ರಾಚೀನ ಜನಪದ ಸಂಪ್ರದಾಯವಾದ 'ಗುರ್ಜಿ–ಗುರ್ಜಿ' ಆಚರಣೆ ನಡೆಸುವ ಮೂಲಕ ವರುಣ ದೇವನಿಗೆ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಮುಂಗಾರು ಆರಂಭವಾಗಿ ಒಂದು ತಿಂಗಳಿಗೂ ಹೆಚ್ಚು ಸಮಯ ಕಳೆದಿದ್ದರೂ ಸಮರ್ಪಕ ಮಳೆಯಾಗದ ಕಾರಣ ರೈತರಲ್ಲಿ ಆತಂಕ ಹೆಚ್ಚಾಗಿದೆ. ದಿನದಿಂದ ದಿನಕ್ಕೆ ಬಿಸಿಲಿನ ತಾಪಮಾನ ಏರಿಕೆಯಾಗುತ್ತಿದ್ದು, ಕೃಷಿ ಚಟುವಟಿಕೆಗಳು ಹಾಗೂ ಬಿತ್ತನೆ ಕಾರ್ಯಗಳು ವಿಳಂಬವಾಗಿವೆ. ಈ ಹಿನ್ನೆಲೆಯಲ್ಲಿ ಗ್ರಾಮಸ್ಥರು ಮತ್ತು ಯುವಕರು ಸಂಪ್ರದಾಯಬದ್ಧವಾಗಿ ಗುರ್ಜಿ–ಗುರ್ಜಿ ಆಚರಣೆ ನಡೆಸಿ ಉತ್ತಮ ಮಳೆಯಾಗಲೆಂದು ಪ್ರಾರ್ಥಿಸಿದರು.

ಆಚರಣೆಯ ಭಾಗವಾಗಿ ಕೆಲ ಪುರುಷರು ಮಹಿಳೆಯರ ವೇಷ ಧರಿಸಿ ಗ್ರಾಮದಲ್ಲಿ ಮನೆ ಮನೆಗೆ ತೆರಳಿ ಜನಪದ ಗೀತೆಗಳನ್ನು ಹಾಡಿದರು. ''ಗುರ್ಜಿ ಗುರ್ಜಿ ಅಡ್ಡಾಡಿ ಬಂದೆ, ಹಳ್ಳ–ಕೊಳ್ಳ ತಿರುಗಾಡಿ ಬಂದೆ, ಕಾರಮಳೆ ಕಪ್ಪತ್ತ ಮಳೆ, ಸುರಿಮಳೆಯೋ ಸುರಿಮಳೆಯೋ'' ಎಂಬ ಹಾಡುಗಳ ಮೂಲಕ ಮಳೆರಾಯನನ್ನು ಬೇಡಿಕೊಂಡರು.

ಅಬ್ದುಲ್ ಕಟಗಿ ಅವರು ಮಹಿಳೆಯ ವೇಷ ಧರಿಸಿ ಗಮನ ಸೆಳೆದರೆ, ಹುಸೇನಬಾಷ ಗುಡಿಹೂಲ ಗೌಡರ ವೇಷದಲ್ಲಿ ಅಬ್ದುಲ್ ಅವರು ಗುರ್ಜಿಯ ಪಾತ್ರ ನಿರ್ವಹಿಸಿದರು. ನಾಗಪ್ಪ ಮೋಟಗಿ, ಭೀಮಪ್ಪ ಇಟಗಿ, ರೈಮನಸಾಬ, ಸಿದ್ದಪ್ಪ, ಮಾರುತಿ, ನಾಗಪ್ಪ ಹಳ್ಳಿಗುಡಿ, ಮಲ್ಲಪ್ಪ, ದಾದುಸಾಬ, ರಾಜಮಹ್ಮದ್, ರಂಜಾನಸಾಬ, ಮಹಮದ್ ಸಾಬ್, ಮೈನು, ಯುಸುಫ್ ಖಾಜಾ, ಮೈಬುಸಾಬ್, ಹುಸೇನಸಾಬ್ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಮನೆ ಮನೆಗೆ ತೆರಳಿ ಗುರ್ಜಿಯ ಕುರಿತಾದ ಜನಪದ ಹಾಡುಗಳನ್ನು ಹಾಡುತ್ತಾ ಕಾಳು, ಕಡಿ ಸೇರಿದಂತೆ ವಿವಿಧ ಧಾನ್ಯಗಳನ್ನು ಸಂಗ್ರಹಿಸಲಾಯಿತು. ಬಳಿಕ ಅವುಗಳನ್ನು ದೇವಸ್ಥಾನಕ್ಕೆ ಅರ್ಪಿಸಿ ಮಳೆಗಾಗಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಲಾಯಿತು. ಗ್ರಾಮಸ್ಥರ ಪ್ರಕಾರ, ಮಳೆ ಕೊರತೆಯ ಸಂದರ್ಭಗಳಲ್ಲಿ ಈ ಸಂಪ್ರದಾಯವನ್ನು ಹಲವು ತಲೆಮಾರುಗಳಿಂದ ಆಚರಿಸಲಾಗುತ್ತಿದ್ದು, ವರುಣ ದೇವನ ಅನುಗ್ರಹದಿಂದ ಉತ್ತಮ ಮಳೆಯಾಗುತ್ತದೆ ಎಂಬ ನಂಬಿಕೆ ಇದೆ. ರೈತರು ಸಹ ಉತ್ತಮ ಮಳೆಯಾಗಿ ಕೃಷಿ ಚಟುವಟಿಕೆಗಳು ಸುಗಮವಾಗಿ ಸಾಗಲಿ ಹಾಗೂ ಸಮೃದ್ಧಿ ಬೆಳೆ ದೊರೆಯಲಿ ಎಂದು ಪ್ರಾರ್ಥಿಸಿದರು.



ಕುಟುಂಬದ ಆಸರೆಗೆ ವಿಮಾ ಪಾಲಿಸಿ ಮಾಡಿಸಿ

◆**ಯಲಬುರ್ಗಾ:** ನಿತ್ಯ ಯಾವುದೋ ಅನಾವಶ್ಯಕ ಖರ್ಚಿಗಾಗಿ ಹಣ ವ್ಯಯ ಮಾಡುವುದಕ್ಕಿಂತ ಗ್ರಾಹಕರ ಸುರಕ್ಷತೆ ಮತ್ತು ಕುಟುಂಬದ ಭವಿಷ್ಯಕ್ಕಾಗಿ ವರ್ಷಕ್ಕೆ 10,15,25ರೂ.ಗಳ ಕೆನರಾ ಬ್ಯಾಂಕಿನ ಸಹಾಯದ ಚ್ವೈಸ್ ವಿಮಾ ಪಾಲಿಸಿ ಮಾಡಿಸಿಕೊಳ್ಳುವಂತೆ ಕೊಪ್ಪಳದ ಕರ್ನಾಟಕ ಗ್ರಾಮೀಣ ಬ್ಯಾಂಕಿನ ಜಿಲ್ಲಾ ಪ್ರಾದೇಶಿಕ ಕಚೇರಿಯ ವ್ಯವಸ್ಥಾಪಕ ನಿತ್ಯಾನಂದ ಕುಲ್ಲೊಳ್ಳಿ ಹೇಳಿದರು.

ಪಟ್ಟಣದ ಕರ್ನಾಟಕ ಗ್ರಾಮೀಣ ಬ್ಯಾಂಕಿನಲ್ಲಿ ನಡೆದ ಮೃತ ಈಶಪ್ಪ ದುಗ್ಗದ ಎನ್ನುವರು ಐದು ರೂ.ಗಳ ಚ್ವೈಸ್ ವಿಮಾ ಪಾಲಿಸಿಯನ್ನು ಮಾಡಿಸಿದ್ದರೂ ಆದರೆ ಅವರು ಅಕಾಲಿಕ ನಿಧನದಿಂದ ಹಿನ್ನೆಲೆ ಅವರ ಧರ್ಮಪತ್ನಿ ಶರಣಮ್ಮನಿಗೆ 2.75 ಲಕ್ಷ ರೂ. ಚೆಕ್ ವಿತರಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಭೀಮಾ ಫಸಲ್ ಯೋಜನೆ, ಚ್ವೈಸ್ ಸೇರಿದಂತೆ ಜೀವನ ಜ್ಯೋತಿ ವಿಮಾ ಯೋಜನೆಗಳು ಬ್ಯಾಂಕಿನ ಗ್ರಾಹಕರಿಗೆ ಅತ್ಯಂತ ಉಪಯುಕ್ತ ವಿಮಾ ಯೋಜನೆಗಳಾಗಿವೆ ಎಂದರು.

ದೇಶದ ಪ್ರತಿಯೊಬ್ಬರಿಗೂ ಅತ್ಯಂತ ಕಡಿಮೆ ಖರ್ಚಿನಲ್ಲಿ ಜೀವ ವಿಮೆಯನ್ನು ಒದಗಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಈ ಯೋಜನೆಯನ್ನು ಜಾರಿಗೊಳಿಸಿದೆ.ಗ್ರಾಹಕರು ಬ್ಯಾಂಕಿನಲ್ಲಿ ಖಾತೆ ಹೊಂದಿರುವವರು ಈ ಜೀವ ವಿಮೆ ಮಾಡುವುದರಿಂದ ನಂಬಿಕೊಂಡ ಕುಟುಂಬಸ್ಥರಿಗೆ ಸಂಕಷ್ಟ ಕಾಲದಲ್ಲಿ ಬದುಕಿಗೆ ವಿಮಾ ಸೌಲಭ್ಯ ಯೋಜನೆಗಳು ಆಸರೆಯಾಗಲಿವೆ. ಬಳೂಟಗಿ ಗ್ರಾಹಕ ಈಶಪ್ಪ ದುಗ್ಗದ ಎನ್ನುವರು ಬ್ಯಾಂಕಿನಲ್ಲಿ ಪ್ರತಿ ವರ್ಷ 25 ಸಾವಿರ ರೂ.ಪಾಲಿಸಿ ಮಾಡಿಸಿದ್ದರು. ಆದರೆ ಆಕಸ್ಮಿಕ ನಿಧನದಿಂದಾಗಿ ಅವರ ಪತ್ನಿ ಶರಣಮ್ಮನವರಿಗೆ 2,75,000 ರೂ.ಗಳ ವಿಮಾ ಪಾಲಿಸಿಯ ಪರಿಹಾರ ಮೊತ್ತದ ಚೆಕ್ ಹಸ್ತಾಂತರಿಸಲಾಗಿದೆ ಎಂದು ಹೇಳಿದರು.

ಯಲಬುರ್ಗಾ ಬ್ಯಾಂಕಿನ ವ್ಯವಸ್ಥಾಪಕ ವಿಶ್ವವಿಜೇತ್ ಬಬಲೇಶ್ವರ ಮಾತನಾಡಿ ನಾನು ನಿಮ್ಮ ಬ್ಯಾಂಕಿಗೆ ವರ್ಗವಾಗಿ ಬಂದಿದ್ದೇನೆ ಪ್ರತಿಯೊಬ್ಬ ಬ್ಯಾಂಕಿನ ಗ್ರಾಹಕರು ತಮ್ಮ ಸಮಸ್ಯೆಗಳು ಏನಿದ್ದರೂ ಸಂಪರ್ಕಿಸಿದರೆ ಆ ಸಮಸ್ಯೆಗಳ ಪರಿಹಾರಕ್ಕೆ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಎಂದರು.

ಈ ಸಂದರ್ಭದಲ್ಲಿ ಪ್ರಾದೇಶಿಕ ಕಚೇರಿಯ ಹಿರಿಯ ವ್ಯವಸ್ಥಾಪಕ ಎನ್. ಮಹೇಶ,ಸಹಾಯಕ ವ್ಯವಸ್ಥಾಪಕ ವೀರೇಶ ಕೂಲಿ, ಯಲಬುರ್ಗಾದ ಬ್ಯಾಂಕಿನ ಸಿಬ್ಬಂದಿ ನಾಗರಾಜ, ಜಯಶ್ರೀ, ಶಿವಪೂಜೆ, ವಿನಯ, ಪ್ರತಾಪ್, ಶೇಖರಪ್ಪ ಭಜಂತ್ರಿ, ದೊಡ್ಡಬಸಪ್ಪ ಹಕಾರಿ, ಕಳಕಪ್ಪ ಸೇರಿದಂತೆ ಮತ್ತಿತರರು ಇದ್ದರು.



ಎಂಎಲ್ಸಿ ಆಗಿ ಕಮಕನೂರ ಆಯ್ಕೆ: ಅದ್ಧೂರಿ ಸ್ವಾಗತ

◆**ಕಲಬುರಗಿ:** 3ನೇ ಬಾರಿಗೆ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾದ ಕಾಂಗ್ರೆಸ್ ಹಿರಿಯ ಮುಖಂಡ ತಿಪ್ಪಣ್ಣಪ್ಪ ಕಮಕನೂರ ಅವರನ್ನು ಜಿಲ್ಲಾ ಕಾಂಗ್ರೆಸ್ ಸಮಿತಿಯ ವತಿಯಿಂದ ಸೋಮವಾರ ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಭವ್ಯವಾಗಿ ಸನ್ಮಾನಿಸಲಾಯಿತು.

ಶಾಸಕ ಎಂ.ವೈ.ಪಾಟೀಲ ಮಾತನಾಡಿ, ತಿಪ್ಪಣ್ಣಪ್ಪ ಕಮಕನೂರ ಅವರ ಮರು ಆಯ್ಕೆ ಪಕ್ಷದ ಸಂಘಟನಾ ಶಕ್ತಿ ಹಾಗೂ ಜನಸೇವೆಗೆ ದೊರೆತ ಮಾನ್ಯತೆಯಾಗಿದೆ ಎಂದು ಹೇಳಿದರು. ಪಕ್ಷದ ಬಲವರ್ಧನೆ ಮತ್ತು ಜನಪರ ಕಾರ್ಯಗಳಲ್ಲಿ ಅವರ ಕೊಡುಗೆ ಗಮನಾರ್ಹವಾಗಿದೆ ಎಂದು ಶ್ಲಾಘಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ತಿಪ್ಪಣ್ಣಪ್ಪ ಕಮಕನೂರ, ಮೂರನೇ ಬಾರಿಗೆ ವಿಧಾನ ಪರಿಷತ್ ಸದಸ್ಯರಾಗಿ ಸೇವೆ ಸಲ್ಲಿಸಲು ಅವಕಾಶ ನೀಡಿದ ಪಕ್ಷದ ಹಿರಿಯ ಮುಖಂಡರು, ನಾಯಕರು ಹಾಗೂ ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸಿದರು. ಮುಂದಿನ ದಿನಗಳಲ್ಲಿ ಪಕ್ಷದ ಸಂಘಟನೆಯನ್ನು ಮತ್ತಷ್ಟು ಬಲಪಡಿಸುವ ಜೊತೆಗೆ ಜನರ ಸಮಸ್ಯೆಗಳಿಗೆ ಸ್ಪಂದಿಸಿ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡುವುದಾಗಿ ಭರವಸೆ ನೀಡಿದರು.



ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಜಗದೇವ ಗುತ್ತೇದಾರ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ್ ಹರವಾಳ, ಡಾ.ಕಿರಣ ದೇಶಮುಖ, ರಾಜಗೋಪಾಲ ರೆಡ್ಡಿ, ಮಹಾಂತಪ್ಪ ಸಂಗಾವಿ, ಈರಣ್ಣ ರಟಕಲ್, ಶಿವಾನಂದ ಹೊನಗುಂಟಿ, ರಾಜೇಶ್ ಗುತ್ತೇದಾರ, ಶಕೀಲ್ ಸರಡಗಿ, ಫಾರೂಕ್ ಪಟೇಲ್ ಮುದ್ದುಬಾಳ, ಮಹಾಂತೇಶ್ ಕೌಳಗಿ ಸೇರಿದಂತೆ ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ಉಪಸ್ಥಿತರಿದ್ದರು.

ಜು.1ಕ್ಕೆ ಪ್ರೊ.ಬಿ.ಕೃಷ್ಣಪ್ಪ ಜಯಂತ್ಯುತ್ಸವ

◆**ಗಂಗಾವತಿ:** ಕರ್ನಾಟಕ ದಲಿತ ಸಂಘರ್ಷ ಸಮಿತಿಯ ವತಿಯಿಂದ ಸಮಾಜ ಸುಧಾರಕ ಹಾಗೂ ಹೋರಾಟಗಾರ ಪ್ರೊ.ಬಿ.ಕೃಷ್ಣಪ್ಪ ಅವರ ರಾಜ್ಯಮಟ್ಟದ ಜಯಂತ್ಯುತ್ಸವ ಕಾರ್ಯಕ್ರಮವನ್ನು ಜು.1ರಂದು ನಗರದ ತಾಪಂ ಆವರಣದ ಕೃಷ್ಣದೇವರಾಯ ಕಲಾಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘಟನೆಯ ರಾಜ್ಯ ಸಹ ಸಂಚಾಲಕ ಹಂಪೇಶ್ ಹರಿಗೋಲ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸಂಘಟನೆಯ ವತಿಯಿಂದ ಹಮ್ಮಿಕೊಂಡ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿ ಮಾತನಾಡಿದರು.

ಪ್ರೊ.ಬಿ.ಕೃಷ್ಣಪ್ಪ ಅವರು ಕೇವಲ ಶಿಕ್ಷಕರಾಗಿ ಮಾತ್ರವಲ್ಲದೆ ಸಮಾಜದಲ್ಲಿ ನಡೆಯುವ ಅನ್ಯಾಯ, ಶೋಷಣೆ ಮತ್ತು ಅಸಮಾನತೆಗಳ ವಿರುದ್ಧ ಹೋರಾಡಿದ ಮಹಾನ್ ವ್ಯಕ್ತಿಯಾಗಿದ್ದರು. ಶಿಕ್ಷಣದ ಮೂಲಕ ಸಮಾಜದಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಅವರು ನಿರಂತರವಾಗಿ ಮಾಡಿದ್ದು, ಅವರ ಆದರ್ಶ, ತತ್ವ ಮತ್ತು ಸಿದ್ಧಾಂತಗಳು ಇಂದಿಗೂ ಸಮಾಜಕ್ಕೆ ಮಾರ್ಗದರ್ಶನ ನೀಡುತ್ತಿವೆ ಎಂದು ತಿಳಿಸಿದರು.

ಪ್ರೊ.ಬಿ.ಕೃಷ್ಣಪ್ಪರವರ ಜೀವನ ಮೌಲ್ಯಗಳು ಹಾಗೂ ಸಮಾಜಮುಖಿ ಚಿಂತನೆಗಳನ್ನು ಯುವ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ ಜಯಂತ್ಯುತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ. ಜೊತೆಗೆ ಸಂಘಟನೆಯ ಚಟುವಟಿಕೆಗಳನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ರಾಜ್ಯಮಟ್ಟದ ಈ ಕಾರ್ಯಕ್ರಮ ಮಹತ್ವ ಪಡೆದುಕೊಂಡಿದೆ ಎಂದು ಹೇಳಿದರು. ರಾಜ್ಯದ ವಿವಿಧ ಜಿಲ್ಲೆಗಳು ಹಾಗೂ ಭಾಗಗಳಿಂದ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಪದಾಧಿಕಾರಿಗಳು, ಕಾರ್ಯಕರ್ತರು ಮತ್ತು ಸಮಾಜದ ಮುಖಂಡರು ಆಗಮಿಸಲಿದ್ದು, ಸಾವಿರಾರು ಜನರು ಭಾಗವಹಿಸುವ ನಿರೀಕ್ಷೆಯಿದೆ ಎಂದು ತಿಳಿಸಿದರು. ವಿಭಾಗೀಯ ಸಂಚಾಲಕರಾದ ಯಮನೂರಪ್ಪ ನಾಯಕ ಹುಲಿಹೈದರ್, ಜಿಲ್ಲಾ ಉಪಾಧ್ಯಕ್ಷ ಗೋವಿಂದಪ್ಪ, ಜಿಲ್ಲಾ ಖಜಾಂಚಿ ಆರ್. ಕೆ.ರಮೇಶ್, ಪಾರ್ವತಮ್ಮ, ಹನುಮಮ್ಮ, ದುರುಗಪ್ಪ ಹೊಸಳ್ಳಿ, ಲೋಕೇಶ್ ಹರಿಗೋಲ, ಶಿವಪ್ಪ ಪೂಜಾರ ಇತರರಿದ್ದರು.



ಶಾಲಾ ಕಟ್ಟಡ ಪೂರ್ಣಗೊಳಿಸಲು ಆಗ್ರಹ

◆**ಕುಷ್ಟಗಿ:** ಪಟ್ಟಣದ ಸರ್ಕಾರಿ ಬಾಲಕಿಯರ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಶಾಲಾ ಕಟ್ಟಡವನ್ನು ಮತ್ತು ಶಾಲಾ ಕಂಪೌಂಡಿಗೆ ಹೊಂದಿಕೊಂಡು ಕಪಾಟುಗಳನ್ನು ಇಡಲಾಗಿದೆ. ಮನವಿ ಮಾಡಿಕೊಂಡರು ಸಹ ಕಪಾಟುಗಳನ್ನು ತೆಗೆಯುತ್ತಿಲ್ಲ ಹಾಗೂ ಅರ್ಧಕ್ಕೆ ನಿಂತ ಶಾಲಾ ಕಟ್ಟಡವನ್ನು ಸಂಪೂರ್ಣಗೊಳಿಸಬೇಕು ಎಂದು ಸರ್ಕಾರಿ ಬಾಲಕಿಯರ ಮಾದರಿಯ ಹಿರಿಯ ಪ್ರಾಥಮಿಕ ಶಾಲೆ ಶಾಲಾ ಎಸ್‌ಡಿಎಂಸಿ ಅಧ್ಯಕ್ಷರು ಹಾಗೂ ಸದಸ್ಯರು ಸೇರಿ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯ ವ್ಯವಸ್ಥಾಪಕ ಶಿವ ಶಂಕರಪ್ಪ ಅವರಿಗೆ ಮನವಿ ಸಲ್ಲಿಸಿದರು.

ನಂತರ ಪುರಸಭೆ ಮುಖ್ಯಾಧಿಕಾರಿ ವೆಂಕಪ್ಪ ಬೀಳಗಿ ಹಾಗೂ ಕುಷ್ಟಗಿ ಪೊಲೀಸ್ ಠಾಣೆಗೆ ಮನವಿ ಸಲ್ಲಿಸಿದ ನಂತರ ಎಸ್‌ಡಿಎಂಸಿ ಅಧ್ಯಕ್ಷ ಪವಾಡೆಪ್ಪ ಚೌಡ್ಕಿ ಮಾತನಾಡಿ, ಈ ಶಾಲಾ ಕಟ್ಟಡ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಯೋಜನೆ ಅಡಿಯಲ್ಲಿ ಸುಮಾರು 32 ಲಕ್ಷ ರೂ. ವೆಚ್ಚದಲ್ಲಿ ಎರಡು ಶಾಲಾ ಕೊಠಡಿ ಕಟ್ಟಡವನ್ನು ನಿರ್ಮಾಣ ಮಾಡಲಾಗುತ್ತಿದೆ. ಶಾಲಾ ಕಟ್ಟಡದ ನಿರ್ಮಾಣ ಮಾಡಲು ನಿರ್ಮಿತಿ ಕೇಂದ್ರ ಗುತ್ತಿಗೆ ಪಡೆದಿದ್ದು ಅರ್ಧಕ್ಕೆ ನಿಲ್ಲಿಸಿದ್ದಾರೆ. ಸಾಕಷ್ಟು ಬಾರಿ ಶಾಸಕ ಹಾಗೂ ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ ಅವರಿಗೆ ಮತ್ತು ನಿರ್ಮಿತಿ ಕೇಂದ್ರ ಎಂಜಿನಿಯರ್ ಆದೇಶ ಅವರಿಗೆ ಮನವಿ ಮಾಡಿಕೊಳ್ಳಲಾಗಿದೆ ಎಂದು ಹೇಳಿದರು.



ಇನ್ನು ಒಂದು ವಾರದಲ್ಲಿ ಬಿಇಒ ಮೇಡಂ ಉಮಾದೇವಿ ಬಸಾಪುರ ಇವರು ಸಂಬಂಧಿಸಿದ ಅಧಿಕಾರಿಗಳ ಜೊತೆಗೆ ಮಾತನಾಡಿದ್ದೇನೆ ಎಂದು ಭರವಸೆ ನೀಡಿದ್ದಾರೆ. ಒಂದು ವೇಳೆ ಶಾಲಾ ಕಟ್ಟಡವನ್ನು ಸಂಪೂರ್ಣ ಮಾಡದೇ ಹೋದರೆ ಶಾಲಾ ಮಕ್ಕಳೊಂದಿಗೆ ರಸ್ತೆಗೆ ಇಳಿದು ಕಾನೂನಾತ್ಮಕ ಹೋರಾಟ ನಡೆಸುವುದು ಶತಸಿದ್ಧ ಎಂದರು.

ಎಸ್‌ಡಿಎಂಸಿ ಸದಸ್ಯ ಮಲ್ಲಪ್ಪ ಕಂಚಿ, ಮಂಜುನಾಥ ತಳುಗೇರಿ ಮಾತನಾಡಿದರು.

ಶಾಲಾ ಮುಖ್ಯೋಪಾಧ್ಯಾಯರಾದ ಸಿದ್ರಾಮಪ್ಪ ಅಮರಾವತಿ, ಶಾಲಾ ಎಸ್‌ಡಿಎಂಸಿ ಸದಸ್ಯರಾದ ಗುರುರಾಜ ಆಗೋಲಿ, ರಾಮಣ್ಣ ಭೋವಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

39 ಜನರ ವಿರುದ್ಧ ಗಡಿಪಾರಿಗೆ ಪ್ರಸ್ತಾವನೆ

◆**ರಾಯಚೂರು:** ಈವರೆಗೆ ಜಿಲ್ಲೆಯಲ್ಲಿ 1561 ರೌಡಿ ಶೀಟರ್‌ಗಳನ್ನು ಗುರುತಿಸಲಾಗಿದ್ದು, ಇವರಲ್ಲಿ 39 ಜನರ ವಿರುದ್ಧ ಗಡಿಪಾರಿಗೆ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ನಾಲ್ಕು ಜನರ ಗಡಿಪಾರಿಗೆ ನ್ಯಾಯಾಲಯ ಸಮ್ಮತಿ ನೀಡಿದೆ. ಐದು ರೌಡಿಗಳ ವಿರುದ್ಧ ಗೂಂಡಾ ಕಾಯ್ದೆಯಡಿ ಕ್ರಮಕ್ಕೆ ನ್ಯಾಯಾಲಯಕ್ಕೆ ಪ್ರಸ್ತಾವನೆಯನ್ನೂ ಸಲ್ಲಿಸಲಾಗಿದೆ ಎಂದು ಎಸ್ಪಿ ಅರುಣಾಂಗು ಗಿರಿ ತಿಳಿಸಿದರು.

ಸೋಮವಾರ ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 1561 ರೌಡಿ ಶೀಟರ್‌ಗಳಲ್ಲಿ ಪದೇ ಪದೇ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಕಂಡುಬಂದವರನ್ನು ಗುರುತಿಸಿ ಗೂಂಡಾ ಕಾಯ್ದೆಯಡಿ ಕ್ರಮಕ್ಕೆ ನ್ಯಾಯಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

ಮೊಹರಂ ಹಬ್ಬದ ಹಿನ್ನೆಲೆಯಲ್ಲಿ ಗುಂಪು ಘರ್ಷಣೆ ಸೇರಿದಂತೆ ಇತರೆ ಅಹಿತಕರ ಘಟನೆಗಳು ಜರುಗದಂತೆ ಮುನ್ನೆಚ್ಚರಿಕಾ ಕ್ರಮವಾಗಿ ಜಿಲ್ಲೆಯ ಪ್ರತಿ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಹಲವು ಮನೆಗಳನ್ನು ತಪಾಸಣೆ ಮಾಡಲಾಗಿದೆ. 748 ಗ್ರಾಮಗಳಲ್ಲಿ ಪೊಲೀಸ್ ಪಥ ಸಂಚಲನ ಮಾಡಲಾಗಿದೆ ಎಂದರು.


ಸೂಕ್ಷ್ಮ ಪ್ರದೇಶಗಳೆಂದು ಗುರುತಿಸಿರುವ 29 ಗ್ರಾಮಗಳಲ್ಲಿ ಮೊಹರಂ ಆಚರಣೆಯನ್ನು ಜಿಲ್ಲಾಧಿಕಾರಿಗಳು ನಿರ್ಬಂಧಿಸಿ ಆದೇಶಿಸಿದ್ದಾರೆ. ಮೊಹರಂ ಹಬ್ಬವನ್ನು ಶಾಂತಿಯುತವಾಗಿ ಆಚರಿಸುವುದಕ್ಕೆ ಬೇಕಾದ ಕ್ರಮಗಳನ್ನು ಪೊಲೀಸ್ ಇಲಾಖೆ ಕೈಗೊಂಡಿದೆ ಎಂದು ತಿಳಿಸಿದರು.

ಮುದಗಲ್‌ದಲ್ಲಿ ದೊಡ್ಡ ಪ್ರಮಾಣದಲ್ಲಿ ಮೊಹರಂ ಆಚರಣೆ ಮಾಡಲಾಗುತ್ತಿದೆ. ಇಲ್ಲಿ ಒಂದು ಲಕ್ಷಕ್ಕೂ ಅಧಿಕ ಜನರು ಪಾಲ್ಗೊಳ್ಳುವರೆಂದು ಅಂದಾಜಿಸಲಾಗಿದೆ. ಇದಲ್ಲದೆ ಜಿಲ್ಲೆಯಲ್ಲಿ ಒಟ್ಟು 730 ಸ್ಥಳಗಳಲ್ಲಿ ಮೊಹರಂ ಆಚರಣೆ ಮಾಡಲಾಗುತ್ತಿದೆ. ಈ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳಾಗಬಾರದೆಂಬ ಉದ್ದೇಶದಿಂದ ಶಾಂತಿ ಸಭೆಯನ್ನು ಮಾಡಲಾಗಿದೆ ಎಂದರು.

ಡಿಎಸ್‌ಪಿ ಶಾಂತವೀರ ಸೇರಿದಂತೆ ಇತರ ಅಧಿಕಾರಿಗಳಿದ್ದರು.

ಜನಶಕ್ತಿಯಿಂದಲೇ ಕಾಂಗ್ರೆಸ್ ಸೋಲಿಸಿ: ಬೊಮ್ಮಾಯಿ

◆**ಕೊಪ್ಪಳ:** ರಾಜ್ಯದಲ್ಲಿ 2028 ಕ್ಕೆ ಜನ ಶಕ್ತಿ ಮತ್ತು ಹಣ ಶಕ್ತಿಯ ನಡುವೆ ಚುನಾವಣೆ ನಡೆಯುತ್ತದೆ. ಹಣದಿಂದ ಕಾಂಗ್ರೆಸನ್ನು ಸೋಲಿಸಲು ಸಾಧ್ಯವಿಲ್ಲ. ಜನಶಕ್ತಿಯಿಂದಲೇ ಸೋಲಿಸಲು ಸಾಧ್ಯ. ಬಿಜೆಪಿ ಪ್ರತಿಪಕ್ಷವಾಗಿ ಒಗ್ಗಟ್ಟಿನಿಂದ ಹೋರಾಟ ಮಾಡಿದರೆ ನಮ್ಮದೇ ಪಕ್ಷ ಅಧಿಕಾರಕ್ಕೆ ಬರುತ್ತದೆ ಎಂದು ಮಾಜಿ ಮುಖ್ಯಮದ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.



ಇಂದು ಕೊಪ್ಪಳದ ಭಾರತೀಯ ಜನತಾ ಪಾರ್ಟಿಯ ಜಿಲ್ಲಾ ಕಾರ್ಯಾಲಯದಲ್ಲಿ ಭಾರತೀಯ ಜನತಾ ಪಾರ್ಟಿಯ ಸಂಘಟನಾತ್ಮಕ ಸಭೆಯನ್ನು ನಡೆಸಿ ಮಾತನಾಡಿದರು, ಕೊಪ್ಪಳ ಜಿಲ್ಲೆ ನನಗೆ ಬಹಳ ಹತ್ತಿರ ನಾವು ಚಿಕ್ಕಂದಿನಿಂದಲೇ ಕೊಪ್ಪಳದ ಮಠಕ್ಕೆ ಹಲವಾರು ಬಾರಿ ಬಂದಿದ್ದೇನೆ. ನಮ್ಮ ತಾಯಿ ಈ ಮಠದ ಭಕ್ತಳು. ಇಲ್ಲಿಯ ಜನರು ಮುಗ್ಧರು ಮತ್ತು ಶ್ರಮಜೀವಿಗಳು ಆದರೆ, ಬಹಳಷ್ಟು ಅವಕಾಶಗಳಿಂದ ವಂಚಿತ ಆಗಿರುವ ಬಹಳ ಬೃಹತ್ ಕೈಗಾರಿಕೆ ಮಿಲ್‌ಗಳು ಬಂದರೂ ಸ್ಥಳೀಯರ ಬದುಕು ದೊಡ್ಡ ಪ್ರಮಾಣದಲ್ಲಿ ಬದಲಾಗಿಲ್ಲ. ಇನ್ನೊಂದೆಡೆ ತುಂಗಭದ್ರಾ ಜಿಲ್ಲೆಯ ಸುತ್ತಲೂ ಹರಿದರೂ ಅದರ ಸದುಪಯೋಗ ಮಾಡಿಕೊಳ್ಳಲು ಯಶಸ್ವಿಯಾಗಿಲ್ಲ. ಹೀಗಾಗಿ ನೀರಾವರಿ ಕೈಗಾರಿಕೆಯಿಂದ ವಂಚಿತವಾಗಿರುವ ಈ ಜಿಲ್ಲೆಗೆ ನ್ಯಾಯ ಕೊಡುವ ಸಣ್ಣ ಪ್ರಯತ್ನ ನಾನು ಮಾಡಿದ್ದೇನೆ. ಅದು ಈಗ ಫಲ ಕೊಡಲು ಆರಂಭಿಸಿದೆ ಎಂದರು.

ಬಿಜೆಪಿ ಕೊಪ್ಪಳ ಜಿಲ್ಲೆಯಲ್ಲಿ ರಾಜಕೀಯ ಲಾಭ ಪಡೆದುಕೊಳ್ಳದೇ ರಾಜಕೀಯವಾಗಿಯೂ ವಂಚಿತವಾಗಿದೆ. ಹೀಗಾಗಿ ನಾಯಕತ್ವ ರಾಜ್ಯ ಮಟ್ಟದಲ್ಲಿ ಪ್ರಭಲವಾಗಿ ಬೆಳೆದರೆ ಆ ಭಾಗ ಆ ಕ್ಷೇತ್ರ ದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿಯಾಗುತ್ತದೆ. ಈ ಜಿಲ್ಲೆಯನ್ನು ಸಮಗ ಅಭಿವೃದ್ಧಿ ಮಾಡಿ ಸಾಮಾನ್ಯ ಜನರು ಉತ್ತಮ ಬದುಕು ನಡೆಸಲು ನಾವು ಅವಕಾಶ ಕಲ್ಪಿಸಬೇಕು ಅದಕ್ಕಾಗಿ ಅಧಿಕಾರ ಬೇಕು, ಅಧಿಕಾರಕ್ಕೆ ಬರಬೇಕೆಂದರೆ ಬಿಜೆಪಿ ಗೆಲ್ಲಬೇಕು. ರಾಜ್ಯದಲ್ಲಿ ನಮ್ಮ ಪಾಲು ನಮ್ಮ ಹಕ್ಕನ್ನು ನಾವು ಪಡೆದುಕೊಳ್ಳಬೇಕು. ಅದಕ್ಕಾಗಿ ಬಿಜೆಪಿ ಗೆಲ್ಲಿಸಲು ನಾವೆಲ್ಲರೂ ಒಕ್ಕಟ್ಟಾಗಬೇಕು. ಕಳೆದ ಚುನಾವಣೆಗಳಲ್ಲಿ ನಮ್ಮ ಸ್ವಯಂಕೃತ ಅಪರಾಧಗಳನ್ನು ನಾವು ಮಾಡಿದ್ದೇವೆ. ಹೀಗಾಗಿ ಗೆಲ್ಲುವ ಅವಕಾಶ ಇದ್ದರೂ ಕೂಡ ನಾವು ಗುರಿ ಮುಟ್ಟಲು ಆಗಿಲ್ಲ, ಈಗ ಮತ್ತೆ ಅವಕಾಶ ಬಂದಿದೆ ಎಂದು ಹೇಳಿದರು.

ಬಿಜೆಪಿ ಜಿಲ್ಲಾಧ್ಯಕ್ಷ ನವೀನ ಗುಳಗಣ್ಣವರ, ಮಾಜಿ ಸಚಿವರಾದ ಹಾಲಪ್ಪ ಆಚಾರ, ಶಾಸಕರಾದ ದೊಡ್ಡನಗೌಡ ಪಾಟೀಲ್, ಮಾಜಿ ಶಾಸಕರಾದ ಪರಣ್ಣ ಮುನವಳ್ಳಿ, ಮಾಜಿ ಸಂಸದರಾದ ಶಿವರಾಮಗೌಡ, ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ, ಮುಖಂಡರಾದ ಡಾ.ಬಸವರಾಜ ಕ್ಯಾವಟರ್, ವಿಭಾಗ ಸಹ ಪ್ರಭಾರಿಗಳಾದ ಚನ್ನಬಸನಗೌಡ ಸೇರಿದಂತೆ ಹಲವಾರು ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಕಿರುಸುದ್ದಿ

ಖೇತ್ ಬಚಾವೋ ಅಭಿಯಾನ



◆ **ಕುರುಗೋಡು:** ತಾಲೂಕಿನ ಕೋಳೂರು ಹೋಬಳಿಯಲ್ಲಿ ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ ಅಡಿಯಲ್ಲಿ 23ನೇ ಕಂತು ಬಿಡುಗಡೆಯಾದ ಪ್ರಯುಕ್ತ ಪಿ.ಎಂ.ಕಿಸಾನ್ ಉತ್ಸವ ದಿವಸ್ ಹಾಗೂ ಖೇತ್ ಬಚಾವೋ (ಭೂಮಿ ಉಳಿಸಿ) ಅಭಿಯಾನ ಹಮ್ಮಿಕೊಳ್ಳಲಾಯಿತು. ಈ ವೇಳೆ ರೈತರಿಗೆ ಮಣ್ಣು ಆರೋಗ್ಯ ಚೀಟಿ ವಿತರಣೆಯನ್ನು ಹಮ್ಮಿಕೊಳ್ಳಲಾಯಿತು. ದೇಶದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಪಶ್ಚಿಮ ಬಂಗಾಳ ರಾಜ್ಯದ ಹೂಗ್ಲಿ ಜಿಲ್ಲೆಯ ತಾರಕೇಶ್ವರದಲ್ಲಿ 23ನೇ ಕಂತಿನ ಪಿಎಂ ಕಿಸಾನ್ ಹಣವನ್ನು ಬಿಡುಗಡೆ ಮಾಡುವ ಪ್ರಯುಕ್ತ ಹೋಬಳಿ ಮಟ್ಟದಲ್ಲಿ ರೈತರಿಗೆ ನೇರವಾಗಿ ವೀಕ್ಷಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ರೈತ ಸಂಪರ್ಕ ಕೇಂದ್ರ ಕೋಳೂರಿನ ಕೃಷಿ ಅಧಿಕಾರಿಯಾದ ಬಸವರಾಜ್ ಸ ಮಾತನಾಡಿ ಪಿಎಂ ಕಿಸಾನ್ ಹಣ ಭೂಮಿಯನ್ನು ಹೊಂದಿರುವ ಅರ್ಹ ರೈತರಿಗೆ ಕೃಷಿ ಚಟುವಟಿಕೆಯಲ್ಲಿ ಉತ್ತಮ ಪರಿಕರಗಳನ್ನು ಬಳಸಿ, ಬೆಳೆಗಳ ಆರೋಗ್ಯ ನಿರ್ವಹಣೆ ಹಾಗೂ ಹೆಚ್ಚಿನ ಇಳುವರಿ ಪಡೆದು, ನಿರೀಕ್ಷಿತ ಆದಾಯ ಗಳಿಸಲು ನೆರವಾಗಲು ವಾರ್ಷಿಕ 6,000 ರೂ. ಗಳ ಆರ್ಥಿಕ ನೆರವನ್ನು ಕೇಂದ್ರ ಸರ್ಕಾರದಿಂದ ನೀಡಲಾಗುತ್ತಿದೆ. ಸಹಾಯಕ ಕೃಷಿ ಅಧಿಕಾರಿ ಡಾ.ಅರುಣ ಮಾತನಾಡಿದರು. ರೈತ ಸಂಪರ್ಕ ಕೇಂದ್ರದ ಸಿಬ್ಬಂದಿಗಳಾದ ಕೆ.ಚಂದ್ರಶೇಖರ್, ಆತ್ಮ ಸಿಬ್ಬಂದಿ ರೇಣುಕಾರಾಧ್ಯ, ಹಾಗೂ ಕೋಳೂರು ಗ್ರಾಮದ ಮುಖಂಡರು, ರೈತರಾದ ವಿರಾನಗೌಡ, ರಾಜಶೇಖರ ಗೌಡ, ಅಂಬರೀಶ, ಜುವಾರಿ ಫಾರ್ಮ್ ಹಬ್, ಕೋಳೂರಿನ ಸಿಬ್ಬಂದಿ ಇದ್ದರು.

ಒತ್ತಡ ನಿಯಂತ್ರಣಕ್ಕೆ ಯೋಗ ಸಹಕಾರಿ




◆ **ಹಗರಿಬೊಮ್ಮನಹಳ್ಳಿ:** ದಿನನಿತ್ಯದ ಜಂಜಾಟದ ಬದುಕಿನ ಹಲವು ಒತ್ತಡಗಳ ಹಾಗೂ ಭಾವೋದ್ವೇಗದ ಮನಸ್ಸುಗಳ ನಿಯಂತ್ರಣಕ್ಕೆ ಯೋಗ ಸಹಕಾರಿ ಎಂದು ವಕೀಲರ ಸಂಘದ ನಿಕಟ ಪೂರ್ವ ಅಧ್ಯಕ್ಷ ಪಿ.ರಮೇಶ್ ತಿಳಿಸಿದರು.

ಭಾನುವಾರ ತಾಲೂಕು ವಕೀಲರ ಸಂಘ ಹಾಗೂ ಕಾನೂನು ಸೇವಾ ಸಮಿತಿ ನ್ಯಾಯಾಲಯದ ಸಿಬ್ಬಂದಿ ಸಹಯೋಗದಲ್ಲಿ ನ್ಯಾಯಲಯದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಕಾರ್ಯಕ್ರಮದಲ್ಲಿ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ಘೋಷ ವಾಕ್ಯದೊಂದಿಗೆ ಯೋಗಾಭ್ಯಾಸಕ್ಕೆ ಚಾಲನೆ ನೀಡಿ ಮಾತನಾಡಿದರು. ದಿನನಿತ್ಯ ಯೋಗ ಮಾಡುವುದರಿಂದ ದೈಹಿಕ, ಮಾನಸಿಕವಾಗಿ ವ್ಯಕ್ತಿಯನ್ನು ಸದೃಢಗೊಳಿಸುತ್ತದೆ. ಮನುಷ್ಯನಲ್ಲಿರುವ ಅಲಸ್ಯತನವನ್ನು ಹೋಗಲಾಡಿಸಲು ವ್ಯಕ್ತಿ ಸಾದ ಚಟುವಟಿಕೆಯಿಂದ ಇರಲು ಯೋಗ ಸಹಕಾರಿ ಎಂದರು.

ವಕೀಲರ ಸಂಘದ ಉಪಾಧ್ಯಕ್ಷ ಬಿ.ಎಂ.ಆಂಜನೇಯ, ಕಾರ್ಯದರ್ಶಿ ಡಿ.ಮಂಜಣ್ಣ, ಖಜಾಂಚಿ ಪೂರ್ಣಿಮಾ ಕೆ, ಪ್ಯಾನೆಲ್ ವಕೀಲರಾದ ಗುರು ಬಸವರಾಜ್, ಶಿರಸ್ತೆದಾರರಾದ ವಿಜಯಶ್ರೀ ಮತ್ತು ಕಾನೂನು ಸಮಿತಿಯ ಕೆ.ಸತೀಶ್ ಕುಮಾರ್ ಹಾಗೂ ನ್ಯಾಯಾಲಯದ ಸಿಬ್ಬಂದಿ ಯೋಗಾಭ್ಯಾಸದಲ್ಲಿ ಭಾಗವಹಿಸಿದ್ದರು.

ನಿಧನ ಸುದ್ದಿ

ಶಶಿಕಲಾ ಹೂಗಾರ



◆ **ಹೊಸಪೇಟೆ:** ನಗರದ ಪಾರ್ವತಿ ನಗರ ನಿವಾಸಿ ಶಶಿಕಲಾ ಪ್ರಕಾಶ ಹೂಗಾರ (58) ಭಾನುವಾರ ನಿಧನರಾಗಿದ್ದಾರೆ. (ಮೂಲತಃ ಬಾದಾಮಿ ತಾಲೂಕು ಜಮ್ಮನಕಟ್ಟಿಯವರು). ಅವರು ಪತಿ, ಪುತ್ರ, ಪುತ್ರಿ, ಸೊಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಬಳಗ ಅಗಲಿದ್ದಾರೆ.



ಸಿರುಗುಪ್ಪ: ತಾಲೂಕಿನ ತೆಕ್ಕಲಕೋಟೆ ನಗರ ಕಿತ್ತೂರು ಕೆಜಿಬಿವಿ ಟೈಪ್-4 ಬಾಲಕಿಯರ ವಸತಿ ಶಾಲೆಯಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಿದರು. ಮುಖ್ಯಗುರು ಎಂ.ಎಸ್.ಶ್ರೀಲತಾಬಾಯಿ, ವಾರ್ಡನ್ ಜ್ಯೋತಿ, ಶಿಕ್ಷಕಿಯರಾದ ನಾಗಮ್ಮ, ವಿಜಯಲಕ್ಷ್ಮೀ, ರಂಗಮ್ಮ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸರ್ಕಾರಿ ಶಾಲೆಗಳು ದೇವಾಲಯಗಳಿದ್ದಂತೆ

◆ **ಕೊಟ್ಟೂರು:** ನಮ್ಮ ಸರ್ಕಾರಿ ಶಾಲೆಗಳು ಭಾರತೀಯ ಸಂಸ್ಕೃತಿ, ಸಂಸ್ಕಾರಗಳನ್ನು ಕಲಿಸುವ, ಉಳಿಸಿ, ಬೆಳೆಸುವ ಶ್ರದ್ಧಾ ಕೇಂದ್ರಗಳಾಗಿವೆ ಎಂದು ಕೊಟ್ಟೂರು ಥಿಯಸಾಫಿಕಲ್ ಲಾಡ್ಜ್‌ನ ಕಾರ್ಯದರ್ಶಿ ಜಿ.ಎಂ.ಧನಂಜಯ ಹೇಳಿದರು. ತಾಲೂಕಿನ ಸುಂಕದಕಲ್ಲು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪೂರ್ವ ಪ್ರಾಥಮಿಕ ತರಗತಿಗಳ ಪ್ರಾರಂಭೋತ್ಸವ ಹಾಗೂ 'ಥಿಯಸಾಫಿಕಲ್ ಲಾಡ್ಜ್‌ನ ದೀನ ದಯಾಳ್ ಸೇವಾ ವಿಭಾಗ'ದ ವತಿಯಿಂದ 200 ಮಕ್ಕಳಿಗೆ ನೋಟ್‌ಬುಕ್ ಹಾಗೂ ಪೆನ್ಸಿಲ್ ಕಿಟ್‌ಗಳನ್ನು ವಿತರಿಸುವ ಕಾರ್ಯಕ್ರಮದಲ್ಲಿ ಮಾತನಾಡಿದರು. ಇಂದಿನ ದಿನಗಳಲ್ಲಿ ಮಕ್ಕಳು ವಿನಯತೆ, ಸಹೋದರತ್ವ, ಪರಸ್ಪರ ಪ್ರೀತಿ, ವಿಶ್ವಾಸ, ಸಹಕಾರ ಮನೋಭಾವಗಳನ್ನು ರೂಢಿಸಿಕೊಳ್ಳುವ ಅವಶ್ಯಕತೆ ಇದೆ ಎಂದರು. ಕೊಟ್ಟೂರಿನ ಎಲ್‌ಬಿಎಸ್ ಸಿಆರ್‌ಸಿಯ ಸಿಆರ್‌ಪಿ ಅಣಜಿ ಸಿದ್ಲಿಂಗಪ್ಪ ಮಾತನಾಡಿದರು. ಮುಖ್ಯ ಶಿಕ್ಷಕ ಹೊಂಬಾಳೆ ಮಂಜುನಾಥ ಸ್ವಾಗತಿಸಿದರು. ವಿಜ್ಞಾನ ಶಿಕ್ಷಕ ಎಂ.ಸಿದ್ದಲಿಂಗಪ್ಪ ನಿರ್ವಹಿಸಿದರು. ಹಿರಿಯ ಶಿಕ್ಷಕ ಜಿ.ಚಂದ್ರಪ್ಪ ವಂದಿಸಿದರು. ಲಾಡ್ಜ್‌ನ ಕಾರ್ಯದರ್ಶಿಗಳಾದ ಜೆ.ಎಂ.ಧನಂಜಯ ಹಾಗೂ ಅಣಜಿ ಸಿದ್ಲಿಂಗಪ್ಪ ಅವರನ್ನು ಗೌರವಿಸಲಾಯಿತು. ಶಾಲೆಯ 200 ಮಕ್ಕಳಿಗೆ ನೋಟ್‌ಬುಕ್ ಹಾಗೂ ಪೆನ್ಸಿಲ್ ಕಿಟ್‌ಗಳನ್ನು ವಿತರಿಸಲಾಯಿತು. ಶಿಕ್ಷಕರಾದ ಬಿ.ಬಸವರಾಜ, ಕೆ.ಎನ್.ಹನುಮಂತಪ್ಪ, ಬಿ.ಎಂ.ಗುರುಪ್ರಸಾದ, ಲಾಡ್ಜ್‌ನ ಸದಸ್ಯರಾದ ಬಿ.ಹನುಮಂತಪ್ಪ, ಎಚ್.ಎಸ್.ರಾಮಣ್ಣ ಶೆಟ್ರು, ಕರ್ಣಂ ಮಹಾಂತಪ್ಪ, ಸುಧೀಂದ್ರ, ಜಿ.ಮಲ್ಲಿಕಾರ್ಜುನ, ಎಚ್.ಪಂಪಾಪತಿ, ಎಂ.ಸುಜಾತ, ಜ್ಯೋತಿ ಪ್ರಕಾಶ್ ರಾಯ್ಕರ್, ವನಜಾಕ್ಷಮ್ಮ, ಪುಷ್ಪಾವತಿ, ಅನುರಾಧಮ್ಮ, ಮಹೇಶ್ವರಿ ಇತರರಿದ್ದರು.



ಕೊಟ್ಟೂರು: ತಾಲೂಕಿನ ಸುಂಕದಕಲ್ಲು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪೂರ್ವ ಪ್ರಾಥಮಿಕ ತರಗತಿಗಳ ಪ್ರಾರಂಭೋತ್ಸವ ಹಾಗೂ 'ಥಿಯಸಾಫಿಕಲ್ ಲಾಡ್ಜ್‌ನ ದೀನ ದಯಾಳ್ ಸೇವಾ ವಿಭಾಗ'ದ ವತಿಯಿಂದ 200 ಮಕ್ಕಳಿಗೆ ನೋಟ್ ಬುಕ್ ಹಾಗೂ ಪೆನ್ಸಿಲ್ ಕಿಟ್‌ಗಳನ್ನು ವಿತರಿಸಲಾಯಿತು.

ಕಬ್ಬೇರಪೇಟೆ ಸರ್ಕಾರಿ ಶಾಲೆಯಲ್ಲಿ ಹೈಟೆಕ್ ಶೌಚಾಲಯ ಉದ್ಘಾಟನೆ

ಎಲ್‌ಕೆಜಿ, ಯುಕೆಜಿಗೆ ಚಾಲನೆ

◆ **ವಿಜಯನಗರ:** ಹೊಸಪೇಟೆ ಇಲ್ಲಿನ ಕಬ್ಬೇರಪೇಟೆ ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (ಬಿ.ಆರ್.ಸಿ.ಎಸ್) ಯಲ್ಲಿ ಕಿರ್ಲೋಸ್ಕರ್ ಫೆರಸ್ ಗ್ರಾಮೀಣಾಭಿವೃದ್ಧಿ ಟ್ರಸ್ಟ್ ಹಾಗೂ ರೋಟರಿ ಕ್ಲಬ್ ಹಂಪಿ ಪರ್ಲ್ಸ್ ಮೂಲಕ ನಿರ್ಮಿಸಲಾದ ಹೈಟೆಕ್ ಶೌಚಾಲಯದ ಉದ್ಘಾಟನೆ, ಎಲ್ ಕೆಜಿ, ಯುಕೆಜಿ ತರಗತಿಗಳ ಪ್ರಾರಂಭ ಹಾಗೂ ಪಠ್ಯಪುಸ್ತಕ ವಿತರಣಾ ಕಾರ್ಯಕ್ರಮ ಸೋಮವಾರ ಜರುಗಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ನಗರಸಭೆ ಪೌರಾಯುಕ್ತ ಶಿವಕುಮಾರ್ ಮಾತನಾಡಿ, ಸರ್ಕಾರಿ ಶಾಲೆಯಲ್ಲಿ ಹೈಟೆಕ್ ಶೌಚಾಲಯ ನಿರ್ಮಾಣ ಮಾಡಿ ಮಕ್ಕಳ ಬಳಕೆಗೆ ಒದಗಿಸಿದ ಕಿರ್ಲೋಸ್ಕರ್ ಕಂಪನಿಯ ಕಾರ್ಯ ಶ್ಲಾಘನೀಯ. ಮಕ್ಕಳು ಇದರ ಸಮರ್ಪಕ ಬಳಕೆ ಮಾಡಿಕೊಳ್ಳಬೇಕು.

ನಾನು ಕೂಡಾ ಸರ್ಕಾರಿ ಶಾಲೆಯಲ್ಲಿ ಓದಿದವನು. ಹೀಗಾಗಿ ಪ್ರತಿವರ್ಷ ನನ್ನ ವೇತನದ ಶೇ.10 ರಷ್ಟು ಹಣವನ್ನು ಯಾವುದಾದರೊಂದು ಸರ್ಕಾರಿ ಶಾಲೆಗೆ ದೇಣಿಗೆ ನೀಡುತ್ತೇನೆ.

ಈ ವರ್ಷ ಕಬ್ಬೇರಪೇಟೆ ಶಾಲೆಗೆ ವೈಯಕ್ತಿಕವಾಗಿ 50,000 ರೂ. ವೆಚ್ಚದಲ್ಲಿ ಅಗತ್ಯ ಸೌಲಭ್ಯಗಳನ್ನು ಒದಗಿಸುವುದಾಗಿ ಭರವಸೆ ನೀಡಿದರು.



ಅಧ್ಯಕ್ಷತೆ ವಹಿಸಿದ್ದ ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಉಮಾಪತಿ ಮಾತನಾಡಿ, ಸರ್ಕಾರಿ ಶಾಲೆಗಳು ಗುಣಮಟ್ಟದಲ್ಲಿ ಖಾಸಗಿ ಶಾಲೆಗಳಿಗಿಂತ ಯಾವುದರಲ್ಲೂ ಕಡಿಮೆ ಇಲ್ಲದಂತೆ ಶಿಕ್ಷಣ ನೀಡುತ್ತಿವೆ. ಈ ನಿಟ್ಟಿನಲ್ಲಿ ಕಬ್ಬೇರಪೇಟೆ ಶಾಲೆ ಮಾದರಿಯಾಗಿದೆ ಎಂದು ಶ್ಲಾಘಿಸಿದರು.

ಇದೇ ವೇಳೆ ಭುವನೇಶ್ವರಿ ಸ್ಪಂದನಾ ಮಹಿಳಾ ಟ್ರಸ್ಟ್ ವತಿಯಿಂದ ಅಧ್ಯಕ್ಷೆ ಡಾ. ಅಂಜಲಿ ಹಾಗೂ ಸದಸ್ಯರು ಶಾಲಾ ಮಕ್ಕಳಿಗೆ ನೋಟ್ ಪುಸ್ತಕಗಳನ್ನು ವಿತರಿಸಿದರು. ನಗರಸಭೆ ವತಿಯಿಂದ ವಾರ್ಡ್ ನಾಗರಿಕರಿಗೆ ನಾಲ್ಕು ರೀತಿಯಲ್ಲಿ ಕಸವನ್ನು ವಿಂಗಡಿಸಿ ಕಸದ ಗಾಡಿಗಳಿಗೆ ಹಾಕುವ ಕುರಿತು ಮಾಹಿತಿ ನೀಡಲಾಯಿತು.

ಕ್ಷೇತ್ರ ಸಮನ್ವಯಾಧಿಕಾರಿ ಶಿವಕುಮಾರ್, ಶಿಕ್ಷಣ ಸಂಯೋಜಕ ಮಧುಸೂದನ್, ರಾಜು, ಅಬ್ದುಲ್ ಕಲಾಂ, ಕಿರ್ಲೋಸ್ಕರ್ ಫೆರಸ್ ಗ್ರಾಮೀಣಾಭಿವೃದ್ಧಿ ಟ್ರಸ್ಟ್‌ನ ಕಮಲಾ ಗುಮಾಸ್ತೆ, ಉದಯ್ ಕುಲಕರ್ಣಿ, ರೋಟರಿ ಹಂಪಿ ಪರ್ಲ್ಸ್ ಅಧ್ಯಕ್ಷರಾದ ಅನ್ನಪೂರ್ಣ, ಕಾರ್ಯದರ್ಶಿ ದೀಪಾ ಅಗರ್ ವಾಲ್, ನೇತ್ರಾವತಿ, ಅಧ್ಯಕ್ಷ ನಾಗರಾಜ ಕಂಪ್ಲಿ, ಶಾಲೆಯ ಶಿಕ್ಷಕರು ಉಪಸ್ಥಿತರಿದ್ದರು.

ಕಣ್ಮನ ಸೆಳೆದ 'ಶ್ರೀಕೃಷ್ಣ ಸಂಧಾನ' ನಾಟಕ, ಸಮೂಹ ನೃತ್ಯ

◆ **ಬಳ್ಳಾರಿ:** ಕನ್ನಡ ನಾಡಿನ ಶ್ರೀಮಂತ ಕಲೆ ಮತ್ತು ಸಂಸ್ಕೃತಿಯನ್ನು ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಪ್ರೇಕ್ಷಕರು ಹೆಚ್ಚಿರುವ ಸ್ಥಳಗಳಿಗೇ ನೇರವಾಗಿ ತೆರಳಿ ಪ್ರದರ್ಶನ ನೀಡುವ ಕಲಾ ನಡಿಗೆ-ನಿಮ್ಮ ಬಳಿಗೆ' ಯೋಜನೆಗೆ ಚಾಲನೆ ನೀಡಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಅವರು ಹೇಳಿದರು.

ತಾಲೂಕಿನ ಬ್ಯಾಲಚಿಂತ ಗ್ರಾಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜಿಲ್ಲಾ ಕಲಾವಿದರ ಸಂಘದ ಆಶ್ರಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಕಲಾ ನಡಿಗೆ - ನಿಮ್ಮ ಬಳಿಗೆ' ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ವೇದಿಕೆಗಳಲ್ಲಿ ಪ್ರೇಕ್ಷಕರ ಭಾಗವಹಿಸುವಿಕೆ ಕಡಿಮೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕಲಾವಿದರೇ ಜನರೆಡೆಗೆ ನಡೆದು ಬಂದು ಕಲಾ ನೈಪುಣ್ಯತೆಯನ್ನು ಪ್ರದರ್ಶಿಸುವ ವಿಭಿನ್ನ ಆಶಯವನ್ನು ಈ ಪ್ರಸಕ್ತ ಸಾಲಿನ ಯೋಜನೆ ಹೊಂದಿದೆ ಎಂದು ತಿಳಿಸಿದರು.

ಸಾಂಸ್ಕೃತಿಕ ವೈಭವ: ಕಾರ್ಯಕ್ರಮದ ಅಂಗವಾಗಿ ಬಳ್ಳಾರಿಯ ಕುಮಾರಿ ಸಮೀರಾ ಎಸ್.ಕೆ. ಮತ್ತು ಸಂಗಡಿಗರು ಪ್ರಸ್ತುತಪಡಿಸಿದ ಸಮೂಹ ನೃತ್ಯ ಪ್ರದರ್ಶನನೆರೆದಿದ್ದವರಗಮನಸೆಳೆಯಿತು. ತದನಂತರ ಸಿರುಗುಪ್ಪ ತಾಲೂಕಿನ ಸಿರಿಗೇರಿ ಗ್ರಾಮದ ಧಾತ್ರಿ ರಂಗಸಂಸ್ಥೆ ವತಿಯಿಂದ ಪ್ರದರ್ಶನಗೊಂಡ 'ಶ್ರೀಕೃಷ್ಣ ಸಂಧಾನ' ಹಾಸ್ಯ ಪೌರಾಣಿಕ ನಾಟಕವು ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿತು. ಕಲಾವಿದರ ಅದ್ಭುತ ಅಭಿನಯ, ಚುರುಕಿನ ಸಂಭಾಷಣೆ ಹಾಗೂ ಆಕರ್ಷಕ ರಂಗವಿನ್ಯಾಸಕ್ಕೆ ಜನರಿಂದ ಭರಪೂರ ಚಪ್ಪಾಳೆ ವ್ಯಕ್ತವಾಯಿತು.

ಜಿಲ್ಲಾ ಕಲಾವಿದರ ಸಂಘದ ಅಧ್ಯಕ್ಷ ಯಲ್ಲನಗೌಡ ಶಂಕರಬಂಡೆ, ಗ್ರಾಮದ ಹಿರಿಯ ಮುಖಂಡ ಶಿವಶಂಕರಗೌಡ, ಹಿರಿಯ ನೃತ್ಯ ಕಲಾವಿದ ಎಸ್.ಕೆ.ಆರ್. ಜಿಲಾನಿ ಭಾಷ, ಬಯಲಾಟ ಕಲಾವಿದ ಮುದ್ದಟನೂರು ತಿಪ್ಪೇಸ್ವಾಮಿ ಹಾಗೂ ತೊಗಲುಗೊಂಬೆ ಕಲಾವಿದ ಸುಬ್ಬಣ್ಣ ಸೇರಿದಂತೆ ಗ್ರಾಮದ ಮಹಿಳೆಯರು, ಯುವಕರು ಹಾಗೂ ವಿದ್ಯಾರ್ಥಿಗಳು ಇತರರಿದ್ದರು.



ಕರೂರ: ಭಾರತ ಸರ್ಕಾರದ ಆಯೋಗ ಹಾಗೂ ಸಮಭಾಗಿತ್ವ ಸಮಿತಿ, ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತಿ ಆಶ್ರಯದಲ್ಲಿ ಸಮೀಪದ ತಾಳೂರು ಗ್ರಾಮದಲ್ಲಿ ವಿಶೇಷವಾಗಿ ಗ್ರಾಮ ಸಭೆ ನಡೆಸಲಾಯಿತು. ತಾಳೂರು ಗ್ರಾಪಂ ಪಿಡಿಒ ಮಹಮದ್ ಕಧೀರ್, ಕಂಪ್ಯೂಟರ್ ಆಪರೇಟರ್ ಕುಮಾರ್‌ಗೌಡ, ಬಿಲ್ ಕಲೆಕ್ಟರ್ ಶಿನಪ್ಪ ಇತರರಿದ್ದರು.




ಮತದಾರರ ಪಟ್ಟಿ ಪರಿಷ್ಕರಣೆ ಪ್ರಜಾಪ್ರಭುತ್ವದ ಅಡಿಪಾಯ

◆ **ಕೂಡ್ಲಿಗಿ:** ಪ್ರಜಾಪ್ರಭುತ್ವದ ಸುಭದ್ರ ಅಡಿಪಾಯವೇ ಮತದಾರರ ಪಟ್ಟಿ, ಪ್ರತಿಯೊಬ್ಬ ಅರ್ಹ ಮತದಾರನ ಹೆಸರು ಪಟ್ಟಿಯಲ್ಲಿರುವುದು ಅನಿವಾರ್ಯ. ಒಬ್ಬ ಮತದಾರನ ಹೆಸರು ಪಟ್ಟಿಯಿಂದ ಕೈತಪ್ಪಿದರೂ ಅದು ಪ್ರಜಾಪ್ರಭುತ್ವಕ್ಕೆ ಮಾಡಿದ ದ್ರೋಹಕ್ಕೆ ಸಮಾನ ಎಂದು ಕೂಡಲಗಿ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ಶ್ರೀನಿವಾಸ್ ಎನ್.ಟಿ. ಅಭಿಪ್ರಾಯಪಟ್ಟರು.

ಸಂವಿಧಾನ ರಕ್ಷಣೆ ನಮ್ಮ ಜವಾಬ್ದಾರಿ ಮತದಾರರ ಪಟ್ಟಿ ಪರಿಷ್ಕರಣೆಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಭಾರತೀಯ ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ಉಳಿಸುವ ಮಹತ್ವದ ಜವಾಬ್ದಾರಿಯನ್ನು ಪ್ರತಿಯೊಬ್ಬ ಕಾರ್ಯಕರ್ತರು ಅರಿತು ಕೆಲಸ ಮಾಡಬೇಕು ಎಂದು ಕರೆ ನೀಡಿದರು. 'ಪ್ರತಿ ಮತವೂ ಮುಖ್ಯ, ಪ್ರಜಾಪ್ರಭುತ್ವದ ರಕ್ಷಣೆ ನಮ್ಮೆಲ್ಲರ ಗುರಿ' ಎಂಬ ಸಂದೇಶವನ್ನು ಶಾಸಕರು ಕಾರ್ಯಕರ್ತರಿಗೆ ಬೋಧಿಸಿದರು.

ಈ ಕಾರ್ಯಕ್ರಮದಲ್ಲಿ ಬ್ಲಾಕ್ ಕಾಂಗ್ರೆಸ್ ಸಮಿತಿಯ ಪದಾಧಿಕಾರಿಗಳು, ಪಕ್ಷದ ಮುಖಂಡರು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಬಿಎಲ್‌ಎ-2 ಏಜೆಂಟರುಗಳು ಭಾಗವಹಿಸಿದ್ದರು. ಕೂಡ್ಲಿಗಿ ಮತ್ತು ಖಾನಹೊಸಹಳ್ಳಿ ಬ್ಲಾಕ್ ಕಾಂಗ್ರೆಸ್ ಸಮಿತಿಗಳ ನೇತೃತ್ವದಲ್ಲಿ ಸೋಮವಾರ ಸಂಡೂರ್ ರಸ್ತೆಯ ಡಾ. ಬಿ.ಆರ್. ಅಂಬೇಡ್ಕರ್ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ 'ಮತದಾರರ ವಿಶೇಷ ಪರಿಷ್ಕರಣೆ ಕುರಿತ ಬಿ.ಎಲ್.ಎ-2 ಏಜೆಂಟರ ಜಾಗೃತಿ ಮತ್ತು ತರಬೇತಿ ಕಾರ್ಯಾಗಾರ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿ ಮತವೂ ಮುಖ್ಯ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುರುಸಿದ್ದನ ಗೌಡ್ರು, ಕಾನಹೊಸಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುಮಾರ್ ಗೌಡ್ರು, ಕಾಂಗ್ರೆಸ್ ಮುಖಂಡ, ಸಮಾಜ ಸೇವಕರು ಎನ್.ಟಿ.ತಮ್ಮಣ್ಣ, ಮಾಜಿ ಪಪಂ ಅಧ್ಯಕ್ಷ ಕಾವಲಿ ಶಿವಪ್ಪ ನಾಯಕ, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಮಹಮ್ಮದ್ ಜೀಲಾನ್, ಎಪಿಎಂಸಿ ಅಧ್ಯಕ್ಷ ಬೋಸಯ್ಯ ಹಾಗೂ ಹಿರಿಯ ಮುಖಂಡರಾದ ಉಮೇಶ್, ತಳಾಶ್ ವೆಂಕಟೇಶ್, ಡಿ.ಬಿ.ಚಿತ್ತಪ್ಪ, ನಜೀರ್ ಸಾಬ್, ಬಸಣ್ಣ, ಬಸವರಾಜ್, ತಳವಾರ್ ಶರಣಪ್ಪ, ಬಣವಿಕಲ್ಲು ಎರ್ರಿಸ್ವಾಮಿ, ದುರುಗೇಶ್, ಸೇರಿದಂತೆ ವಿವಿಧ ಗ್ರಾಪಂ ಮಾಜಿ ಅಧ್ಯಕ್ಷರು, ಮಾಜಿ ತಾಪಂ ಸದಸ್ಯರು ಹಾಗೂ ಯುವ ಕಾಂಗ್ರೆಸ್, ಎನ್‌ಎಸ್‌ಯುಐ ಮತ್ತು ಮಹಿಳಾ ಕಾಂಗ್ರೆಸ್‌ನ ಕಾರ್ಯಕರ್ತರು ಸೇರಿದಂತೆ ಇತರರು ಇದ್ದರು.



ಬೇಟಿ ಬಚಾವೋ ಬೇಟಿ ಪಢಾವೋ ಕಾರ್ಯಕ್ರಮ

◆ **ಗಾದಿಗನೂರು:** ನಶಾ ಮುಕ್ತ ಭಾರತ ಅಭಿಯಾನ ಹಾಗೂ ಬೇಟಿ ಬಚಾವೋ ಬೇಟಿ ಪಢಾವೋ, ಫೋಕ್ಸೋ ಕಾಯ್ದೆ ಕುರಿತು ಮಕ್ಕಳಿಗೆ ಜಾಗೃತಿ ಕಾರ್ಯಕ್ರಮವನ್ನು ಗಾದಿಗನೂರು ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ನಡೆಯಿತು.

ಈ ದಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸರ್ಕಾರಿ ಪ್ರೌಢ ಶಾಲೆ ಗಾದಿಗನೂರು ವಿಜಯನಗರ ಜಿಲ್ಲೆ ಹೊಸಪೇಟೆ ತಾಲೂಕು

ಇಂದು ನಶಾ ಮುಕ್ತ ಭಾರತ ಅಭಿಯಾನ ಹಾಗೂ ಮಕ್ಕಳನ್ನು ಲೈಂಗಿಕ ದೌರ್ಜನ್ಯದಿಂದ ರಕ್ಷಿಸುವ ಕಾಯ್ದೆ ಕುರಿತು ಮಕ್ಕಳಿಗೆ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಮಾದಕ ವಸ್ತುಗಳಾದ ತಂಬಾಕು, ಮದ್ಯ, ಗಾಂಜಾ ಹಾಗೂ ಇತರೆ ವ್ಯಸನಕಾರಿ ಪದಾರ್ಥಗಳ ದುಷ್ಪರಿಣಾಮಗಳ ಕುರಿತು ಮಕ್ಕಳಿಗೆ ಅರಿವು ಮೂಡಿಸಲಾಯಿತು. ನಶೆಯಿಂದ ಆರೋಗ್ಯ, ಶಿಕ್ಷಣ ಹಾಗೂ ಭವಿಷ್ಯದ ಮೇಲೆ ಉಂಟಾಗುವ ಕೆಟ್ಟ ಪರಿಣಾಮಗಳ ಬಗ್ಗೆ ಜಿಲ್ಲಾ ಮಿಷನ್ ಶಕ್ತಿ ಸಂಯೋಜಕಾದ ವಿದ್ಯಾ ಮಾತನಾಡಿದರು.

ಅದೇ ರೀತಿ ಫೋಕ್ಸೋ ಕಾಯ್ದೆಯ ಕುರಿತು ಮಾಹಿತಿ ನೀಡುತ್ತಾ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ಕಿರುಕುಳ ಮತ್ತು ಶೋಷಣೆ ಕಾನೂನುಬಾಹಿರವಾಗಿದ್ದು, ಅಂತಹ ಘಟನೆಗಳು ನಡೆದರೆ ಪೋಷಕರು, ಶಿಕ್ಷಕರು ಅಥವಾ ಸಂಬಂಧಪಟ್ಟ ಅಧಿಕಾರಿಗಳಿಗೆ ತಕ್ಷಣ ಮಾಹಿತಿ ನೀಡುವಂತೆ ತಿಳಿಸಲಾಯಿತು. ಪ್ರೌಢಶಾಲಾ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಮತ್ತು ಅಂಗನವಾಡಿ ಕಾರ್ಯಕರ್ತೆಯದ ಸುರೇಖಾ ಉಪಸ್ಥಿತಿ ಇದ್ದರು.



ಬಿಜೆಪಿ ಅಧಿಕಾರಕ್ಕೆ ಬಂದರೆ ವಾಲ್ಮೀಕಿ ಸಮಾಜಕ್ಕೆ ಲಾಭ: ಬಂಗಾರು ಹನುಮಂತು

◆ **ವಿಜಯನಗರ:** ವಾಲ್ಮೀಕಿ ಜನರ ಅಭಿವೃದ್ಧಿಗಾಗಿ ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ ಮೀಸಲಾತಿ ಹೆಚ್ಚಳವನ್ನು ಪರೋಕ್ಷವಾಗಿ ಕಿತ್ತುಕೊಳ್ಳುವ ಮೂಲಕ ಕಾಂಗ್ರೆಸ್ ಸರ್ಕಾರ ನಮಗೆ ದ್ರೋಹ ಬಗೆದಿದೆ. ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಮತ್ತೆ ಬಿಜೆಪಿಯನ್ನು ಅಧಿಕಾರಕ್ಕೆ ಬಂದರೆ ಮಾತ್ರ ಮೀಸಲಾತಿ ಸಹಿತ ಇತರೆ ಸೌಲಭ್ಯಗಳು ವಾಲ್ಮೀಕಿ ನಾಯಕರಿಗೆ ಸಿಗಲು ಸಾಧ್ಯ ಎಸ್‌ಟಿ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಬಂಗಾರು ಹನುಮಂತು ಭರವಸೆ ನೀಡಿದರು. ಬಿಜೆಪಿ ಎಸ್‌ಟಿ ಮೋರ್ಚಾದಿಂದ ಹೊಸಪೇಟೆಯಲ್ಲಿ ಸೋಮವಾರ ಏರ್ಪಡಿಸಿದ್ದ ಸಾಮಾಜಿಕ ನ್ಯಾಯಕ್ಕಾಗಿ ಜಾಗೃತಿ ಸಮಾವೇಶದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಎಸ್‌ಟಿ ಮೀಸಲಾತಿ ಹೆಚ್ಚಳಕ್ಕಾಗಿ ನಮ್ಮ ಸಮಾಜ ಜನರು ಕಳೆದ 30 ವರ್ಷಗಳಿಂದ ನಿರಂತರ ಹೋರಾಟ ನಡೆಸಿದ್ದರು. ರಾಜನಹಳ್ಳಿಯ ಸ್ವಾಮೀಜಿ ಸುಮಾರು ಎರಡು ವರ್ಷಗಳ ಕಾಲ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಿರಂತರ ಧರಣಿ ನಡೆಸಿದ್ದರು. ಅದಕ್ಕೆ ಸ್ಪಂದಿಸಿದ್ದ ಅಂದಿನ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರು ಮೀಸಲಾತಿ ಹೆಚ್ಚಳಕ್ಕೆ ಅಸ್ತು ಎಂದಿದ್ದರು. ಆದರೆ, ಇಂದಿನ ಕಾಂಗ್ರೆಸ್ ಸರ್ಕಾರ ಎಸ್‌ಟಿ ಮೀಸಲಾತಿ ಹೆಚ್ಚಿಸಿರುವುದಕ್ಕೆ ಕೋರ್ಟ್ ಮೂಲಕ ತಡೆಯಾಜ್ಞೆ ತರುವಂತೆ ಮಾಡಿದೆ.



ಕಾಂಗ್ರೆಸ್ ಪಕ್ಷ 11 ಜನ ಎಸ್‌ಟಿ ಶಾಸಕರನ್ನು ಆಯ್ಕೆ ಮಾಡಿದ್ದರೂ, ನಮ್ಮ ಸಮಾಜಕ್ಕೆ ಅನ್ಯಾಯ ಮಾಡಿದೆ. ಮುಂದಿನ ಚುನಾವಣೆಯಲ್ಲಿ ರಾಜ್ಯದ 15 ಎಸ್‌ಟಿ ಮೀಸಲು ಕ್ಷೇತ್ರಗಳಲ್ಲಿ ಬಿಜೆಪಿಯನ್ನು ಗೆಲ್ಲಿಸುವ ಮೂಲಕ ವಾಲ್ಮೀಕಿ ವಿರೋಧಿ ಕಾಂಗ್ರೆಸ್‌ಗೆ ಪಾಠ ಕಲಿಸಬೇಕು ಎಂದು ಮನವಿ ಮಾಡಿದರು.

ಕೆ.ಎಸ್.ಭಗವಾನ್ ವಿರುದ್ಧ ಕ್ರಮಕ್ಕೆ ಆಗ್ರಹ

◆ **ಹಗರಿಬೊಮ್ಮನಹಳ್ಳಿ:** ಹಿಂದೂ ಧರ್ಮ, ಶ್ರೀರಾಮ ಹಾಗೂ ಹಿಂದೂ ದೇವತೆಗಳ ಕುರಿತು ಅವಹೇಳನಕಾರಿ, ಪ್ರಚೋದನಕಾರಿ ಮತ್ತು ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟುಮಾಡುವ ಹೇಳಿಕೆ ನೀಡಿರುವ ಪ್ರೊ.ಕೆ.ಎಸ್.ಭಗವಾನ್ ಅವರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಆಗ್ರಹಿಸಿ ಹಿಂದೂ ಜನ ಜಾಗೃತಿ ವೇದಿಕೆಯಿಂದ

ತಹಶೀಲ್ದಾರ್ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು. ಹಿಂದೂ ಜನ ಜಾಗೃತಿ ವೇದಿಕೆಯ ಅಕ್ಕಿ ಬಸವರಾಜ ಮಾತನಾಡಿ, ಪ್ರೊ.ಕೆ.ಎಸ್.ಭಗವಾನ್ ಅವರು ಸಾರ್ವಜನಿಕ ವೇದಿಕೆಗಳಲ್ಲಿ ಹಲವು ಹಿಂದೂ ಧರ್ಮ, ಶ್ರೀರಾಮನ ಕುರಿತು ಅವಹೇಳನಕಾರಿ ಮತ್ತು ವಿವಾದಾತ್ಮಕ ಹೇಳಿಕೆಗಳನ್ನು ನೀಡಿರುವುದು ಮಾಧ್ಯಮಗಳ ಮೂಲಕ ತಿಳಿದುಬಂದಿದೆ.

ತಮ್ಮ ಭಾಷಣದಲ್ಲಿ ಅವರು ಪ್ರಭು ಶ್ರೀರಾಮರ ಕುರಿತು ಆಧಾರರಹಿತ ಆರೋಪಗಳನ್ನು ಮಾಡುವುದರ ಜೊತೆಗೆ ಹಿಂದೂ ಧರ್ಮದ ನಂಬಿಕೆಗಳು, ಧಾರ್ಮಿಕ ಆಚರಣೆಗಳು ಮತ್ತು ದೇವತೆಗಳ ಕುರಿತು ಅವಮಾನಕಾರಿಯಾಗಿ ಮಾತನಾಡಿರುವುದು ಕೋಟ್ಯಂತರ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ನೋವುಂಟುಮಾಡಿದೆ ಎಂದರು.

ಭಾರತದ ಸಂವಿಧಾನವು ಪ್ರತಿಯೊಬ್ಬರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನೀಡಿದ್ದರೂ, ಯಾವುದೇ ಧರ್ಮ, ದೇವತೆ ಅಥವಾ ಧಾರ್ಮಿಕ ನಂಬಿಕೆಗಳನ್ನು ಅವಹೇಳನ ಮಾಡುವ ಹಕ್ಕನ್ನು ನೀಡಿಲ್ಲ, ಯಾವುದೇ ಸಮುದಾಯದ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟುಮಾಡುವ ಹೇಳಿಕೆಗಳು ಸಾರ್ವಜನಿಕ ಶಾಂತಿ ಮತ್ತು ಸೌಹಾರ್ದತೆಗೆ ಅಪಾಯವನ್ನುಂಟುಮಾಡುತ್ತವೆ.



ಪ್ರೊ.ಕೆ.ಎಸ್.ಭಗವಾನ್ ಅವರು ಕಾರ್ಯಕ್ರಮದಲ್ಲಿ ನೀಡಿರುವ ಭಾಷಣದ ಸಂಪೂರ್ಣ ವಿಡಿಯೋ, ಧ್ವನಿಮುದ್ರಣ ಹಾಗೂ ಇತರೆ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿ, ಅವರ ವಿರುದ್ಧ ಅನ್ವಯವಾಗುವ ಕಾನೂನು ವಿಧಿಗಳಡಿ ಪ್ರಕರಣ ದಾಖಲಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕಾಗಿ ಹಿಂದೂ ಜನಜಾಗೃತಿ ಸಮಿತಿಯ ಪ್ರಕಟಣೆಯಲ್ಲಿ ತಿಳಿಸಿದೆ. ಹಿಂದೂ ಜನಜಾಗೃತಿ ಸಮಿತಿಯು ಪೂಜಾ ಶ್ರೀಕಾಂತ ಧರ್ಮಪ್ರೇಮಿಗಳಾದ ಪ್ರಭಾಕರ, ತಿಪ್ಪೇಸ್ವಾಮಿ, ಗುರುರಾಜಪ್ಪ, ಮಲ್ಲಣ್ಣ, ಶಿವಣ್ಣ, ಹುಚ್ಚಪ್ಪ ಭಜಂತ್ರಿ, ರವಿಶಂಕರ, ಚಂದ್ರಮೌಳಿ, ಕೊಟ್ರಮ್ಮ, ನಾಗಭೂಷಣ ಗದ್ದಿಕೇರಿ ಇತರರಿದ್ದರು.

ಆರೋಗ್ಯಕರ ಸಮಾಜಕ್ಕೆ ಯೋಗ ಸಹಕಾರಿ

◆ **ಸಿರುಗುಪ್ಪ:** ಮುಂದಿನ ಪೀಳಿಗೆಗೆ ಯೋಗವನ್ನು ವರ್ಗಾಯಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ತಾಲೂಕು ವಕೀಲರ ಸಂಘದ ಅಧ್ಯಕ್ಷ ಉಪ್ಪಾರವೆಂಕೋಬ ಹೇಳಿದರು. ತಾಲೂಕಿನ ನ್ಯಾಯಾಲಯ ಆವರಣದಲ್ಲಿ ಭಾನುವಾರ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹಾಗೂ ಆಯುಷ್ ಇಲಾಖೆ ಸಂಯುಕ್ತಾಶ್ರಯದಲ್ಲಿ ನಡೆದ ಅಂತರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಇತ್ತೀಚಿನ ದಿನಗಳಲ್ಲಿ ಪ್ರತಿಯೊಂದು ಕ್ಷೇತ್ರದಲ್ಲಿ ಒತ್ತಡವಿದೆ. ಮಕ್ಕಳಿಂದ ವೃದ್ಧರವರೆಗೆ ಪ್ರತಿಯೊಬ್ಬರು ಒತ್ತಡದಲ್ಲಿ ಜೀವನ ನಡೆಸುತ್ತಿದ್ದಾರೆ. ಇದರಿಂದ ಮುಕ್ತರಾಗಲು ಪ್ರತಿಯೊಬ್ಬರು ಪ್ರತಿದಿನ ಯೋಗ ಅಭ್ಯಾಸ ಮಾಡಬೇಕು. ಆಗ ಮಾತ್ರ ಆರೋಗ್ಯಕರ ಜೀವನ ನಡೆಸುವ ಜೊತೆಗೆ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯವಾಗಲಿದೆ ಎಂದರು. ಸರ್ಕಾರಿ ಅಭಿಯೋಜಕ ಶಿವರಾಜ್ ಪಾಟೀಲ ಮಾತನಾಡಿ, ಯೋಗವು ಭಾರತದ ಅಮೂಲ್ಯ ಪರಂಪರೆಯಾಗಿದೆ. ಇಂದು ವಿಶ್ವದಾದ್ಯಂತ ಆರೋಗ್ಯ ರಕ್ಷಣೆಯ ಅಭ್ಯಾಸ ಕ್ರಮವಾಗಿ ಗುರುತಿಸಿಕೊಂಡಿದೆ. ಯೋಗಭ್ಯಾಸದಿಂದ ಜೀವನದಲ್ಲಿ ಶಿಸ್ತು, ಏಕಾಗ್ರತೆ ಬೆಳೆಸಿಕೊಳ್ಳಬಹುದು. ಯುವಜನರು ಇದರ ಕಡೆ ಹೆಚ್ಚಿನ ಆಸಕ್ತಿ ವಹಿಸಬೇಕು ಎಂದರು. ವಕೀಲರ ಸಂಘದ ಜಂಟಿ ಕಾರ್ಯದರ್ಶಿ ಮಂಜುಳಾ, ಕಾರ್ಯದರ್ಶಿ ಶಿವಕುಮಾರಸ್ವಾಮಿ, ಸರ್ಕಾರಿ ಆಯುರ್ವೇದಿಕ್ ವೈದ್ಯ ಅಶೋಕ, ವಕೀಲರಾದ ಸಿದ್ದಲಿಂಗಯ್ಯ, ಶಿವರುದ್ರಗೌಡ, ಖಾದರ್ ಭಾಷ, ಜಿಲಾನ್, ನೆಲಗುಂಟಯ್ಯ, ರಾಘವೇಂದ್ರ ಇತರರಿದ್ದರು.



ವಿದ್ಯಾರ್ಥಿಗಳಿಗೆ ಬಸ್ ಸೌಲಭ್ಯ ಕಲ್ಪಿಸಿ

◆ **ಹುಣಸಗಿ:** ತಾಲೂಕಿನ ಗೆದ್ದಲಮರಿ, ರಾಜವಾಳ, ಕಡದರಾಳ ಹಾಗೂ ಬೊಮ್ಮಗುಡ್ಡ ಗ್ರಾಮಗಳ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಸಮರ್ಪಕ ಬಸ್ ಸಂಪರ್ಕ ಇಲ್ಲದಿರುವುದನ್ನು ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಹುಣಸಗಿ ನಾರಾಯಣಪುರ ರಾಜ್ಯ ಹೆದ್ದಾರಿಯಲ್ಲಿ ಪ್ರತಿಭಟನೆ ನಡೆಸಲಾಯಿತು.

ಮಾತನಾಡಿದ ಕರವೇ ತಾಲೂಕು ಅಧ್ಯಕ್ಷ ರಮೇಶ್ ಬಿರಾದಾರ ಮಾತನಾಡಿ, ಸದರಿ ಗ್ರಾಮಗಳ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಪ್ರತಿನಿತ್ಯ ಸಂಚಾರಕ್ಕೆ ತೀವ್ರ ತೊಂದರೆ ಅನುಭವಿಸುತ್ತಿದ್ದು, ಶಿಕ್ಷಣದ ಮೇಲೆಯೂ ಇದರ ದುಷ್ಪರಿಣಾಮ ಬೀರುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಬೆಳಗ್ಗೆ 8.30 ಗಂಟೆಗೆ ಹುಣಸಗಿಯಿಂದ ಗೆದ್ದಲಮರಿ, ರಾಜವಾಳ, ಕಡದರಾಳ ಹಾಗೂ ಬೊಮ್ಮಗುಡ್ಡ ಗ್ರಾಮಗಳ ಮೂಲಕ ರಾಜನಕೋಳೂರು, ಕೊಡೆಕಲ್ ಮಾರ್ಗಕ್ಕೆ ಬಸ್ ಸೇವೆ ಆರಂಭಿಸಬೇಕು. ಅಲ್ಲದೆ ಮಧ್ಯಾಹ್ನ 2.30 ಗಂಟೆಗೆ ಪುನಃ ಕೊಡೆಕಲ್ ಮಾರ್ಗವಾಗಿ ಹುಣಸಗಿ ತಾಲೂಕು ಕೇಂದ್ರಕ್ಕೆ ಮರಳಿ ಬರುವ ಬಸ್ ವ್ಯವಸ್ಥೆ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಈ ಭಾಗದ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ಕಲ್ಯಾಣ ಕರ್ನಾಟಕ ಸಾರಿಗೆ ಇಲಾಖೆ ಕೂಡಲೇ ಕ್ರಮ ಕೈಗೊಂಡು ಬಸ್ ಸೌಲಭ್ಯ ಒದಗಿಸಬೇಕು. ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ಹುಣಸಗಿ ತಾಲೂಕು ಕೇಂದ್ರದ ಬಸವೇಶ್ವರ ವೃತ್ತದಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಮನವಿ ಪತ್ರದಲ್ಲಿ ತಿಳಿಸಲಾಗಿದೆ.



ನಂತರ ಕಲ್ಯಾಣ ಕರ್ನಾಟಕ ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಬರೆದ ಮನವಿ ಪತ್ರವನ್ನು ಸಾರಿಗೆ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಸಲ್ಲಿಸಲಾಯಿತು.

ಸಂಘಟನೆಯ ಪದಾಧಿಕಾರಿಗಳಾದ ಶಿವರಾಜ್ ವಕ್ರಾಣಿ, ದೇವರಾಜ್ ಪಾಟೀಲ್, ಅಮರೇಶ್ ಅಗ್ನಿ, ಬಸನಗೌಡ ಪಾಟೀಲ್, ಶಂಕರಗೌಡ ಪಾಟೀಲ್, ರಮೇಶ್ ದೊರೆ, ಮಲ್ಲು ಕುಂಬಾರ್, ಸೇರಿದಂತೆ ವಿದ್ಯಾರ್ಥಿಗಳು ಸಾರ್ವಜನಿಕರು ಉಪಸ್ಥಿತರಿದ್ದರು.